ಕರ್ನಾಟಕ ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಸಂಪುಟ : ೨೧ | ಜೂನ್-ಡಿಸೆಂಬರ್ ೨೦೦೭ | ಸಂಚಿಕೆ : ೧, ೨

ಸಂಪಾದಕರು

ಪ್ರೊ॥ ಜಿ. ಅಬ್ದುಲ್ ಬಷೀರ್

ಡಾ॥ ಎಚ್. ಶಶಿಕಲಾ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಬಿ.ಎಂ.ಶ್ರೀ. ಕಲಾಭವನ (ರಿ.)

೩ನೇ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ, ಬೆಂಗಳೂರು-೧೯

ದೂರವಾಣಿ : ೨೬೬೧೫೮೭೭

ಕರ್ನಾಟಕ ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಸಂಪುಟ : ೨೧ | ಜೂನ್-ಡಿಸೆಂಬರ್ ೨೦೦೭ | ಸಂಚಿಕೆ : ೦೧-೦೨

ಸಂಪಾದಕರು
ಪ್ರೊ॥ ಜಿ. ಅಬ್ದುಲ್ ಬಷೀರ್
ಡಾ॥ ಎಚ್. ಶಶಿಕಲಾ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ. ಕಲಾಭವನ (ರಿ.)
೩ನೆಯ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ, ಬೆಂಗಳೂರು - ೫೬೦ ೦೧೯
ದೂರವಾಣಿ : ೨೬೬೧೫೮೭೭


KARNATAKA LOCHANA – (Half yearly Research Journal)
Editors : Prof. G. Abdul Basheer and Dr. H. Shashikala, Published by B.M.Sri Smaraka Prathistana, M.V.Si P.G. Center, B.M.Sri Kalabhavan, 3rd Main Road, Narasimharaja Colony, Bangalore - 560 019

Year : June-December 2007 (Vol. 21, No. 01-02)

ವಾರ್ಷಿಕ ಚಂದಾ : ರೂ. ೫೦-೦೦
ಪ್ರತಿಷ್ಠಾನದ ಆಜೀವ ಚಂದಾ : ರೂ. ೫೦೦

ಮುದ್ರಣ
ಇಳಾ ಮುದ್ರಣ
ನಂ. ೩೬, ೪೦ ಅಡಿ ರಸ್ತೆ
ರಾಘವನಗರ, ನ್ಯೂ ಟಿಂಬರ್‌ಯಾರ್ಡ್ ಲೇಔಟ್
ಬೆಂಗಳೂರು - ೫೬೦ ೦೨೬
ದೂರವಾಣಿ : ೨೬೭೫೭೧೫೯

ಪ್ರೊ. ಚಿ. ಶ್ರೀನಿವಾಸರಾಜು ಅವರಿಗೆ ಶ್ರದ್ಧಾಂಜಲಿ



ತುರ್ತು ಕಾರ್ಯಕಾರಿ ಸಮಿತಿ ಸಭೆ ದಿನಾಂಕ 2/1/2008 ನಡೆದು ಅಧ್ಯಕ್ಷರಾಗಿದ್ದ ಪ್ರೊ. ಚಿ. ಶ್ರೀನಿವಾಸರಾಜು ಅವರ ನಿಷ್ಕಲ್ಮಷ ಸಾಹಿತ್ಯ ಸೇವೆಯನ್ನು ಪ್ರಶಂಸಿಸಿ ಅವರ ಅಕಾಲ ಮರಣಕ್ಕೆ ಸಮಿತಿ ಶ್ರದ್ಧಾಂಜಲಿ ಅರ್ಪಿಸಿತು.


ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನದಲ್ಲಿ 15/10/2006ರಿಂದ ಅಧ್ಯಕ್ಷರಾಗಿದ್ದ ಸನ್ಮಾನ್ಯ ಪ್ರೊ.ಚಿ.ಶ್ರೀನಿವಾಸರಾಜು ಅವರು ದಿನಾಂಕ 28/12/2007ರಂದು ನಿಧನಗೊಂಡ ವಾರ್ತೆ ನಮ್ಮನ್ನು ದುಃಖದಲ್ಲಿ ಮುಳುಗಿಸಿದೆ. ಈ ಅನಿರೀಕ್ಷಿತ ಆಘಾತ ನಮ್ಮನ್ನು ಮೂಕವಿಸ್ಮಿತರನ್ನಾಗಿಸಿದೆ. 28/11/1942ರಂದು ಜನಿಸಿದ್ದ ಶ್ರೀ ರಾಜು ತಮ್ಮ 65 ವರ್ಷಗಳ ಸಾರ್ಥಕ ಬದುಕಿನಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಯಾಗಿ, ವಿದ್ಯಾರ್ಥಿಗಳ ಮೆಚ್ಚುಗೆಯ ಉಪನ್ಯಾಸಕರಾಗಿ, ಕನ್ನಡಪರ ಹೋರಾಟಗಾರರಾಗಿ ಪುಸ್ತಕ ಸಂಸ್ಕೃತಿಯ ಆರಾಧಕರಾಗಿ, ಪ್ರಕಟಣಾಕಾರರಾಗಿ ಅನನ್ಯಸೇವೆಯನ್ನು ಮಾಡಿದವರಾಗಿದ್ದಾರೆ. ತಮ್ಮ ನಿರ್ದಿಷ್ಟ ನಿಷ್ಠೆ, ಕನ್ನಡಪರ ನಿಲುವನ್ನು ಜೀವನಪೂರ್ತಿ ಮೆರೆದು ಜನಮನದಲ್ಲಿ ಶಾಶ್ವತ ನೆಲೆಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕಾರ್ಯದರ್ಶಿಯಾಗಿ, ಕ್ರೈಸ್ಟ್ ಕಾಲೇಜಿನಲ್ಲಿ ಕನ್ನಡ ಪುಸ್ತಕ ಸಂಸ್ಕೃತಿಯನ್ನು ಹುಟ್ಟುಹಾಕಿ, ಬೆಳೆಸಿದ ಮೊದಲಿಗರಾಗಿದ್ದುದಲ್ಲದೆ. ಸಾಹಿತ್ಯ ಕ್ಷೇತ್ರಕ್ಕೂ ವೈವಿಧ್ಯ ಪೂರ್ಣ ಸಾಹಿತ್ಯ ಕೃತಿಗಳನ್ನು ನೀಡಿ ಸಂಪನ್ನಗೊಳಿಸಿದ್ದು, ಸೃಜನಶೀಲ ಸಾಹಿತಿಯಾಗಿಯೂ ಮೆರೆದಿದ್ದಾರೆ.

ಅವರದು ವಿಶಿಷ್ಟವಾದ ಸ್ವಂತಿಕೆ. ಪ್ರಶ್ನಾತೀತ ನಿಷ್ಠುರ ಕನ್ನಡಪರ ನಿಷ್ಠೆ. ಮಾತು ಸ್ವಲ್ಪ ಕಡಿಮೆ. ಆದರೆ ಅವರದು ನಿಸ್ವಾರ್ಥ, ನಿಷ್ಕಲ್ಮಷ ಚಟುವಟಿಕೆ. ಅವರು ಅಧ್ಯಕ್ಷರಾಗಿದ್ದ 13 ತಿಂಗಳಲ್ಲಿ ಪ್ರತಿಷ್ಠಾನಕ್ಕೆ ದಿಟ್ಟ ಹೊಸ ಕಾರ್ಯಸೂಚಿ ರೂಪಿಸಿದ್ದರು. ಹೊಸ ರೂಪ ಕೊಡಲು ಅಹರ್ನಿಶಿ ಶ್ರಮಿಸಿದ್ದರು. ಬಹು ಹಿಂದಿನಿಂದ ಬರುತ್ತಿದ್ದ 'ಕರ್ನಾಟಕ ಲೋಚನ'ವನ್ನು ವಿದ್ವತ್ ಲೇಖನಗಳಿಗೆ ಮಾತ್ರ ಮೀಸಲಿರಿಸಿ ಅದರಲ್ಲಿ ಬರುತ್ತಿದ್ದ ಪ್ರತಿಷ್ಠಾನವಾರ್ತೆ; ಸಾಹಿತ್ಯವಾರ್ತೆ; ಪುಸ್ತಕ ಪರಿಚಯ ವಿಭಾಗಗಳನ್ನು ಹೊಸದಾಗಿ ಪ್ರಾರಂಭಿಸಿದ 'ವಾರ್ತಾಪತ್ರ'ಕ್ಕೆ ವರ್ಗಾಯಿಸಿ ಹೊಸ ಚಿಂತನೆಯನ್ನು ಮೆರೆದಿದ್ದಾರೆ.

'ರಾಜು ಮೇಷ್ಟ್ರು', 'ಕನ್ನಡದ ಪರಿಚಾರಕ'ರೆಂದೇ ಕರೆಸಿಕೊಳ್ಳಲು ಇಷ್ಟಪಡುತ್ತಿದ್ದ, ನಮ್ಮ ಪ್ರತಿಷ್ಠಾನದ ಅಧ್ಯಕ್ಷರಾಗಿದ್ದ ಶ್ರೀ ಚಿ. ಶ್ರೀನಿವಾಸರಾಜು ಅವರು ನೀಡಿದ ಅಪಾರ ಕೊಡುಗೆಗಳನ್ನು ಅಭಿಮಾನಪೂರ್ವಕವಾಗಿ ಸ್ಮರಿಸುತ್ತಾ, ಅವರ ಮರಣಕ್ಕಾಗಿ ದುಃಖಿಸುತ್ತಾ ಅವರಿಗೆ ಗೌರವಪೂರ್ವಕವಾಗಿ ಶ್ರದ್ಧಾಂಜಲಿಯನ್ನು ಈ ಕಾರ್ಯಕಾರಿ ಸಮಿತಿಯು ಅರ್ಪಿಸುತ್ತಿದೆ. ಅವರ ಹೆಸರು ಶಾಶ್ವತವಾಗಿ ಉಳಿಯುವಂತಹ ಒಂದು ಸಾಹಿತ್ಯಿಕ ಕಾರ್ಯಚಟುವಟಿಕೆಯನ್ನು ಅವರ ಜನ್ಮದಿನದಂದು, (ನವೆಂಬರ್ 28) ಪ್ರತಿ ವರ್ಷವೂ ನಡೆಸಿಕೊಂಡುಬರಲು ಕಾರ್ಯಕಾರಿ ಸಮಿತಿಯು ಇಚ್ಛಿಸುತ್ತದೆ.

ಶ್ರೀ ರಾಜು ಅವರ ದಿವ್ಯ ಆತ್ಮಕ್ಕೆ ಚಿರಶಾಂತಿ ದೊರೆಯಲಿ. ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಸಹಿಸುವ ಶಕ್ತಿಯನ್ನು ಪರಮಾತ್ಮನು ಕರುಣಿಸಲಿ ಎಂದು ಸಮಿತಿ ಆಶಿಸುತ್ತದೆ.



ಬಿ.ಎಂ.ಶ್ರೀ. ಪ್ರತಿಷ್ಠಾನದ ನೂತನ ಅಧ್ಯಕ್ಷರಾದ

ಡಾ. ಪಿ.ವಿ.ನಾರಾಯಣ್

ಅವರಿಗೆ ಹಾರ್ದಿಕ ಅಭಿನಂದನೆಗಳು

(ಜನನ : 19/12/1942, ತುಮಕೂರು ಜಿಲ್ಲೆ ಅಕ್ಕಿರಾಂಪುರದಲ್ಲಿ)

ಬಹುಮುಖ ಪ್ರತಿಭೆಯ ಕನ್ನಡ ಸಾಹಿತಿ, ವಿಮರ್ಶಕ, ವಿದ್ಯಾರ್ಥಿಪ್ರಿಯ ಕನ್ನಡ ಪ್ರಾಧ್ಯಾಪಕ, ಕೆಚ್ಚು ಹುಮ್ಮಸ್ಸಿನ ಚಳವಳಿಗಾರ, ಡಾ. ಪಿ.ವಿ. ನಾರಾಯಣರು ಕಾರ್ಯಕಾರಿ ಸಮಿತಿಯ ಕೋರಿಕೆಯನ್ನು ಮನ್ನಿಸಿ, ಪ್ರೊ. ಟಿ. ಶ್ರೀನಿವಾಸರಾಜು ಅವರ ಅಕಾಲಿಕ ಮರಣದಿಂದ ತೆರವಾದ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ನೂತನ ಅಧ್ಯಕ್ಷರಾಗಿ ದಿನಾಂಕ 3–1–2008ರಂದು ಅಧಿಕಾರ ಸ್ವೀಕರಿಸಿದರು. ಪ್ರತಿಷ್ಠಾನವು ಅವರನ್ನು ಗೌರವದಿಂದ ಸ್ವಾಗತಿಸುತ್ತದೆ, ಅಭಿನಂದಿಸುತ್ತದೆ ಹಾಗೂ ಹಾರ್ದಿಕವಾಗಿ ಶುಭ ಕೋರುತ್ತದೆ.

ಸಂಪಾದಕೀಯ

ವಿದಾಯ ನಿಮಗೆ

ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ. ಚಿ. ಶ್ರೀನಿವಾಸರಾಜು ಅವರ ಅಗಲಿಕೆ ಇದ್ದಕ್ಕಿದ್ದಂತೆಯೆ ಬಂದು ಎರಗಿದ ಸಿಡಿಲು; ಇನ್ನೂ ಜೀರ್ಣಿಸಿಕೊಳ್ಳಲಾರದ ಕಟುವಾಸ್ತವ. ಅವರು ಅಧ್ಯಕ್ಷರಾದ ನಂತರ, ಅವರ ಅಗಲಿಕೆಯಲ್ಲಿ ಬರುತ್ತಿರುವ ಮೊದಲ ಸಂಚಿಕೆಯಿದು. ಅವರ ನಿಷ್ಕಲ್ಮಶವಾದ ಪ್ರೇಮಕ್ಕೆ, ಪ್ರಾಮಾಣಿಕತೆಗೆ, ಸಜ್ಜನಿಕೆಗೆ ಲೋಚನವು ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದೆ; ಹಾಗೆಯೆ ಅವರ ಕೊರತೆಯ ನೋವನ್ನೂ ಅನುಭವಿಸುತ್ತಿದೆ.

ಶ್ರೀನಿವಾಸರಾಜು ಅವರು 'ಕರ್ನಾಟಕ ಲೋಚನ'ದ ಗುರುತರವಾದ ಪರಿಷ್ಕರಣಕ್ಕೆ, ಚೈತನ್ಯಕ್ಕೆ ಕಾರಣರಾಗಿದ್ದರು. ಲೋಚನವನ್ನು ಪ್ರಸ್ತುತ ಕಾಲಮಾನದ ಅಗತ್ಯಕ್ಕೆ ತಕ್ಕಂತೆ ರೂಪಿಸಬೇಕೆಂಬ ಹಂಬಲ ಅವರದ್ದಾಗಿತ್ತು. ಹೀಗಾಗಿ ಪ್ರತಿಯೊಂದು ಸಂಚಿಕೆಯೂ ವಿಶಿಷ್ಟವಾಗಿರಬೇಕೆಂದು ನಮ್ಮೊಡನೆ ನಡೆಸಿದ ಸಭೆಗಳಲ್ಲಿ ಚರ್ಚಿಸುತ್ತಿದ್ದರು. ಅನುವಾದ, ಸಂಶೋಧನೆ, ವಿಮರ್ಶೆ, ಶಾಸನ, ಸಂಸ್ಕೃತಿ–ಹೀಗೆ ಹತ್ತು ಹಲವು ವಸ್ತುಗಳ ಹಿನ್ನೆಲೆಯಲ್ಲಿ ಲೋಚನವನ್ನು ರೂಪಿಸಬಯಸುತ್ತಿದ್ದರು. 'ಎಂದೂ ಗುಣಮಟ್ಟದೊಡನೆ ರಾಜಿಯಾಗಬೇಡಿ' ಎಂಬುದು ಅವರು ಮತ್ತೆ ಮತ್ತೆ ಹೇಳುತ್ತಿದ್ದ ಮಾತು. ಈ ದೆಸೆಯಲ್ಲಿ ಹಲವಾರು ಜನರ ಸಿಟ್ಟಿಗೆ ಕಾರಣವಾಗಬಹುದಾದರೂ, ಯಾವುದೇ ಒತ್ತಡಕ್ಕೆ ಮಣಿಯುವುದು ಬೇಡ ಎಂಬುದು ಅವರ ನಿಲುವಾಗಿತ್ತು; ನಂಬಿಕೆಯಾಗಿತ್ತು. ಅಜಾತಶತ್ರು ಶ್ರೀನಿವಾಸರಾಜು ಈ ನಂಬಿಕೆಯಲ್ಲಿ ಅಚಲವಾಗಿದ್ದರು, ಅಂತೆಯೆ ಸಂಚಿಕೆಯನ್ನು ಭಿನ್ನವಾಗಿ ರೂಪಿಸಲು ನಿರಂತರ ಯೋಚಿಸುತ್ತಿದ್ದರು; ಕಾರ್ಯಪ್ರವೃತ್ತರಾಗಿದ್ದರು. ಈಗ ಅವರ ಉತ್ಸಾಹವನ್ನು, ಕನಸನ್ನು ಮುಂದುವರಿಸುವುದು ನಾವು ಅವರಿಗೆ ಸಲ್ಲಿಸಬಹುದಾದ ಅಶ್ರುತರ್ಪಣ.

ಈಗಾಗಲೇ ಯೋಚಿಸಿದಂತೆ ಈ ಸಂಚಿಕೆಯು 'ಸಂಶೋಧನೆ' ಕುರಿತಾದ ಸಂಚಿಕೆ ಆಗಬೇಕಾಗಿದ್ದಿತು. ಆದರೆ ಲೇಖನಗಳ ಕೊರತೆಯಿಂದ ಯೋಚಿಸಿದಂತೆ ಸಂಚಿಕೆ ರೂಪಿಸಲು ಸಾಧ್ಯವಾಗಲಿಲ್ಲ. ಈ ಸಂಚಿಕೆಯು ವೈವಿಧ್ಯಮಯವಾದ ವಿಷಯಗಳನ್ನು ಒಳಗೊಂಡದ್ದಾಗಿದೆ. ಇಲ್ಲಿನ ಲೇಖನಗಳು ವಿಷಯವನ್ನು ವಿವರಣಾತ್ಮಕವಾಗಿ ತಿಳಿಸಿಕೊಡುತ್ತವೆ. ಪುರಾಣ, ಚರಿತ್ರೆಯನ್ನು ವಿವಿಧ ನೆಲೆಗಳಿಂದ ಶೋಧಿಸುವ ಲೇಖನಗಳು ಇದರಲ್ಲಿವೆ. ಇವುಗಳಲ್ಲಿ ಆಕರಗಳ ನಿಖರತೆ, ಅದರ ಮೂಲಕ ಹೊರಹೊಮ್ಮುವ ಬದುಕಿನ ಸಾಧನೆ, ಸ್ವರೂಪಗಳನ್ನು ಗುರುತಿಸಲಾಗಿದೆ.

'ಹಳತು–ಹೊನ್ನು' ವಿಭಾಗದಲ್ಲಿ ದಿ॥ ಡಿ.ವಿ. ಗುಂಡಪ್ಪನವರು ಭಾಷೆಯ ಬಗ್ಗೆ ೧೯೩೩ರಲ್ಲಿ ಕುರಿತು ಚಿಂತಿಸಿದ ಬಗೆಗೂ, ಇಂದು ಭಾಷೆಯ ಬಗ್ಗೆ ಆಲೋಚಿಸುತ್ತಿರುವುದಕ್ಕೂ ಇರುವ

ವಿಭಿನ್ನ ನೆಲೆಗಳನ್ನು ಕಾಣಬಹುದು. ಕೆಲವೊಂದು ವಿಷಯಗಳಲ್ಲಿ ಸಾಂಪ್ರದಾಯಿಕತೆ ಮತ್ತು ಕೆಲವೆಡೆ ಆಧುನಿಕತೆಯನ್ನು ಗುರುತಿಸಬಹುದು. ಭಾಷೆಯ ಬಗೆಗಿನ ವ್ಯಾಖ್ಯಾನ, ಒಂದು ಭಾಷೆಯ ಸತ್ವ, ಇಂಗ್ಲಿಷ್‌ನೊಡನೆ ಕನ್ನಡದ ಸಂಬಂಧ, ಇಂತಹ ಅನೇಕ ಸಂಗತಿಗಳನ್ನು ಲೇಖನವು ವಿವರವಾಗಿ ವಿಶ್ಲೇಷಿಸುತ್ತವೆ. ಇಂದಿಗೂ ಅವರ ಆಲೋಚನೆಗಳ ಪ್ರಸ್ತುತತೆಯನ್ನೂ, ಭಾಷೆಯೊಂದು ಎದುರಿಸುವ ಸವಾಲಿನ ಸಾರ್ವತ್ರಿಕತೆಯನ್ನೂ ಅವರ ಲೇಖನದಲ್ಲಿ ನೋಡಬಹುದು. ಹಾಗೆಯೆ ಶ್ರೀ ಚಿ.ವಿ. ಶ್ರೀನಾಥಶಾಸ್ತ್ರಿಗಳ ಲೇಖನವೂ ಕನ್ನಡದ ಬರೆಹದಲ್ಲಿ ಆಗುತ್ತಿರುವ ವ್ಯತ್ಯಾಸವನ್ನು ಮನಗಾಣಿಸುತ್ತದೆ.

'ಲೋಚನಕ್ಕೆ ಬೇಗ ಸಂಪಾದಕೀಯ ಬರೆದು ಕಳುಹಿಸಿ' ಎಂದು ಹೇಳಿದವರೆ ಸಂಪಾದಕೀಯದ ಭಾಗವಾಗಿ ಹೋದ ವಿಪರ್ಯಾಸ ನಮ್ಮಲ್ಲಿ ವಿಪರೀತ ನೋವನ್ನುಂಟು ಮಾಡುತ್ತಿದೆ. ಶ್ರೀ ಚಿ. ಶ್ರೀನಿವಾಸರಾಜು ಅವರಿಗೆ ಹೃತ್ಪೂರ್ವಕ ವಂದನೆಗಳನ್ನು, ವಿದಾಯವನ್ನು ಹೇಳುತ್ತಾ...

ಪ್ರೊ. ಜಿ. ಅಬ್ದುಲ್ ಬಷೀರ್
ಡಾ.ಎಚ್.ಶಶಿಕಲಾ
ಸಂಪಾದಕರು

ಪರಿವಿಡಿ

ಪುರಾಣಗಳಲ್ಲಿ ಸರಸ್ವತೀ

• ಬಿ.ಆರ್. ಸತ್ಯನಾರಾಯಣ

ವೇದಗಳಲ್ಲಿ ನದೀ ದೇವತೆಯಾಗಿ, ವಾಗ್ದೇವತೆಯಾಗಿರುವ ಸರಸ್ವತೀ, ನಂತರದಲ್ಲಿ ಬಂದ ಸಾಹಿತ್ಯದಲ್ಲಿ ವಿದ್ಯಾಧಿದೇವತೆಯಂತೆ ವಿಶೇಷವಾಗಿ ಚಿತ್ರಿತಳಾಗಿದ್ದಾಳೆ. ಬಹುಶಃ ಭಾರತದ ಎಲ್ಲಾ ಭಾಷೆಗಳ ಸಾಹಿತ್ಯದಲ್ಲೂ ಕಾಣಬರುವ ಸರಸ್ವತೀ, ಪುರಾಣಗಳಲ್ಲಿ ನಾನಾ ಸ್ವರೂಪಗಳಲ್ಲಿ ಸ್ತುತಿಗೊಂಡಿದ್ದಾಳೆ. ಕನ್ನಯ್ಯಲಾಲ್ ಭಟ್ಟಾಚಾರ್ಯರ ಪ್ರಕಾರ, ಹದಿನೆಂಟು ಪ್ರಸಿದ್ಧ ಪುರಾಣಗಳ ಪೈಕಿ, ಕೇವಲ ಹತ್ತು ಪುರಾಣಗಳಲ್ಲಿ ಮಾತ್ರ ಸರಸ್ವತಿಯ ವಿಷಯ ದೊರೆಯುತ್ತದೆ.[೧] ಬ್ರಹ್ಮಾಂಡಪುರಾಣ ಮತ್ತು ವಿಷ್ಣುಧರ್ಮೋತ್ತರಪುರಾಣಗಳಲ್ಲೂ ಸರಸ್ವತೀ ವಿಚಾರಗಳಿವೆ. ಅದು ನದೀ ದೇವತೆಯಾಗಿರಬಹುದು ಅಥವಾ ಜ್ಞಾನದೇವತೆಯಾಗಿರಬಹುದು. ಇಲ್ಲವೇ ಎರಡೂ ಆಗಿರಬಹುದು. ಪುರಾಣಗಳಲ್ಲಿ ಬಂದಿರುವ ವಿಚಾರವು ಒಂದೇ ತೆರನಾಗಿರದೆ, ಸರಸ್ವತಿಯ ಮೂಲ, ವಿಕಾಸ, ಸ್ವರೂಪ ಮುಂತಾದವುಗಳ ಬಗ್ಗೆ ಅಧ್ಯಯನ ಮಾಡುವ ಸಂಶೋಧಕರಿಗೆ ಗೊಂದಲವನ್ನುಂಟು ಮಾಡುವಂತಿವೆ. ಎಲ್ಲ ವಿಚಾರಗಳನ್ನು ಒಂದು ಕ್ರಮವಾಗಿ ಜೋಡಿಸುವುದಾಗಲೀ, ಒಂದಕ್ಕೊಂದು ಸಂಬಂಧ ಕಲ್ಪಿಸುವುದಾಗಲೀ ಕಷ್ಟಸಾಧ್ಯ. ಈ ನಿಟ್ಟಿನಲ್ಲಿ, ಪುರಾಣಗಳಲ್ಲಿ ಕಂಡುಬರುವ ಸರಸ್ವತಿಯ ಪರಿಕಲ್ಪನೆಯನ್ನು ಗ್ರಹಿಸುವುದು ಹಾಗೂ ತನ್ಮೂಲಕ ಸಂಶೋಧನೆಗೆ ತೊಡಕಾಗಿರುವ ಅಂಶಗಳನ್ನು ಗುರುತಿಸುವುದಷ್ಟೇ ಪ್ರಸ್ತುತ ಲೇಖನದ ಉದ್ದೇಶವಾಗಿದೆ.

---

೧. Sarasvati : A study on her Concept and Iconography by Kanailal Bhattacharyya, Saraswati Library Calcutta, 1983. 43p.

ಸರಸ್ವತಿಯ ವಿಚಾರಗಳನ್ನು ತಿಳಿಸುವ ಪುರಾಣಗಳು ಹೀಗಿವೆ.

೧. ಪದ್ಮಪುರಾಣ
೨. ಭಾಗವತ ಪುರಾಣ
೩. ಮಾರ್ಕಂಡೇಯ ಪುರಾಣ
೪. ಅಗ್ನಿ ಪುರಾಣ
೫. ಬ್ರಹ್ಮವೈವರ್ತ ಪುರಾಣ
೬. ಲಿಂಗ ಪುರಾಣ
೭. ವರಾಹ ಪುರಾಣ
೮. ಸ್ಕಂದ ಪುರಾಣ
೯. ವಾಮನ ಪುರಾಣ
೧೦. ಮತ್ಸ್ಯ ಪುರಾಣ
೧೧. ಬ್ರಹ್ಮಾಂಡ ಪುರಾಣ
೧೨. ವಿಷ್ಣುಧರ್ಮೋತ್ತರ ಪುರಾಣ

ಇವುಗಳಲ್ಲದೆ ಬೇರೆ ಪುರಾಣಗಳಲ್ಲಿ ಮತ್ತು ಉಪಪುರಾಣಗಳಲ್ಲಿ ಸಾಂದರ್ಭಿಕವಾಗಿ ಸರಸ್ವತಿಯ ಉಲ್ಲೇಖಗಳು ಬಂದಿರುತ್ತವೆ. ಐತಿಹಾಸಿಕ ಅಧ್ಯಯನದ ದೃಷ್ಟಿಯಿಂದ ಪುರಾಣಗಳು ಪ್ರಾಮಾಣಿಕ ಆಕರಗಳೇನೂ ಅಲ್ಲ. ಆದರೆ, ಪುರಾಣಗಳು ರಚನೆಗೊಂಡು ಹೆಚ್ಚೆಚ್ಚು ಜನಪ್ರಿಯವಾದ ಮೇಲೆ ರೂಪಿತಗೊಂಡಿರಬಹುದಾದ ಸಾಂಸ್ಕೃತಿಕ ಇತಿಹಾಸವನ್ನು ಅರಿಯಬಯಸುವ ಸಂಶೋಧಕ, ಪುರಾಣಗಳನ್ನು ಕಡೆಗಣಿಸುವಂತಿಲ್ಲ. ಮೊದಲಿಗೆ ಒಂದೊಂದು ಪುರಾಣದಲ್ಲಿಯೂ ದೊರಕಬಹುದಾದ ಸರಸ್ವತೀ ವಿಚಾರಗಳನ್ನು ಗ್ರಹಿಸಿಬೇಕಾಗುತ್ತದೆ. ಪುರಾಣಗಳಲ್ಲಿ ಸರಸ್ವತಿಯನ್ನು ಗಾಯತ್ರಿ, ಸಾವಿತ್ರಿ, ಶತರೂಪಾ, ಬ್ರಾಹ್ಮಣೀ, ಮಹಾವಿದ್ಯಾ, ಮಹಾವಾಣೀ, ಭಾರತೀ, ವಾಕ್, ವೇದಗರ್ಭಾ, ಜಗದ್ಧಾತ್ರಿ ಸರಸ್ವತೀ, ಭಾಷಾ, ಸ್ವರ, ಅಕ್ಷರ, ಮಹಾವೀಣಾ, ದುರ್ಗಾತಾರಿಣೀ, ವಾಣೀಸಪ್ತವಿಧಾ, ಆರ್ಯಾ, ಬ್ರಾಹ್ಮೀ, ಕಾಮಧೇನು ಮುಂತಾಗಿ ಹೆಸರಿಸಲಾಗಿದೆ. ಒಟ್ಟಾರೆಯಾಗಿ ಈ ವಿಚಾರಗಳನ್ನು ಅವಲೋಕಿಸಿದಾಗ ಸಿಗಬಹುದಾದ ಸರಸ್ವತೀ ಚಿತ್ರಣ, ಸರಸ್ವತಿಯ ಸಮಗ್ರ ಅಧ್ಯಯನಕ್ಕೆ ಪೂರಕವೇ ಎಂದು ನಿರ್ಧರಿಸಬಹುದಾಗಿದೆ.

ಪದ್ಮ ಪುರಾಣ

ಪದ್ಮ ಪುರಾಣದ ಸೃಷ್ಟಿಖಾಂಡದಲ್ಲಿ[2] ರುದ್ರನು ಗಾಯತ್ರಿಯನ್ನು ವೇದಮಾತೆಯೆಂದು ಕರೆದಿರುವುದಲ್ಲದೆ, 'ದುರ್ಗಾತಾರಿಣೀ' ಮತ್ತು 'ವಾಣೀಸಪ್ತವಿಧಾ' ಎಂದೂ ಹೊಗಳಿದ್ದಾನೆ. ಶ್ವೇತವರ್ಣೆಯಾದ ಆಕೆ ಕೈಗಳಲ್ಲಿ ಶಂಖ ಮತ್ತು ಬೆಳ್ದಾವರೆಯನ್ನು ಹಿಡಿದು ಶ್ವೇತವಸ್ತ್ರಧಾರಿಣಿಯಾಗಿದ್ದಾಳೆ. ಪ್ರಸ್ತುತ ಪುರಾಣದಲ್ಲಿಯೇ[3] ಸರಸ್ವತಿಯು ನದೀ ದೇವತೆಯಾಗಿಯೂ ಕಾಣಿಸಿ

---

೨. ಪದ್ಮಪುರಾಣ : ೧೬-೩೦೬ ರಿಂದ ೩೧೨
೩. ಪದ್ಮಪುರಾಣ : ೨೨೧-೧೧೧ ರಿಂದ ೨೫೦

ಕೊಳ್ಳುತ್ತಾಳೆ. ಪುಷ್ಕರದ ಬಳಿ ಸರಸ್ವತಿಯು ಸುಪ್ರಭಾ, ಕಾಂಚನಾ, ಪ್ರಾಚೀ, ನಂದಾ ಮತ್ತು ವಿಶಾಲಕಾ ಎಂದು ಐದು ಭಾಗಗಳಾಗಿ ಹರಿಯುತ್ತಾಳೆ. ಇವುಗಳ ದಂಡೆಯ ಮೇಲೆ ಹಲವಾರು ಪವಿತ್ರ ಕ್ಷೇತ್ರಗಳಿದ್ದುದಾಗಿ ತಿಳಿಯುತ್ತದೆ. ಇದೇ ಅಧ್ಯಾಯದಲ್ಲಿಯೇ, ವಿಷ್ಣು ಮೊದಲಾದ ದೇವತೆಗಳು, ಪವಿತ್ರಾಗ್ನಿಯನ್ನು ಪುಷ್ಕರದಿಂದ ಕೊಂಡೊಯ್ದು ಲವಣಸಾಗರದಲ್ಲಿ ವಿಸರ್ಜಿಸಲು ಸರಸ್ವತಿಯನ್ನು ಕೇಳಿಕೊಳ್ಳುತ್ತಾರೆ. ಅದಕ್ಕೆ ಸರಸ್ವತಿಯು ತನ್ನ ತಂದೆ ಬ್ರಹ್ಮನ ಅನುಮತಿ ಬೇಕೆಂದು ಹೇಳುತ್ತಾಳೆ. ದೇವತೆಗಳ ಕೋರಿಕೆಯ ಮೇಲೆ ಬ್ರಹ್ಮನು, ಪುಷ್ಕರವನ್ನು ಬಿಡಲು ಇಷ್ಟವಿರದ ಸರಸ್ವತಿಯನ್ನು ತನ್ನ ತೊಡೆಯ ಮೇಲೆ ಕೂರಿಸಿಕೊಂಡು ಒಪ್ಪಿಸುತ್ತಾನೆ. ದೇವತೆಗಳು ಅವಳನ್ನು ಪ್ರಾರ್ಥಿಸಿ ಅರ್ಪಿಸಿದ ಅಗ್ನಿಯನ್ನು ತನ್ನ ಸಹವರ್ತಿಗಳಾದ ಗಂಗಾ ಯಮುನ ಗಾಯತ್ರಿ ಮತ್ತು ಸಾವಿತ್ರಿಯರೊಂದಿಗೆ ತಾನೂ ನದಿಯಾಗಿ ಹರಿದು, ಲವಣಸಾಗರಕ್ಕೆ ಸೇರಿಸುತ್ತಾಳೆ.

ಪದ್ಮಪುರಾಣದ ರಚನೆಯ ಕಾಲಕ್ಕಾಗಲೇ ಅಜ್ಮೇರ್ ಬಳಿಯ ಪುಷ್ಕರದ ಹತ್ತಿರ ಮರುಭೂಮಿಯಲ್ಲಿ ಸರಸ್ವತೀ ನದೀ ಇಂಗಿ ಹೋಗಿದ್ದಿರಬೇಕು.[೪] ಪೂರ್ತಿ ಕಾಣೆಯಾಗುವ ಮೊದಲು ಅಲ್ಲಲ್ಲಿ ಹಲವಾರು ಶಾಖೆಗಳಾಗಿ ಹರಿದಿರಬೇಕು ಎಂದು ಊಹಿಸಲು ಸಾಧ್ಯವಿದೆ. ಸರಸ್ವತೀ ಬ್ರಹ್ಮನ ಮಗಳಾಗಿಯೇ ಇದ್ದು, ಆತನ ಅಣತಿಯಂತೆ ನಡೆದುಕೊಳ್ಳುತ್ತಿದ್ದಳು ಎನ್ನಬಹುದು.

ಭಾಗವತ ಪುರಾಣ

ಜಗದಂಬಿಕೆಯು ಬ್ರಹ್ಮ ವಿಷ್ಣು ಮತ್ತು ಮಹೇಶ್ವರರನ್ನು ಸೃಷ್ಟಿಸಿದ ಮೇಲೆ, ತಾನೇ ಸರಸ್ವತೀ ಲಕ್ಷ್ಮೀ ಮತ್ತು ಉಮಾ ಆಗಿ ಪರಿವರ್ತನೆಗೊಳ್ಳುತ್ತಾಳೆ.[೫] ತ್ರಿಮೂರ್ತಿಗಳು ತಮ್ಮ ಹೆಂಡತಿಯರ ಜೊತೆಯಲ್ಲಿ ಈ ಜಗತ್ತಿನ ಸೃಷ್ಟಿ ಸ್ಥಿತಿ ಮತ್ತು ಲಯಕರ್ತರಾಗಿ ಕೆಲಸ ನಿರ್ವಹಿಸುವಂತೆ ಆದೇಶಿಸುತ್ತಾಳೆ. ಪ್ರಸ್ತುತ ಪುರಾಣದಲ್ಲಿ, ವಾಮನ ಪುರಾಣದ[೬] ಜಗದ್ಧಾತ್ರೀ ಸರಸ್ವತೀ ಎಂಬ ಕಲ್ಪನೆ ಹೆಚ್ಚು ವಿಸ್ತೃತಗೊಂಡಂತೆ ಕಾಣುತ್ತದೆ.

ಮಾರ್ಕಂಡೇಯ ಪುರಾಣ

ಈ ಪುರಾಣದ ೪, ೨೪ ಮತ್ತು ೭೨ನೆಯ ಅಧ್ಯಾಯಗಳಲ್ಲಿ ಸರಸ್ವತೀ ಉಲ್ಲೇಖಗಳಿವೆ. ವಿಷ್ಣುಜಿಹ್ವಾಸರಸ್ವತೀ ಎಂಬ ಹೆಸರೂ ಇಲ್ಲಿ ಸರಸ್ವತಿಗೆ ಸಂದಿದೆ. ದೇವೀಮಹಾತ್ಮ್ಯದ ನಾರಾಯಣೀಸ್ತುತಿಯಲ್ಲಿ ದೇವಿಯು ಮಹಾಕಾಳೀ, ಮಹಾಲಕ್ಷ್ಮೀ, ಮಹಾವಿದ್ಯಾ, ಮಹಾವಾಣೀ ಭಾರತೀ, ವಾಕ್, ಬ್ರಹ್ಮಾ, ವೇದಗರ್ಭಾ ಮೊದಲಾದ ರೂಪಗಳನ್ನು ಧರಿಸಿ ರಾಕ್ಷಸರನ್ನು ಸಂಹರಿಸಿದ ವಿಚಾರವಿದೆ. ಇವೆಲ್ಲವುಗಳು ಒಂದೇ ದೇವತೆಯ ವಿವಿಧ ನಾಮಗಳಾಗಿವೆಯಲ್ಲದೆ,

---

೪. Sarasvati : A study on her Concept and Iconography by Kanailal Bhattacharyya, Saraswati Library Calcutta, 1983. 54p

೫. ಭಾಗವಾತ ಪುರಾಣ : ೩-೧೩ ರಿಂದ ೧೬ ಮತ್ತು ೨೪ ರಿಂದ ೩೨

೬ ವಾಮನಪುರಾಣ : ೩೩

ಹೆಚ್ಚಿನವು ಸರಸ್ವತಿಗೆ ಸಂಬಂಧಿಸಿದವುಗಳಾಗಿವೆ. ಆ ದೇವತೆ ಸರಸ್ವತಿಯೇ ಆಗಿದ್ದಾಳೆ ಎಂಬುದು ಭಟ್ಟಾಚಾರ್ಯರ ಅಭಿಮತ.[೭] ಪ್ರಸ್ತುತ ಪುರಾಣದಲ್ಲಿ ಸರಸ್ವತಿಯು ಪ್ರಮುಖ ದೇವತೆಯಾಗಿ, ಬ್ರಹ್ಮ ವಿಷ್ಣು ಮತ್ತು ಶಿವ ಇವರುಗಳ ಶಕ್ತಿಯರಾದ ಜಗದ್ಧಾತ್ರೀ, ಮಹಾಲಕ್ಷ್ಮೀ ಮತ್ತು ಮಹಾಕಾಳೀ ಈ ಮೂವರ ಪ್ರತಿನಿಧಿಯಾಗಿರುವಂತೆ ಚಿತ್ರಿತಳಾಗಿದ್ದಾಳೆ.

ಅಗ್ನಿ ಪುರಾಣ

ಈ ಪುರಾಣದ ಒಂದು ಶ್ಲೋಕವು[೮] ಸರಸ್ವತಿಯನ್ನು, 'ಪುಸ್ತಕಾಕ್ಷಮಾಲಿಕಾಹಸ್ತಾ ವೀಣಾ ಹಸ್ತಾ ಸರಸ್ವತೀ' ಎಂದು ವರ್ಣಿಸುತ್ತದೆ. ಸರಸ್ವತಿಯ ಕೈಗಳಲ್ಲಿ ಪುಸ್ತಕ, ಅಕ್ಷಮಾಲಾ ಮತ್ತು ವೀಣೆಯಿರುವುದು, ಅಗ್ನಿಪುರಾಣದ ರಚನೆಯ ಹೊತ್ತಿಗೆ ಸರಸ್ವತಿಗೆ ಒಂದು ಸ್ಪಷ್ಟವಾದ ಆಕೃತಿ ಬಂದಿರುವಂತೆ ಕಾಣುತ್ತದೆ. ಪ್ರಸ್ತುತ ಪುರಾಣೋಕ್ತ ಸರಸ್ವತೀ ಲಕ್ಷಣಗಳು ಇಂದಿಗೂ ಶಿಲ್ಪ ಹಾಗೂ ಚಿತ್ರಕಲೆಯಲ್ಲಿ ಕಂಡುಬಂದಿರುವುದು ಗಮನಾರ್ಹವಾಗಿದೆ.

ಬ್ರಹ್ಮವೈವರ್ತ ಪುರಾಣ

ಈ ಪುರಾಣದಲ್ಲಿ[೯] ಸರಸ್ವತೀ ಐದು ಪ್ರಕೃತಿಗಳಲ್ಲಿ ಒಬ್ಬಳು. ಸರಸ್ವತಿಗೆ ಸಂಬಂಧಿಸಿದಂತೆ ಪ್ರತ್ಯೇಕ ಬೆಳವಣಿಗೆ ಒಂದನ್ನು ಇಲ್ಲಿ ಕಾಣಬಹುದು. ಇಲ್ಲಿ ಸರಸ್ವತೀ ವಿಷ್ಣುವಿನ ಹೆಂಡತಿಯಾಗಿ ಕಾಣಿಸಿಕೊಳ್ಳುತ್ತಾಳೆ. ಇದು ಸಾಂಸ್ಕೃತಿಕವಾಗಿ ಶ್ರೀಕೃಷ್ಣ ಪ್ರಾಬಲ್ಯಕ್ಕೆ ಬಂದ ನಂತರದ ಕಲ್ಪನೆಯಾಗಿರಬಹುದು.[೧೦] ಉತ್ತರಭಾರತದಲ್ಲಿ ಲಕ್ಷ್ಮೀ ಸರಸ್ವತಿಯರೊಂದಿಗಿರುವ ವಿಷ್ಣುವಿನ ಶಿಲ್ಪಗಳು ದೊರೆಯುತ್ತವೆ. ಈ ಪುರಾಣದ ಪ್ರಕಾರ ಕೃಷ್ಣ ಸೃಷ್ಟಿಕರ್ತ. ರಾಧಾ ಆತನ ಪ್ರಕೃತಿ. ಇವರಿಬ್ಬರ ಸಮಾಗಮವಾದಾಗ ರಾಧೆಯ ನಾಲಿಗೆಯಿಂದ ಸರ್ವಾಲಂಕಾರಭೂಷಿತಳಾದ ಸರಸ್ವತಿಯು ಜನಿಸುತ್ತಾಳೆ. ಹಳದಿ ವಸ್ತ್ರ ಧರಿಸಿ, ವೀಣೆ ಮತ್ತು ಪುಸ್ತಕಗಳನ್ನು ಹಿಡಿದಿರುತ್ತಾಳೆ. ಸರಸ್ವತಿಯು ಕೃಷ್ಣನನ್ನೇ ಸೇರಲು ಬಯಸಿದಾಗ, ಕೃಷ್ಣ ತನ್ನ ಎಡಭಾಗದಿಂದ ವಿಷ್ಣುವನ್ನು, ರಾಧೆ ತನ್ನ ಎಡಭಾಗದಿಂದ ಲಕ್ಷ್ಮಿಯನ್ನು ಸೃಷ್ಟಿಸುತ್ತಾನೆ. ಸರಸ್ವತಿ ಮತ್ತು ಲಕ್ಷ್ಮಿಯನ್ನು ವಿಷ್ಣುವಿಗೆ ಹೆಂಡತಿಯರನ್ನಾಗಿ ಮಾಡಿ ವೈಕುಂಠಕ್ಕೆ ಕಳುಹಿಸುತ್ತಾನೆ. ಇದೇ ಪುರಾಣದ ಆರನೇ ಅಧ್ಯಾಯದಲ್ಲಿ ವಿಷ್ಣುವಿಗೆ ಗಂಗಾ ಎಂಬ ಇನ್ನೊಬ್ಬ ಪತ್ನಿ ಇರುವುದಾಗಿಯೂ ತಿಳಿಯುತ್ತದೆ. ಗಂಗಾ ಒಮ್ಮೆ ವಿಷ್ಣುವನ್ನು ಕಾಮಿಸಿ ನೋಡಿದಾಗ ವಿಷ್ಣು ನಗುತ್ತಾನೆ. ಅದನ್ನು ಕಂಡ ಸರಸ್ವತೀ ಗಂಗೆಯನ್ನು ನಿಂದಿಸುತ್ತಾಳೆ. ಲಕ್ಷ್ಮಿಯ ಮಧ್ಯಸ್ಥಿಕೆಯ ಬಳಿಕವೂ ಶಾಂತವಾಗದ ಗಂಗಾ ಸರಸ್ವತಿಗೆ ನದಿಯಾಗುವಂತೆ ಶಾಪ ಕೊಡುತ್ತಾಳೆ. ಸರಸ್ವತಿಯೂ ಗಂಗೆಗೆ ಅದೇ ಶಾಪವನ್ನು ಕೊಡುತ್ತಾಳೆ. ಆಗ ವಿಷ್ಣು, ಲಕ್ಷ್ಮಿಯನ್ನು ತನ್ನೊಂದಿಗೆ ಇರಲು ಹೇಳಿ, ಗಂಗಾ

೭ Sarasvati : A study on her Concept and Iconography by Kanailal Bhattacharyya, Saraswati Library Calcutta, 1983. 45-46p

೮. ಅಗ್ನಿ ಪುರಾಣ : ೫೦-೧೬

೯. ಬ್ರಹ್ಮವೈವರ್ತ ಪುರಾಣ : ಪ್ರಕೃತಿಕಾಂಡ : ೪-೧೦ ರಿಂದ ೧೨ ಮತ್ತು ೧೯ ರಿಂದ ೨೯

೧೦. Sarasvati : A study on her Concept and Iconography by Kanailal Bhattacharyya, Saraswati Library Calcutta, 1983. 61p

ಮತ್ತು ಸರಸ್ವತಿಯರನ್ನು ಆಂಶಿಕವಾಗಿ ತನ್ನೊಂದಿಗೆ ಇರುವಂತೆಯೂ, ಉಳಿದಂತೆ ಶಾಪಕ್ಕನುಗುಣವಾಗಿ ನಡೆದುಕೊಳ್ಳುವಂತೆಯೂ ಹೇಳುತ್ತಾನೆ. ಅಲ್ಲದೆ, ಗಂಗೆಯನ್ನು ಶಿವನಿಗೂ, ಸರಸ್ವತಿಯನ್ನು ಬ್ರಹ್ಮನಿಗೂ ಹೆಂಡತಿಯರನ್ನಾಗಿ ಮಾಡುತ್ತಾನೆ. ಈ ಕತೆಯಿಂದ ಯಾವುದೇ ವಿಷಯವೂ ನಿಶ್ಚಿತವಾಗುವುದಿಲ್ಲ. ಕೃಷ್ಣಪಾರಮ್ಯವನ್ನು ಎತ್ತಿಹಿಡಿಯುವ ಆತುರ ಎದ್ದು ಕಾಣುತ್ತದೆ. ಸಂಬಂಧಗಳಲ್ಲಿ ಸ್ಪಷ್ಟತೆಯಿರುವುದಿಲ್ಲ.

ಲಿಂಗ ಪುರಾಣ

ಲಿಂಗಪುರಾಣದಲ್ಲಿ[೧೧] ಸರಸ್ವತಿಯು, ಗಾಯಿತ್ರೀ ಎಂಬ ಹೆಸರಿನಲ್ಲಿ ಬ್ರಹ್ಮನ ಸತಿಯಾಗಿ ಕಾಣಿಸಿಕೊಂಡಿದ್ದಾಳೆ. ವಿಶ್ವಮಾತಾ ಎಂಬ ವಿಶೇಷ ಅಭಿಧಾನವೂ ಇದೆ. ಬ್ರಹ್ಮನನ್ನು ವಿಶ್ವರೂಪ ಎಂದೂ ಗಾಯತ್ರಿಯನ್ನು ವಿಶ್ವರೂಪಾ ಮತ್ತು ವೇದಮಾತಾ ಎಂದು ಸ್ತುತಿಸಲಾಗಿದೆ. ಇಲ್ಲಿ ಗಾಯಿತ್ರಿಯ ಬಣ್ಣ ಕಪ್ಪು, ಕೃಷ್ಣಾಂಗೀ, ಕೃಷ್ಣಲೋಹಿತಾ, ಕೃಷ್ಣರೂಪಾ ಮೊದಲಾದ ವಿಶೇಷಣಗಳಿಂದ ಗುರುತಿಸಲಾಗಿದೆ. ಬಿಳಿಯ ಶಿರವಸ್ತ್ರ ಧರಿಸಿದ್ದಾಳೆ. ಗಾಯಿತ್ರಿಯನ್ನು ರುದ್ರನ ಮಗಳಾಗಿ ಚಿತ್ರಿಸಿದ್ದು ರುದ್ರಸುತಾ ಎಂದೂ ಕರೆಯಲಾಗಿದೆ. ಬ್ರಹ್ಮವೈವರ್ತ ಪುರಾಣದಲ್ಲಿ ಕೃಷ್ಣಪಾರಮ್ಯವನ್ನು ಎತ್ತಿಹಿಡಿಯುವಾಗಿನ ಆತುರ ಲಿಂಗಪುರಾಣದಲ್ಲಿ ಶಿವಪಾರಮ್ಯವನ್ನು ಎತ್ತಿಹಿಡಿಯುವಾಗ ಕಾಣಿಸಿಕೊಂಡಿದೆ.

ವರಾಹಾ ಪುರಾಣ

ಈ ಪುರಾಣದಲ್ಲಿ ಸರಸ್ವತೀ ವೇದಮಾತೆಯಾಗಿ, ಜ್ಞಾನದೇವತೆಯಾಗಿ ಸಾವಿತ್ರೀ ಹೆಸರಿನಲ್ಲಿ ಸ್ತುತಿಗೊಂಡಿದ್ದಾಳೆ.[೧೨] ಒಮ್ಮೆ ನಾರದನು ಶ್ವೇತರೂಪದ ಸರೋವರದ ದಂಡೆಯಲ್ಲಿ, ಸಾವಿತ್ರಿಯ ಮುನಿಸಿನಿಂದ ತನ್ನ ಜ್ಞಾನವನ್ನೆಲ್ಲಾ ಕಳೆದುಕೊಳ್ಳುತ್ತಾನೆ. ಅವಳಲ್ಲಿ ಬ್ರಹ್ಮ ವಿಷ್ಣು ಮಹೇಶ್ವರರು ಕಂಡಿದ್ದರಿಂದ, ಅವಳನ್ನು ಪ್ರಾರ್ಥಿಸಿ ಆಕೆಯ ಆಣತಿಯಂತೆ ವೇದ ಸರೋವರದಲ್ಲಿ ಸ್ನಾನ ಮಾಡಿ ತನ್ನ ಜ್ಞಾನವನ್ನು ಮರಳಿ ಪಡೆಯುತ್ತಾನೆ. ಈ ಕಥೆ, ವೇದಗಳು ದೇವತೆಗಳ ಸೃಷ್ಟಿ ಎಂದು ಅವುಗಳನ್ನು ದೈವತ್ವಕ್ಕೆ ಏರಿಸುವ ಪ್ರಯತ್ನದಂತೆ ಕಾಣುತ್ತದೆ.

ಸ್ಕಂದ ಪುರಾಣ

ಕಶ್ಯಪನು ಗಾಯತ್ರೀ ಮತ್ತು ಸರಸ್ವತಿಯರನ್ನು ಪ್ರಾರ್ಥಿಸಿದ ವಿಚಾರ ಹಾಗೂ ಸ್ವತಃ ಅವರಿಬ್ಬರೂ ನಾವು ಬ್ರಹ್ಮನ ಸತಿಯರೆಂದು ಪರಿಚಯಿಸಿಕೊಳ್ಳುವ ವಿಚಾರ ಸ್ಕಂದಪುರಾಣದಲ್ಲಿ ಬರುತ್ತದೆ.[೧೩] ನಾಗರಖಂಡದ ಅಧ್ಯಾಯ ೪೬ರಲ್ಲಿ ವಶಿಷ್ಠನ ಮಾತಿನಂತೆ ರಾಜ ಬಲವರ್ಧನನು ಸರಸ್ವತಿಯನ್ನು ಪ್ರಾರ್ಥಿಸಿ, ತನ್ನ ಮಗ ಅಂಭೂಚಿಗೆ ಮಾತನಾಡುವ ಶಕ್ತಿಯನ್ನು ಕೊಡಿಸುತ್ತಾನೆ. ನಂತರ ಸರಸ್ವತಿಯ ಒಂದು ಮಣ್ಣಿನ ವಿಗ್ರಹವನ್ನೂ ಮಾಡಿಸುತ್ತಾನೆ. ಚತುರ್ಭುಜಳಾದ ಸರಸ್ವತೀ, ಕೈಗಳಲ್ಲಿ ಕಮಲ, ಅಕ್ಷಮಾಲಾ, ಕಮಂಡಲು ಮತ್ತು ಪುಸ್ತಕವನ್ನು ಧರಿಸಿರುತ್ತಾಳೆ.

---

೧೧. ಲಿಂಗಪುರಾಣ : ೧೬ ಮತ್ತು ೨೩ ,

೧೨. ವರಾಹ ಪುರಾಣ : ೨

೧೩. ಸ್ಕಂದಪುರಾಣ - ಮಹೇಶ್ವರ ಕಾಂಡ : ೪೧, ೪೬ ಮತ್ತು ೧೭೨

೧೭೨ನೆಯ ಅಧ್ಯಾಯದಲ್ಲಿ, ವಸಿಷ್ಠನನ್ನು ಹೊತ್ತು ತರುವಂತೆ ಕೇಳಿದ ವಿಶ್ವಾಮಿತ್ರನ ಕೋರಿಕೆಯನ್ನು ಸರಸ್ವತಿಯು ತಿರಸ್ಕರಿಸಿ, ಅವನಿಂದ ರಕ್ತನದಿಯಾಗುವಂತೆ ಶಾಪ ಪಡೆದ ಕತೆ ನಿರೂಪಿತವಾಗಿದೆ. ನಂತರ ವಸಿಷ್ಠನಿಂದಲೇ ಶಾಪವಿಮೋಚನೆಯನ್ನೂ ಪಡೆಯುತ್ತಾಳೆ. ಈ ಪುರಾಣದ ವೈಶಿಷ್ಟ್ಯವೆಂದರೆ, ಗಾಯತ್ರೀ, ಸರಸ್ವತೀ ಈ ಮೂವರೂ ಬ್ರಹ್ಮನ ಸತಿಯರೆಂದು ಹೇಳಿರುವುದು. ಸರಸ್ವತಿಯ ಪ್ರತಿಮೆಯ ವಿಚಾರ ಬರುವುದು ಇದೊಂದೇ ಪುರಾಣದಲ್ಲಿ.

ವಾಮನ ಪುರಾಣ

ಸರಸ್ವತೀ ನದಿಯ ಬಗ್ಗೆ ಕೆಲವೊಂದು ವಿಚಾರಗಳು ಈ ಪುರಾಣದಿಂದ ತಿಳಿದು ಬರುತ್ತವೆ.[೧೪] ಸರಸ್ವತಿಯು ಕುರುಕ್ಷೇತ್ರದಲ್ಲಿ ಹರಿಯುತ್ತಿದ್ದ ಒಂದು ನದಿ. ಸರಸ್ವತೀ ಮತ್ತು ದೃಷದ್ವತೀ ನದಿಗಳ ನಡುವಿನ ಜಾಗವೇ ಬ್ರಹ್ಮ ವೈವರ್ತ. ಸರಸ್ವತೀ ನದಿಯ ದಂಡೆಯಲ್ಲಿ, ಮಾರ್ಕಂಡೇಯ ಮುನಿ ತಪಸ್ಸು ಮಾಡಿ, ನದೀ ಸರಸ್ವತಿಯನ್ನು ಆರಾಧಿಸಿ, 'ಇಡೀ ಜಗತ್ತೆಲ್ಲವೂ ನಿನ್ನ ಸೃಷ್ಟಿ ವಿಶ್ವ ವಾಕ್, ಜ್ಞಾನ, ಬೆಂಕಿ ಭೂಮಿ ಪ್ರತಿಯೊಂದು ನಿನ್ನ ಸೃಷ್ಟಿ. ನಿನ್ನಿಂದ ಹೊರತಾದುದು ಯಾವುದೂ ಇಲ್ಲ. ನೀನು ಇಡೀ ವಿಶ್ವಕ್ಕೆ ಒಳ್ಳೆಯದನ್ನು ಮಾಡು' ಎಂದು ಪ್ರಾರ್ಥಿಸುತ್ತಾನೆ. ಅಶ್ವತಾರ ಎಂಬ ನಾಗ ದೊರೆ ಸರಸ್ವತಿಯನ್ನು ಜಗದ್ಧಾತ್ರೀ ಎಂದು ಪ್ರಾರ್ಥಿಸಿದ್ದಾನೆ.[೧೫] ವೇದದ ನೂರಾರು ದೇವತೆಗಳಲ್ಲಿ ಒಬ್ಬಳಾಗಿದ್ದ ಸರಸ್ವತಿಗೆ, ನದೀ ದೇವತೆಯ ಸ್ಥಾನ ಸ್ಥಿರವಾಗುವಂತೆ ಮಾರ್ಕಂಡೇಯ ಮತ್ತು ಈ ಪುರಾಣ ನೋಡಿಕೊಂಡಿವೆ.[೧೬] ನದೀ ದೇವತೆಯ ಜೊತೆಜೊತೆಗೇ ವೇದಮಾತೆ, ಜ್ಞಾನದೇವತೆಯಾಗಿಯೂ ಸರಸ್ವತೀ ಚಿತ್ರಿತಳಾಗಿದ್ದಾಳೆ.

ಮತ್ಸ್ಯ ಪುರಾಣ

ಮತ್ಸ್ಯಪುರಾಣದಲ್ಲಿ[೧೭] ಸರಸ್ವತಿಗೆ ಶತರೂಪಾ, ಸಾವಿತ್ರೀ, ಗಾಯತ್ರೀ ಮತ್ತು ಬ್ರಹ್ಮಾಣೀ ಎಂಬ ಹೆಸರುಗಳು ಪ್ರಾಪ್ತವಾಗಿವೆ. ಬ್ರಹ್ಮನು ತನ್ನಿಂದಲೇ ಶತರೂಪೆಯನ್ನು ಸೃಷ್ಟಿಸುತ್ತಾನೆ. ಶತರೂಪೆಯ ಮೋಹಕ ರೂಪವನ್ನು ಕಂಡ ಬ್ರಹ್ಮ ಅವಳನ್ನೇ ಬಯಸುತ್ತಾನೆ. ಆಗ ಶತರೂಪೆಯು ಎಡಕ್ಕೆ ಓಡಿದಾಗ ಬ್ರಹ್ಮನಿಗೆ ಎಡದಲ್ಲಿ ಒಂದು ತಲೆ ಮೂಡುತ್ತದೆ. ಬಲಕ್ಕೆ ಮತ್ತು ಹಿಂದಕ್ಕೆ ಓಡಿದಾಗ ಒಂದೊಂದು ತಲೆ ಮೂಡುತ್ತವೆ. ಅವಳು ಮೇಲಕ್ಕೆ ನೆಗೆದಾಗ ಮೇಲೊಂದು ತಲೆ ಮೂಡಿ ಬ್ರಹ್ಮನಿಗೆ ಐದು ತಲೆಗಳಾಗುತ್ತವೆ. ಕೊನೆಗೂ ಬ್ರಹ್ಮ ಸರಸ್ವತಿಯನ್ನು ಸೇರಿ ಒಂದು ಮನ್ವಂತರದ ಕಾಲವಿರುತ್ತಾನೆ. ಈ ಪುರಾಣದ ಪ್ರಕಾರ ಸರಸ್ವತಿಯ ವಾಹನ ಹಂಸ.

---

೧೪. ವಾಮನ ಪುರಾಣ : ೩೩-೭ ರಿಂದ ೧೨

೧೫. ವಾಮನ ಪುರಾಣ : ೩೩

೧೬. Sarasvati : A study on her Concept and Iconography by Kanailal Bhattacharyya, Saraswati Library Calcutta, 1983. 47p

೧೭ ಮತ್ಸ್ಯಪುರಾಣ : ೩ ಮತ್ತು ೪

ಬ್ರಹ್ಮಾಂಡ ಪುರಾಣ

ಬ್ರಹ್ಮಾಂಡಪುರಾಣದಲ್ಲಿ[೧೮] ಮಹಾಲಕ್ಷ್ಮೀಯೊಬ್ಬಳೇ ಪ್ರಕೃತಿ. ಆಕೆಯಿಂದ ಮೂರು ಮೊಟ್ಟೆಗಳು ಉತ್ಪನ್ನವಾಗುತ್ತವೆ. ಮೊದಲನೆಯದರಲ್ಲಿ ಬ್ರಹ್ಮ ಶ್ರೀಯೊಂದಿಗೆ, ಎರಡನೆಯದರಲ್ಲಿ ಶಿವ ಸರಸ್ವತಿಯೊಂದಿಗೆ ಮತ್ತು ಮೂರನೆಯದರಲ್ಲಿ ವಿಷ್ಣು ಅಂಬಿಕೆಯೊಂದಿಗೆ ಜನಿಸುತ್ತಾರೆ. ಮಹಾಲಕ್ಷ್ಮಿಯ ಆಣತಿಯಂತೆ, ಬ್ರಹ್ಮನು ಸರಸ್ವತಿಯನ್ನು, ವಿಷ್ಣುವು ಶ್ರೀಯನ್ನು ಹಾಗೂ ಶಿವನು ಅಂಬಿಕೆಯನ್ನು ಮದುವೆಯಾಗಿ ಕ್ರಮವಾಗಿ ಸೃಷ್ಟಿ, ಸ್ಥಿತಿ ಮತ್ತು ಲಯ ಕಾರ್ಯಗಳಲ್ಲಿ ತೊಡಗುತ್ತಾರೆ. ಸರಸ್ವತಿಗೆ ವಿದ್ಯಾ, ಭಾಷಾ, ಸ್ವರ, ಅಕ್ಷರ, ಮಹಾವಿದ್ಯಾ, ಮಹಾವೀಣಾ, ಭಾರತೀ, ವಾಕ್, ಸರಸ್ವತೀ, ಆರ್ಯಾ, ಬ್ರಾಹ್ಮೀ ಮತ್ತು ಕಾಮಧೇನು ಎಂಬ ಹೆಸರುಗಳು ಈ ಪುರಾಣದಲ್ಲಿವೆ. ಇಲ್ಲಿ ಸರಸ್ವತಿ ಸಾತ್ವಿಕ ಗುಣದ ಪ್ರತೀಕ.[೧೯]

ವಿಷ್ಣುಧರ್ಮೋತ್ತರ ಪುರಾಣ

ಈ ಪುರಾಣದ ಒಂದು ಮತ್ತು ಐದನೆಯ ಅಧ್ಯಾಯಗಳಲ್ಲಿ ಸರಸ್ವತಿಯ ಲಕ್ಷಣಗಳ ಬಗ್ಗೆ ವಿವರಗಳಿವೆ. ಚತುರ್ಭುಜಳಾದ ಈಕೆ ಬಲಭಾಗದ ಕೈಗಳಲ್ಲಿ ಅಕ್ಷಮಾಲಾ ಮತ್ತು ಪುಸ್ತಕ, ಎಡಭಾಗದ ಕೈಯಲ್ಲಿ ಕಮಂಡಲು ಮತ್ತು ವೀಣೆಯನ್ನು ಹಿಡಿದಿರುತ್ತಾಳೆ. ಕೆಲವು ಕಡೆ ಇದರ ಕ್ರಮ ಬದಲಾಗಿಯೂ ಬಂದಿರುತ್ತದೆ.[೨೦]

ಈ ಪ್ರಮುಖ ಪುರಾಣಗಳಲ್ಲದೆ, ಭವಿಷ್ಯೋತ್ತರ ಪುರಾಣ, ದೇವೀ ಪುರಾಣ, ಕಾಲಿಕಾ ಪುರಾಣ, ಮಹಾಭಾಗವತ ಪುರಾಣ ಮತ್ತು ಬೃಹದ್ ಧರ್ಮ ಪುರಾಣಗಳಲ್ಲಿ ಸಾಂದರ್ಭಿಕವಾಗಿ ಸರಸ್ವತಿಯ ವಿಚಾರಗಳು ಬರುತ್ತವೆಯಾದರೂ, ಹೆಚ್ಚಿನವು ಪೂಜಾವಿಧಾನಗಳಿಗೆ ಸಂಬಂಧಿಸಿದವು ಗಳಾಗಿವೆ. ಪ್ರಸ್ತುತ ಲೇಖನದಲ್ಲಿ, ಪುರಾಣಗಳಲ್ಲಿ ಸರಸ್ವತಿಯ ಸ್ವರೂಪವನ್ನು ಅರಿಯಲು ಪ್ರಯತ್ನಿಸಲಾಗಿದೆ. ಅದರ ತೀರ್ಮಾನಗಳು ಕೆಳಕಂಡಂತಿವೆ.

- ಸರಸ್ವತಿಯು ಬ್ರಹ್ಮಾಂಡಪುರಾಣದಲ್ಲಿ ಪರಮಾತ್ಮ ಮತ್ತು ಪ್ರಕೃತಿ ಮಹಾಲಕ್ಷ್ಮಿಯಿಂದ ವಿಷ್ಣುವಿನ ಜೊತೆಯಲ್ಲಿ ಜನಿಸಿ, ಬ್ರಹ್ಮನನ್ನು ಮದುವೆಯಾಗುತ್ತಾಳೆ. ಅಗ್ನಿಪುರಾಣದಲ್ಲಿ ಬ್ರಹ್ಮನ ಮಗಳಾಗಿ, ಸ್ಕಂದಪುರಾಣದಲ್ಲಿ ಬ್ರಹ್ಮನ ಹೆಂಡತಿಯಾಗಿ ಮತ್ತು ಮತ್ಸ್ಯ ಹಾಗೂ ಲಿಂಗಪುರಾಣಗಳಲ್ಲಿ ಬ್ರಹ್ಮನ ಸತಿ ಮತ್ತು ಮಗಳಾಗಿಯೂ ಕಾಣಿಸಿಕೊಳ್ಳುತ್ತಾಳೆ. ಭಾಗವತ ಮತ್ತು ಮಾರ್ಕಂಡೇಯ ಪುರಾಣದಲ್ಲಿ ಕೃಷ್ಣ ಮತ್ತು ವಿಷ್ಣುವಿನ (ವಿಷ್ಣುಜಿಹ್ವಾ ಸರಸ್ವತೀ) ಮಗಳಾಗಿದ್ದರೆ, ಭಾಗವತಪುರಾಣದಲ್ಲಿ ಸರಸ್ವತಿಯು ವಿಷ್ಣುವಿನ ಹೆಂಡತಿ ಯಾಗಿ, ನಂತರ ಬ್ರಹ್ಮನ ಸತಿಯಾಗಿ ಹೋಗುತ್ತಾಳೆ. ಲಿಂಗಪುರಾಣದಲ್ಲಿ ರುದ್ರನ (ರುದ್ರಸುತಾ) ಮಗಳಾಗಿದ್ದಾಳೆ.

---

೧೮. ಬ್ರಹ್ಮಾಂಡ ಪುರಾಣ : ೪-೪೦೫

೧೯. Sarasvati : A study on her Concept and Iconography by Kanailal Bhattacharyya, Saraswati Library Calcutta, 1983. 11p

೨೦. Sarasvati : A study on her Concept and Iconography by Kanailal Bhattacharyya, Saraswati Library Calcutta, 1983. 131p

- ಅಗ್ನಿ, ಭಾಗವತ, ಮತ್ಸ್ಯ, ಮಾರ್ಕಂಡೇಯ ಮತ್ತು ಲಿಂಗಪುರಾಣಗಳಲ್ಲಿ ವೇದಮಾತೆಯಾಗಿ, ಜ್ಞಾನದೇವತೆಯಾಗಿ ಹಾಗೂ ವರಾಹ ಪುರಾಣದಲ್ಲಿ ನದೀದೇವತೆಯಾಗಿ ಮತ್ತು ಪದ್ಮ, ಬ್ರಹ್ಮ, ವಾಮನ ಮತ್ತು ಸ್ಕಂದಪುರಾಣಗಳಲ್ಲಿ ನದೀದೇವತೆ, ವೇದ ಮಾತೆ ಮತ್ತು ಜ್ಞಾನದೇವತೆಯಾಗಿ ಕಾಣಿಸಿಕೊಂಡಿದ್ದಾಳೆ.
- ಅಗ್ನಿಪುರಾಣದಲ್ಲಿ ಚತುರ್ಭುಜೆಯಾಗಿ ಪುಸ್ತಕ, ಅಕ್ಷಮಾಲಾ ಮತ್ತು ವೀಣೆಯೊಂದಿಗೆ, ಪದ್ಮಪುರಾಣದಲ್ಲಿ ದ್ವಿಭುಜೆಯಾಗಿ ಶಂಖ ಮತ್ತು ಬೆಳ್ದಾವರೆಯೊಂದಿಗೆ ಹಾಗೂ ಸ್ಕಂದಪುರಾಣದಲ್ಲಿ ಚತುರ್ಭುಜೆಯಾಗಿ ಕಮಲ, ಅಕ್ಷಮಾಲಾ, ಕಮಂಡಲು ಮತ್ತು ಪುಸ್ತಕದೊಂದಿಗೆ ಅಲಂಕೃತಳಾಗಿದ್ದಾಳೆ. ವಿಷ್ಣುಧರ್ಮೋತ್ತರಪುರಾಣದಲ್ಲಿ ಚತುರ್ಭುಜೆಯಾಗಿದ್ದು, ಬಲ ಕೈಗಳಲ್ಲಿ ಅಕ್ಷಮಾಲಾ ಮತ್ತು ಪುಸ್ತಕ, ಎಡಗೈಯಲ್ಲಿ ಕಮಂಡಲು ಮತ್ತು ವೀಣೆ ಧರಿಸಿದ್ದಾಳೆ. ವಾಯುಪುರಾಣದಲ್ಲಿ[೨೧] ನಾಲ್ಕು ಬಾಯಿಗಳು, ಕೊಂಬುಗಳು, ನಾಲ್ಕು ಹಲ್ಲುಗಳು ನಾಲ್ಕು ಕಣ್ಣುಗಳು ಮತ್ತು ನಾಲ್ಕು ಕೈಗಳೆಂದು ಹೇಳಿದೆ. ಇಲ್ಲಿ ಸರಸ್ವತೀ ಎಲ್ಲಾ ಪ್ರಾಣಿಗಳಿಗೂ ತಾಯಿಯಾಗಿದ್ದರಿಂದ ಪ್ರಕೃತಿಗಾವು ಎಂದು ಕರೆಸಿಕೊಂಡಿದ್ದಾಳೆ.[೨೨] ಮತ್ಸ್ಯಪುರಾಣದ ಪ್ರಕಾರ ಸರಸ್ವತಿಯ ವಾಹನ ಹಂಸ.
- ಸ್ಕಂದಪುರಾಣದಲ್ಲಿ ಸರಸ್ವತಿಯ ಮಣ್ಣಿನ ವಿಗ್ರಹದ ಉಲ್ಲೇಖ ಬರುತ್ತದೆ.
- ಲಿಂಗಪುರಾಣದಲ್ಲಿ ಮಾತ್ರ ಅವಳನ್ನು 'ಕೃಷ್ಣವರ್ಣಾ' ಎಂದು ವರ್ಣಿಸಿದೆ. ಬ್ರಹ್ಮವೈವರ್ತಪುರಾಣದಲ್ಲಿ ಹಳದಿ ವಸ್ತ್ರಧಾರಿಣಿಯೆಂದು ಹೇಳಿದೆ.

ಪುರಾಣಗಳು ಐತಿಹಾಸಿಕ ಆಕರಗಳಲ್ಲ ಎಂಬ ವಿಚಾರ ಮಾನ್ಯವಾದುದೇ ಆಗಿದೆ. ಪುರಾಣಗಳು ಓದುವುದಕ್ಕೆ ಮಾತ್ರ ಎಂಬ ಅಭಿಪ್ರಾಯವೂ ಇದೆ. ಪುರಾಣಗಳಲ್ಲಿ ಐತಿಹಾಸಿಕ ಅಂಶಗಳು ಇಲ್ಲದೆಯೂ ಇಲ್ಲ. ಸಾಂಸ್ಕೃತಿಕ ಸಂಶೋಧಕನೊಬ್ಬ ಅವುಗಳನ್ನು ಪೂರ್ಣವಾಗಿ ಅಲ್ಲಗಳೆಯುವಂತಿಲ್ಲ. ಏಕೆಂದರೆ, ಪುರಾಣಗಳು ಅವುಗಳ ರಚನೆಯ ನಂತರದಲ್ಲಿ ಭಾರತೀಯ ಸಮಾಜದಲ್ಲಿ ಬೀರಿದ ಪ್ರಭಾವ ಕಡಿಮೆಯೇನಲ್ಲ. ವೇದ ಮತ್ತು ಉಪನಿಷತ್ತುಗಳು ದೇವರ ಮತ್ತು ಪಂಡಿತರ ನಡುವಿನ ವಿಚಾರಗಳಾಗಿದ್ದವು ಮಾತ್ರ, ಆದರೆ ಪುರಾಣಗಳು ಸಾಮಾನ್ಯ ಜನರಿಗೂ ಕೇಳಲು ಓದಲು ಲಭ್ಯವಿದ್ದಂತಹವು. ಜನರು ಅವನ್ನೇ ಸತ್ಯವೆಂದು ನಂಬಿ ಆಚರಣೆಗೆ ಅಳವಡಿಸಿಕೊಂಡಿರಲೂಬಹುದು. ಆದುದರಿಂದ ಪುರಾಣಗಳನ್ನು ಐತಿಹಾಸಿಕ ಆಕರಗಳಾಗಿ ಸ್ವೀಕರಿಸುವಾಗ ಎಚ್ಚರದ ಅಗತ್ಯವಿದೆ.

❑

೨೧. ವಾಯುಪುರಾಣ : ೨೩-೪೪ ರಿಂದ ೪೫

೨೨. Sarasvati : A study on her Concept and Iconography by Kanailal Bhattacharyya, Saraswati Library Calcutta, 1983. 131p

ದಾವಣಗೆರೆ ಪ್ರದೇಶದ ವರ್ತಕರ ಜೀವನದ ನೆಲೆ-ಹಿನ್ನೆಲೆ : ಶಾಸನಗಳಿಂದ

• *ಡಾ. ಬಿ.ಎಸ್. ಗೀತಾ*

ದಾವಣಗೆರೆ ಇಂದು ವ್ಯಾಪಾರಕ್ಕೆ ಪ್ರಮುಖ ಕೇಂದ್ರವಾಗಿದೆ. ಸದಾ ವರ್ತಕರಿಂದ ಕೂಡಿ ಗಿಜುಗುಟ್ಟುತ್ತದೆ. ಇದಕ್ಕೆ ಹಿನ್ನೆಲೆಯಾಗಿ ಗತ ಕಾಲದಲ್ಲಿದ್ದ ವರ್ತಕರ ಜನಜೀವನವನ್ನು ತಿಳಿಯುವುದು ಮುಖ್ಯ ವೆನಿಸುತ್ತದೆ. ಹಿಂದಿನ ಕಾಲದಲ್ಲಿ ಇಲ್ಲಿ ವರ್ತಕರು ಹೆಚ್ಚಾಗಿ ಇದ್ದರೆ, ಇದ್ದುದೇ ಆದರೆ ಅವರ ರೀತಿ ನಡಾವಳಿಗಳೇನು? ಸಮಾಜದಲ್ಲಿ ಅವರು ಪ್ರಮುಖ ಸ್ಥಾನ ವಹಿಸಿದ್ದರೆ? ಅವರ ಸ್ಥಾನಮಾನಗಳೇನು? ಅವರ ಅಧಿಕಾರ, ವ್ಯಾಪಾರದ ಸ್ವರೂಪವೆಂತಹದು? ಎನ್ನುವುದನ್ನು ಅರಿಯಬೇಕಾಗಿದೆ.

ವಾಣಿಜ್ಯ ವೃತ್ತಿ ಕೈಗಾರಿಕೆಗಳ ಉತ್ಪಾದನೆಯನ್ನು ವಿತರಿಸುವ ಮುಖ್ಯ ಕಸುಬಾಗಿವುಳ್ಳ ವ್ಯಕ್ತಿಗಳೇ ಈ ವರ್ತಕರು. ಸಮಾಜದ ಮಧ್ಯಮ ವರ್ಗವನ್ನು ಪ್ರತಿನಿಧಿಸುವ ಈ ವ್ಯಾಪಾರಿಗಳು, ವ್ಯವಸಾಯವೇ ಹೇಗೆ ನಾಡಿನ ಅಭಿವೃದ್ಧಿಗೆ ಕಾರಣವೊ, ಕೃಷಿಕ ಹೇಗೆ ಸಮಾಜದ ಒಂದು ಅಂಗವೊ ಹಾಗೆಯೇ ಸಮಾಜದಲ್ಲಿ ಮುಖ್ಯವಾದ ಸ್ಥಾನವನ್ನು ವ್ಯಾಪಾರಿ ಪಡೆದಿರುತ್ತಾನೆ. ಕೃಷಿಕ ಬೆಳೆದ ಆಹಾರಧಾನ್ಯಗಳನ್ನು ಜನರಿಗೆ ತಲುಪಿಸುವ ಜವಾಬ್ದಾರಿಯುತ ಸ್ಥಾನವನ್ನು ವಹಿಸಿದ ವರ್ತಕರು ತಮ್ಮ ವ್ಯಾಪಾರದ ಅನುಕೂಲತೆಗಳಿಗಾಗಿ ಅನೇಕ ಸಂಘಗಳನ್ನು ರಚಿಸಿಕೊಂಡಿದ್ದರು. ಅವರ ವ್ಯಾಪಾರದ ಸ್ವರೂಪ, ಧಾರ್ಮಿಕ ಜೀವನ, ಅಧಿಕಾರದ ಘನತೆ, ಸ್ವಹಿತರಕ್ಷಣೆ ಇವುಗಳಿಂದ ಸಮಾಜದಲ್ಲಿ ತಮ್ಮದೇ ಆದ ಪ್ರತ್ಯೇಕ ಸ್ಥಾನ ವನ್ನು ಗಳಿಸಿರುವ ಬಗ್ಗೆ ಇಲ್ಲಿಯ ಶಾಸನಗಳು ಬೆಳಕು ಚೆಲ್ಲುತ್ತವೆ.

ವ್ಯಾಪಾರವನ್ನೇ ವೃತ್ತಿಯಾಗಿಸಿಕೊಂಡ ವರ್ತಕರಲ್ಲಿ ವಿವಿಧ ಪಂಗಡ ಗಳಿದ್ದವು. ಅವರಲ್ಲಿ ಸೆಟ್ಟಿ, ಸೆಟ್ಟಿಗುತ್ತ, ಮುಮ್ಮುರಿದಂಡ, ನಾನಾದೇಶಿ-ಉಭಯನಾನಾದೇಶಿ ಮೊದಲಾದವರು ಸೇರ್ಪಡೆಯಾಗುತ್ತಾರೆ.

"ಶ್ರೇಷ್ಠಿನ್, ವಣಿಜ, ಸಂಸ್ಕೃತ ಪದಗಳ ಕನ್ನಡ ರೂಪ ಸೆಟ್ಟಿ. ವ್ಯಾಪಾರ ವೃತ್ತಿಯನ್ನು ಜೀವನೋಪಾಯದ ಸಾಧನವನ್ನಾಗಿಸಿಕೊಂಡವರು ಸೆಟ್ಟಿಯರು".[೧] ಆನೆಕೊಂಡದ ಶಾಸನದಲ್ಲಿ ಕನ್ನಡ ನಾಲ್ಕು ಸಾಸಿರದ ಮುಂಮುಚಿದಂಡಂಗಳಿಗೆ ಮುಖ್ಯನಾದಂತಹ ಶೈವರದೇವಿ ಸೆಟ್ಟಿಯನ್ನು ಹೀಗೆ ವರ್ಣಿಸುತ್ತದೆ.

ಧರ್ಮದ ಮೇರು ಧರ್ಮ್ಮದ ತವರ್ಮ್ಮನೆ ಧರ್ಮ್ಮದ ಜನ್ಮಭೂಮಿ ಸು ।
ಧರ್ಮ್ಮ ಗುಣ ಪ್ರಭಾವ ಮಹಿಮಾಂಬುಧಿ ನಿರ್ಮ್ಮಳ ಧರ್ಮ್ಮದಾಗರಂ ।
ಧರ್ಮ್ಮದ ಬಿತ್ತು ಧರ್ಮ್ಮನಿಧಿ ಧರ್ಮ್ಮ ಪರಂಶಿವಧರ್ಮ್ಮ ದೀಪಕಂ ।
ಧರ್ಮ್ಮ ಸುಖಾಯನೆನ್ನುದ್ಧರೆ ಕೀರ್ತ್ತಿಸುಗಂ ಶೈವರದೇವಿ ಸೆಟ್ಟಿಯಂ ॥[೨]

"ಸೆಟ್ಟಿಗುತ್ತದ ಪೂರ್ವಪದ ಸೆಟ್ಟಿ (>(ಸಂ)ಶ್ರೇಷ್ಠ) ವರ್ತಕ ಅರ್ಥವುಳ್ಳದ್ದು. ಉತ್ತರಪದ ಗುತ್ತ ಕನ್ನಡದ ನಾಮಪದದ ಗತ್ತಿ, ಗುತ್ತಗಳಿಗೆ ಗುಂಪು, ಸಮಾಜವೆಂದು ಇನ್ನೊಂದು ಅರ್ಥವಿದೆಯಾದರೂ ಎತ್ತರವಾದ ಸ್ಥಳ ಎಂಬರ್ಥದ ಉನ್ನತವಾದ, ಶ್ರೇಷ್ಠವಾದ ಹಿರಿಯ ಎಂಬರ್ಥ ಸಮಂಜಸವಾದುದು. ಸೆಟ್ಟಿಗುತ್ತ ಎಂದರೆ ಹಿರಿಯ ವರ್ತಕ ಇಲ್ಲವೆ ವರ್ತಕರಲ್ಲಿ ಶ್ರೇಷ್ಠ ಎಂದಾಗುತ್ತದೆ. ವರ್ತಕ ಸೂಚಿಯಾದ ಇವರಲ್ಲಿ ಸ್ಥಳೀಯರಾದವರನ್ನು ಸ್ಥಳ-ತಳದ ಸೆಟ್ಟಿಗುತ್ತರೆಂದು ಕರೆಯಲಾಗಿದೆ."[೩]

ಇದರಂತೆ ಮಂಡಲಸೆಟ್ಟಿಗುತ್ತರೂ ಇದ್ದರು. ನಾಡಿನ ಒಂದು ಭಾಗವಾದ ಮಂಡಳದ ಸೆಟ್ಟಿಯರಿಗೆ ಮುಖ್ಯರಾಗಿದ್ದವರು, ಮಂಡಲಸೆಟ್ಟಿಗುತ್ತರು. ಬೇತೂರಿನ ಶಾಸನದಲ್ಲಿ -

ಕೊಂಡೆಯರಂ ದುರ್ಜ್ಜನಂ
ಗಂಡಿಗರಂ ತೆಗೆದುತೆಗೆದು ಸಿಕ್ಷಿಪರಂತಾ
ಮಂಡಳದ ಸೆಟ್ಟಿಗುತ್ತ
ಮ್ಮ್ಡಿತ ವಿಕ್ರಿ (ಕ್ರ)ಮಿಗಳೆಸೆವರವನೀತಳದೊಳ್ ॥[೪]

ಎಂಬ ಕಂದ ಪದ್ಯದಲ್ಲಿ ಬಂದಿರುವ ಮಂಡಳದ ಸೆಟ್ಟಿಗುತ್ತದ ಪರಾಕ್ರಮ ಪರಮ ಕರ್ತವ್ಯಗಳ ವರ್ಣನೆ ಗಮನಿಸುವಂತಹುದಾಗಿದೆ. ಮುಂಮರಿದಂಡ -"ಇದು ಒಂದು ವರ್ತಕ ಪ್ರಕಾರವೇ ಹೊರತು ವ್ಯಾಪಾರಿಗಳ ಸೈನ್ಯವಲ್ಲ. ಮುಂಮರಿದಂಡರು ಸಂಚರಿಸುವ ವರ್ತಕರಾಗಿದ್ದರು."[೫] ನಾನಾದೇಶಿ, ಉಭಯ ನಾನಾದೇಶಿಗಳು ವರ್ತಕ ಪ್ರಕಾರಗಳಾಗಿರದಿದ್ದರೂ ವರ್ತಕರಿಗೆ ಸಂಬಂಧಿಸಿದವುಗಳಾಗಿವೆ. ದಾವಣಗೆರೆ ತಾಲ್ಲೂಕಿನ ಕುಂದವಾಡವು ನಾನಾದೇಶಿ ಹಾಗೂ ಉಭಯ ನಾನಾದೇಶಿಯರನ್ನು ಆಕರ್ಷಿಸಿದ ಗ್ರಾಮವಾಗಿದ್ದಿತು. ಅವರು ಪರ್ಯಟನೆಗೈದ ಪ್ರಾದೇಶಿಕ ಸೀಮೆಯನ್ನು ಇದರಿಂದ ಪತ್ತೆಹಚ್ಚಲು ಸಾಧ್ಯವಾಗುತ್ತದೆ. ನಾನಾದೇಶಿ ಒಳನಾಡಿನ

---

೧. ಬಿ.ಆರ್. ಹಿರೇಮಠ : ಶಾಸನಗಳಲ್ಲಿ ಕರ್ನಾಟಕದ ವರ್ತಕರು (ಕರ್ನಾಟಕ ವಿಶ್ವವಿದ್ಯಾಲಯ; ೧೯೮೬) ಪು. ೧೨.

೨. Ec.XI.Dg. 3 ಆನೆಕೊಂಡ ಕ್ರಿ.ಶ. ೧೧೨೧

೩. ಎಸ್.ಕೆ. ಕೊಪ್ಪ : ತರ್ದವಾಡಿ ನಾಡು ಒಂದು ಅಧ್ಯಯನ ಶಾಸನಗಳನ್ನಾಧರಿಸಿ; (ಪ್ರತಿಭಾ ಪ್ರಕಾಶನ; ೧೯೯೦) ಪು. ೨೧೮.

೪. Ec.XI.Dg. 13 ಬೇತೂರು ಕ್ರಿ.ಶ. ೧೨೭೧

೫. ಬಿ.ಆರ್. ಹಿರೇಮಠ : ಶಾಸನಗಳಲ್ಲಿ ಕರ್ನಾಟಕದ ವರ್ತಕರು (ಕರ್ನಾಟಕ ವಿಶ್ವವಿದ್ಯಾಲಯ; ೧೯೮೬) ಪು. ೪೨, ೬೯.

(ವಿವಿಧ ಸ್ಥಳದ) ಸರ್ವ ಪ್ರಕಾರದ (ಸ್ವದೇಶಿ) ವರ್ತಕರು, ಪಾದಮಾರ್ಗ ಜಲಮಾರ್ಗಗಳ ಮೂಲಕ ಅಥವಾ ಸ್ವಸ್ಥಳ, ಪರಸ್ಥಳಗಳಲ್ಲಿ ವ್ಯಾಪಾರ ಮಾಡುವವರು 'ಉಭಯನಾನಾದೇಶಿ' ಗಳೆಂದು ವಿದ್ವಾಂಸರು ಗುರುತಿಸಿದ್ದಾರೆ.

ವ್ಯಾಪಾರಿ ಸಮೂಹದ ಚಟುವಟಿಕೆಗಳು ಉತ್ಪಾದನೆ ಮತ್ತು ವಿತರಣೆಯ ಸಂಘಟನೆ ಯಿಂದಾಗಿ ಪ್ರಾಚೀನ ನಗರಜೀವನದ ಮಹತ್ವದ ಭಾಗವಾದವು. ಇದರಿಂದ ದೊಡ್ಡ ಸಂಖ್ಯೆಯ ಆಯಾ ವೃತ್ತಿ ಸಂಘಗಳನ್ನು ರಚಿಸಿದರು. ಹೀಗೆ ಸಮಾನವೃತ್ತಿಯವರು ಒಟ್ಟಾಗಿ, ಸಹಕಾರದಿಂದ ವ್ಯವಹರಿಸುವುದು ಸಂಘಶ್ರೇಣಿಗೆ ಮೂಲವಾಗಿದೆ. ಶಾಸನಗಳಲ್ಲಿ ಬರುವ 'ಅಯ್ಯಾವೊಳೆ ಐನೂರ್ವರು'[೬] 'ಅಯ್ಯಾವಳೆಯಯಿನೊರ್ಬ್ಬ ಸ್ವಾಮಿಗಳು',[೭] 'ತೆಲ್ಲಿಗರಯ್ವತೊಕ್ಕಲು' ಮೊದಲಾದ ಸಂಘ ಸಮೂಹಗಳು ಉತ್ಪಾದನೆ ಮತ್ತು ವಿತರಣೆಯಲ್ಲಿ ತೊಡಗಿದ್ದವು. ಇವುಗಳಲ್ಲಿ ಹೆಚ್ಚಿನವು ವೃತ್ತಿಸೂಚಿ ಹಾಗೂ ಗ್ರಾಮಸೂಚಿ ಪದಗಳಿರುತ್ತವೆ. ಉದಾಹರಣೆಗೆ 'ತೆಲ್ಲಿಗರೈವತ್ತೊಕ್ಕಲು' ವೃತ್ತಿಸೂಚಿ ಪದವಾಗಿದೆ.

"ಐಹೊಳೆ ನಮ್ಮ ಇತಿಹಾಸದುದ್ದಕ್ಕೂ ವ್ಯಾಪಾರಿ ಮಹಾಸಂಘದ ಕೇಂದ್ರವೆಂದು ಸೂಚಿತವಾಗಿರುವುದರಿಂದ ವ್ಯಕ್ತಿವರ್ತಕ ಶ್ರೇಷ್ಠವಾಗಿರುವ ಸಂಭವವಿದೆ. ಈ ವ್ಯಕ್ತಿ ನಾಮ ಹೊತ್ತು ಹುಟ್ಟಿದ ಅಯ್ಯಾವೊಳೆ ವ್ಯಾಪಾರಿ ಸಂಘದ ಸದಸ್ಯರ ಸಂಖ್ಯೆ ೫೦೦ ಇದ್ದುದರಿಂದ ಇವರು 'ಅಯ್ಯಾವೊಳೆಯ ಐನೂರ್ವರು' ಎಂದೇ ಪ್ರಸಿದ್ಧರಾಗಿದ್ದಾರೆ. "ಅಯ್ಯಾವೊಳೆ ಐನೂರ್ವರು" - ಇದು ಐದುನೂರು ಸದಸ್ಯರುಳ್ಳ ವರ್ತಕ ಸಂಘ. ಅಯ್ಯಾವೊಳೆ(ಐಹೊಳೆ) ಈ ಸಂಘದ ಸ್ಥಳ. "ಅಯ್ಯಾವಳೆಯಯಿನೊರ್ಬ್ಬ ಸ್ವಾಮಿಗಳು" ಎಂಬುದು ಈ ಸಂಘದ ವಿಷಯವಾಗಿ ಶಾಸನಸ್ಥನವಾಗಿರುವ ಪರ್ಯಾಯ ಪ್ರಯೋಗವಾಗಿದೆ."[೮]

ಪ್ರಾಚೀನ ಕಾಲದಿಂದಲೂ ಬೆಳೆದು ಬಂದ ಪ್ರಮುಖ ಕೈಗಾರಿಕೆಗಳಲ್ಲಿ ದಿನನಿತ್ಯದ ಬದುಕಿಗೆ ಅಗತ್ಯವಾದ ಗಾಣದೆಣ್ಣೆಯ ಉತ್ಪಾದನೆಯೂ ಒಂದು. ಬಹುಪಾಲು ಎಣ್ಣೆಯನ್ನು ಅಡಿಗೆ ಪದಾರ್ಥಗಳಿಗೂ ಹಾಗೂ ರಾತ್ರಿಯ ಕತ್ತಲನ್ನು ನಿವಾರಿಸಲು ಮನೆಗಳಲ್ಲಿ ದೀವಿಗೆಗೂ ಮತ್ತು ದೇವಸ್ಥಾನಗಳಲ್ಲಿ ದೇವರ ನಂದಾದೀವಿಗೆಗೆ ಉಪಯೋಗಿಸಲಾಗುತ್ತಿತ್ತು. ಎಣ್ಣೆಯ ಉತ್ಪಾದನೆ, ಮಾರಾಟಗಳೆರಡೂ ತೆಲ್ಲಿಗರ ಪ್ರಭುತ್ವದಲ್ಲಿದ್ದವು. ಎಳ್ಳು, ಕಡಲೆಕಾಯಿ ಮೊದಲಾದ ಎಣ್ಣೆಬೀಜಗಳನ್ನು ಗಾಣಗಳಲ್ಲಿ ಹಾಕಿ ಎಣ್ಣೆಯನ್ನು ತೆಗೆಯುತ್ತಿದ್ದರು. 'ಎತ್ತುಗಾಣ'[೯], 'ಕೈಗಾಣ'[೧೦] ಎಂಬ ಎರಡು ರೀತಿಯ ಗಾಣಗಳಿದ್ದವು. ಒಂದೆತ್ತಿನ ಮೂಲಕ ಎತ್ತುಗಾಣ, ಕೈಯಿಂದ ಕೈಗಾಣದಿಂದ ಎಣ್ಣೆಯನ್ನು ಉತ್ಪಾದಿಸುತ್ತಿದ್ದರು. ಈ ಗಾಣಿಗರು ನಂದಾ ದೀವಿಗೆಗೆ, ಎತ್ತುಗಾಣ ಮತ್ತು ಕೈಗಾಣವನ್ನು ಬಿಟ್ಟ ಉದಾಹರಣೆಗಳಿವೆ.

---

೬ Ec.XI.Dg. 105 ಕುಂದವಾಡ ಕ್ರಿ.ಶ. ೧೨೧೮

೭ Ec.XI.Dg. 105 ಕುಂದವಾಡ ಕ್ರಿ.ಶ. ೧೨೧೮.

೮. ಬಿ.ಆರ್. ಹಿರೇಮಠ : ಶಾಸನಗಳಲ್ಲಿ ಕರ್ನಾಟಕದ ವರ್ತಕರು (ಕರ್ನಾಟಕ ವಿಶ್ವವಿದ್ಯಾಲಯ ೧೯೮೬) ಪು. ೪೨.

೯. Ec.XI.Dg. 133 ಮಳಲಕೆರೆ ಕ್ರಿ.ಶ. ೧೦೭೧.

೧೦. Ec.XI.Dg. 133 ಮಳಲಕೆರೆ ಕ್ರಿ.ಶ. ೧೦೭೧

ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಮುಖ್ಯ ವ್ಯಾಪಾರ ವೇದಿಕೆ ಸಂತೆ. ಸಾರ್ವಜನಿಕರ ವ್ಯವಹಾರ ವಹಿವಾಟಿಗಾಗಿ ಸಂತೆಗಳ ಅಗತ್ಯ ಪ್ರಾಚೀನ ಕಾಲದಲ್ಲಿ ಹೆಚ್ಚಿತ್ತು. ವ್ಯಾಪಾರದ ಜೊತೆಗೆ, ಪರಸ್ಪರ ವಿಚಾರ ವಿನಿಮಯ ಹಾಗೂ ಸಾರ್ವಜನಿಕ ಸಂಪರ್ಕ ವೇದಿಕೆಯೂ ಇದಾಗಿತ್ತೆಂದು ಕಾಣುತ್ತದೆ. ಸಂತೆ ನೆರೆಯಿಸುವುದೂ ಒಂದು ಪುಣ್ಯಕಾರ್ಯ ವಾಗಿತ್ತು. ನ್ಯಾಯಯುತವಾದ ವ್ಯವಹಾರ ಅಲ್ಲಿ ನಡೆದು ಜನರಿಗೆ ಉಪಯೋಗವಾಗ ಬೇಕೆಂಬುದೇ ಆಗಿತ್ತು. ನಾನಾದೇಶಿ ಹಾಗೂ ಉಭಯ ನಾನಾದೇಶಿಗಳು ವ್ಯಾಪಾರಕ್ಕಾಗಿ ಆಹ್ವಾನಿತರಾಗುತ್ತಿದ್ದುದರಿಂದ ಹೊರನಾಡಿನ ವಿಷಯಗಳು ತಿಳಿಯಲು ಸಹಾಯವಾಗು ತ್ತಿದ್ದಿರಬೇಕು. 'ಕೊಡಗನೂರು'[೧೧] ಪ್ರಧಾನ ವ್ಯಾಪಾರ ಕೇಂದ್ರ ಸ್ಥಳವಾಗಿದ್ದಿತು.

ಕುಂದವಾಡ ಶಾಸನದಲ್ಲಿ ಸಂತೆಯ ಬಗ್ಗೆ ವಿವರವಾದ ಉಲ್ಲೇಖವಿದೆ. ಹೊಯ್ಸಳ ವೀರಬಲ್ಲಾಳನ ರಾಣಿಯಾದ ಅಭಿನವ ಕೇತಳದೇವಿಯು ದಕ್ಷಿಣ ಸೌರಾಷ್ಟ್ರವೆನಿಸಿದ ಸೋಮನಾಥದೇವರ ಕುಂದವಾಡದ ಗೌಡರಿಗೂ, ಸೆಟ್ಟಿಯರಿಗೂ ಬುಧವಾರ ಸಂತೆ ಮಾಡಿ ಎಂದು ನಿಯಮಿಸಲು ಮಹಾಪ್ರಸಾದವೆಂದು ಅಯವಳೆಯಯಿನೊರ್ಬ್ಬ ಸ್ವಾಮಿಗಳು ನೊಳಾಂಬವಾಡಿಯ ಶಿರೋಮಣಿ ಮಹಾರಾಜಧಾನಿ ಉಚ್ಚಂಗಿಯ ಸಮಸ್ತ ವಳಿನಖರು, ಮುಂಮುರಿದಂಡ, ಉಭಯ ನಾನಾದೇಶಿ ನಾಲ್ಕುನಾಡುಂ ಆ ಪಂಚಮಠದ ತಪೋಧನ ಮುಖ್ಯವಾದ ಏಕ್ಕೋಟಿಗಳುಂ ಅಸಂಖ್ಯಾತ ಗಣಂಗಳು, ಹದಿನೆಂಟು ಸಮೆಯಮಂ ಮುಂತಾದವರು ಶಕವರುಷ ೧೦೬೨ನೆಯ ಬಹುಧಾನ್ಯ ಸಂವತ್ಸರದ ಮಾರ್ಗಶಿರ ಶುದ್ಧ ೨ ಬುಧವಾರದಂದು ಶುಭಲಗ್ನದಲ್ಲಿ ನನ್ನಿಕಂಬವನ್ನು ಪ್ರತಿಷ್ಠಾಪಿಸಿ ಸಂತೆಯನ್ನು ಪ್ರಾರಂಭಿಸಿದರು.[೧೨] "ನನ್ನಿಕಂಬ ಕಲ್ಲಿನದಿದ್ದು ಬಹುಶಃ ದೇವಾಲಯದ ಮುಂದೆ ನೆಟ್ಟದಾಗಿರಬೇಕು. ಹಸುಬೆಗಳನ್ನು ನನ್ನಿಕಂಬದ ಮುಂದೆ ಇಳುಹಿ ಒಯುತ್ತಿದ್ದರೆಂದು ಈ ಶಾಸನವು ಹೇಳುತ್ತದೆ."[೧೩]

ಸಂತೆಗೆ ಬರುವ ಪ್ರತಿಯೊಂದು ವಸ್ತುವಿನ ಮೇಲೆ ಸುಂಕ ವಿಧಿಸುತ್ತಿದ್ದರು. ವರ್ತಕರು ತಮ್ಮ ವ್ಯಾಪಾರಕ್ಕೋಸ್ಕರ ತಂದ ಸರಕುಗಳ ಮೇಲೆ ಅಥವಾ ಸರಕು ಖರೀದಿಸಿದರೂ ತೆರಿಗೆ ಸಲ್ಲಿಸುತ್ತಿದ್ದರು. 'ಗಾಡಿಸುಂಕ'[೧೪] ರಾಜಭಂಡಾರಕ್ಕೆ ಸಂದಾಯವಾಗುತ್ತಿದ್ದವು. ದವಸ ಧಾನ್ಯಗಳನ್ನು 'ಸೊಳಸ'[೧೫] ಎಂಬ ಅಳತೆಯಿಂದ ಅಳೆಯುತ್ತಿದ್ದರು.

ವರ್ತಕರಲ್ಲಿಯೇ ಕೆಲವರು ಪಟ್ಟಣಸ್ವಾಮಿ, ಮಂಡಲಸ್ವಾಮಿ, ನಾಡಸ್ವಾಮಿಗಳಾಗಿದ್ದ ರೆಂಬುದನ್ನು ಶಾಸನಗಳು ತಿಳಿಸುತ್ತವೆ. ಇವರ ಕಾರ್ಯದಕ್ಷತೆಯಿಂದಾಗಿ ಪಟ್ಟಣಗಳ ಆರ್ಥಿಕ ಚಟುವಟಿಕೆಗಳು ದಿನದಿಂದ ದಿನಕ್ಕೆ ಬೆಳೆಯುತ್ತ ಬಂದವು. ಹೀಗೆ ಪಟ್ಟಣದ ಆಡಳಿತದಲ್ಲಿ ಪ್ರಮುಖವಾಗಿ ಕಂಡುಬರುವ ಪಟ್ಟಣಸ್ವಾಮಿ ಸಂಗತಿಗಳನ್ನು ಈ ರೀತಿಯಾಗಿ ತಿಳಿದು ಕೊಳ್ಳಬಹುದು. "ಕುಂದವಾಡದ ಸೋವಗಲುಡ ಹುಳ್ಳಗಲುಡ ಹರಿಯ ಮಗ ಉಡಂಗಳಂಚಿಂ

---

೧೧. Ec.XI.Dg. 149 ಕೊಡಗನೂರು ಕ್ರಿ.ಶ. ೧೧೧೩.

೧೨. Ec.XI.Dg. 105 ಕುಂದವಾಡ ಕ್ರಿ.ಶ. ೧೨೧೮

೧೩. Ec.XI.Dg. 105 ಕುಂದವಾಡ ಕ್ರಿ.ಶ. ೧೨೧೮.

೧೪. Ec.XI.Dg. 139 ಬಾಡ ಕ್ರಿ.ಶ. ೧೧೧೩.

೧೫. Ec.XI.Dg. 105 ಕುಂದವಾಡ ಕ್ರಿ.ಶ. ೧೨೧೮.

ನಗರ್ವಿಕದ ಬಿರಿಸೆಟ್ಟಿಯರ ಮಗ ಪಟ್ಟಣಸ್ವಾಮಿ ಸಂಗಿಸೆಟ್ಟಿಮುಟ್ಟಿ ಸೆಟ್ಟಿಗಳ್ಗೆ ಬುಧವಾರ ಸಂಥೆಯ ಮಾಡಿಯಂದು ನಿಯಮಿಸಲು...."೧೬ ಸಂತೆಯ ನಿರ್ಮಾಣ ಮತ್ತು ಸಂತೆಯ ಸಂಯೋಜನ ಕಾರ್ಯಗಳನ್ನು ಮಾಡುವವ 'ಪಟ್ಟಣಸ್ವಾಮಿ' ಎಂದು ತಿಳಿದುಬರುತ್ತದೆ.

ವರ್ತಕರು ಧರ್ಮಭೀರುಗಳಾಗಿಯೂ, ದೈವಭಕ್ತರಾಗಿಯೂ ಕಂಡುಬರುತ್ತಾರೆ. ತಾವು ಗಳಿಸಿದ ಐಶ್ವರ್ಯ ಸದ್ವನಿಯೋಗವಾಗಬೇಕೆಂದು ದೇವರ ನಂದಾದೀವಿಗೆ, ಖಂಡಸ್ಫುಟಿತ ಜೀರ್ನ್ನೋದ್ಧಾರಕ್ಕೂ, ತಪೋಧನರಿಗೂ ದಾನ ಕೊಟ್ಟಂತಹ ಉಲ್ಲೇಖ ನಮಗೆ ಸಿಗುತ್ತದೆ.

"ಬೆಳ್ವನೂರ ಮೂಲಸ್ಥಾನದ ಕಲಿದೇವ ಸ್ವಾಮಿಗೆ ಇತರ ದಾನಗಳ ಜೊತೆಗೆ ೧ ಎತ್ತುಗಾಣವನ್ನು ಮತ್ತು ೧ ಕೈಗಾಣವನ್ನು ಊರೊಡೆಯ ಮಾರಮಯ್ಯನು ನಾಗಯ್ಯ ನಾಯಕನ ಜೊತೆಗೂಡಿ ದಾನಕೊಟ್ಟದ್ದಾಗಿ ಕಂಡುಬರುತ್ತದೆ"೧೭ ಬಹುಶಃ ಈ ಎತ್ತುಗಾಣ ಮತ್ತು ಕೈಗಾಣಗಳು ಮಾರಮಯ್ಯನ ಸ್ವಾಮ್ಯಕ್ಕೆ ಸೇರಿದ್ದವಾಗಿರಬೇಕು. ಅಲ್ಲದೆ ಆತ ಗಾಣಿಗನಾಗಿದ್ದಿರಬೇಕು.

ಆನೆಕೊಂಡದ ಶಾಸನವು ಶೈವರದೇವಿಸೆಟ್ಟಿಯನ್ನು ಧರ್ಮದ ತವರ್ಮ್ಮನೆಯೆಂದು, ಧರ್ಮದ ನಿಧಿಯೆಂದು, ಧರ್ಮದೀಪಕನೆಂದು ಧರೆಯೇ ಆತನನ್ನು ಹೊಗಳುತ್ತಿತ್ತಂತೆ. ಈ ಶೈವರ ದೇವಿಸೆಟ್ಟಿಯು, ಮೂವರು ಪ್ರಭುಗಾವುಂಡುಗಳು ಹಾಗೂ ಮಹಾಮಂಡಳೇಶ್ವರನಾದ ತ್ರಿಭುವನಮಲ್ಲ ಪಾಂಡ್ಯದೇವನು ಸೇರಿ ಧರ್ಮ್ಮಸ್ವರ ದೇವರ ಖಂಡಸ್ಫುಟಿತ ಜೀರ್ನ್ನೋದ್ಧಾರಕ್ಕೆ, ನಿತ್ಯ ನೈಮಿತ್ತಿಕಕಂ, ದೇವರನಂದಾದೀವಿಗೆಗೆ, ಧೂಪೋಪಹಾರಕ್ಕಂ, ಸ್ಥಾನಾಚಾರ್ಯ್ಯಗ್ರಾಸಕಂ ಧಾರಾಪೂರ್ಬ್ಬಕವಾಗಿ ಹಳೆಯ ಬೀಡಿ, ನೊಳಗಣಂಬಡಗಣ ಅಗಳ ಬಳಿಯ.... ಹದಿನಯ್ದು ಮೂರುಂ ಚೆತೋಳು ಪುಳೆಯಲು ಕನ್ನುಂಗೌಡಗೆಱೆಯ ಪಡುವ ಗೋಡಿಯ ತುಂಬಿನಹಳ್ಳಿಯ ಹೊಲದೊಳಗೆ ದಾವಣಗೆರ್ಯ್ಯಸೀಮೆಯಿಂ ಬಡಗಲುವೊಂ ಮೇರೆಯಲು ಎರೆಯ ಕೆಯಿಆಗಂಗನಕ ೫೦ ಇಂತಿನಿತುಮಂ ಆ ಸೈವರದೇವಿ ಸೆಟ್ಟಿಯರು ಶ್ರೀಮತ್ರಿಭುವನಮಲ್ಲ ಪಾಂಡೇಶ್ವರ ದೇವರ ಸ್ಥಾನಾಚ್ಚಾರ್ಯ್ಯ ಬ್ರಹ್ಮಶಿವದೇವರ ಮಲ್ಲಿಕಾರ್ಜುನ ಗುರುಗಳು ರುದ್ರ ಶಕ್ತಿದೇವರ ಇಂತಿವರ ಕಾಲಂಕರ್ಚ್ಚಿ ಧಾರಾಪೂರ್ಬ್ಬಕಂ ಮಾಡಿ ಆ ಪ್ರಭುಗಳು ಸಹಿತಕೊಟ್ಟರು."೧೮

ಸಂತೆ ಮುಗಿದ ಮೇಲೆ ದೇವರಿಗೆ ದಾನ ಮಾಡುವ ಸಂಪ್ರದಾಯ ವರ್ತಕರಲ್ಲಿದ್ದಂತೆ ಕಾಣುತ್ತದೆ. ಈ ದಿಸೆಯಲ್ಲಿ ಕುಂದವಾಡದ ಶಾಸನ ಬೆಳಕು ಚೆಲ್ಲುತ್ತದೆ. "ಶುಭ ಲಗ್ನದಲು ನಂನಿಕಂಭವಂ ಪ್ರತಿಷ್ಠಿಸಿ ಸಂಥೆಯಂ ಮಾಡಿ ಆ ಶ್ರೀ ಸೋಮನಾಥ ದೇವರ್ಗ್ಗೆ ಬಿಟ್ಟು ಆಯ ಬಂಡಿಗೆ ಭತ್ತ ಪಡಿ ಅಡಕೆಯ ಕೊ ೧ ಹೇಜಿಂಗೆ ಬ೧ ಎಣ್ಣೆಕೊಂಡಂಕ್ಕೆ ಸೊ ೨ ಹೇಜಿಂಗೆ ಅಡಕೆ ೧೦ ಹೇಜಿಂಗೆ ಎಲೆ ೧೦೦... ಮಗಳ್ಗಂ ಬಿಟ್ನಯ ಭಂಡಿಗೆ ಭತ್ತ ಪರಿವೇದಿಯ ಕೊ ೧ ಹೇಜಿಂಗೆ ಬ ೧ ಎಣ್ಣೆಕೊಡಕ್ಕೆ ಸೊ ೨ ಹೇಜಿಂಗೆ ಅಡಕೆ ೧೦ ಹೆಂಜಿಂಗೆ ಎಲೆ ೧೦೦ ಪಟ್ಟಸ್ವಾಮಿಗಂ ಭಂಡಿಗೆ ಭತ್ತ ಕೊ ೧ ಹೇಜಿಂಗೆ.... ಎಣ್ಣೆಕೊಡಕ್ಕೆ

೧೬. Ec.XI.Dg. 105 ಕುಂದವಾಡ ಕ್ರಿ.ಶ. ೧೨೧೮.

೧೭. Ec.XI.Dg. 20 ವಡ್ಡರಹಳ್ಳಿ ಕ್ರಿ.ಶ. ೧೦೪೫.

೧೮. Ec.XI.Dg. 3 ಆನೆಕೊಂಡ ಕ್ರಿ.ಶ. ೧೧೨೧.

ಸೊ ೨ ಹೇಜಿಂಗೆ ಅಡಕೆ ೧೦ ಹೇಜಿಂಗೆ ಎಲೆ ೧೦೦ ಮೇಲಾದ ಭಂಡಕ್ಕಂದಳಸಾದವಜಿದು ಕೊಡುವರು ದೇವರ್ಗ್ಗೆ ಎತ್ತು ನೂಜಿಕ್ಕಂ ಸರ್ವ್ವಮಾನ್ಯ ಗೌಡಂಗಂ ಎತ್ತು ೨೦ ತಕ್ಕಂ ಸರ್ವ್ವಮಾನ್ಯ ಪಟ್ಟಣಸ್ವಾಮಿ ಎತ್ತು ೨೦ಕ್ಕಂ ಸರ್ವ್ವಮಾನ್ಯ ಮುಂಮುರಿದಂಡಸ್ಥಳದಲ್ಲಿ ದಂಡದೋಷ ಅಲಿ ... ತ್ರಿಕ... ದಾ... ದನ್ಯಾಯವಂ ಸಂಪಾದಿ. ಡೆಹಲರಿಗೆ ದ್ರೋಹ ನೆತ್ತರುಗಯ್ಯ ಬಣಜಿಗ ಕೊಟ್ಟದಕ್ಕೆ..."[೧೯] ಹೀಗೆ ಎಲ್ಲ ವರ್ತಕರು ಇಂತಿಷ್ಟು ಎಂದು ದೇವರಿಗೆ ದಾನಕೊಟ್ಟುದಾಗಿ ತಿಳಿಯುತ್ತದೆ.

ಹರಿಹರ ತಾಲ್ಲೂಕಿನ ಶಾಸನವೊಂದರಲ್ಲಿ ಬೇತೂರು ಮತ್ತು ಲೋಕಿಕೆರೆಯ ವರ್ತಕರ ಶ್ರೀಮಂತಿಕೆಯನ್ನು ವರ್ಣಿಸುತ್ತದೆ. 'ವಜ್ರಬಯಸಣಿ'ಗೆಯ ಮೇಲೆ ಕುಳಿತು ವರ್ತಕರು ದಾನ ಕೊಡುತ್ತಾರೆ. ವಜ್ರಬಯಸಣಿಗೆಯ ಬಗ್ಗೆ ಬಿ.ಆರ್. ಹಿರೇಮಠ ಅವರು ಹೀಗೆ ಹೇಳುತ್ತಾರೆ- "ಬೈಸಣಿಗೆ, ಅಥವಾ ವಜ್ರಬೈಸಣಿಗೆ ಅಥವಾ ವಜ್ರಸಿಂಹಾಸನ, ರತ್ನಸಿಂಹಾಸನ ವಿವಿಧ ವರ್ತಕವರ್ಗದವರು ಸಾಮೂಹಿಕವಾಗಿ ಕುಳಿತುಕೊಳ್ಳುವ ವಿಶಾಲವಾದ ಆಸನವೆಂದಾಗುತ್ತದೆ. ಇದಕ್ಕೆ ಪೋಷಕವಾಗಿ ಕ್ರಿ.ಶ. ೧೨೮೦ರ ಹರಿಹರದ ಶಾಸನದ ಹರಿಹರಪುರದ ಅಶೇಷ ಮಹಾಜನಂಗಳುಂ ನೊಣಂಬವಾಡಿ ಮುವ್ವತ್ತಿಬ್ಯಾಮಿರ ಸಮಸ್ತ ಪಟ್ಟಣಕ್ಕೆ ಸಿರೋಮಣಿ ಉಚ್ಚಂಗಿ ಬೇತೂರು ಲೊಕೆಯಕೆಜಿ ಬಸವಳ್ಳಿ ಮೊದಲಾದ ಪಟ್ಟಣಿಗರು ಸೆಟ್ಟಿಗುತ್ತವುಭಯ ನಾನಾದೇಶಿಗಳು ಮುಖ್ಯವಾದ ಹದಿನೆಂಟು ಸಮಯಂಗಳು ಹರಿಹರದಲು ವಜ್ರ ಬಯಸಣಿಗೆಯಾಗಿ ಕುಳ್ಳಿರ್ದ್ದು"[೨೦] ಈ ವರ್ತಕರು ವಜ್ರಖಚಿತವಾದ ವಿಶೇಷ ಆಸನದ ಮೇಲೆ ಕುಳಿತು ಕೊಳ್ಳುವಷ್ಟು ಆಗರ್ಭ ಶ್ರೀಮಂತಿಕೆಯನ್ನು ಹೊಂದಿದ್ದರು ಎಂದು ಹೇಳಬಹುದು.

ವರ್ತಕರು ಬೆಲೆಯುಳ್ಳ ಸರಕು ಸಾಗಿಸಿಕೊಂಡು ಊರಿಂದೂರಿಗೆ ಹೋಗುವಾಗ, ಮಾರಿದ ಸರಕಿನಿಂದ ಬಂದ ಹಣವನ್ನು ಜೊತೆಯಲ್ಲಿ ತರುವಾಗ, ದಾರಿಗಳ್ಳರ ದಾಳಿಗೆ ತುತ್ತಾಗುತ್ತಿದ್ದರು. ಈ ದಾರಿಗಳ್ಳರ ಉಪಟಳದಿಂದ ಪಾರಾಗಲು ಜೊತೆಯಲ್ಲಿ ವೀರರನ್ನು ಕರೆದುಕೊಂಡು ಹೋಗಬೇಕಾಗುತ್ತಿತ್ತು. ಇಲ್ಲವೆ ಸ್ವತಃ ಸಾಹಸ, ಪರಾಕ್ರಮಗಳಿಂದ ಹೋರಾಡಬೇಕಾಗುತ್ತಿತ್ತು. ಶಾಸನಗಳಲ್ಲಿ ವರ್ತಕರೂ ಕೂಡ ವೀರತನದಿಂದ ಹೋರಾಡಿದ ಚಿತ್ರಗಳು ನಮಗೆ ಸಿಗುತ್ತದೆ.

ಶಾಬನೂರಿನ ಶಾಸನದಲ್ಲಿ -"ಕನಸೆಟ್ಟಿಯ ಜಕ್ಕಯನ ಮಗ ಸಾತಯ ಕ್ರೋಧ ಸಂವತ್ಸರದ ಮಾಘಸುಧ ೨ ಬುಧವಾರದಂದು ಶ್ರೀಕರಣದ ನಾಗಯ ಸಾದ ಗಿರಿಯನ ಬಂಡಿಯ ಹಿಡಿವಲಿ ಕಾದಿಯಿಜಿದು ಮೆಜಿದು ಸುರಲೋಕಕೆ ಪ್ರಾಪ್ತನಾದ"[೨೧] ಎಂದು ಇನ್ನೊಂದು ಇದೇ ಊರಿನ ಶಾಸನ -"ಕನವಸೆಟ್ಟಿಯ ಮಗಕೊಂಡ ನಂಬಿಯಜಿದು ಮೆಜಿದು ಕಾದಿ ಹಲಬರಂ ಕೊಂದು ಸುರಲೋಕ ಪ್ರಾಪ್ತನಾದ"[೨೨]ನೆಂದು ಹೇಳುತ್ತದೆ. ಹೀಗೆ ಶಾಸನಗಳಿಂದ ವರ್ತಕರ ಜೀವನದ ನೆಲೆ ಹಿನ್ನೆಲೆಗಳು ತಿಳಿಯುತ್ತವೆ.

❑

---

೧೯. Ec.XI.Dg. 105 ಕುಂದವಾಡ ಕ್ರಿ.ಶ. ೧೨೨೮.

೨೦. ಬಿ.ಆರ್. ಹಿರೇಮಠ : ಶಾಸನಗಳಲ್ಲಿ ಕರ್ನಾಟಕದ ವರ್ತಕರು : (ಕರ್ನಾಟಕ ವಿಶ್ವವಿದ್ಯಾಲಯ; ೧೯೮೬) ಪು. ೧೬೨.

೨೧. Ec.XI.Dg. 93 ಶಾಖನೂರು ಕಾಲದ ಉಲ್ಲೇಖವಿಲ್ಲ.

೨೨. Ec.XI.Dg. 92 ಶಾಖನೂರು ಕಾಲದ ಉಲ್ಲೇಖವಿಲ್ಲ.

ಗುಮ್ಮಳಾಪುರದ ವಿಶಿಷ್ಟ ಮಹಾಪುರುಷರು ಮತ್ತು ಕವಿಗಳು

• *ಪ್ರೊ. ಕೆ.ಎಸ್. ಮಧುಸೂದನ*

ಗುಮ್ಮಳಾಪುರವು ಒಂದು ಅಪ್ಪಟ ಕುಗ್ರಾಮ. ಈ ಊರು ಬೆಂಗಳೂರು ನಗರದಿಂದ ೪೪ ಕಿ.ಮೀ. ದೂರದಲ್ಲಿದೆ. ಕರ್ನಾಟಕ, ತಮಿಳುನಾಡುಗಳ ಗಡಿ ಸಮೀಪ ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಡೆಂಕಣಿಕೋಟೆ ತಾಲ್ಲೂಕಿಗೆ ಸೇರಿದೆ. ಇಲ್ಲಿನ ಬಹುಸಂಖ್ಯಾತರ ಭಾಷೆ ಕನ್ನಡ. ಸ್ವಲ್ಪ ಜನ ತೆಲುಗು ಮತ್ತು ತಮಿಳು ಮಾತನಾಡುತ್ತಾರೆ. ಇಲ್ಲಿ ಬೇಸಿಗೆಯಲ್ಲಿ ಅತಿ ಹೆಚ್ಚೆಂದರೆ ೩೦ ಡಿಗ್ರಿ ಹಾಗೂ ಚಳಿಗಾಲದಲ್ಲಿ ೧೫ ಡಿಗ್ರಿ, ವರ್ಷದಲ್ಲಿ ಹೆಚ್ಚು ಕಾಲ ಹಿತಕರ ಹಾಗೂ ಉಲ್ಲಾಸಮಯ ವಾತಾವರಣವಿದೆ. ೨ ಕಿ.ಮೀ. ದೂರದಲ್ಲಿ ಮುತ್ಯಾಲಮಡುವು ೫ ಕಿ.ಮೀ. ದೂರದಲ್ಲಿ ದೇವರಬೆಟ್ಟ ಅರಣ್ಯ ಪ್ರದೇಶವಿರುವುದರಿಂದ ವಾತಾವರಣ ತಂಪಾಗಿರುತ್ತದೆ. ಇಲ್ಲಿನ ಜನರ ಮುಖ್ಯ ವೃತ್ತಿ ವ್ಯವಸಾಯ. ಬೆಂಗಳೂರು ಗಂಟೆಯೊಂದೂವರೆ ಪಯಣವಾದ್ದರಿಂದ ಹೊಟ್ಟೆಪಾಡಿಗೆ ಹೆಚ್ಚು ಜನ ಆ ಕಡೆ ಓಡುತ್ತಾರೆ.

ಗುಮ್ಮಳಾಪುರಕ್ಕೆ ಕಮಲಾಪುರ, ಕೈಲಾಸಪುರ, ಕಲ್ಯಾಣಪುರ ಎಂಬ ಹೆಸರಿದ್ದಿತೆಂಬುದು ಅಲ್ಲಿನ ಜನಗಳ ನಂಬಿಕೆ. ಇದಕ್ಕೆ ಹಳೆಯ ಕನ್ನಡ ಕಾವ್ಯಗಳ ಆಧಾರವೂ ಇದೆ.

೧೫ನೆಯ ಶತಮಾನದ ಹೊತ್ತಿಗೆ ಈ ಹಳ್ಳಿ ಒಂದು ಪ್ರಸಿದ್ಧ ವೀರಶೈವ ಕೇಂದ್ರವಾಗಿದ್ದಿತು. ಲಕ್ಕಣ್ಣ ದಂಡೇಶನು ಶಿವತತ್ತ್ವ ಚಿಂತಾಮಣಿಯಲ್ಲಿ ಗುಮ್ಮಳಾಪುರವನ್ನು ಕುರಿತು ಹೀಗೆ ಹೇಳುತ್ತಾನೆ :

ಶಿವನ ಕೈಲಾಸಾದ್ರಿಯೇ ಮನುಜರರಿಯಲಂ
ತವತರಿಸಿದಂತು ಬಸವೇಶ್ವರನ ಕಲ್ಯಾಣ
ಭುವನವರಿಯಲ್ ನೆಲಸಲುತ್ತರವ ಬಿಟ್ಟು ದಕ್ಷಿಣಭಾಗಕೆಯ್ದಿದಂತೆ

ವಿವರಿಸುವಡೆಸೆವ ಜಂಗಮದ ಸಂಚಾರದಿಂ
ಭವಿಯ ಮುಖ ನೋಡದ ಮಹಾಭಕ್ತರಿರವಿನಿಂ
ದವೆಮೆರೆವ ಗುಮ್ಮಹಾಳೆಸೆವ ಪುರವರಿದವರ ಚರಣಾಂಬುಜಕ್ಕೆ ಶರಣು
ಆ ಪುರದ ಸೀಮೆಯಿಲ್ಲಂ ಪತ್ರೆ ಪುಷ್ಪಂಗ
ಳಾಪುರದ ಬಾಗಿಲ್ಲೆ ಲಿಂಗ ಮುದ್ರೆಗಳೆಸವ
ವಾ ಪುರಕೆ ಭವಿಯ ಸಂಚಾರವಿಲ್ಲದೆಯೆಸೆವ ಭಕ್ತರುರೆ ನೆಲಸಿಪ್ಪರು
ಆ ಪುರುದೊಳಗೆ ಲಿಂಗದಾಳಾಪವನುಭಾವ
ವಾ ಪುರದಿ ಶಿವಸಮಯಪಟ್ಟವರ್ಧನರಿಪ್ಪ
ರಾಪುರಂ ಗುಮ್ಮಹಾಳೆಂಬ ಪುರವರಿವವರ ಚರಣಾಂಬುದಕ್ಕೆ ಶರಣು
ಅಲ್ಲಿಪ್ಪ ಚೊಕ್ಕದೇವಪ್ಪಯ್ಯ ಗುಬ್ಬಿಯ
ಮಲ್ಲಣ್ಣನಮ್ಮಣನ ನಾಗಪ್ಪನುಂ ಹೊನ್ನ
ಮಲ್ಲಣ್ಣನವರೊಳಗೆ ಮಳವಳಿಯ ಬಸವಣ್ಣ ಮಾನುಗಲ್ಲಾ ನಾಗಪ
ಅಲ್ಲಿಯಿವರೊಳಗಾದ ದಾಸೋಹದ ಮಠಗ
ಳಲ್ಲಿ ತಿಂಥಿಣಿವಡೆದು ನೆರೆ ಭಕ್ತಿಮಯವಾಗಿ
ಸಲ್ಲಲಿತ ಶತಗಣಂಗಳ ಪಾದವರಿವವರ ಚರಣಾಂಬುಜಕ್ಕೆ ಶರಣು.

ಶಿವನ ಕೈಲಾಸಪುರವೇ ಮನುಷ್ಯರಿಗೆ ಗೊತ್ತಾಗುವಂತೆ ಭೂಮಿಗೆ ಗುಮ್ಮಳಾಪುರವಾಗಿ ಅವತರಿಸಿತು, ಬಸವೇಶ್ವರನ ಕಲ್ಯಾಣವೇ ಇಲ್ಲಿ ನೆಲೆಸಲು ಉತ್ತರವನ್ನು ಬಿಟ್ಟು ದಕ್ಷಿಣ ಭಾಗಕ್ಕೆ ಬಂದಿತು. ವಿಚಾರಿಸಲು ಹೋದರೆ ಶಿವಭಕ್ತರಲ್ಲದ ಭವಿಯ ಮುಖ ನೋಡದ ಮಹಾಭಕ್ತರಿಂದ ಶೋಭಿಸುವ ಗುಮ್ಮಳಾಪುರವನ್ನು ಅರಿತವರ ಚರಣಗಳಿಗೆ ಶರಣು ಎನ್ನುತ್ತಾನೆ ಲಕ್ಕಣ್ಣ ದಂಡೇಶ. ಮುಂದಿನ ಪದ್ಯದಲ್ಲಿ ಆ ಪುರದ ವರ್ಣನೆ ಇದೆ. ಗುಮ್ಮಳಾಪುರದ ಸೀಮೆಯಲ್ಲೆಲ್ಲಾ ಪತ್ರೆ ಪುಷ್ಪಗಳಿವೆ. ಆ ಊರಿನ ಬಾಗಿಲಿಗೆ ಲಿಂಗಮುದ್ರೆ ಇದೆ. ಶಿವಭಕ್ತರಲ್ಲದವರ ಸಂಚಾರ ಅಲ್ಲಿ ಇಲ್ಲ. ಆ ಪುರದಲ್ಲಿ ಶಿವಲಿಂಗ ಕೀರ್ತನೆ, ಶೈವಧರ್ಮದ ಅಧಿಪತಿಗಳು ಅಂತಹ ಗುಮ್ಮಳಾಪುರವನ್ನು ಅರಿತವರ ಪಾದಕಮಲಗಳಿಗೆ ನಮಸ್ಕಾರ.

ಅಲ್ಲಿನ ಮಠದಲ್ಲಿ ನಡೆಯುತ್ತಿದ್ದ ದಾಸೋಹದಲ್ಲಿ ಚೊಕ್ಕದೇವಪ್ಪಯ್ಯ, ಗುಬ್ಬಿಯ ಮಲ್ಲಣ, ಅಮ್ಮಣನ ನಾಗಪ್ಪ, ಹೊನ್ನಮಲ್ಲಣ್ಣ, ಮಳವಳಿಯ ಬಸವಣ್ಣ, ಮಾನುಗಲ್ಲಿನ ನಾಗಪ್ಪ ಮುಂತಾದ ಶತಗಣಂಗಳು ಭಾಗವಹಿಸುತ್ತಿದ್ದರು.

ಕನ್ನಡದ ಪ್ರಸಿದ್ಧ ಸಾಹಿತಿ ಡಿ.ವಿ.ಜಿ. ಅವರು ತಮ್ಮ ಜ್ಞಾಪಕ ಚಿತ್ರ ಶಾಲೆ - ೮ರಲ್ಲಿ "ಆ ಕಾಲದಲ್ಲಿ (೧೪ನೆಯ ಶತಮಾನ) ಗುಮ್ಮಳಾಪುರ ಕನ್ನಡ ವಿದ್ವಾಂಸರಿಗೂ ವೀರಶೈವ ಮತಸ್ಥರಿಗೂ ಒಂದು ಕೇಂದ್ರಸ್ಥಾನವಾಗಿದ್ದಿತೆಂದು ತೋರುತ್ತದೆ. ಆ ಊರಿನ ಸುತ್ತಮುತ್ತ ಅನೇಕ ಪ್ರಾಚೀನ ಶಿವಾಲಯಗಳ ಮತ್ತು ಮಠಗಳ ಅವಶೇಷಗಳು ಉಳಿದುಕೊಂಡಿವೆ. ಈ ಸ್ಥಳದಲ್ಲಿ ಬಾಳಿದ ನನ್ನ ಜಾತಿಯ ಮನುಷ್ಯ ಒಬ್ಬಾತ ವೆಂಕಟಶರ್ಮ ಎಂಬುವನು. ಈತ ಕನ್ನಡ ಕವಿ ರುದ್ರಭಟ್ಟನ ಜಗನ್ನಾಥ ವಿಜಯ ವ್ಯಾಖ್ಯಾನ ಬರೆದಿದ್ದಾನೆ" ಎಂದು ಹೇಳಿದ್ದಾರೆ.

ವಿಶಿಷ್ಟ ಮಹಾಪುರುಷರು

೧. ಗುಮ್ಮಣ-ಪೆಮ್ಮಣ : ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣದಲ್ಲಿ (ಸಂ. ೬೨) ಗುಮ್ಮಳಾಪುರವನ್ನು ಕಟ್ಟಿದ ಗುಮ್ಮಣ-ಪೆಮ್ಮಣರ ಪ್ರಸ್ತಾಪ ನಾಲ್ಕೈದು ಪದ್ಯಗಳಲ್ಲಿ ಬರುತ್ತದೆ.

ಎಲೆ ಸಿದ್ಧರಾಮ ಕೇಳ್ ಜಸದಿ ಕಲ್ಯಾಣ
ವಳಿಯಲಾ ಪ್ರಜೆಗಳಂ ತುರುಕರಾಕ್ಷಸರಾಗ
ಸುಲಿದು ಸೂರ‍್ಯಾಡಲಾ ಗುಮ್ಮಣಂ ಪೆಮ್ಮಣಯ್ಯಗಳೆನಿಪ ವ್ರತಿಗಳಿರದೆ
ನೆಲೆಗೆಟ್ಟು ಪೋಗಿ ದಕ್ಷಿಣಕಾಶಿಯೆನಿಸಿ ಭೂ ತಳದೊಳಗೆ ಮೆರೆವ
ಶಿವಗಂಗೆಯ ಸಮೀಪಸು
ಸ್ಥಳದೊಳಗೆ ಪುರವನುರೆ ರಚಿಪರಾ ಗುಮ್ಮಣಂ ಪೆಮ್ಮಣಯ್ಯಗಳೆಂಬರ
ಪರಮ ಕೈಲಾಸಕ್ಕೆ ಮಿಗಿಲೆನಿಸಿ ಗುಮ್ಮಳಾ
ಪುರವೆಂಬ ನಾಮದಿಂದುದ್ಧರಿಪರೆಂತೆನಲ್
ಚರಲಿಂಗದಮಳ ಪಾದೋಪಕವನೇ ಮಣ್ಣಹಸಿಯ ಬಿಂದಿಗೆಯ ತುಂಬಿ
ಪರಿವಾಣದೊಳಗಿರಿಸಿ ಹೊತ್ತುಕೊಂಡಾ ಪುರವ
ತಿರುಗಿ ಬಂದಾ ಮಧ್ಯದಲ್ಲಿ ನಿಕ್ಷೇಪಿಸೀ
ಪುರವನೇ ಲಿಂಗವಿಲ್ಲದ ಭವಿಯು ಪೊಗಲಳೆಯಲೆನುತಲಾಜ್ಞಾಪಿಸುವರು

ಆಲಿಸೈ ರಾಮೇಶ ಬಳಿಕಲಿನ್ನಾಪುರಂ
ಭೂಲೋಕ ಕದರಿದೆನಿಸಿ ಮೆರೆವುದಾ ಸ್ಥಳದಲ್ಲಿ
ಧೂಳಿಪಾವಡವಾದಿ ಸರ್ವಾಂಗಪಾವಡಂ ಕಡೆಯಾಗಿ ಕ್ರಮದೊಳೆಸುವ
ಶೀಲಂಗಳರುವತ್ತು ನಾಲ್ಕುಮವ ನಡೆಸುವಾ
ಶೀಲವಂತರೆ ಬಹಳವವರ ಮಹಾತ್ಮೆಗಳ
ಪೇಳಲೆನ್ನಳವಲ್ಲವೆಂದಾಗ ಚೆನ್ನಬಸವೇಶ್ವರಂ ನಿರವಿಸಿದನು

ಕಲ್ಯಾಣ ಪಟ್ಟಣವು ಅಳಿಯಲು ಗುಮ್ಮಣಪೆಮ್ಮಣರೆಂಬ ನೂತನಗಣಗಳು ಪರಮ ಕೈಲಾಸಕ್ಕೂ ಮೀರಿದುದು ಎಂಬ ಗುಮ್ಮಳಾಪುರವೆಂಬ ಪಟ್ಟಣವನ್ನು ಕಟ್ಟಿದರು ಎಂದು ಶರಣ ಚೆನ್ನಬಸವೇಶ್ವರನು ಕರ್ಮಯೋಗಿ ಸಿದ್ಧರಾಮನಿಗೆ ಹೇಳಿದನೆಂಬುದು ಮೇಲಿನ ಪದ್ಯಗಳ ಅಂತರಾರ್ಥ.

೨. ನಂಜುಂಡದೇವ : ಗುಬ್ಬಿಯ ಮಲ್ಲಣಾರ್ಯನ ವೀರಶೈವಾಮೃತ ಮಹಾಪುರಾಣದಲ್ಲಿ (VIII-VIII) ಪ್ರಸ್ತಾಪಿಸಲಾಗಿರುವ ನೂತನಗಣಗಳಲ್ಲೊಬ್ಬನಾದ ನಂಜುಂಡದೇವನು ಗುಮ್ಮಳಾಪುರದ ಗುರುಸಿದ್ಧ ಮಲ್ಲಿಕಾರ್ಜುನನ ಶಿವಸಹೋದರ, ಉಗ್ರಾಣಿ ಯತಿವರನ ಕರಕಮಲ ಸಂಜಾತ, ಶಂಕಿನ ಸಿದ್ಧಾದೇಶ ಹಸ್ತಕಮಲೋದ್ಭೂತ, ಲಿಂಗನಿಷ್ಠ, ವೀರಶೈವೋದ್ಧರಣ.

೩. ಚಿಕ್ಕಣ ಶರಣ ಅಥವಾ ಮೋಳಿಗೆ ಚಿಕ್ಕಯ್ಯ : ಬಸವಲಿಂಗ ಕವಿಯ ಕೊಟ್ಟೂರ ಬಸವೇಶ್ವರ ಚಾರಿತ್ರದಲ್ಲಿ ಈ ಎರಡು ಪದ್ಯಗಳಲ್ಲಿ ಈ ಭಕ್ತನ ಪ್ರಸ್ತಾಪ ಬಂದಿದೆ.

ತರುಣ ನಿನಗಂ ನಾಳೆದೊರೆದಪವು ಗುಮ್ಮಳಾ
ಪುರವರದ ಪಿರಿಯಮಠದಾರ್ಯರ ಕೃಪಾಯತದೆ

ಧರಿಸಿ ಘನಹರ್ಷದೆ ಮದೀಯ ಸಂದರ್ಶನಕ್ಕೆಳ್ತರ್ಪುದೆಂದೊಲ್ಮೆಯಿಂ
ಗುರು ಬಸವರಾಜಂ ನಿರೂಪಿಸುತೆ ಪೋಗಲಾ
ಶರಣ ಚಿಕ್ಕಣ್ಣನೆಳ್ಚತ್ತು ನೀಳ್ಕರಿಸುವಾ
ತುರದೆ ಸತ್ಪ್ರೀತಿ ಭಯಭಕ್ತಿ ಕಿಂಕರ ಸಮುದಯಂ
ಸಮುದಯಂ ಬಡೆಯಲು (೧೬-೧೨)

ವರವೀರಶೈವ ವ್ರತಾಚಾರಭಕ್ತಿಮಂ
ದಿರಮಿತರ ಸಮಯಾಬ್ಧಿ ಮಂದಿರಮೆನಿಪ್ಪಭಾ
ಸುರ ಕೀರ್ತಿಯಿಂ ಮೆರೆವ ಗುಮ್ಮಳಾಪುರವ ಸಾರ್ದಲ್ಲಿ ರಾರಾಜಿಸಿರ್ಪಾ
ಪಿರಿಯ ಮಠದಾಚಾರ್ಯ ಚಕ್ರೇಶ್ವರಂ ಚಿದಂ
ಬರಸೂರ್ಯ ರುದ್ರಮುನಿವರ್ಯನಂ ಕಂಡುಕಿಂ
ಕರ ಭಾವಭಕ್ತಿಯಿಂದ ದಷ್ಟಾಂಗ ದಂಡವನ್ನತನಾಗಿ ಕರಮುಗಿದು (೧೬-೧೭)

ದೇವರಾಯ ನಗರದಲ್ಲಿದ್ದ ದಯಾಸಮುದ್ರನಾದ ಬೇಡರೊಡೆಯ ಚಿಕ್ಕಣ್ಣನೆಂಬ ಶ್ರೇಷ್ಠ ಭಕ್ತನಿಗೆ ಒಂದು ದಿನ ಕನಸಿನಲ್ಲಿ ಭೂರುದ್ರಗುರು ಬಸವರಾಜನು ಬಂದು ತಲೆಯ ಮೇಲೆ ಹಸ್ತವನ್ನಿಟ್ಟು ಅಡವಿಯಲ್ಲಿರುವ ಎರಡು ಜಿಂಕೆಮರಿ ಹೊಟ್ಟೆಯಲ್ಲಿರುವ ಎರಡು ಲಿಂಗಗಳನ್ನು ಕೊಂಡು ಹೋಗಿ ಗುಮ್ಮಳಾಪುರದ ಹಿರಿಯ ಮಠದ ಅಯ್ಯನವರಿಂದ ಆ ಲಿಂಗಧಾರಣೆ ಮಾಡಿಸಿ ನನ್ನನ್ನು ದರ್ಶಿಸು ಎಂದು ಹೇಳಿದಂತಾಯಿತು. ಅವನಿಗೆ ಬೆಳಿಗ್ಗೆ ಕಾಡಿನಲ್ಲಿ ಹೀಗೆ ೨ ಲಿಂಗಗಳು ದೊರೆತವು. ಅವನು ತನ್ನ ಪತ್ನಿಯೊಂದಿಗೆ ವೀರಶೈವ ವ್ರತಾಚಾರ ಭಕ್ತಿ ಮಂದಿರವೆಂದು ಹೆಸರಾದ ಗುಮ್ಮಳಾಪುರಕ್ಕೆ ಬಂದು, ಅಲ್ಲಿನ ಹಿರಿಮಠದ ರುದ್ರಮುನಿಸ್ವಾಮಿಯನ್ನು ಕಂಡು ಸಾಷ್ಟಾಂಗ ಹಾಕಿ ಕನಸಿನ ವಿವರ ತಿಳಿಸಲು ಅವರು ಚಿಕ್ಕಣ್ಣನಿಗೆ ಮೂಲಮಂತ್ರ ಉಪದೇಶಿಸಿ ಲಿಂಗದೀಕ್ಷೆ ನೀಡಿದರು.

೪. ಬಿಟ್ಟಮಂಡೆಯ ಪ್ರಭು : ಪರಮಶಾಂತಿಯ ಸದನನಾದ, ವೀರಶೈವ ಷಟ್ಸ್ಥಲ ಬ್ರಹ್ಮಿಯಾದ, ಬಿಟ್ಟಮಂಡೆಯ ಪ್ರಭುಸ್ವಾಮಿಯು ಅಲ್ಲಮಪ್ರಭುವೇ ಈತನೆಂಬಂತೆ ಜಸವಡೆದಿರಲು, ಹಾವು ಬಂದು ಅಯ್ಯನವರಡಿಗೆ ಮೂರು ಸಾರೆ ವಂದಿಸಿ ಹೋದುದನ್ನು ಕಂಡು, ಜಗದೊಡೆಯರಿವರೆಂದು ಜನರು ವಿಸ್ಮಯಪಟ್ಟರು. ಮತ್ತೊಂದು ದಿನ ಮತ್ತಗಜಬಂದು ಅಯ್ಯನ ಪಾದಕ್ಕೆರಗಿ ಪ್ರದಕ್ಷಿಣೆ ಮಾಡಿತು. ಗುಮ್ಮಳಾಪುರದಲ್ಲಿ ಕಲ್ಲಬಸವ ಕೆಲೆಯಲು ದೇವದುಂದುಭಿ ಮೊಳಗಲು ಮೊಲೆಹರಿದಂಗನೆಗೆ ಮೊಲೆಯ ಕೊಟ್ಟನು. ಸೋವೂರ ಚಿಕ್ಕಬಸವನೆಂಬಾತನು ಅವರ ಕಾರುಣ್ಯವಡೆದು ದಾಸೋಹ ಮಾಡಿ ಕೀರ್ತಿವಂತನಾದನು. ಈ ಸಂಗತಿಯನ್ನು ಸಿದ್ಧನಂಜೇಶ ಕವಿಯು ತನ್ನ ಶ್ರೀ ಗುರುರಾಜಚಾರಿತ್ರದಲ್ಲಿ ನಿರೂಪಿಸಿದ್ದಾನೆ. ಆ ಪದ್ಯಗಳನ್ನು ಕೆಳಗೆ ನೀಡಲಾಗಿದೆ:

ದುರಿತಕುಲಗಿರಿಕುಲಶ ದುಃಖಪ್ರಾಲೇಯಭಾ
ಸ್ಕರ ಕಾಲಕಾಮಕಾಂತಾರ ಪ್ರಳಯಾನಲಂ
ದುರುಳ ಮಾಯಾಮೇಘಪಟಲ ಜಂಝುವಾತ ಭವಭೂಜವ್ರಜ ಕುಠಾರ

ಪರಮಶಾಂತಿಯ ಸದನ ನಿರ್ಮಲ ಕೃಪಾಶರಧಿ
ವರವೀರಶೈವ ಷಟ್ಸ್ಥಲಬ್ರಹ್ಮಿ ಸರ್ವಜ್ಞ
ವರದಮುನ್ನಿನ ಪ್ರಭುವೆ ತನುವಾಂತನೆನಲೆಸೆದನಾ ಬಿಟ್ಟಮಂಡೆಯ ಪ್ರಭು

ಮೃಡಮೂರ್ತಿ ಬಿಟ್ಟ ಮಂಡೆಯ ಪ್ರಭುಸ್ವಾಮಿ ಜಸ
ವಡೆದಿರಲ್ ಫಣಿ ಬಂದು ತನ್ನ ಶಿರವಯ್ಯನವ
ರಡಿಯ ಮೇಲಿರಿಸಿ ಮೂರ್ಸೂಳು ವಂದಿಸಿ ಪೆಡೆಯನರಳಿಸುತ ನಮಿಸಿ ಪೋಗೆ
ಪೊಡವಿಜನ ಕಂಡು ವಿಸ್ಮಯಬಟ್ಟುಯಿವರು ಜಗ
ದೊಡೆಯರಹುದೆಂದು ಪಾದಾಕ್ರಾಂತರಾಗಿ ಕೃಪೆ
ವಡೆದಿರಲು ಕೀರ್ತಿಯಿಂ ಸದ್‌ಭಕ್ತರಂ ಪಾಲಿಸುತ್ತಿದರ್ಶನಪ್ರತಿಮನು
ಮತ್ತೊಂದು ದಿನ ಬೀದಿಯೊಳಗಯ್ಯಂ ಬರುತಿರಲು
ಮತ್ತಗಜ ನಿಳಯಮಂ ಪರಿದು ಜನರಂ ಕೆದರಿ
ಸುತ್ತ ಕೋಪೋದ್ರೇಕದಿಂ ಬರುತಿರಲಯ್ಯನಂ ಕಂಡು ಪಾದಕ್ಕೆ ಕರವ
ತೆತ್ತಿಸುತ ಶಿರದೊಳೊಂದಿಸಿ ಪ್ರದಕ್ಷಿಣಗೆಯ್ದು
ಮತ್ತೆ ತೆಲವಾಗಿ ಪೋಗಲ್ ಸರ್ವಜನರು ಪೊಗಳುತ್ತ
ಬಂದಡಿಗೆರೆಗಿದರು ಮಹಾಮಹಿಮನಗ್ಗಳವನಾರ್ ಬಣ್ಣಿಸುವರು.

ವರಗುಮ್ಮಳಾಪುರದೊಳರಿದಂಗನೆಯ ಮೊಲೆಯ
ಧರೆಯದಿರೆ ಕಲ್ಲಬಸವಂ ಕೆಲೆಯ ಸಂಭ್ರಮದಿ
ಸುರದುಂದುಭಿಯು ಮೊಳಗೆ ಕೊಟ್ಟನಾನಂದದಿಂ ಸಕಲ ಭಕ್ತರು ಪೊಗಳಲು
ಗುರುವನಾಸೋವೂರ ಚಿಕ್ಕಬಸವಂ ಭಕ್ತಿ
ವೆರೆದವರ ಕೃಪೆವಡೆದು ದಾಸೋಹಮಂಮಾಡಿ
ಪರಮ ಸತ್ಕೀರ್ತಿಯುತನಾದನಾ ಬಿಟ್ಟ ಮಂಡೆಯ ಪ್ರಭುವಿನಾಜ್ಞೆಯಿಂದ

೫. ಗುಮ್ಮಳಾಪುರದ ಶಾಂತೇಶ : ಇವನ ಬಗ್ಗೆ ಹೆಚ್ಚಿನ ವಿವರಗಳು ತಿಳಿದಿಲ್ಲ. ೧೫೧೩ರಲ್ಲಿದ್ದ ಗುಬ್ಬಿಯ ಮಲ್ಲಣಾರ್ಯನು ತನ್ನ 'ಭಾವಚಿಂತಾರತ್ನ'ವೆಂಬ ಕಾವ್ಯದಲ್ಲಿ ವರಗುಮ್ಮಳಾಪುರದ ಶಾಂತೇಶನನ್ನು ಸ್ಮರಿಸಿದ್ದಾನೆ.

ಶರಣಹೃತ್ಕುಮುದಹಿಮಕಿರಣ ಕಾತ್ಯಾಯಿನೀ
ಹರಣ ಶುಭಕರಗಣಾವರಣ ನಿರುಪಮ ಕೃಪಾ
ಭರಣ ಹರಿಯಜನಮಿತ ಚರಣನಂ ಮನಭಾವ ಕರಣದೊಳ್ಪುದಿದಾವಗಂ
ಕರದಲರ್ಚಿಸುತೊಡವೆರೆದೆ ನೋಟದ ಪರಾ
ತ್ಪರದರ್ಥದರ್ಥಿಗಳ ಪೊರೆದ ವರಗುಮ್ಮಳಾ
ಪುರದ ಶಾಂತೇಶ ಗುರುವರದನಡಿದಳೆದು ನಾನೊರೆದ ಕೃತಿ ಮೆರೆವುದರಿದೆ

೧೫೬೧ರಲ್ಲಿದ್ದ ಶಾಂತೇಶನೆಂಬ ಕವಿ 'ಗುಮ್ಮಳಾಪುರದ ಶಾಂತೇಶ' ನಂಘ್ರಿಯನ್ನು ನೆನೆದು ತೋಂಟದ ಸಿದ್ಧೇಶ್ವರ ಪುರಾಣವನ್ನು ರಚಿಸಿದ್ದಾನೆ.

೬. ರುದ್ರಮುನಿ : ೧೭ನೆಯ ಶತಮಾನದ ಮಧ್ಯಭಾಗದಲ್ಲಿ ಗುಮ್ಮಳಾಪುರದ ಹಿರಿಯಮಠದಾಚಾರ್ಯನಾಗಿದ್ದವನು. ವೀರಶೈವ ವ್ರತ, ಆಚಾರ, ಭಕ್ತಿಗಳ ಮಂದಿರವೆನ್ನಿಸಿ

ಶೋಭಿಸುತ್ತಿದ್ದ ಗುಮ್ಮಳಾಪುರದ ಹಿರೇಮಠದ ಪೀಠಾಧಿಕಾರಿಯಾಗಿದ್ದವನು. ಬಸವಲಿಂಗ ಕವಿಯು ಇವನನ್ನು ಆಚಾರ್ಯ, ಚಕ್ರೇಶ್ವರ, ಚಿದಂಬರ ಸೂರ್ಯನಾದ ರುದ್ರಮುನಿವರ್ಯ ಎಂದು ನಿರ್ದೇಶಿಸಿದ್ದಾನೆ.

೭. **ಪೆಮ್ಮಣಯ್ಯ** : ದಕ್ಷಿಣ ದೇಶದಲ್ಲಿ ಇನ್ನೊಂದು ಗುಮ್ಮಳಾಪುರವನ್ನು ಕಟ್ಟಿಸಬೇಕೆಂದಿರುವಾಗ ಚರಪಾದ ತೀರ್ಥದ ಘಟವು ಒಡೆಯಿತು. ಆಗ ಈ ಶರಣನು ಇನ್ನೊಂದು ಹೊಸ ಗುಮ್ಮಳಾಪುರವನ್ನು ರಚಿಸಬೇಕೆನ್ನುವವರ ತಲೆ ಒಡೆಯುವುದೆಂದು ಸಾರಿ ತನ್ನ ಶಿವಭಕ್ತ ಮಹಿಮೆಯನ್ನು ಪ್ರಚುರಪಡಿಸಿದನೆಂದು ವೀರಶೈವಾಮೃತ ಮಹಾಪುರಾಣದಲ್ಲಿ ಪ್ರಸ್ತಾಪಿಸಲಾಗಿದೆ.

೮. **ಚೆನ್ನಬಸಪ್ಪ** : ಈತನೊಬ್ಬ ಶಿವಶರಣನಿರಬೇಕು. ಈತ ದಾನ ಧರ್ಮಸಮಾಜ ಸೇವಾದುರಂಧರ. ಈತನು ಒಂದು ಕೆರೆಯನ್ನು ಕಟ್ಟಿಸಿದ್ದಾನೆ. ಈ ವಿಷಯದಲ್ಲಿ ಕರ್ಮಯೋಗಿ ಸಿದ್ಧರಾಮ ಇವನ ಆದರ್ಶಪುರುಷ. ಈ ಕೆರೆ ಗುಮ್ಮಳಾಪುರದ ಉತ್ತರಕ್ಕೆ ತಮ್ಮಾಪುರಕ್ಕೆ ಹೋಗುವ ದಾರಿಯಲ್ಲಿದ್ದು ಈ ಕೆರೆ ನೀರಿನಿಂದ ಸುಮಾರು ನೂರು ಎಕರೆ ಗದ್ದೆಯ ಸಾಗುವಳಿಯಾಗುತ್ತಿದೆ.

೯. **ವೆಂಕಟೇಶ್ವರ ಉಪಾಧ್ಯ** : ಇವನೊಬ್ಬ ವಿದ್ವಾಂಸ. ಪೌರುಕುತ್ಸಗೋತ್ರದ ಆಪಸ್ತಂಭ ಸೂತ್ರದ ಯಜುಶಾಖಾಧ್ಯಾಯಿ ಬ್ರಾಹ್ಮಣ. ಇವನ ತಾತ ಅರುಣಗಿರಿ ದೀಕ್ಷಿತ. ತಂದೆ ಗಿರೀಶ್ವರ ದೀಕ್ಷಿತ. ಇವನಿಗೆ ಗುಮ್ಮಳಾಪುರದ ವೀರಮಾಹೇಶ್ವರರಾದ ಶರಣ ವೀರಣ್ಣದೇವರು, ಶಾಂತದೇವರು, ನಾಗದೇವರು, ಚಿಕ್ಕದೇವಪ್ಪನವರು, ನಿಜಲಿಂಗ ಚಿಕ್ಕಯ್ಯನವರು, ಬಿಟ್ಟ ಮಂಡೆಯ ದೇವರು, ಜಂಗಳಿದೇವರು, ಪ್ರಸಾದಿದೇವರು, ಮಲ್ಲಿಕಾರ್ಜುನಾರಾಧ್ಯರು, ಬಸವಣ್ಣ ದೇವರು ಭೂದಾನ ಮಾಡಿದರು.

ಕವಿಗಳು

೧. **ಬೊಮ್ಮರಸ** : ಕಾಲ ಸು. ೧೪೫೦. ಇವನು ವೀರಶೈವ ಕವಿ. ತನ್ನನ್ನು ದಿವ್ಯ ಶಿವಕವೀಂದ್ರರ ಭೃತ್ಯನೆನಿಪ ಕರ್ನಾಟಕದ ಕವಿ ಎಂದು ವಿನಯದಿಂದ ಹೇಳಿಕೊಂಡಿದ್ದಾನೆ. ಡೆಂಕಣಿಕೋಟೆಯ ಅಧಿಪತಿ ಕವಿಕಮಲ ಭಾಸ್ಕರ ತಿಪ್ಪರಸನ ಆಸ್ಥಾನದಲ್ಲಿದ್ದವನು. ಚೊಕ್ಕದೇವಪಾರ್ಯನ ಮಗ ಗುಮ್ಮಳಾಪುರವರಾಧೀಶ ಚಿಕ್ಕ ವೀರಣಾರ್ಯನ ಆಜ್ಞಾನುಸಾರ ತನ್ನ ಗ್ರಂಥ ಸೌಂದರಪುರಾಣವನ್ನು ಬರೆದಂತೆ ತೋರುತ್ತದೆ. ಇವನ ಗುರು ವಿಶ್ವನಾಥಚಾರ್ಯ, ಭಾರವಿ, ಬಾಣ, ಕಾಳಿದಾಸ, ಹರಿಹರ ಕವಿವರ್ಯರನ್ನು ಸ್ತುತಿಸಿದ್ದಾನೆ. ಇವನ ಕೃತಿ ಸೌಂದರ ಪುರಾಣ-ವಾರ್ಧಕ ಷಟ್ಪದಿಯಲ್ಲಿದೆ. ೧೨೦೫ ಪದ್ಯಗಳಿದ್ದು ೧೯ ಸಂಧಿಗಳಿಂದ ಕೂಡಿದೆ. ಹರಿಹರನ ನಂಬಿಯಣ್ಣನ ರಗಳೆಯಿಂದ ಸ್ಫೂರ್ತಿ ಪಡೆದು ಅರವತ್ತೂರು ಪುರಾತನರಲ್ಲೊಬ್ಬನಾದ ಸೌಂದರ ಪೆರುಮಾಳ್ ನಂಬಿಯ ಕತೆಯನ್ನು ಈ ಕೃತಿಯಲ್ಲಿ ಹೇಳಿದ್ದಾನೆ. ನೀಲಕಂಠಲಿಂಗ ಸ್ತುತಿ, ವಿಶ್ವನಾಥಚಾರ್ಯನ ವಂಶಪರಂಪರೆ, ಭೃಂಗಿ, ವೀರಭದ್ರ, ಷಣ್ಮುಖರ ಸ್ತುತಿಯ ಜೊತೆಗೆ ಗುಮ್ಮಳಾಪುರದ ಮಹಾಮಹತ್ತನ್ನು ಹೊಗಳುತ್ತಾನೆ. ಇದು ಸರಳ ಶೈಲಿಯಲ್ಲಿದೆ.

೨. **ಚತುರಾಸ್ಯ ಬೊಮ್ಮರಸ :** ಕಾಲ ಸು. ೧೪೫೦. ಇವನು ಗಗನಾನ್ವಯ ತಿಲಕನಾದ ಹಂಪರಸನ ಮಗ ತಿಪ್ಪರಸನೆಂಬ ಬ್ರಾಹ್ಮಣನ ಇಷ್ಟಾನುಸಾರವಾಗಿ ತನ್ನ ಗ್ರಂಥವನ್ನು ಬರೆದೆನೆಂದು ಹೇಳಿರುವುದರಿಂದ ಇವನು ಗುಮ್ಮಳಾಪುರದವನೆಂದು ಊಹಿಸಲು ಅವಕಾಶವಿದೆ. ಇವನ ಕೃತಿ ಚಾತುರಾಸ್ಯ ನಿಘಂಟು. ಒಟ್ಟು ೧೩೭ ಕಂದಪದ್ಯಗಳಿವೆ. ತತ್ಸಮ-ತದ್ಭವಗಳನ್ನೂ, ಸಮಾನಾರ್ಥ ದೇಸಿ ಪದಗಳನ್ನೂ ಛಂದೋಬದ್ಧವಾಗಿ ಬರೆದಿದ್ದಾನೆ. ಪ್ರತಿ ಕಂದಪದ್ಯವೂ ಚತುರಾಸ್ಯ ಎಂದು ಅಂತ್ಯಗೊಳ್ಳುತ್ತದೆ.

೩. **ಗುಮ್ಮಳಾಪುರದ ಸಿದ್ಧಲಿಂಗಯತಿ :** ಕಾಲ ಸು. ೧೪೮೦. ವೀರಶೈವ ಕವಿ. ತೋಂಟದ ಸಿದ್ಧಲಿಂಗಯತಿಯ ಶಿಷ್ಯ. ಬೋಳಬಸವ ಇವರ ಗುರು. ಇವರ ೧೮ ವಚನಗಳು ದೊರೆತಿವೆ. ಈ ವಚನ ಸಂಗ್ರಹಕ್ಕೆ ಷಟ್ಸ್ಥಲ ಲಿಂಗಾಂಗ ಸಂಬಂಧದ ನಿರ್ವಚನ ಎಂಬ ಹೆಸರಿದೆ. ಇವರ ಅಂಕಿತ 'ಬೋಳಬಸವೇಶ್ವರ ನಿಮ್ಮ ಧರ್ಮ, ನಿಮ್ಮ ಧರ್ಮ'. ಶರಣ ವಚನಕಾರರ ಬಗೆಗಿನ ಅವರ ಆದರಾಭಿಮಾನಗಳು ಈ ವಚನಗಳಲ್ಲಿ ಅಭಿವ್ಯಕ್ತವಾಗಿದೆ. ಅವರ ಒಂದು ವಚನ ಹೀಗಿದೆ :

"ಆಚಾರ ಭಕ್ತ ಮೂವತ್ತಾರು ಭೇದವನೊಳಕೊಂಡು ನಕಾರವಾಗಿ ಲಿಂಗದ ಪೀಠದಲ್ಲಿ ಸಂಬಂಧವಾದನಯ್ಯ ಬಸವಣ್ಣ, ಗೌರವ ಮಾಹೇಶ್ವರ ಮೂವತ್ತಾರು ಭೇದವನೊಳಕೊಂಡು ಮಕಾರವಾಗಿ ಲಿಂಗದ ಪೀಠದಲ್ಲಿ ಸಂಬಂಧವಾದನಯ್ಯ ಮಡಿವಾಳಯ್ಯ, ಲೈಂಗಿ ಪ್ರಸಾದಿ ಮೂವತ್ತಾರು ಭೇದವನೊಳಕೊಂಡು ಶಿ ಕಾರವಾಗಿ ಲಿಂಗದ ವರ್ತುಳದಲ್ಲಿ ಸಂಬಂಧ ವಾದನಯ್ಯಾ ಚೆನ್ನ ಬಸವಣ್ಣ, ಚರಪ್ರಾಣಲಿಂಗಿ ಮೂವತ್ತಾರು ಭೇದವನೊಳಕೊಂಡು ವಕಾರವಾಗಿ ಲಿಂಗದ ಗೋಮುಖದಲ್ಲಿ ಸಂಬಂಧವಾದನಯ್ಯಾ ಪ್ರಭುದೇವರು, ಪ್ರಸಾದ ಶರಣ ಮೂವತ್ತಾರು ಭೇದವನೊಳಕೊಂಡು ಯಕಾರವಾಗಿ ಲಿಂಗದ ನಾಳದಲ್ಲಿ ಸಂಬಂಧ ವಾದನಯ್ಯಾ ಉರಿಲಿಂಗಯ್ಯಗಳು, ಮಹಾಘನ ಐಕ್ಯ ಮೂವತ್ತಾರು ಭೇದವನೊಳಕೊಂಡು ಓಂ ಕಾರವಾಗಿ ಲಿಂಗದ ಗೋಳಕದಲ್ಲಿ ಸಂಬಂಧವಾದನಯ್ಯಾ ಅಜಗಣ್ಣ.... ಬೋಳಬಸವೇಶ್ವರಾ ನಿಮ್ಮ ಧರ್ಮ, ನಿಮ್ಮ ಧರ್ಮ". ಈ ವಚನದ ರಚನೆಯಲ್ಲಿ ನಮಶಿವಾಯ ಓಂ ಎಂಬ ಚಮತ್ಕಾರವಿದೆ. ಈ ಗುಮ್ಮಳಾಪುರದ ಸಿದ್ಧಲಿಂಗಯತಿಗಳು ತೋಂಟದ ಸಿದ್ಧಲಿಂಗ ಶಿವಯೋಗಿ ಗಳ ಶಿಷ್ಯರೆಂದು ಚನ್ನಬಸವಪುರಾಣದಲ್ಲಿ ಹೇಳಲಾಗಿದೆ.

ಸಿದ್ಧಲಿಂಗೇಶ್ವರಂ ಕಂಬಳಾದೇವರಾ
ಸಿದ್ಧನಂಜೇಶ್ವರಂ ಚೆನ್ನದೇವರ ದೊಡ್ಡ
ಸಿದ್ಧಲಿಂಗೇಶ್ವರಂ ಕಂಕಣದ ದೇವರಾ ಲಂಬಕರ್ಣದ ದೇವರು
ಸಿದ್ಧಮಲ್ಲೇಶ್ವರಂ ಗುಮ್ಮಳಾಪುರದ ವರ
ಸಿದ್ಧಲಿಂಗೇಶ್ವರಂ ಯೆಡತೊರೆಯಪುರದ ಗುರು
ಸಿದ್ಧವೀರಣ್ಣೊಡೆಯರೆಸವ ಘನಲಿಂಗದೇವರ್ ಚಿಕ್ಕಮಲ್ಲೇಶನಂ

ರಾಘವಾಂಕ ಚರಿತೆಯನ್ನು ಬರೆದ ಸಿದ್ಧನಂಜೇಶ ಕವಿಯು ತನ್ನ ಕೃತಿಯಲ್ಲಿ ಗುಮ್ಮಳಾಪುರದ ಈ ಸಿದ್ಧಲಿಂಗಾಚಾರ್ಯನನ್ನು ಸ್ತುತಿಸಿದ್ದಾನೆ.

ಮದನ ಮದದಮನ ಷಡ್ವರ್ಗಗಿರಿ ಪವಿಯಷ್ಕ
ಮದಕರಟಿ ಪಂಚಾಸ್ಯ ಭಕ್ತದುರಿತಾಪಹನೆ
ಸದಮಾಲಾತ್ಮಕ ಷಟ್ಸ್ಥಲಬ್ರಹ್ಮಮಾರ್ಗಕೋವಿದವರದ ಸರ್ವಜ್ಞನೆ
ವಿದಿತ ಬಸವಾದಿಗಳ ವಚನಮಂ ಜಂಗಮಕೆ
ಮುದದಿ ವ್ಯಾಖ್ಯಾನಮಂ ಪೇಳ್ದಪಾವನ ಚರಿತ
ಪದುಳದಿಂದೆನ್ನುವಂ ಪೊರೆ ಗುಮ್ಮಳಾಪುರದ ಸಿದ್ಧಲಿಂಗಾಚಾರ್ಯನೆ

ಈತನ ಇನ್ನೊಂದು ಕೃತಿ ಕನ್ನಡ ಸಾಹಿತ್ಯದಲ್ಲಿ ಪ್ರಸಿದ್ಧವಾಗಿರುವ ಶೂನ್ಯ ಸಂಪಾದನೆ. ಇದು ವಚನಗಳ ಸಂಕಲನ. ೧೭೦೦ ವಚನಗಳನ್ನು ಸಂಕಲಿಸಿ ಸಂಭಾಷಣ ರೂಪಕ್ಕೆ ತಂದಿದ್ದಾನೆ. ಈತ ಒಳ್ಳೆಯ ಪರಿಷ್ಕರಣಕಾರ.

೪. ಶಿವಗಣಪ್ರಸಾದಿ ಮಹಾದೇವಯ್ಯ : ಕಾಲ ಸು. ೧೪೯೦. ವಚನ ಸಾಹಿತ್ಯದ ಪುನರುತ್ಥಾನಕಾರರಲ್ಲಿ ಪ್ರಮುಖ. ಇವನೂ ಸಹ ವಚನಗಳ ಪರಿಷ್ಕರಣೆ ಮಾಡಿ ಶೂನ್ಯ ಸಂಪಾದನೆ ಸಂಕಲನ ಮಾಡಿದಾತ. ಈ ಸಂಕಲನದಲ್ಲಿ ೧೦೧೨ ವಚನಗಳಿವೆ. ಕನ್ನಡದ ಅನುಭಾವ ಸಾಹಿತ್ಯಕ್ಕೆ ಇದೊಂದು ಅಪೂರ್ವ ಕೊಡುಗೆ.

೫. ಚತುರ್ಮುಖ ಬೊಮ್ಮರಸ : ಕಾಲ ಸು. ೧೫೦೦. ಇವನು ಬೊಮ್ಮರಸನ ಮೊಮ್ಮಗ. ಮಾಯಣನ ಮಗ. ವೀರಶೈವಕವಿ. ಇವನ ಕೃತಿ ರೇವಣಸಿದ್ಧೇಶ್ವರ ಪುರಾಣ. ಈತನ ಗುರು ಬಾಲಸಿದ್ಧೇಶ್ವರ. ಕರ್ನಾಟ ವರವಚ ಶ್ರೀಲಸಿತವದನ ತಾಮರಸ, ಶೈವಾಗಮಜ್ಞ, ವರ್ಣಕ ಕವೀಂದ್ರ ಚತುರಾಸ್ಯ, ಕವಿ ಸಭಾ ಮಾಣಿಕ್ಯದೀಪ ಎಂಬ ಬಿರುದುಗಳಿವೆ. ಭಾರವಿ, ಕಾಳಿದಾಸ, ಬಾಣ ಮುಂತಾದ ಸಂಸ್ಕೃತ ಕವಿಗಳನ್ನು ಹರಿಹರ, ಕೆರೆಯ ಪದ್ಮರಸ, ಪಾಲ್ಕುರಿಕೆ ಸೋಮನಾಥ ಮುಂತಾದ ಕನ್ನಡ ಕವಿಗಳನ್ನು ಸ್ಮರಿಸಿದ್ದಾನೆ.

೬. ಪ್ರಭುಗ : ಕಾಲ ಸು.೧೫೨೦. ಇವನು ವೀರಶೈವ ಕವಿ. ಗುಮ್ಮಳಾಪುರದ ಶಾಂತೇಶನ ದೌಹಿತ್ರ, ಚಿಕ್ಕಾರ್ಯನ ಮಗ. ಇವನು ಎರಡು ಕೃತಿಗಳನ್ನು ರಚಿಸಿದ್ದಾನೆ.

೧) **ಚೂಡನಾಸ್ಥಾನ:** ಇದೊಂದು ಚಂಪೂ ಕೃತಿ. ಒಟ್ಟು ೧೦೧ ಪದ್ಯಗಳಿವೆ. ಚೂಡೆಯ ಲಿಂಗನೆಂದು ಹೊಗಳಲ್ಪಟ್ಟ ಈಶ್ವರನ ಆಸ್ಥಾನದ ವರ್ಣನೆ ಕಥಾ ವಸ್ತು.

೨) **ವೈಭೋಗರಾಜಾಸ್ಥಾನ :** ನಾನಾಲಂಕಾರ ಚಿತ್ರ ಭಾವರಸಗಳಿಂದ ಕೂಡಿದ, ೧೦೧ ಪದ್ಯಗಳಿಂದ ಕೂಡಿದ ಚಂಪೂಗ್ರಂಥ. ವೈಭೋಗರಾಜನೆಂದು ಹೊಗಳಲ್ಪಟ್ಟ ಈಶ್ವರನ ಆಸ್ಥಾನದ ವರ್ಣನೆ ಈ ಕೃತಿಯ ಕಥಾವಸ್ತು. ಗಣಪತಿಯನ್ನು ವರ್ಣಿಸಿರುವ ಒಂದು ಉತ್ಪಲಮಾಲಾವೃತ್ತವನ್ನು ಗಮನಿಸಿರಿ.

ಮುಂಬನಿಸೊರ್ಕನುಂಬ ಮರಿದುಂಬಿಯ ಬಿಂಬಲಿನುಣ್ಮುವಿಂಚರಂ
ತುಂಬಿರೆ ಗರ್ಭಭೋಗಿ ಸಿರಿವೆತ್ತೆ ಫಣಾಮಣಿರೋಚಿದೇಹಮಂ
ತಾಂ ಬಳಸೊಪ್ಪೆ ರಕ್ತಪಟಮಂ ತಳೆದಂತಿರೆ ರಾಜಿಸಿರ್ಪಹೇ
ರಂಬನುಮೇಶಸೂನು ಮಿಗೆ ಮಾಡುಗೆ ಮತ್ಕೃತಿಗೊಲ್ದವಿಘ್ನಮಂ.

೭. **ಹಲಗೆಯಾರ್ಯ / ಹಲಗೆದೇವ :** ಕಾಲ ಸು. ೧೫೩೦. ಶೂನ್ಯ ಸಂಪಾದನಕಾರರಲ್ಲಿ ಒಬ್ಬ. ಇವನು ಶಿಷ್ಯ ಸಮಾಜವನ್ನು ಕಟ್ಟಿಕೊಂಡು ಸಾಹಿತ್ಯದ ಪ್ರಚಾರಕನಾಗಿ ಕೆಲಸ ಮಾಡಿದವನು. ಇವನು ಗುಮ್ಮಳಾಪುರ ಪ್ರದೇಶದವನಿರಬಹುದೆಂದು ಡಾ. ಎಂ.ಎಂ. ಕಲಬುರ್ಗಿಯವರು ಅಭಿಪ್ರಾಯ ಪಡುತ್ತಾರೆ. ಇದೊಂದು ಊಹೆ.

೮. **ವೆಂಕಟಶರ್ಮ :** ಕಾಲ ಸು. ೧೬೨೨. ಇವನು ಕುತ್ಸಗೋತ್ರದ ಆಪಸ್ತಂಭ ಸೂತ್ರದ ಬೃಹಚ್ಚರಣ ಬ್ರಾಹ್ಮಣ (ಕನ್ನಡದ ಸುಪ್ರಸಿದ್ಧ ಸಾಹಿತಿ ಡಿ.ವಿ. ಗುಂಡಪ್ಪನವರೂ ಈ ಪಂಗಡಕ್ಕೆ ಸೇರಿದವರು). ತಾನು ಪ್ರತಿ ಮಾಡಿರುವ ರುದ್ರಭಟ್ಟನ ಜಗನ್ನಾಥವಿಜಯದ ಆರಂಭದಲ್ಲಿ ಬಂದಿರುವ ಕಂದಪದ್ಯದಲ್ಲಿ

ವರಗುಮ್ಮಳಾಪುರಸ್ಥಿತ
ನುರುವೆಂಕಟಶರ್ಮನಧಿಕ ಸಂತಸದಿಂದಂ
ಬರೆದಂ ಬುಧಜನರಿಂತಿದ
ಪರೀಕ್ಷಿಸಿಯೆ ತಪ್ಪ ತಿದ್ದಿ ಮೆರೆಯಿಂಗುಣಮಂ

ಎಂದು ಹೇಳಿರುವುದರಿಂದ ಗುಮ್ಮಳಾಪುರದವನೆಂಬುದು ಖಚಿತ.

ಇವನ ಶೈಲಿ ಸಂಸ್ಕೃತ ಭೂಯಿಷ್ಠವಾದುದು ಎಂಬುದು ಇವನು ಪ್ರತಿಕಾರ, ಲಿಪಿಕಾರನಾಗಿದ್ದರೂ, ಇವನ ಸ್ವತಂತ್ರ ಪದ್ಯಗಳಿಂದ ತಿಳಿದು ಬರುತ್ತದೆ. ಇವನು ಭಗವದ್ಗೀತೆಗೆ ಸಂಸ್ಕೃತದಲ್ಲಿ ವ್ಯಾಖ್ಯಾನ ಬರೆದಿರುವ ಸಂಭವವಿದೆ.

೯. **ಹಲಗ :** ಕಾಲ ಸು. ೧೬೫೦. ಇವನು ವೀರಶೈವ ಕವಿ. ಚಪ್ಪನ್ನದೇಶದಲ್ಲಿ ಕೈಲಾಸವೆನ್ನಿಸಿಕೊಂಡಿರುವ ಗುಮ್ಮಳಾಪುರದ ತೋಪಿನ ವೀರಗಣಾಚಾರಿ ಇವನ ತಂದೆ. ಇವನು ಸಾಂಗತ್ಯರೂಪದಲ್ಲಿ ಹರಿಶ್ಚಂದ್ರ ಸಾಂಗತ್ಯವನ್ನು ಬರೆದಿದ್ದಾನೆ. ಇದರಲ್ಲಿ ೭ ಸಂಧಿಗಳಿದ್ದು ೧೦೦೧ ಪದ್ಯಗಳಿವೆ. ಬಾಣ, ಕಾಳಿದಾಸಾದಿ ಸಂಸ್ಕೃತ ಕವಿಗಳನ್ನು ಉದ್ಭಟ, ಹರಿಹರ ಮುಂತಾದ ಕನ್ನಡ ಕವಿಗಳನ್ನೂ ಬಸವಣ್ಣ, ಚೆನ್ನಬಸವಣ್ಣ, ಆದಯ್ಯ, ಸಿದ್ಧರಾಮ ಮುಂತಾದ ವಚನಕಾರರನ್ನೂ ಗ್ರಂಥಾರಂಭದಲ್ಲಿ ಸ್ಮರಿಸಿಕೊಂಡಿದ್ದಾನೆ. ಬೇಡರನ್ನು ಕುರಿತು ಒಂದು ಪದ್ಯದಲ್ಲಿ

ಉಟ್ಟಕಾಗಿನ ದಟ್ಟಿಮೆಟ್ಟಿದ ಎಕ್ಕಡ
ಇಟ್ಟುಕೊಲ್ಲುವ ಬಡಿಕೋಲು
ಇಟ್ಟಿ ಸಬಳ ಬಿಲ್ಲಂಬು ಸುರಗಿಸಹ
ದಿಟ್ಟ ಶಬರರೊದಗಿದರು.

ಎಂದು ವರ್ಣಿಸಿದ್ದಾನೆ. ಭಾಷೆ ಸರಳವಾಗಿದೆ. ಕನ್ನಡ ಪದಗಳು, ಅಚ್ಚ ದೇಸೀ ಶೈಲಿಯನ್ನು ಗಮನಿಸಬಹುದು.

೧೦. **ವೆಂಕಟೇಶ :** ಕಾಲ ಸು. ೧೭೪೦. ಇವನು ಬ್ರಾಹ್ಮಣ ಕವಿ. ಪೌರುಕುತ್ಸಗೋತ್ರ ಆಪಸ್ತಂಭ ಸೂತ್ರದವನು. ೧೬೨೨ರಲ್ಲಿದ್ದ ವೆಂಕಟಶರ್ಮ ಮತ್ತು ಗುಮ್ಮಳಾಪುರದ ವೀರಮಾಹೇಶ್ವರರಿಂದ ಭೂದಾನ ಪಡೆದ ವೆಂಕಟೇಶ್ವರ ಉಪಾಧ್ಯನ ವಂಶಾವಳಿಯಲ್ಲಿ

ಬಂದವನು. ಈತನು ಯೋಗಿಚಂದ್ರನೆಂಬ ಗುರುವಿನ ಅನುಗ್ರಹದಿಂದ ವೇದಾಗಮಶಾಸ್ತ್ರ ಕಾವ್ಯ ಪರಿಶೀಲನವನ್ನು ಮಾಡಿಕೊಂಡು ಪ್ರಸಿದ್ಧವಾದ ಗುಮ್ಮಳಾಪುರದಲ್ಲಿ ಇದ್ದನು.

ಇವನ ಕೃತಿ 'ಹಾಲಾಸ್ಯ ಮಹಾತ್ಮ್ಯ'. ಇದೊಂದು ಚಂಪೂ ಕೃತಿ. ಇದರಲ್ಲಿ ಶಿವನ ಲೀಲೆಗಳ ವರ್ಣನೆ ಇದೆ. ಬಂಧವು ಪ್ರೌಢವಾಗಿದೆ. ಗ್ರಂಥಾರಂಭದಲ್ಲಿ ಶಿವ, ಪಾರ್ವತಿ, ವಿಷ್ಣು, ಬ್ರಹ್ಮ, ಸರಸ್ವತಿ, ಗಣೇಶ, ಶ್ರೀಶಂಕರಭಗವತ್ಪಾದ, ಯೋಗಿ ಚಂದ್ರಗುರುಗಳ ಸ್ತುತಿ ಇದೆ. ಇವನು ನಕ್ಷತ್ರವನ್ನು ವರ್ಣಿಸಿರುವ ವೈಖರಿಯನ್ನು ಗಮನಿಸಿ

ಪ್ರರೂಢಸಂಧ್ಯಾನಟನೋದ್ಧಟಾಂಬಿಕಾ
ವರೋಲ್ಲಸಚ್ಛೀರ್ಷಕಿರದ್ವಿಯಜ್ಜರೀ
ಸ್ಫುರತ್ಪ್ರಷತ್ಸಂತತಿಯೆಂಬಿನಂ ನಭೋಂ
ತರಸ್ಥತಾರಾಗಣಮೊಪ್ಪಿತೊಳ್ಪಿನಿಂ ॥

೧೧. ದೇವರಕೊಂಡಪ್ಪ ಎಂ. : ಗುಮ್ಮಳಾಪುರದ ಮುನಿಸ್ವಾಮಪ್ಪನವರ ಪುತ್ರ, ೧೯೩೨ರಲ್ಲಿ ಜನಿಸಿದರು. ಅರ್ಥಶಾಸ್ತ್ರದಲ್ಲಿ ಎಂ.ಎ. ಮತ್ತು ಬಿ.ಕಾಂ. ಪದವೀಧರರು. ಬಹುಶಃ ಗುಮ್ಮಳಾಪುರ ಗ್ರಾಮದ ಪ್ರಥಮ ಡಬಲ್ ಗ್ರಾಜುಯೇಟ್. ಇವರು ಕೆಲಕಾಲ ಕನ್ನಡದ ಪ್ರಸಿದ್ಧ ಕವಿ ಜಿ.ಎಸ್. ಸಿದ್ಧಲಿಂಗಯ್ಯನವರ ಸಹೋದ್ಯೋಗಿಯಾಗಿ ದಾವಣಗೆರೆಯ ಡಿ.ಆರ್.ಎಂ. ಕಾಲೇಜಿನಲ್ಲಿ ವಾಣಿಜ್ಯಶಾಸ್ತ್ರ ಉಪನ್ಯಾಸಕರಾಗಿದ್ದರು. ಕೆಲಕಾಲ ಆರ್.ಸಿ. ಕಾಲೇಜಿನಲ್ಲಿ ವಿಜಿಲೆನ್ಸ್ ಕಮೀಷನರ್ ನ್ಯಾಯಮೂರ್ತಿ ಶ್ರೀ ವೆಂಕಟಾಚಲ ಅವರ ಸಹೋದ್ಯೋಗಿಯಾಗಿದ್ದರು. ೧೯೫೯ರಿಂದ ೧೯೯೦ರವರೆಗೆ ಕರ್ನಾಟಕ ವಾಣಿಜ್ಯ ತೆರಿಗೆ ಇಲಾಖೆಯ ಸಹಾಯಕ ಆಯುಕ್ತ (Assistant Commissioner)ರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು. ಶ್ರೀಯುತರು ಈಗ ಬೆಂಗಳೂರಿನ ಜಯನಗರ ೪ನೆಯ ಬ್ಲಾಕಿನಲ್ಲಿ ವಾಸವಾಗಿದ್ದಾರೆ. ದೇವರ ಕೊಂಡಪ್ಪನವರು ೧೧ ಕೃತಿಗಳನ್ನು ಪ್ರಕಟಿಸಿದ್ದಾರೆ. ೧. ಕನ್ನಡ ಕುಡಿ (ಕವನ ಸಂಕಲನ) ೨. ಯತೀಂದ್ರ ಶ್ರೀ ಕೈವಾರ ನಾರಾಯಣಪ್ಪನವರ ಎರಡು ಶತಕಗಳು ೩. ಕೊಂಡಯ್ಯ ಪದಗಳು ೪. ಶ್ರೀ ನಾರೇಯಣ ವೇದಾಂತ ತತ್ತ್ವ ಶತಕಂ ೫. ಅನುಭವ ಬೋಧಾಮೃತ ೬. ಶ್ರೀ ಕೈವಾರ ನಾರೇಯಣಯತೀಂದ್ರರ ನೀತಿ ವಚನಗಳು ೭. ಶ್ರೀ ಅಮರ ನಾರೇಯಣ ಶತಕ ೮. ದುಂಬಿ (ಕವನ ಸಂಕಲನ) ೯. ಗುರುಶಿಷ್ಯ ಸಂಬಂಧ ೧೦. ವೇಮನ ಪದ್ಯಗಳು (ಕನ್ನಡಾನುವಾದ ಮತ್ತು ತಾತ್ಪರ್ಯ) ೧೧. ಶ್ರೀ ಯೋಗಿನಾರೇಯಣ ಯತೀಂದ್ರಲಚರಿತಮು (ತೆಲುಗು).

ಇವರ ಇನ್ನೂ ಕೆಲವು ಕೃತಿಗಳು ಅಚ್ಚಿನಲ್ಲಿವೆ. ತೆಲುಗಿನ ಕವಿವರೇಣ್ಯ ವೇಮನ ಮತ್ತು ಶ್ರೀ ಕೈವಾರ ನಾರೇಯಣ ಯತೀಂದ್ರರ ಕೃತಿಗಳನ್ನು ಅತ್ಯಂತ ಸಮರ್ಥವಾಗಿ ಶ್ರೀಯುತರು ಕನ್ನಡಿಸಿದ್ದಾರೆ. ಇವರ ಕೃತಿಗಳನ್ನು ಕುರಿತು ಕನ್ನಡದ ಕವಿ ಶ್ರೀ ಪು.ತಿ. ನರಸಿಂಹಾಚಾರ್ಯ, ವಿದ್ವಾನ್ ಎನ್. ರಂಗನಾಥಶರ್ಮ, ಕೈಪು ಲಕ್ಷ್ಮೀನರಸಿಂಹಶಾಸ್ತ್ರೀ, ಎಸ್.ಕೆ. ರಾಮಚಂದ್ರರಾವ್, ಡಾ. ಜಿ.ಎಸ್. ಮೋಹನ್, ಪ್ರೊ. ದೊಡ್ಡರಂಗೇಗೌಡ, ಪ್ರೊ. ಚಂದ್ರಶೇಖರ ನಂಗಲಿ,

ಪ್ರೊ. ಕೆ. ವೆಂಕಟರಾಮಪ್ಪ, ರಸಿಕಪುತ್ತಿಗೆ, ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು, ಶ್ರೀ ಸವ್ಯಸಾಚಿ, ಪ್ರೊ. ನಂಜುಂಡಶಾಸ್ತ್ರಿ ಇವರುಗಳು ಮೆಚ್ಚಿಗೆ ವ್ಯಕ್ತಪಡಿಸಿದ್ದಾರೆ.

೧೨. **ಅಪ್ಪಾಜಪ್ಪ** : ೧೯೪೮ರಲ್ಲಿ ಜನಿಸಿದ ಇವರು ಗುಮ್ಮಳಾಪುರದ ಪ್ರಮುಖದೇವಿ ಗುಂಡು ಗೌರಮ್ಮದೇವಿಯವರ ದೇವಸ್ಥಾನದ ಪಾಲಕರಾಗಿದ್ದ ಯಜಮಾನ್ ರುದ್ರಪ್ಪ ಹಾಗೂ ರುದ್ರಮ್ಮನವರ ಪುತ್ರ, ಇವರು ಗುಮ್ಮಳಾಪುರವನ್ನು ಕುರಿತು ಒಂದು ಪರಿಚಯಾತ್ಮಕ ಕಿರುಪುಸ್ತಕವನ್ನು ಪ್ರಕಟಿಸಿದ್ದಾರೆ. ಕೆ.ಎಸ್.ಆರ್.ಟಿ.ಸಿ.ಯಲ್ಲಿ ಉದ್ಯೋಗಿಯಾಗಿರುವ ಇವರು ಸದ್ಯಕ್ಕೆ ಬೆಂಗಳೂರಿನ ಅಕ್ಕಿಪೇಟೆಯಲ್ಲಿ ವಾಸವಾಗಿದ್ದಾರೆ.

ಗ್ರಂಥ ಋಣ ಮತ್ತು ಋಣಾನುಬಂಧ

೧. ವಿಶ್ವಕೋಶ-ಮೈಸೂರು ವಿಶ್ವವಿದ್ಯಾನಿಲಯ
೨. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ-ಮೈಸೂರು ವಿಶ್ವವಿದ್ಯಾನಿಲಯ
೩. ತಮಿಳುನಾಡಿನ ಕನ್ನಡ ಶಾಸನಗಳು-ಕನ್ನಡ ವಿಶ್ವವಿದ್ಯಾಲಯ, ಹಂಪಿ
೪. ಆರ್. ನರಸಿಂಹಾಚಾರ್ಯ ವಿರಚಿತ ಕರ್ನಾಟಕ ಕವಿಚರಿತೆಯ ದ್ವಿತೀಯ, ತೃತೀಯ ಸಂಪುಟಗಳು - ಕನ್ನಡ ಸಾಹಿತ್ಯ ಪರಿಷತ್ತು
೫. ಹಳಗನ್ನಡ ನಿಘಂಟು - ಎನ್. ಬಸವರಾಧ್ಯ
೬. ಮಾರ್ಗ-೪ : ಡಾ. ಎಂ.ಎಂ. ಕಲಬುರ್ಗಿ
೭. ಶಿವಶರಣ ಕಥಾರತ್ನಕೋಶ-ತ.ಸು. ಶಾಮರಾಯ
೮. ವೀರಶೈವಾಮೃತ ಮಹಾಪುರಾಣ-ಗುಬ್ಬಿಯ ಮಲ್ಲಣಾರ್ಯ
೯. ಚೆನ್ನಬಸವಪುರಾಣ-ವಿರೂಪಾಕ್ಷಪಂಡಿತ
೧೦. ಕೊಟ್ಟೂರ ಬಸವೇಶ್ವರ ಚಾರಿತ್ರ - ಬಸವಲಿಂಗಕವಿ
೧೧. ಶಿವತತ್ತ್ವ ಚಿಂತಾಮಣಿ-ಲಕ್ಕಣ್ಣದಂಡೇಶ
೧೨. ರಾಘವಾಂಕ ಚರಿತೆ - ಸಿದ್ಧನಂಜೇಶ
೧೩. ಗುರುರಾಜ ಚಾರಿತ್ರ-ಸಿದ್ಧನಂಜೇಶ
೧೪. ಜ್ಞಾಪಕಚಿತ್ರಶಾಲೆ : ೮-ಡಿ.ವಿ. ಗುಂಡಪ್ಪ
೧೫. ಭಾವಚಿಂತಾರತ್ನ-ಗುಬ್ಬಿಯ ಮಲ್ಲಣಾರ್ಯ
೧೬. ರುದ್ರಭಟ್ಟ ವಿರಚಿತ ಜಗನ್ನಾಥ ವಿಜಯಂ-ಮೈಸೂರು ವಿಶ್ವವಿದ್ಯಾನಿಲಯ
೧೭. ಗುಮ್ಮಳಾಪುರದ ಸಿದ್ಧಲಿಂಗಯತಿಗಳ ಶೂನ್ಯ ಸಂಪಾದನೆ-ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

❑

ಮೋಡಿ ನಾಟಕ : ಒಂದು ಪರಿಚಯ

• ಎಸ್.ಎ. ಸೋಮಶೇಖರ್

ಅಳಿಯ ಲಿಂಗರಾಜನು ರಚಿಸಿದ ಮೋಡಿ ನಾಟಕದ ಒಂದು ಕಾಗದ ಪ್ರತಿಯು ಬೆಂಗಳೂರು ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ವಿಭಾಗದಲ್ಲಿದೆ. ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಎರಡು ಪ್ರತಿಗಳಿದ್ದು, ಅದರ ಪರಿಚಯವನ್ನು ನೀಡುತ್ತಿದ್ದೇನೆ. ಕೃತಿಯ ಸಂಪಾದನೆಯ ಕಾರ್ಯ ಮುಗಿದ ನಂತರವೇ ಅದರ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲಬಹುದೆಂದು ತಿಳಿದಿದ್ದೇನೆ.

ಅಳಿಯ ಲಿಂಗರಾಜನು ಮೋಡಿನಾಟಕ ರಚಿಸುವುದರ ಜೊತೆಗೆ ೧) ಅಂಗದ ಸಂಧಾನ ೨) ಇಂದ್ರಕೀಲ ೩) ಕುಶಲವರ ಕಥೆ ೪) ಗಯಚರಿತ್ರೆ-ಹೀಗೆ ಸುಮಾರು ನಲವತ್ತೇಳು ಕೃತಿಗಳನ್ನು ರಚಿಸಿದ್ದಾನೆಂದು ಕವಿಚರಿತೆಗಾರರು ಹೇಳಿದ್ದಾರೆ. ಗಿರಿಭಟ್ಟರ ತಮ್ಮಯ್ಯ ನಿಂದ ಪ್ರತಿಯಾಗಿರುವ ಮೋಡಿನಾಟಕದ ಬಗೆಗಿನ ವಿವರಗಳು ಹೀಗಿವೆ:

'ಮೋಡಿನಾಟಕ' ಎಂಬುದು ಒಂದು ಯಕ್ಷಗಾನವಾಗಿದ್ದು, ಅತ್ಯಂತ ಚಿಕ್ಕದಾದ ನಾಟಕವಾಗಿದೆ. ಸುಮಾರು ಇಪ್ಪತ್ತು ಪುಟ ಗಳಷ್ಟಿರುವ ಈ ನಾಟಕವು ಸಂಸ್ಕೃತ ಭೂಯಿಷ್ಠವಾಗಿದೆ. ಮೋಡಿ ನಾಟಕ ಎಂಬ ಶೀರ್ಷಿಕೆಯೇ ವಿಶಿಷ್ಟವಾಗಿದೆ. ಮೋಡಿ ಎಂಬುದಕ್ಕೆ ಇಂದ್ರಜಾಲ, ಆಕರ್ಷಣೆ, ಕಣ್ಣುಕಟ್ಟು ಎಂಬಿವೇ ಮೊದಲಾದ ಅರ್ಥಗಳಿವೆ. ಉತ್ತರ ಕರ್ನಾಟಕದಲ್ಲಿ 'ಮೋಡಿ' ಎಂಬ ಕಣ್ಣುಕಟ್ಟು ಪಂದ್ಯವು ಅಲ್ಲಲ್ಲಿ ನಡೆಯುವುದನ್ನು ಕಾಣಬಹುದು. ಬಹುಶಃ ಈ ಪಂದ್ಯವನ್ನು ನೋಡಿದ ಮೇಲೆ ಕವಿಗೆ ಈ ಬಗ್ಗೆ ಆಸಕ್ತಿ ಉಂಟಾಗಿ ಒಂದು ನಾಟಕ ರೂಪದಲ್ಲಿ ತಂದಿರಬಹುದೆ? ಅಲ್ಲಿನ ಪಂದ್ಯವು

ದೇಸಿಯಾದರೆ ಈ ನಾಟಕದಲ್ಲಿ ನಾವು ಯಥೇಚ್ಛವಾಗಿ ಸಂಸ್ಕೃತ ಭಾಷೆಯನ್ನು ಬಳಸಿ ಕೊಂಡಿರುವುದು ಕಾಣುತ್ತೇವೆ. ಈ ಕೃತಿಯ ಪ್ರಾರಂಭದಲ್ಲಿಯೇ ಲಿಪಿಕಾರನ ಹೆಸರು ಗಿರಿಭಟ್ಟರ ತಮ್ಮಯ್ಯನೆಂದು ಉಲ್ಲೇಖಿತವಾಗಿವೆ.

ನಾಟಕದ ಆರಂಭದಲ್ಲಿಯೇ ಶಾರ್ದೂಲ ವಿಕ್ರೀಡಿತ ವೃತ್ತದಲ್ಲಿ 'ಶ್ರೀ ಕಾಳಿ ಹಸಿತದ್ಯುತಿ ತ್ರಿಗುಣಿತಂ ಪುಷ್ಪಾಂಜಲಿ ಕ್ಷೇಪಮಾ" ಎಂದು ಪ್ರಾರಂಭಿಸಿರುವ ಕವಿಯು ಸೀಸಪದ್ಯದಲ್ಲಿ ದೇವರನ್ನು ಸ್ತುತಿಸಿರುವುದನ್ನು ಈ ಕೆಳಗೆ ಕಾಣಬಹುದು.

ದೇವದೇವನೆಂದು ಪರಮಾತ್ಮಕನೆಂದು ಪರೇಶನೆಂದು ಸ
ದ್ಭಾವ ನಿವಾಸನೆಂದು ಜನುದುದ್ಭವ ಸಂಹೃತಿ ಪೋಷಣ ಕ್ರಿಯಾ
ಕೋವಿದನೆಂದು ನಮ್ರಜನತಾ ಘನತಾಪಮನಾಳಿದಾವಸ
ತ್ಪಾವಕನೆಂದು ನಂಬಿದೆವು ನಿನ್ನನು ರಕ್ಷಿಸು ದಕ್ಷ ಶಿಕ್ಷಕ ॥ ೬ ॥

ಕವಿಯು ನಾಟಕದ ಪ್ರಾರಂಭದಲ್ಲಿ ಎಲ್ಲಾ ವಿಘ್ನಗಳನ್ನು ನಿವಾರಣೆ ಮಾಡುವಂತಹ ಗಣಪನನ್ನು ಮತ್ತೇಭ ವಿಕ್ರೀಡಿತ ವೃತ್ತದಲ್ಲಿ ಸ್ಮರಿಸುತ್ತಾ ವಿದ್ಯೆಗೆ ಅಧಿದೇವತೆಯಾದ ಶಾರದೆಯನ್ನು ಚಂಪಕಮಾಲಾ ವೃತ್ತದಲ್ಲಿ ಪ್ರಾರ್ಥಿಸಿದ್ದಾನೆ. ಅನಂತರ ಕಂದ ಪದ್ಯದಲ್ಲಿ ಕವಿ ಪ್ರಶಂಸೆ ಎಂಬಲ್ಲಿ ತನ್ನ ಸಾಹಿತ್ಯಾಸಕ್ತಿಯ ವಿಷಯ ನಾಟಕದ ತಿರುಳನ್ನು ಸೂಚ್ಯವಾಗಿ ಉಲ್ಲೇಖಿಸಿರುವುದು ಕಂಡುಬರುತ್ತದೆ.

ಕವಿ ಪ್ರಶಂಸೆ :

"ಸುತ ಭರತಶಾಸ್ತ್ರ ವಿಜ್ಞನ । ತತಿಮುದಮಂತ ಸಾಹಿತೀ ಸಂಗೀತ ವಿದ್ಯಾವಿಟಲಿಂಗ ಕ್ಷಿತಿಪತಿ ಲಾಲಿಪುದು ನಮ್ಮ ಬಿನ್ನಪವೆನುತಂ" ಎಂದು ಕವಿ ತನ್ನ ಪರಿಚಯವನ್ನು ಮಾಡುತ್ತಾ ತನಗೆ ಯಾವ ವಿಷಯಗಳಲ್ಲಿ ಆಸಕ್ತಿಯಿದೆ ಎಂದು ಪ್ರಸ್ತುತಪಡಿಸಿದ್ದಾನೆ. ಈ ಕವಿ ಪ್ರಶಂಸೆಯಲ್ಲಿ ಕವಿಯ ಸ್ವ ವಿಚಾರಗಳನ್ನು ಅರಿಯಬಹುದು. ಈ ನಾಟಕ ದೇಸಿಯಲ್ಲಿದ್ದು ಅದನ್ನು ಗಮಕ ರೂಪದಲ್ಲಿ ತರುತ್ತಿರುವುದಾಗಿ ಕೃತಿಕಾರನ ಕೆಳಗಿನ ಮಾತುಗಳಿಂದ ತಿಳಿಯಬಹುದು.

ಚಂಪಕ ಮಾಲೆ :

ಅದರಿನುದಾರ ಭಾರತ ಪಯೋಧಿಯ ಸೀಕರದಂತೆ ದೇಸಿಯೊಂ
ದಿದ ಪೊಸ ಮೋಡಿಯಂ ಗಮಕಮಾಗಿಯೆ ಪೇಳ್ವುದು ಗೀತ ಸಾಹಿತೀ
ಸುದತಿಯರಾಳ್ದನಪ್ಪುದರಿನೆಂ ದೊರೆಯಾಲಚಿಪೇಂ ಸುರಾಂಗನಾ
ಮದಕರ ಮೋಡಿ ನಾಟಕಮಂ ಬಲ್ಲರುಫೇಯೆನಲೀ ಪ್ರಬಂಧಮಂ

ಮೋಡಿ ನಾಟಕವನ್ನು ವಾರ್ಧಕ ಷಟ್ಪದಿಯಲ್ಲಿ ಪ್ರಾರಂಭಿಸಿದ ಕವಿಯು ಚಿತ್ರಲೇಖಳ ಚೆಲುವು, ಅಮರಾವತಿ ನಗರದ ವರ್ಣನೆ, ಗಂಧರ್ವ ಕನ್ಯೆಯ ಸೌಂದರ್ಯವನ್ನು ನಮ್ಮ ಮುಂದೆ ತರುತ್ತಾನೆ.

ವಾರ್ಧಕ ಷಟ್ಪದಿ :

ಅತ್ತಲಮರಾವತಿಯೊಳೊಂದು ದಿನ ನಲವೆತ್ತು ।
ಚಿತ್ತಜನಮತ್ತ ವಾರಣಗಳೆನೆ ಗಾಂಧರ್ವ ।
ಮತ್ತಕಾಸಿನಿಯರ್ಕಳಾವತಿ ಮದಲಸಾ ಚಿತ್ರಲೇಖ ಲತಾಂಗಿಯರ್ ॥ (?)
ಬಿತ್ತರದ ಭೂಲೋಕದಿರುವ ನೋಡುತ್ತ ಮೈ ।
ವೆತ್ತ ಬೀಸರ್ಗಳಿವೆವೆನ್ನುತ್ತಾ ಲಾಲೋಚಿ ।
ಸುತ್ತ ತಂತಂಮೊಳಗೆ ಸಿಂಗರಿಸಿ ವಿಭವದಿಂ ಪೊರಮಟ್ಟು ಬರುತ್ತಿದ್ದರು ॥

ಹೀಗೆ ಬರುತ್ತಿರುವ ಸಂದರ್ಭದಲ್ಲಿ ಆ ಕನ್ಯೆಯರ ಹಾವಭಾವವು ಕಣ್ಣಿಗೆ ಕಟ್ಟುವಂತೆ ಕವಿ ಚಿತ್ರಿಸಿದ್ದಾನೆ. ಮತ್ತೊಂದು ಕಡೆ ಗಾರುಡಿಗ ರಾಜನ ಆಸ್ಥಾನವನ್ನು ಪ್ರವೇಶಿಸುವಾಗ ಅವನ ವೇಷಭೂಷಣ ಮೋಡಿಯಾಟಕ್ಕೆ ಪಂಥ್ಯಾಹ್ವಾನವೊಡ್ಡುವ ಬಗೆ, ಅದರೊಂದಿಗೆ ಗಾರುಡಿಗ ಯಾವಯಾವ ಪ್ರದೇಶಗಳನ್ನು ಗೆದ್ದಿರುವ ಹಾಗೂ ಅಲ್ಲಿನ ರಾಜರು ನೀಡಿರುವ ಬಿರುದು ಬಾವಲಿಗಳನ್ನು ಹೇಳುವ ಪರಿಯಂತು ನೈಜವಾಗಿದೆ. ಗಾರುಡಿಗನು ಮೋಡಿಯನ್ನಿಟ್ಟು ಪಂಥ್ಯಕ್ಕೆ ಆಹ್ವಾನಿಸಿದಾಗ ರಾಜನು ರಾಜ್ಯದಲ್ಲೆಲ್ಲಾ ಡಂಗುರವನ್ನು ಸಾರಿಸಿದನು. ಇದನ್ನು ಕೇಳಿದ ಗಂಧರ್ವ ಕನ್ಯೆಯು ಚಿತ್ರಲೇಖಳಿಗೆ ಮೋಡಿತೆಗೆದು ಆ ಮೋಡಿಗಾರನ ಗರ್ವವನ್ನು ಮುರಿದು ರಾಜನಿಗೆ ನಿನ್ನ ಮೋಡಿಯನ್ನಿಡಿಸೆ ಎಂದು ವ್ಯೆಯ್ಯಾರವಾಗಿ ನುಡಿದಳು. ನಾಟಕ ರಚನೆಕಾರ ಅಲ್ಲಲ್ಲಿ ಕರ್ನಾಟಕ ಸಂಗೀತಶಾಸ್ತ್ರ ವಿಚಾರಗಳನ್ನು ಬಳಸಿಕೊಂಡಿರುವುದನ್ನು ಕಾಣುತ್ತೇವೆ.

ಉದಾ : ರಾಗ : ಮೋಹನ ॥ ತ್ರಿಪುಟ । ತಾಳ

ಅಕ್ಕ ಕೇಳಿದೆಯೇನೆ । ಸೊಬಗಿನ ಸೋನೆ ॥ ಪ ॥
ಮಿಕ್ಕಿ ಡಂಗುರ ದನಿಯೆ ತಕ್ಕುದಿದಕೇನೊರೆಯೆ ॥ ಅನು ಪಲ್ಲವಿ ॥

ರಾಗ। ಕಮಾಸ ॥ ರೂಪಕ । ತಾಳ
ಭೂಮೀ ಲಾಲಿಸೋ । ಈ ಮಾತ ಪಾಲಿಸೊ ॥ ಪಲ್ಲವಿ ॥

ರಾಗ । ಧನಾಸರಿ ॥ ಆದಿತಾಳ
ಬಂದಳು ಸುರಸುಂದರಿ । ಚಂದದಿ ವ್ಯೆಯಾರಿ ॥ ಪಲ್ಲವಿ ॥

ನಾಟಕದಲ್ಲಿ ಲಿಂಗರಾಜನು ಸಂದರ್ಭಕ್ಕೆ ತಕ್ಕಂತೆ ನವರಸಗಳನ್ನು ನಿರೂಪಿಸಿದ್ದಾನೆ. ಇದರಿಂದಾಗಿ ಓದುಗನಿಗೆ ಎಲ್ಲಿಯೂ ನಿರಾಶೆಯಾಗುವುದಿಲ್ಲ. ಭಾಷೆಯೂ ಸಹ ಸುಲಲಿತ ವಾಗಿದ್ದು, ದೇಸಿ ಮತ್ತು ಸಂಸ್ಕೃತ ಮಿಶ್ರಣವಾಗಿದೆ. ಗಮಕಿಗಳಿಗೆ, ಸಂಗೀತಗಾರರಿಗೆ, ಹಾಗೂ ನಾಟಕಕಾರರಿಗೆ ಈ ಕೃತಿಯು ಹೆಚ್ಚು ಹತ್ತಿರವಾಗುತ್ತದೆ. ಚಿತ್ರಲೇಖಾ ಮೋಡಿಯೆತ್ತಲೂ ಹೋದಾಗ ಅಲ್ಲಿನ ಚಿತ್ರಣವು ಎಂತಹವರಿಗೂ ಮೈನವಿರೇಳಿಸುವಂತಾಗಿದೆ.

ಉದಾ : ಮಣಿಮುಕುಟ ತಟಫಟಿತ ಮಣಿಗಣಂ ಕಲ್ಲೊಳಿಟ್ಟ ಕವಡಿಕೆಯ
ರಾಶಿಯನೆ ಝುಲ್ಲನೆ ಕೆದರಿ ಜಡಿದು ಪೊಡೆದು ಘರಕ್ಕನೆ ಪಿಂದಿರುಗಿ
ದುರದುರನೆ ನಿಂದು ನಿಟ್ಟುಸಿ....

ಎಂದು ಹೀಗೆ ಮುಂದುವರೆಯುತ್ತದೆ.

ಮೋಡಿಯ ಸುತ್ತಲೂ ಮಂಡಲವನ್ನು ರಚಿಸಿ ಅದರ ಮಧ್ಯದಲ್ಲಿ ತಲೆ ಬುರುಡೆಯನ್ನಿಟ್ಟು ಮಂತ್ರ-ತಂತ್ರಗಳನ್ನು ಹೂಡುತ್ತ ಇಬ್ಬರ ನಡುವೆ ನಡೆಯುವ ಹೋರಾಟವು ಪ್ರೇಕ್ಷಕರನ್ನು ಆಕರ್ಷಿಸುತ್ತದೆ. ಮೋಡಿ ಆಡುವವರಲ್ಲಿ ಇರಬೇಕಾದ ಧೈರ್ಯ, ಚತುರತೆ, ಸಮಯಪ್ರಜ್ಞೆ, ಗ್ರಹಣಶಕ್ತಿ, ಮಂತ್ರ, ತಂತ್ರ ಎಲ್ಲವನ್ನೂ ಈ ನಾಟಕದಲ್ಲಿ ಕಾಣುತ್ತೇವೆ.

ಈ ಕೃತಿಯು ೧೯ನೆಯ ಶತಮಾನದ ಅಂತ್ಯದಲ್ಲಿ ರಚನೆಯಾಯಿತು. ಹೆಣ್ಣು ಅಬಲೆ ಎನ್ನುವ ಕಾಲದಲ್ಲಿಯೇ ಚಿತ್ರಲೇಖ ಎಂಬ ಗಂಧರ್ವಕನ್ಯೆ ಮೋಡಿಯನ್ನು ಗೆಲ್ಲುವುದು ಏನನ್ನು ಸೂಚಿಸುತ್ತದೆ ಎಂಬುದನ್ನು ಯೋಚಿಸಿದಾಗ, ಮೊದಲನೆಯದಾಗಿ "ಸ್ತ್ರೀ"ಯು ಈ ಪಂದ್ಯದಲ್ಲಿ ಭಾಗವಹಿಸುತ್ತಾಳೆ. ಎರಡನೆಯದಾಗಿ ಈ ನಾಟಕ ಬರೆದ ಕಾಲದಲ್ಲಿ ಸಮಾಜದ ಕೆಳಸ್ತರದಲ್ಲಿದ್ದ ಕುಟುಂಬ ವ್ಯವಸ್ಥೆಯಲ್ಲಿ ಮಾತೃವೇ ಯಜಮಾನಿಕೆ ನಡೆಸಿರುವುದನ್ನು ಕಾಣುತ್ತೇವೆ. ಚಿತ್ರಲೇಖಾ ಆ ಪಾತ್ರವನ್ನು ನಿರ್ವಹಿಸಿರಬಹುದೆ? ಇತ್ತೀಚೆಗೆ ದೂರದರ್ಶನದಲ್ಲಿ (ಉದಯ ಟಿ.ವಿ. ೧೫-೯-೦೭) 'ಮೋಡಿ ಆಟ' ಎಂಬುದೊಂದು ಪ್ರಸಾರವಾಯಿತು. ಅಲ್ಲಿಯೂ ಸಹ 'ಸ್ತ್ರೀ' ಪ್ರಮುಖ ಪಾತ್ರವಹಿಸಿರುವುದನ್ನು ಕಾಣುತ್ತೇವೆ. ಅಲ್ಲಿ ಚೇಳುಗಳು ಹರಿದಾಡುತ್ತವೆ, ಕಲ್ಲಿಗೆ ತೆಂಗಿನಕಾಯಿಂದ ಹೊಡೆದಾಗ, ಅಲ್ಲಿದ್ದ ಮತ್ತೊಬ್ಬ ವ್ಯಕ್ತಿಯ ತಲೆಯಿಂದ ರಕ್ತ ಸೋರುತ್ತದೆ. ಶಕ್ತಿಯ ಆರಾಧನೆ, ತಂತ್ರ, ಮಂತ್ರಗಳನ್ನು ಸಹ ಉಪಯೋಗಿಸಿರುವುದನ್ನು ಆಧುನಿಕ ಮಾಧ್ಯಮಗಳಿಂದ ಕಂಡಾಗ ಈ ಕೃತಿಯಲ್ಲಿ ನಿರೂಪಿಸಿರುವ ದೃಶ್ಯಗಳಿಗೆ, ಈಗಲೂ ಜನರಲ್ಲಿ ಉದಾಹರಣೆಗಳು ಸಿಗುತ್ತವೆ ಎಂಬುದು ಅರ್ಥವಾಗುತ್ತದೆ. ಮೋಡಿ ಪಂದ್ಯದಲ್ಲಿ ಗೆದ್ದಂತಹ ಮೋಡಿಗಾತಿಯು ರಾಜನೊಡನೆ ನಡೆಸುವ ಕಾಮದಾಟಗಳು ಸಹ ಪ್ರೇಕ್ಷಕರನ್ನು ಸ್ವಲ್ಪ ಗೊಂದಲಕ್ಕೆ ಒಡ್ಡುತ್ತವೆ. ಇಲ್ಲಿ ಶೃಂಗಾರರಸಕ್ಕೆ ಕವಿಯು ಹೆಚ್ಚು ಒತ್ತು ನೀಡಿದ್ದಾನೆ.

ಬೆಂಗಳೂರು ವಿಶ್ವವಿದ್ಯಾಲಯದ ಹಸ್ತಪ್ರತಿ ವಿಭಾಗದಲ್ಲಿರುವ ಈ ಕಾಗದ ಪ್ರತಿಯು ಮೋಡಿನಾಟಕ ಎಂಬ ಶಿರೋನಾಮೆ ಹೊಂದಿದ್ದರೆ, ಮೈಸೂರು ವಿಶ್ವವಿದ್ಯಾಲಯದಲ್ಲಿರುವ ಈ ಕೃತಿಯ ಶಿರೋನಾಮೆ 'ಮನ್ಮಥ' ಹಾಗೂ 'ಮೋಡಿನಾಟಕ' ಎಂಬುದಾಗಿದೆ. ಈ ಬಗ್ಗೆ ಹೆಚ್ಚಿನ ಅಧ್ಯಯನ ನಡೆಸಬೇಕಾಗಿದೆ.

ನೆರವು ಮತ್ತು ಗ್ರಂಥ ಋಣ :

೧. ಡಾ. ಬಸವರಾಜ ಸಿ. ಕಲ್ಗುಡಿ, ನಿರ್ದೇಶಕರು, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ.

೨. ಡಾ. ಕೆ.ಆರ್. ಗಣೇಶ್, ನಿವೃತ್ತ ಪ್ರಾಂಶುಪಾಲರು, ಎ.ಪಿ.ಎಸ್. ವಾಣಿಜ್ಯ ಕಾಲೇಜು.

೩ ಕರ್ನಾಟಕ ಕವಿ ಚರಿತೆ, ಮೂರನೆಯ ಸಂಪುಟ, ಆರ್. ನರಸಿಂಹಚಾರ್, ಎಸ್.ಎಲ್. ಪ್ರೆಸ್ ೧೯೨೯

೪ ಕನ್ನಡ ಹಸ್ತಪ್ರತಿಗಳ ವರ್ಣಾತ್ಮಕ ಸೂಚಿ. ೩ನೆಯ ಸಂಪುಟ, ಸಂ. ಬಿ.ಎಸ್. ಸಣ್ಣಯ್ಯ, ಮೈಸೂರು ವಿಶ್ವವಿದ್ಯಾಲಯ.

❑

ಎಸ್.ಜಿ. ನರಸಿಂಹಾಚಾರ್ಯರ ಸಾಹಿತ್ಯ ಸಾಧನೆ

• *ಡಾ. ಎಸ್.ಎಸ್. ಅಂಗಡಿ*

ಕನ್ನಡವನ್ನು ಉದ್ಧರಿಸಿದವರು ಕೆಲವರು. ಕನ್ನಡವನ್ನು ಪ್ರಸಿದ್ಧಿ ಪಡಿಸಿದವರು ಮತ್ತೆ ಕೆಲವರು. ಕನ್ನಡವನ್ನು ಉದ್ಧರಿಸಿ, ಪ್ರಸಿದ್ಧಿ ಪಡಿಸಿದವರು ಅತ್ಯಂತ ವಿರಳ. ಈ ವಿರಳ ಪಂಕ್ತಿಗೆ ಸೇರಿದವರು ಎಸ್.ಜಿ. ನರಸಿಂಹಾಚಾರ್ಯರು. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗೆ ಶ್ರೀಯುತರು ಸಲ್ಲಿಸಿದ ಸೇವೆ ಅವಿಸ್ಮರಣೀಯವಾದುದು. ಹೊಸಗನ್ನಡ ಸಾಹಿತ್ಯದ ಪ್ರವರ್ತಕರಲ್ಲಿ ಒಬ್ಬರಾದ ಶ್ರೀಯುತರು ತಮ್ಮ ಜೀವಿತ ಕಾಲದಲ್ಲಿ ಘನ ವಿದ್ವಾಂಸರೆಂದೂ ಕವಿಗಳೆಂದೂ ಗಣ್ಯರಾಗಿದ್ದರು. ಅವರು ಪ್ರಾಚೀನ ಗ್ರಂಥಗಳ ಸಂಪಾದನೆ, ಮಕ್ಕಳ ಸಾಹಿತ್ಯ, ಹೊಸಗನ್ನಡ ಕವಿತೆ ಹಾಗೂ ಅನುವಾದ ಈ ನಾಲ್ಕು ಕ್ಷೇತ್ರಗಳಲ್ಲಿ ಅನನ್ಯವಾಗಿ ಶ್ರಮಿಸಿದ್ದಾರೆ. ಹೊಸಗನ್ನಡ ಕಾವ್ಯದ ಅರುಣೋದಯ ಕಾಲದಲ್ಲಿ ಅವರು ನಿರ್ಮಿಸಿದ ಪಾತ್ರಕ್ಕಾಗಿ ಇಂದು ಅವರನ್ನು ಅಧ್ಯಯನಕಾರರು ವಿಶೇಷವಾಗಿ ಸ್ಮರಿಸುತ್ತಾರೆ.

ಇಂತಹ ಮಹನೀಯರ ಜೀವನ ಮತ್ತು ಸಾಧನೆಗಳ ವಿವರಗಳನ್ನು ತಿಳಿದುಕೊಳ್ಳುವುದು ಅಪೇಕ್ಷಣೀಯ. ಆದರೆ ಅದು ತುಂಬ ಕಷ್ಟ ಸಾಧ್ಯದ ಕೆಲಸ. ಅದಕ್ಕೆ ಪೂರಕವಾಗಿ ಪುರಾವೆಗಳು ಸರಿಯಾಗಿ ಸಿಗುತ್ತಿಲ್ಲ. ಲಭ್ಯವಿರುವ ಸಾಮಗ್ರಿಗಳ ಸಹಾಯದಿಂದ ಟಿ.ವಿ. ವೆಂಕಟಾಚಲಶಾಸ್ತ್ರೀ ಅವರು ಎಸ್.ಜಿ.ನ. ಅವರ ಬದುಕಿನ ವಿವರಗಳನ್ನು ರೇಖಿಸಿದ್ದಾರೆ.[೧] ಎಸ್.ಜಿ.ನ. ಅವರು ೧೧.೯.೧೮೬೨ ರಲ್ಲಿ ಮೈಸೂರು ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ಜನ್ಮ ತಾಳಿದರು. ಅವರ ತಂದೆ ಅಳಸಿಂಗಾಚಾರ್ಯರು, ತಾಯಿ ಸೀತಮ್ಮನವರು. ಇವರದ್ದು ಸಾಂಪ್ರದಾಯಿಕ ವೈದಿಕ ಮನೆತನ. ಅವರ ಬಾಲ್ಯ ಶ್ರೀರಂಗಪಟ್ಟಣದಲ್ಲಿ ನಡೆದು, ಕಾಲೇಜು ಶಿಕ್ಷಣ ಮೈಸೂರಿನಲ್ಲಿ

೧. ಟಿ.ವಿ. ವೆಂಕಟಾಚಲಶಾಸ್ತ್ರೀ, ಸಂ. ಎಸ್.ಜಿ. ನರಸಿಂಹಾಚಾರ್ಯರ ಕವಿತೆಗಳು, (೧೯೮೬) ಪ್ರಸ್ತಾವನೆ, ಪು. xvii

ನಡೆದಿರಬೇಕೆಂದು ತೋರುತ್ತದೆ. ಆರಂಭದಿಂದಲೇ ಅವರಿಗೆ ಎಂ.ಎ. ರಾಮಾನುಜಯ್ಯಂಗಾರರ ಸ್ನೇಹ-ಸಾಹಚರ್ಯಗಳು ದೊರೆತು ಅವರು ಎಸ್.ಜಿ.ನ. ಅವರ ಸಹಪಾಠಿಗಳಾಗಿ ಇದ್ದಿರಬೇಕೆಂದು ತೋರುತ್ತದೆ. ಮುಂದೆ ಇವರಿಬ್ಬರೂ ಒಗ್ಗೂಡಿ ನಡೆಸಿದ ಭಾಷೆ, ಸಾಹಿತ್ಯ ಸೇವೆ ಸುವಿದಿತವಾಗಿದೆ.

ಎಸ್.ಜಿ.ನ. ಅವರು ತಮ್ಮ ವಿದ್ಯಾಭ್ಯಾಸ ಮುಗಿಸಿದ ಮೇಲೆ ಶ್ರೀರಂಗಪಟ್ಟಣದಲ್ಲಿ ಉಪಾಧ್ಯಾಯರಾಗಿ, ಮೈಸೂರು ವಿದ್ಯಾ ಇಲಾಖೆಯಲ್ಲಿ ಕನ್ನಡ ಭಾಷಾಪರಿವರ್ತಕರಾಗಿ, ಓರಿಯಂಟಲ್ ಲೈಬ್ರರಿಯಲ್ಲಿ ಹಳಗನ್ನಡ ಗ್ರಂಥಗಳ ಸಂಪಾದಕರಾಗಿ ಕಾರ್ಯ ಮಾಡಿದರು. ಹೊಸಗನ್ನಡ ಸಾಹಿತ್ಯದೊಂದಿಗೆ ಜನಿಸಿ, ಅದರ ಬೆಳವಣಿಗೆಯೊಂದಿಗೆ ತಮ್ಮ ಜೀವನವನ್ನು ರೂಪಿಸಿಕೊಂಡ ಎಸ್.ಜಿ.ನ. ಅವರು ಕವಿಗಳಾಗಿ, ಗದ್ಯ ಲೇಖಕರಾಗಿ, ಗ್ರಂಥಸಂಪಾದಕರಾಗಿ ಮಾಡಿದ ಕಾರ್ಯ, ಪಡೆದ ಸಿದ್ಧಿ ಅವಲೋಕನೀಯವಾಗಿದೆ.

೧

ಪ್ರಾಚೀನ ಕಾವ್ಯ ಸಂಪಾದನೆ ಒಂದು ದೃಷ್ಟಿಯಲ್ಲಿ ಸ್ವತಂತ್ರವಾದ ಕಾವ್ಯರಚನೆಗಿಂತ ದುಸ್ತರವಾದುದು; ದುರ್ಗಮವಾದುದು. ಪ್ರತಿಭೆ, ವಿದ್ವತ್ತು ಮೇಳವಿಸಿರುವ ವಿದ್ವಾಂಸರು ಕೈಗೊಳ್ಳಬಹುದಾದ ಕಾರ್ಯ ಇದು. ನಮ್ಮ ಪೂರ್ವಜರು ನಮಗೆ ಬಿಟ್ಟು ಹೋಗಿರುವ ಅಮೂಲ್ಯ ಆಸ್ತಿ, ಈ ಪ್ರಾಚೀನ ಕಾವ್ಯಗಳು. ಈ ಪ್ರಾಚೀನ ಮಹಾಸೌಧದ ಸುವರ್ಣ ಕವಾಟವನ್ನು ತೆರೆದು ತೋರಿಸುವುದು ಕಾವ್ಯ ಸಂಪಾದಕನ ಕರ್ತವ್ಯ. ಪ್ರಾಚೀನ ಗ್ರಂಥಸಂಪಾದನೆಯ ಕಾರ್ಯ ಇಂದಿನ ಸುಕುಮಾರ ಯುಗದ ಜನಕ್ಕೆ ತುಂಬ ಕಷ್ಟಕರವಾದ ಕಾರ್ಯ. ಆಳವಾದ ವ್ಯಾಸಂಗ, ಶ್ರದ್ಧೆ, ನಿಷ್ಠೆ, ತಾಳ್ಮೆ ಇವು ಈ ಕಾರ್ಯಕ್ಕೆ ಅತ್ಯವಶ್ಯವಾದ ಅಂಗಗಳು. ಕವಿಯ ಮೂಲ ಕೃತಿಯನ್ನು ಯಥಾವತ್ತಾಗಿ ಸಂಪಾದಿಸುವುದು ಸಂಪಾದಕನ ಕರ್ತವ್ಯವಷ್ಟೇ ಅಲ್ಲದೆ ಜವಾಬ್ದಾರಿಯೂ ಹೌದು. ಎಸ್.ಜಿ.ನ. ಅವರು ಈ ಕಾರ್ಯವನ್ನು ಸಮರ್ಥವಾಗಿ ಮಾಡಿದ್ದಾರೆ.

ಕನ್ನಡ ಗ್ರಂಥ ಸಂಪಾದನೆಯಲ್ಲಿ ಬಿ.ಎಲ್. ರೈಸ್ ಮತ್ತು ಎಫ್. ಕಿಟೆಲ್ ಅವರಾದ ಮೇಲೆ ಆ ಅಧ್ಯಯನ ಕ್ಷೇತ್ರ ಸುವರ್ಣಯುಗವನ್ನು ಕಾಣುತ್ತಿರುವುದು ಎಸ್.ಜಿ. ನರಸಿಂಹಾಚಾರ್ ಮತ್ತು ಎಂ.ಎ. ರಾಮಾನುಜಯ್ಯಂಗಾರ್ ಅವರ ಕಾಲದಲ್ಲಿ. ಅವರ ಗ್ರಂಥ ಸಂಪಾದನೆಯ ಕಾರ್ಯ ಗುಣಗಾತ್ರಗಳಲ್ಲಿಯೂ ಅವಿಸ್ಮರಣೀಯವಾದುದು. ಅವರಿಬ್ಬರು ಖ್ಯಾತಿಯ ಜೋಡಿ. ಪ್ರಾಚೀನ ಕನ್ನಡ ಸಾಹಿತ್ಯದ ಸಂರಕ್ಷಣೆ, ಪ್ರಕಟಣೆಗಳ ಸಲುವಾಗಿ ಅವರು ಮಾಡಿರುವ ಕೆಲಸ ಅನನ್ಯವಾದುದು, ಅದ್ಭುತವಾದುದು. ಇಂಗ್ಲಿಷಿಗೆ ಪ್ರಶಸ್ತಿಯಿದ್ದ ಆ ಕಾಲದಲ್ಲಿ ಸರಕಾರದ ಪ್ರೋತ್ಸಾಹವಾಗಲಿ, ಸಾರ್ವಜನಿಕರ ಉತ್ಸಾಹವಾಗಲಿ ಸಾಕಷ್ಟು ಇಲ್ಲದ ಕಾಲದಲ್ಲಿ ಈ ಇಬ್ಬರು ಮಹಾವಿದ್ವಾಂಸರು ಮಾಡಿದ ಕೆಲಸದ ಮಹತ್ವವನ್ನು ಈಚಿನವರಾದ ನಾವು ಮನಗಾಣಬಹುದು.

ಪ್ರಾಚೀನ ಕನ್ನಡ ಸಾಹಿತ್ಯ ಗ್ರಂಥಗಳನ್ನು ಸಂಪಾದಿಸಿ, ಪ್ರಕಟಿಸಲು ಆ ಇಬ್ಬರು ವಿದ್ವಾಂಸರು ಸೇರಿ ೧೮೯೨ರಲ್ಲಿ ಕರ್ಣಾಟಕ ಕಾವ್ಯ ಮಂಜರಿ ಎಂಬ ಮಾಸಪತ್ರಿಕೆಯನ್ನು ಆರಂಭಿಸಿ ಅದರಲ್ಲಿ ಪ್ರಾಚೀನ ಗ್ರಂಥಗಳನ್ನು ಭಾಗಶಃ ಪ್ರಕಟಿಸುತ್ತ ಬಂದರು. ಇದು ಕನ್ನಡ ಭಾಷಾಭಿವೃದ್ಧಿ ಕಾರ್ಯದಲ್ಲಿ ಒಂದು ಪುಣ್ಯ ಮಹೂರ್ತವೆಂದು ಹೇಳಬೇಕು. ಮೈಸೂರು ಓರಿಯಂಟಲ್

ಲೈಬ್ರರಿ ಹಸ್ತಪ್ರತಿಗಳು, ತಾವೇ ಕ್ಷೇತ್ರಕಾರ್ಯಕೈಗೊಂಡು ಹಸ್ತಪ್ರತಿಗಳನ್ನು ಸಂಗ್ರಹಿಸಿ, ಬರೆಸಿ ಆ ಮಾಸಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಿಸಿದರು. ಕ್ರಮೇಣ ಅವು ಪ್ರತ್ಯೇಕ ಪುಸ್ತಕಗಳಾಗಿ ಸಿದ್ಧವಾದವು. ವಿದ್ಯಾಭ್ಯಾಸದ ಇಲಾಖೆಯ ಮುಖ್ಯಾಧಿಕಾರಿಯಾಗಿದ್ದ ಬಾಬಾ ಸಾಹೇಬರು ಇವರ ಕಾರ್ಯವನ್ನು ಮೆಚ್ಚಿ ಸರಕಾರದಿಂದ ಸಹಾಯಧನ ಕೊಡಿಸಿದ್ದಲ್ಲದೆ, ಶಾಲಾ ಕಾಲೇಜುಗಳ ಪುಸ್ತಕ ಭಂಡಾರಗಳಿಗೆ ಪತ್ರಿಕೆಯನ್ನು ಕೊಳ್ಳುವ ಏರ್ಪಾಡನ್ನೂ ಮಾಡಿದರು. ೧೮೮೭ರಲ್ಲಿ ಈ ಪತ್ರಿಕೆಗೆ ಸಂಬಂಧಿಸಿದ್ದ ಕೊಮಾರಸ್ವಾಮಿ ತಿರುಮಲಾಚಾರ್ಯರ ನಿಧನದಿಂದ ಪತ್ರಿಕೆ ನಿಂತು ಹೋಯಿತು. ಆದರೆ ಈ ಸಾಹಿತ್ಯ ಸೇವಕರು ಎದೆಗುಂದಲಿಲ್ಲ. ಅಲ್ಪಾವಧಿಯಲ್ಲಿಯೇ (೧೮೯೯) "ಕರ್ಣಾಟಕ ಕಾವ್ಯ ಕಲಾನಿಧಿ" ಎಂಬ ಹೆಸರಿನಲ್ಲಿ ಇದೇ ಮಾದರಿಯ ಮಾಸ ಪತ್ರಿಕೆ ಆರಂಭಿಸಿದರು. ಆ ಕಾಲದಲ್ಲಿ ಕರ್ನಾಟಕದ ಮೂಲೆಮೂಲೆಗಳಿಂದ ಪತ್ರಿಕೆಯನ್ನು ಮುಂದುವರೆಸುವಂತೆ ಪತ್ರಗಳು ಬರುತ್ತಿದ್ದವು. ಅಷ್ಟು ಜನಪ್ರಿಯವಾಗಿತ್ತು ಆ ಪತ್ರಿಕೆ. ೧೯೦೭ರಲ್ಲಿ ಎಸ್.ಜಿ. ನರಸಿಂಹಾಚಾರ್ಯರು ಅಕಾಲಮರಣಕ್ಕೆ ತುತ್ತಾದುದು ರಾಮಾನುಜಯ್ಯಂಗಾರರ ಬಲಗೈ ಮುರಿದಂತಾಯಿತು. ಆದರೂ ಅವರು ಧೃತಿಗೆಡದೆ ಏಕಾಂಗಿಯಾಗಿ ೧೯೧೬ರ ವರೆಗೆ ಪತ್ರಿಕೆಯನ್ನು ನಡೆಸಿಕೊಂಡು ಬಂದರು. ಇವರಿಬ್ಬರೂ ಸೇರಿ ಬೆಳಕಿಗೆ ತಂದ ಗ್ರಂಥಗಳಲ್ಲಿ ಸಾಹಿತ್ಯದ ಎಲ್ಲ ಪ್ರಕಾರಗಳನ್ನು ಕಾಣಬಹುದು. ಅವುಗಳನ್ನು ಹೀಗೆ ಕಲೆ ಹಾಕಿ ವಿಂಗಡಿಸಬಹುದು.

ಚಂಪೂ ಗ್ರಂಥಗಳು : ರನ್ನನ ಗದಾಯುದ್ಧ, ಅಜಿತ ತೀರ್ಥಂಕರ ಪುರಾಣತಿಲಕ, ನಾಗಚಂದ್ರನ ಮಲ್ಲಿನಾಥ ಪುರಾಣ, ದುರ್ಗಸಿಂಹನ ಪಂಚತಂತ್ರ, ಹರಿಹರ ದೇವನ ಗಿರಿಜಾಕಲ್ಯಾಣ, ನೇಮಿಚಂದ್ರನ ಲೀಲಾವತಿ ಪ್ರಬಂಧ ಮತ್ತು ಅರ್ಧನೇಮಿ ಪುರಾಣ, ಅಗ್ಗಳದೇವನ ಚಂದ್ರಪ್ರಭ ಪುರಾಣ, ಜನ್ನನ ಯಶೋಧರ ಚರಿತೆ, ಕಮಲಭವನ ಶಾಂತೀಶ್ವರ ಪುರಾಣ, ಆಂಡಯ್ಯನ ಕಬ್ಬಿಗರ ಕಾವ, ಚೌಂಡರಾಯನ ಅಭಿನವ ದಶಕುಮಾರ ಚರಿತೆ, ಅಭಿನವವಾದಿ ವಿದ್ಯಾನಂದನ ಕಾವ್ಯಸಾರ, ತಿರುಮಲಾರ್ಯನ ಚಿಕ್ಕದೇವರಾಜ ವಿಜಯಂ, ಚಿಕುಪಾಧ್ಯಾಯನ ದಿವ್ಯಸೂರಿ ಚರಿತೆ, ಗೋಪಾಲ ಪ್ರಸಾದಿಯ ಚಿಕ್ಕದೇವೇಂದ್ರ ವಂಶಾವಳಿ.

ಷಟ್ಪದೀ ಗ್ರಂಥಗಳು : ರಾಘವಾಂಕನ ಹರಿಶ್ಚಂದ್ರ ಕಾವ್ಯ, ಗುಬ್ಬಿ ಮಲ್ಲಣಾರ್ಯನ ಭಾವಚಿಂತಾರತ್ನ, ಭಾಸ್ಕರನ ಜೀವಂಧರ ಚರಿತೆ, ಮಂಗರಸನ ಜಯನೃಪ ಕಾವ್ಯ, ಕನಕದಾಸರ ನಳಚರಿತ್ರೆ, ಗುರುಲಿಂಗವಿಭುವಿನ ಭಿಕ್ಷಾಟನ ಚರಿತ್ರೆ, ಕುಮಾರ ವಾಲ್ಮೀಕಿಯ ವೈರಾವಣ ಕಾಳಗ, ತಿರುಮಲೆ ವೈದ್ಯನ ಉತ್ತರ ರಾಮಾಯಣಂ, ಮುದ್ದಣ್ಣನ ಶ್ರೀ ರಾಮಪಟ್ಟಾಭಿಷೇಕ, ಗೋಪಕವಿಯ ನಂದಿ ಮಹಾತ್ಮ್ಯಂ, ಕೋನಯ್ಯನ ಗಯಚರಿತ್ರೆ

ಗದ್ಯ ಗ್ರಂಥಗಳು : ತಿರುಮಲಾರ್ಯನ ಚಿಕ್ಕದೇವರಾಯನ ವಂಶಾವಳಿ, ಚಿಕುಪಾಧ್ಯಾಯನ ವಿಷ್ಣುಪುರಾಣ, ಕನ್ನಡ ವಚನ ಕಾದಂಬರಿ ಪೂರ್ವಭಾಗ, ಭಾಳಲೋಚನನ ಬತ್ತೀಸ್ ಪುತ್ತಳೀ ಕಥೆಗಳು, ಮುದ್ದಣನ ಶ್ರೀರಾಮಾಶ್ವಮೇಧ ಮತ್ತು ಅದ್ಭುತ ರಾಮಾಯಣ.

ನಾಟಕ : ಸಿಂಗರಾರ್ಯನ ಮಿತ್ರವಿಂದಾಗೋವಿಂದ **ನಾಟಕಗದ್ಯಾನುವಾದಗಳು:** ಉತ್ತರ ರಾಮಚರಿತ್ರ ಕಥೆ, ಮುಮ್ಮಡಿ ಕೃಷ್ಣರಾಜ ಒಡೆಯರ ಶಾಕುಂತಳ ನವೀನ ಟೀಕೆ, ವತ್ಸರಾಜ ಕಥೆ, ಪ್ರಬೋಧ ಚಂದ್ರೋದಯ ನಾಟಕ ಕಥೆ.

ಶತಕಗಳು : ಹರಿಹರದೇವನ ಪಂಪಾಶತಕ, ಸುಭಾಷಿತ ಮುಕ್ತಕ ಶತಕ (ಸಂಕಲಿತ), ರತ್ನಾಕರನ ರತ್ನಾಕರ ಶತಕ ಮತ್ತು ಅಪರಾಜಿತೇಶ್ವರ ಶತಕ, ವರ್ಷವರ್ಧಂತೀ ಶತಕ

ಅಲಂಕಾರ ಗ್ರಂಥಗಳು : ಉದಯಾದಿತ್ಯಾಲಂಕಾರ, ತಿರುಮಲಾರ್ಯನ ಅಪ್ರತಿಮವೀರಚರಿತೆ, ಕವಿಕಾಮನ ಶೃಂಗಾರ ರತ್ನಾಕರ

ನಿಘಂಟುಗಳು : ಕರ್ಣಾಟಕ ನಿಘಂಟು, ಚತುರಾಸ್ಯ ನಿಘಂಟು, ಶಬ್ದಸಾರ ನಿಘಂಟು (ಗದ್ಯ), ಸೂರ್ಯ ಕವಿಯ ಕವಿಕಂಠಹಾರ, ಕರ್ಣಾಟಕ ಸಂಜೀವನವೆಂಬ ಅಟಕುಳ ನಿಘಂಟು,

ಛಂದಸ್ಸು : ನಾಗವರ್ಮನ ಛಂದೋಬುಧಿ, ನಂದಿಕವಿಯ ನಂದಿ ಛಂದಸ್ಸು

ವ್ಯಾಕರಣ : ೨ನೆಯ ನಾಗವರ್ಮನ ಶಬ್ದಸ್ಮೃತಿ

ಸಾಂಗತ್ಯಗಳು : ಕನಕದಾಸರ ಮೋಹನ ತರಂಗಿಣಿ, ತಿರುಮಲಾರ್ಯನ ಕರ್ಣ ವೃತ್ತಾಂತ ಕಥೆ, ಸಂಚಿ ಹೊನ್ನಮ್ಮನ ಹದಿಬದೆಯ ಧರ್ಮ, ಕೃಷ್ಣಗೋಪಿವಿಲಾಸ, ನಂಜಕವಿಯ ಕಪೋತವಾಕ್ಯ

ಕೀರ್ತನೆಗಳು : ಚಿಕ್ಕದೇವರಾಯನ ಗೀತಗೋಪಾಲ, ಭಗವದ್ಗೀತಾರ್ಥ ಪ್ರತಿಪಾದನ, ಗಜೇಂದ್ರಮೋಕ್ಷ, ಧ್ರುವಚರಿತ್ರೆ

ಮತ ಗ್ರಂಥಗಳು : ವೇದಾಂತವಿವೇಕಸಾರ, ಚಿಕ್ಕದೇವರಾಯ ಬಿನ್ನಪಂ, ಜೀವೇಶ್ವರ ಸಾಂಗತ್ಯ.

ಈ ಇಬ್ಬರು ವಿದ್ವಾಂಸರು ಹಸ್ತಪ್ರತಿಗಳ ಒಡಲಿನಿಂದ ಮೊದಲ ಬಾರಿಗೆ ಬಹುಪಾಲು ಪ್ರಾಚೀನ ಕೃತಿಗಳನ್ನು ಬೆಳಕಿಗೆ ತಂದರು. ಇದು ಆ ಮಹನೀಯರ ದೊಡ್ಡ ಸಾಧನೆ. ನಂತರದ ಗ್ರಂಥ ಸಂಪಾದಕರ ಸಂಪಾದನೆಗಳಿಗೆ ಆ ಇಬ್ಬರೂ ವಿದ್ವಾಂಸರ ಆವೃತ್ತಿಗಳೇ ಮುಖ್ಯ ಆಧಾರಗಳಾದವು ಎಂಬುದು ಗಮನಿಸಬೇಕಾದ ಅಂಶವಾಗಿದೆ. ಆ ಇಬ್ಬರೂ ವಿದ್ವಾಂಸರು ಆಧಾರಪ್ರತಿಯನ್ನು ವಿಚಕ್ಷಣೆಯಿಂದ ನಿರ್ಣಯಿಸಿ, ಪಾಠ ಸಂಕಲನ ಮಾಡಿದ್ದಾರೆ. ಹೊಸಕಾಲದ ಮುದ್ರಣ ರೀತಿಗೆ ಅನುಗುಣವಾಗಿ ಕವಿಪಾಠವನ್ನು ನಿರ್ಣಯಿಸಿದ್ದಾರೆ. ಆಗಾಗ್ಗೆ ಪಾಠಭೇದವನ್ನು ತೋರಿಸಿದ್ದಾರೆ; ಅಷ್ಟಿಷ್ಟು ಕವಿಕಾವ್ಯ ವಿಮರ್ಶೆಯನ್ನೂ ಬರೆದಿದ್ದಾರೆ. ಯಾವ ಸೌಕರ್ಯಗಳೂ ಮಾದರಿಗಳೂ ಇಲ್ಲದ ಆ ಕಾಲದಲ್ಲಿ ಆ ವಿದ್ವಾಂಸರ ರಾತ್ರಿಯನ್ನು ಹಗಲನ್ನಾಗಿ ಮಾಡಿ ಶ್ರಮಿಸಿ, ಮಾದರಿಯನ್ನು ರೂಪಿಸಿದ್ದಾರೆ. ತನ್ಮೂಲಕ ಕನ್ನಡ ಸಾಹಿತ್ಯ ಚರಿತ್ರೆಗೆ ಭದ್ರ ಅಡಿರಚನೆ ಹಾಕಿದರು.

'ಕರ್ಣಾಟಕ ಕಾವ್ಯ ಮಂಜರಿ', 'ಕರ್ಣಾಟಕ ಕಾವ್ಯ ಕಲಾವಿಧಿ'ಗಳ ಪ್ರಕಟಣೆಗಳಿಗಾಗಿ ಎಸ್.ಜಿ. ನರಸಿಂಹಾಚಾರ್ಯರು ಮತ್ತು ಎಂ.ಎ. ರಾಮಾನುಜಯ್ಯಂಗಾರ್ ಅವರು ಸಂಪಾದಕದ್ವಯರು. ಈ ಇಬ್ಬರಲ್ಲಿ ಎಸ್.ಜಿ.ನ. ಅವರ ಕಾರ್ಯ ಭಾಗವೇನು, ಅವರ ಪಾತ್ರ ಎಷ್ಟಿದೆ ಎಂಬುದನ್ನು ತಿಳಿಯಲಾಗುವುದಿಲ್ಲ. ಆ ಕುರಿತು ಟಿ.ವಿ. ವೆಂಕಟಾಚಲಶಾಸ್ತ್ರೀ ಅವರ ಅಭಿಪ್ರಾಯ ಹೀಗಿದೆ: 'ಸಾಧ್ಯವಿದ್ದ ಮಟ್ಟಿಗೆ ಪರಿಷ್ಕಾರವಾದ ಸಂಪಾದನಗಳನ್ನು ಅನ್ವಯಿಸಿ ಗ್ರಂಥ ಸಂಪಾದನೆ ಮಾಡುವಲ್ಲಿಯೂ ಕವಿಕಾವ್ಯ ವಿಚಾರದ ಪೀಠಿಕೆಗಳನ್ನು ಬರೆಯುವು ದರಲ್ಲಿಯೂ ಗ್ರಂಥೋಪಯೋಗಿಯಾದ ಟೀಕೆಟಿಪ್ಪಣಿಗಳನ್ನು ಸಿದ್ಧಪಡಿಸುವಲ್ಲಿಯೂ ಅವರ ಪಾತ್ರ ಸಾಕಷ್ಟಿರಬೇಕೆಂದು ತೋರುತ್ತದೆ.[೨] ಎಸ್.ಜಿ.ನ. ಅವರಿಗಿದ್ದ ಓರಿಯಂಟಲ್ ಲೈಬ್ರರಿಯ

೨. ಟಿ.ವಿ. ವೆಂಕಟಾಚಲಶಾಸ್ತ್ರೀ, ಪೂರ್ವೋಕ್ತ ಗ್ರಂಥ, ಪು. xxviii

ಕೆಲಸ, ಮೈಸೂರು ವಿದ್ಯಾ ಇಲಾಖೆಯಲ್ಲಿಯ ಅನುಭವ, ಆರ್. ನರಸಿಂಹಾಚಾರ್ಯರ ಸಂಪರ್ಕ ಇವುಗಳನ್ನು ಗಮನಿಸಿದರೆ ಶಾಸ್ತ್ರೀಗಳ ಊಹೆ ಸಮರ್ಪಕವಾಗಿದೆ.

ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿ ಕನ್ನಡ ಗ್ರಂಥಮಾಲೆಯನ್ನು ಪ್ರಾರಂಭಿಸಿದವರು ಎಸ್.ಜಿ. ನರಸಿಂಹಾಚಾರ್ಯರು ಎಂಬುದು ಗಮನಿಸಬೇಕಾದ ಅಂಶ. ಈ ಗ್ರಂಥಮಾಲೆಯ ಪ್ರಥಮ ಪ್ರಕಟಣೆಯಾಗಿ (೧೯೦೦) ಪಂಪನ ಆದಿಪುರಾಣವೂ ಎರಡನೆಯ ಪ್ರಕಟಣೆಯಾಗಿ (೧೯೦೪) ರುದ್ರಭಟ್ಟನ ಜಗನ್ನಾಥ ವಿಜಯವೂ ಎಸ್.ಜಿ.ನ. ಅವರಿಂದ ಸಂಪಾದಿತವಾಗಿ ಹೊರಬಂದವು. 'ಆದಿಪುರಾಣ' ಸಂಪಾದನೆಗೆ ಮುಖ್ಯವಾಗಿ ಒಂದು ಆಧಾರ ಪ್ರತಿಯನ್ನು ಬಳಸಿಕೊಂಡಿದ್ದರೂ ಸಂದೇಹ ಬಂದಾಗ ಇತರ ಹಸ್ತಪ್ರತಿಗಳ ಸಹಾಯ ಪಡೆದಿದ್ದರು. ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಕವಿಕಾವ್ಯ ಕುರಿತು ಉಪೋದ್ಘಾತ ಬರೆದಿದ್ದಾರೆ. ತೌಲನಿಕ ವಿಮರ್ಶೆಯ ಆರಂಭದ ಹೆಜ್ಜೆ ಗುರುತುಗಳನ್ನು ಇಲ್ಲಿ ಕಾಣಬಹುದಾಗಿದೆ. ಇತ್ತೀಚೆಗೆ (೧೯೯೫) ಟಿ.ವಿ. ವೆಂಕಟಾಚಲಶಾಸ್ತ್ರೀ ಅವರು ಎಸ್.ಜಿ.ನ. ಆವೃತ್ತಿಯನ್ನು ಪರಿಷ್ಕರಿಸಿದ್ದಾರೆ. ಎಸ್.ಜಿ.ನ. ಅವರು 'ಜಗನ್ನಾಥ ವಿಜಯ'ವನ್ನು ನಾಲ್ಕು ಹಸ್ತಪ್ರತಿಗಳ ಸಹಾಯದಿಂದ ಸಂಪಾದಿಸಿದರು. ವಿರಳವಾಗಿ ಪಾಠಭೇದಗಳನ್ನು ಕೊಟ್ಟಿದ್ದಾರೆ. ವಿಸ್ತಾರವಾದ ಉಪೋದ್ಘಾತದಲ್ಲಿ ಕವಿಕಾವ್ಯ ಕುರಿತು ವಿಸ್ತಾರವಾದ ವಿವೇಚನೆಯಿದೆ.

ಕರ್ಣಾಟಕ ಕವಿಚರಿತೆ ರಚನೆಗೆ ಆರ್. ನರಸಿಂಹಾಚಾರ್ಯರ ಜೊತೆಗೆ ಎಸ್.ಜಿ. ನರಸಿಂಹಾಚಾರ್ ಕೂಡಿದುದು ಕನ್ನಡ ಭಾಷಾಭಿವೃದ್ಧಿಯ ಬೆಳವಣಿಗೆ ಚರಿತ್ರೆಯಲ್ಲಿ ಮತ್ತೊಂದು ಶುಭ ಮುಹೂರ್ತವೆಂದು ಹೇಳಬೇಕು. ಕವಿರಚನೆಯ ಮೊದಲ ಸಂಪುಟವು ಈ ಇಬ್ಬರ ಸಹಕರ್ತೃತ್ವದಲ್ಲಿ ೧೯೦೭ರಲ್ಲಿ ಪ್ರಕಟವಾಯಿತು.

ಮೊದಲ ಸಂಪುಟದಲ್ಲಿ ಎಸ್.ಜಿ.ನ. ಪಾತ್ರವನ್ನು ಕುರಿತು ವೆಂಕಟಾಚಲಶಾಸ್ತ್ರೀ ಅವರ ಊಹೆ ಹೀಗಿದೆ: 'ಆರ್. ನರಸಿಂಹಾಚಾರ್ಯರು ಶಾಸನತಜ್ಞರೂ ಸಂಶೋಧಕರೂ ಆಗಿ ನೈಪುಣ್ಯ ಪಡೆದಿದ್ದುದರಿಂದ ಕವಿಯ ಕಾಲದೇಶ ವೃತ್ತಾಂತಗಳನ್ನು ಅವರು ಬರೆದಿರಬಹುದೆಂದೂ ಎಸ್.ಜಿ.ನ. ಅವರು ರಸತಜ್ಞರೂ ಕವಿಗಳೂ ಆಗಿ ಪ್ರಸಿದ್ಧರಾಗಿದ್ದುದರಿಂದ ಕೃತಿ ವಿಮರ್ಶೆಯ ಭಾಗಗಳನ್ನು ಬರೆದಿರಬಹುದೆಂದೂ ಸಾಮಾನ್ಯವಾದ ಒಂದು ಅಭಿಪ್ರಾಯ ಎಂದಿನಿಂದಲೂ ಕವಿಚರಿತೆಯ ಅಭ್ಯಾಸಿಗಳಲ್ಲಿ ಪ್ರಚಲಿತವಿದೆ.'[೩] ಎಸ್.ಜಿ.ನ. ಅವರಿಗಿದ್ದ ಓರಿಯಂಟಲ್ ಲೈಬ್ರರಿಯಲ್ಲಿಯ ಅನುಭವ, ಎಂ.ಎ. ರಾಮಾನುಜಯ್ಯಂಗಾರ್ಯರ ಸಂಪರ್ಕ ಇವುಗಳನ್ನು ಗಮನಿಸಿದರೆ ಶಾಸ್ತ್ರೀಗಳ ಊಹೆ ಸಮರ್ಪಕವಾಗಿದೆ. ಆರ್. ನರಸಿಂಹಾಚಾರ್ಯರು ಕವಿಚರಿತೆಯ ಮೊದಲ ಸಂಪುಟದಲ್ಲಿ ಎಸ್.ಜಿ.ನ. ಅವರ ಹೆಸರು ಹಾಕಬೇಕಿತ್ತು. ಇದು ಆ ಕ್ಷೇತ್ರದ ವಿದ್ಯಾವಂತರ ಅಪೇಕ್ಷೆಯಾಗಿತ್ತು. ಆದರೆ ಆರ್. ನರಸಿಂಹಾಚಾರ್ಯರಿಗೆ ಎಸ್.ಜಿ.ನ. ಅವರ ಮೇಲೆ ಅಪಾರ ಗೌರವವಿತ್ತು. ಕವಿಚರಿತೆಯ ಎರಡನೆಯ ಸಂಪುಟದಲ್ಲಿ ಎಸ್.ಜಿ.ನ. ಅವರನ್ನು ಗೌರವದಿಂದ ಸ್ಮರಿಸಿದ್ದಾರೆ. 'ನನಗಂತೂ ಇವರ ಮರಣದಿಂದ ಬಲದ ಭುಜವೇ ಹೋದ ಹಾಗಾಯಿತು. ಮುಂದಣ ಕೆಲಸವನ್ನು ನಿರ್ವಹಿಸಬೇಕೆಂಬ ಉತ್ಸಾಹವು ತಗ್ಗಿತು.' ಈ ಮಾತುಗಳು

೩. ಟಿ.ವಿ. ವೆಂಕಟಾಚಲಶಾಸ್ತ್ರೀ, ಪೂರ್ವೋಕ್ತ ಗ್ರಂಥ, ಪು. xxxi

ಆರ್. ನರಸಿಂಹಾಚಾರ್ಯ ಅವರಿಗೆ ಎಸ್.ಜಿ.ನ. ಅವರ ಬಗೆಗಿದ್ದ ಪ್ರೀತ್ಯಾದರಗಳು ಎತ್ತಿ ತೋರಿಸುತ್ತವೆ. ಎಸ್.ಜಿ.ನ. ಅವರ ಸಲಹೆ ಸಹಾಯವನ್ನು ಆರ್. ನರಸಿಂಹಾಚಾರ್ಯರು ಯಾವಾಗಲೂ ಅಪೇಕ್ಷಿಸುತ್ತಿದ್ದರು. ಕವಿಚರಿತೆಯ ಮೊದಲ ಸಂಪುಟದಲ್ಲಿ ಎಸ್.ಜಿ.ನ. ಅವರ ಪಾತ್ರ ಇರುವುದಿಂದಲೇ ಅದು ಖಚಿತ ಆಧಾರಗಳಿಂದ, ಗಟ್ಟಿ ನಿರೂಪಣೆಯಿಂದ ಕೂಡಿದೆ. ಮಿಕ್ಕ ಎರಡು ಸಂಪುಟಗಳಲ್ಲಿ ಎಲ್ಲಿಯೋ ಒಂದು ಕಡೆ ಶಿಥಿಲತೆ ಕಂಡುಬರುತ್ತದೆ. ಇದು ಕವಿಚರಿತೆಯ ವ್ಯಾಸಂಗಿಗಳ ಸಾಮಾನ್ಯ ಅಭಿಪ್ರಾಯವಾಗಿದೆ.

ಮೇಲಿನ ವಿವೇಚನೆಯನ್ನು ಗಮನಿಸಿದರೆ ಎಸ್.ಜಿ.ನ. ಅವರು ಪ್ರಾಚೀನ ಕನ್ನಡ ಸಾಹಿತ್ಯದ ಪೋಷಕರಾಗಿ, ಸಾಹಿತ್ಯ ಚರಿತ್ರೆಯ ನಿರ್ಮಾತೃಗಳಾಗಿ ಕಾಣಿಸುತ್ತಾರೆ. ಆ ಮೂಲಕ ಅವರು ಕನ್ನಡ ಅಧ್ಯಯನಕ್ಕೆ ಆದ್ಯ ಪ್ರವರ್ತಕರಾಗಿದ್ದಾರೆ. ಅವರು ಇನ್ನೂ ಕೆಲಕಾಲ ಬದುಕಿದ್ದರೆ, ಆರ್. ನರಸಿಂಹಾಚಾರ್ಯರ ಜೊತೆಗೆ ಕವಿಚರಿತೆಗೆ ದುಡಿದಿದ್ದರೆ, ಗುಣ ಮತ್ತು ಮೌಲ್ಯದ ದೃಷ್ಟಿಯಿಂದ ಕವಿಚರಿತೆಗೆ ಮೆರಗು ಬರುತ್ತಿತ್ತು. ಕನ್ನಡದ ಭಾಗ್ಯ ಇನ್ನೂ ಹೆಚ್ಚುತ್ತಿತ್ತು. ಆ ಪ್ರಾಪ್ತಿಯಿಂದ ಕನ್ನಡಿಗರು ವಂಚಿತರಾದರೆಂಬುದು ವಿಧಿಯಿಲ್ಲದೆ ಹೇಳಬೇಕಾಗಿದೆ. ಅದನ್ನು ನೆನಪಿಸಿಕೊಂಡರೆ ಸಂಕಟವಾಗುತ್ತದೆ.

೨

ವಿದ್ವತ್ತು, ಕವಿತ್ವ, ವಿಮರ್ಶೆ, ಸಂಶೋಧನೆ, ಗ್ರಂಥಸಂಪಾದನೆ ಇವು ಎಸ್.ಜಿ. ನರಸಿಂಹಾಚಾರ್ಯರ ಸಮಾನ ಗಮನ ಸೆಳೆದಿದ್ದವು. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಅವರು ತಳೆದಿದ್ದ ಅಕ್ಕರೆ, ಆಸಕ್ತಿಗಳು ಅವರನ್ನು ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಉಜ್ವಲ ನಕ್ಷತ್ರವನ್ನಾಗಿ ಮಾಡಿವೆ. ಅವರು ಕನ್ನಡ ಭಾಷೆಯ ಮಕ್ಕಳ ಸಾಹಿತ್ಯದ ಆದ್ಯ ಕೃಷಿಕರಲ್ಲಿ ಒಬ್ಬರು. ಅವರು ಮದ್ರಾಸು ಸರಕಾರದ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಬಾಲಬೋಧೆ ಪಠ್ಯ ಮಂಡಳಿಯ ಸದಸ್ಯರಾದುದು, ಮೈಸೂರು ಸರಕಾರದಲ್ಲಿ ಭಾಷಾಂತರಕಾರರಾದುದು ಈ ಅನುಭವಗಳು ಅವರನ್ನು ಮಕ್ಕಳ ಸಾಹಿತ್ಯ ರಚನೆಗೆ ಸೆಳೆದವು.

ಮಕ್ಕಳ ಸಾಹಿತ್ಯವೆಂದಾಗ ಅದರಲ್ಲಿ ಮಕ್ಕಳಿಗಾಗಿ ಬರೆದ ಬಿಡಿಬಿಡಿ ಕವನಗಳು, ನೀಳ್ಗವನಗಳು, ಕಥನಕವನಗಳು, ಖಂಡಕಾವ್ಯಗಳು, ಶಿಶುಪ್ರಾಸಗಳು ಇತ್ಯಾದಿಗಳು ಸೇರುತ್ತವೆ. ಎಸ್.ಜಿ.ನ. ಅವರು ಇಂತಹ ವೈವಿಧ್ಯಮಯ ಮಕ್ಕಳ ಕವನಗಳನ್ನು ರಚಿಸಿದ್ದಾರೆ. ಶ್ರೀಯುತರ ಕವಿತೆಗಳು ಲಲಿತವಾಗಿಯೂ ಸರಸವಾಗಿಯೂ ಇವೆ. ಆಕಳು ಮತ್ತು ಅದರ ಹಾಲಿನ ಮಹತ್ವವನ್ನು ಸೊಗಸಾಗಿ ಹೇಳಿದ್ದಾರೆ.

ಶ್ರೀ ಕರವಾಗಿರು
ವಾಕಳು ಹಾಲಿತ್ತು
ಲೋಕವನೆಲ್ಲವ
ಸಾಕುತಲಿರುವುದು

ತಿರುಗುತ ವನದಲಿ
ಗರುಕೆಯ ಹುಲ್ಲನುತಿಂದು

ಬರುತಲೆರಡು ಹೊತ್ತು
ಕರೆವುದು ಸವಿಹಾಲ

ಹಸುಗಳ ಹಾಲಿಂದೆ
ಮೊಸರು ಬೆಣ್ಣೆಗಳನು
ಹಸನಾದ ತುಪ್ಪವ
ನೆಸಗುವರೆಲ್ಲರು

ವಿಷ್ಣು ಗಣಗಳಿಂದ ಕೂಡಿದ ಈ ರಚನೆ ತುಂಬ ಸೊಗಸಾಗಿದೆ. ಇಲ್ಲಿ ಪರಿಚಿತ ಪದ ಮತ್ತು ವಾಕ್ಯಗಳಿವೆ. ಪದ್ಯದ ಒಟ್ಟು ಆಶಯ ಮಕ್ಕಳಿಗೆ ಅರ್ಥವಾಗುತ್ತದೆ. ಜೊತೆಗೆ ಗೇಯಗುಣವು ಈ ಕವನಗಳ ಪ್ರಮುಖ ಅಂಶವಾಗುತ್ತದೆ. ಕಾವೇರಿ ನದಿಯ ಮಹತ್ವವನ್ನು ಕುರಿತು ನಾಲ್ಕು ಮಾತ್ರೆಗಳ ಮಾತ್ರಾಗಣ ವಿನ್ಯಾಸದಲ್ಲಿ ಹೆಣೆದಿದ್ದಾರೆ.

ನೋಡು ಕಾವೇರಿಯು । ನಾಡಿನ ಜನರಿಗೆ
ಬೇಡಿದ ಫಲವದು । ನೀಡುತೆ ಪೊರೆವುದು
ಹಾಲನು ಹೋಲುವ । ಕಾಲುವೆ ನೀರೊಳು
ಸಾಲು ಸಾಲಾಗಿಹ । ಶಾಲಿಯ ಪೊರೆವುದು

'ಹಾಲನು ಹೋಲುವ । ಕಾಲುವೆ ನೀರೊಳು' ಈ ಶಬ್ದ ಚಿತ್ರ ಎಷ್ಟು ಸೊಗಸಾಗಿದೆ. ಕವಿ ಕಾವೇರಿ ನೀರನ್ನು ಹಾಲಿಗೆ ಹೋಲಿಸಿದ್ದಾರೆ. ಶಬ್ದ ಭಂಡಾರ, ಭಾಷಾಪ್ರಭುತ್ವ, ವಿಷಯ ಪ್ರತಿಪಾದನೆಯ ವೈಖರಿಯ ಮೇಲೆ ಕವಿಯ ವರ್ಚಸ್ಸು ಎದ್ದು ಕಾಣುತ್ತದೆ. ಕವಿ ವರ್ತಮಾನದ ನೆಲೆಯಲ್ಲಿ ನಿಂತು ಸುತ್ತಲಿನ ಪರಿಸರವನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಾರೆ. 'ನೇಗಿಲು', 'ಮಳೆಗಾಲ' ಕವನಗಳನ್ನು ಈ ನಿಟ್ಟಿನಲ್ಲಿ ನೋಡಬಹುದು.

ನೇಗಿಲಿಗೆ ಕೈಯಿಡಿರಿ ಹುಡುಗರೆ
ರಾಗದಲಿ ಹೊಲಗಳನು ಬಿತ್ತನೆ
ಗಾಗಿ ನಾವುಳುತುಳುತ ಹೆಂಟೆಯನೊಡೆದು ಹದಮಾಡಿ
ಬೇಗದಲಿ ಕಾಳುಗಳ ಚೆಲ್ಲುತ
ಸಾಗಿಬರುವಾ ಸುಗ್ಗಿಯಲಿ ಹಾಲು
ಸಾಗಿ ಬೆಳಸನು ಬೆಳೆದು ಮಾಡುವ ಹಲವು ಹಬ್ಬಗಳ

ಕೃಷಿಯ ಮಹತ್ವವನ್ನು ನೇಗಿಲನ್ನು ಸಂಕೇತವಾಗಿಟ್ಟುಕೊಂಡು ಕವಿ ಭಾಮಿನಿ ಷಟ್ಪದಿಯ ಶಿಲ್ಪದಲ್ಲಿ ರೇಖಿಸಿದ್ದಾರೆ. ಕವಿ ತಮ್ಮದೇ ಆದ ಹೊಚ್ಚ ಹೊಸ ಭಾಷೆಯನ್ನು ರೂಢಿಸಿ ಕೊಂಡಿರುವುದರಿಂದ ಕವನ ಪರಿಣಾಮಕಾರಿಯಾಗಿ ಓದುಗರನ್ನು ಮುಟ್ಟಿದೆ. ಮಳೆಗಾಲದ ಸನ್ನಿವೇಶವನ್ನು ಕವಿ ಯಥಾವತ್ತಾಗಿ ಕುಸುಮ ಷಟ್ಪದಿಯ ಶಿಲ್ಪದಲ್ಲಿ ರೇಖಿಸಿದ್ದಾರೆ.

ಮಳೆಗಾಲದೊಳು ಬೀಜ
ಗಳು ಮೊಳಕೆಯಾಗುವುವು
ಬೆಳೆಯುವುವು ಹುಲ್ಲುಗಳು ಸಸಿಗಳೆಲ್ಲಾ
ಇಳೆಯ ಗಿಡಮರ ಬಳ್ಳಿ
ಗಳು ಚಿಗುರಿ ಹೂವಾಗಿ
ಫಲಿಸುವುವು ಕೆರೆಕಟ್ಟೆ ತುಂಬುತಿಹುವು

ಮಳೆಗಾಲದ ಪ್ರಕೃತಿ ಸೌಂದರ್ಯ, ಕೃಷಿ ಕ್ರಿಯೆಯನ್ನು ಕುರಿತು ಈ ಕವನದಲ್ಲಿ ಅಭಿವ್ಯಕ್ತಿಸಿದ್ದಾರೆ. ಮಳೆಗಾಲದ ಸಂಗತಿಗಳನ್ನು ಆಪ್ತ ಧಾಟಿಯಲ್ಲಿ ಹೇಳಿದ್ದಾರೆ; ಸರಳ ಗದ್ಯವಾಗಿ ರೂಪುಗೊಂಡ ಅನೇಕ ಸಾಲುಗಳು ಇಲ್ಲಿವೆ. ಇದೇ ರೀತಿ 'ನಕ್ಷತ್ರ'ದ ವರ್ಣನೆಯನ್ನು ಕವಿ ಶರಷಟ್ಪದಿಯಲ್ಲಿ ಬಣ್ಣಿಸಿದ್ದಾರೆ. ಎಸ್.ಜಿ.ನ. ಅವರು ಪದಸಂಯೋಜನೆಯಲ್ಲಿ ತೂಕ ಮೀರುವುದಿಲ್ಲ. ಆದಿ-ಅಂತ್ಯ ಪ್ರಾಸ, ಲಯ ಎಲ್ಲವೂ ಸೊಗಸಾಗಿ ಬರುತ್ತವೆ. ಇದರಿಂದ ಮಕ್ಕಳು ಉತ್ಸಾಹದಿಂದ ಹಾಡುತ್ತಾರೆ. 'ಮಕ್ಕಳು ಮಲಗುವ ಹೊತ್ತು' ಕವನದ ಸಾಲುಗಳನ್ನು ನೋಡಬಹುದು.

ಹೊತ್ತು ಮುಳುಗುತ್ತಲಿದೆ
ಕತ್ತಲಾಗುತ್ತಲಿದೆ
ಎತ್ತಲೂ ಕಾಗೆಗಳು ಗೂಡ ಬಳಿಗೆ
ಮತ್ತೆ ಕಾಯೆಂದು ಕೂ
ಗುತ್ತಲಾಗಸದೆ ಹಾ
ರುತ್ತಲಿವೆ ಮಲಗುವಾ ಹೊತ್ತಾಯಿತು.

ಸ್ವಭಾವೋಕ್ತಿ, ಎಸ್.ಜಿ.ನ. ಅವರ ಕಾವ್ಯ ಶೈಲಿಯ ಅನನ್ಯತೆಯಾಗಿದೆ. ಹೇಳಬೇಕಾದುದನ್ನು ಸರಳವಾಗಿ, ನೇರವಾಗಿ, ಪರಿಚಿತ ಮಾತುಗಳಿಂದ ಹೇಳುತ್ತಾರೆ. ತಮಗೆ ಆ ಕಾಲಕ್ಕೆ ಮೂಡಿದ ಭಾವನೆಗಳಿಗೆ ಭಾಷೆಯ ತೊಡುಗೆಯಿಟ್ಟು ತಮ್ಮ ಭಾವನೆಗಳನ್ನು ಸ್ಪಷ್ಟವಾಗಿ ಮೂಡಿಸಿದ್ದಾರೆ. ಪ್ರಕೃತಿಯ ಕೆಲವು ವಿದ್ಯಮಾನಗಳನ್ನು ಹೇಳುವುದರ ಮುಖಾಂತರ ತಾವು ಹೇಳಬೇಕಾದ ವಿಷಯಕ್ಕೆ ಪುಷ್ಟಿಯನ್ನು ಪಡೆಯಲು ಯತ್ನಿಸುತ್ತಾರೆ. ಇವರ 'ಗೋವಿನ ಬಾಳು' ಲೋಕ ಪ್ರಸಿದ್ಧವಾಗಿದೆ. ಅದರ ಕೆಲವು ನುಡಿಗಳು ಹೀಗಿವೆ :

ಇಟ್ಟರೆ ಸಗಣಿಯಾದೆ ತಟ್ಟಿದರೆ ಕುರುಳಾದೆ
ಸುಟ್ಟರೇ ನೊಸಲಿಗೆ ವಿಭೂತಿಯಾದೆ
ತಟ್ಟದೇ ಹಾಕಿದರೆ ಮೇಲುಗೊಬ್ಬರವಾದೆ
ನೀನಾರಿಗಾದೆಯೋ ಎಲೆ ಮಾನವಾ

ಹಾಲಾದೆ ಕರೆದರೆ ಮೊಸರಾದೆ ಹೆತ್ತರೆ
ಮೇಲೆ ಕೆನೆಗಡೆದರೆ ಬೆಣ್ಣೆಯಾದೆ
ಮೇಲಾದ ತುಪ್ಪವೂ ನಾನಾದೆ ಕಾಸಿದರೆ
ನೀನಾರಿಗಾದೆಯೋ ಎಲೆ ಮಾನವಾ

ನೀತಿಯ ನೆಲೆಗಟ್ಟವನ್ನು ಹೇಳುವ ಆ ಹಾಡು ಅರ್ಥಪೂರ್ಣವಾಗಿದೆ. ಇಂದಿಗೂ ತಾಯಂದಿರು ಕಿಡಿಗೇಡಿ ಮಕ್ಕಳಿಗೆ ಬುದ್ಧಿ ಹೇಳುವಾಗ ಈ ಹಾಡು ಬಳಕೆಯಾಗುತ್ತದೆ. ಈ ಕವನದ ಓಟ, ಪದಸಂಯೋಜನೆ ಹಾಡಲು ಬಾರದವರಿಗೂ ಕೂಡ ತಾನೇ ಹಾಡು ಕಲಿಸುವಂತಿದೆ. ಒಂದೊಂದು ಸಲ ಕವನದ ಭಾವವು ಮಂತ್ರಮುಗ್ಧಗೊಳಿಸುತ್ತದೆ. ಕವಿ, ಪರಿಚಿತ ಪದಗಳ ಮೂಲಕ ಮಕ್ಕಳಿಗೆ ಉನ್ನತ ಆದರ್ಶವನ್ನು ಸಂದೇಶವನ್ನು ಬಿತ್ತರಿಸುತ್ತಾನೆ. ಎಸ್.ಜಿ.ನ. ಅವರ ಇಂತಹ ಕವನಗಳು ಒಂದೊಂದು ಸಲ ಓದಿದಷ್ಟೂ ಹೊಸ ಅರ್ಥವನ್ನು ಕೊಡುತ್ತವೆ. ಅವರ ಕವನಗಳು ಅರ್ಥಪೂರ್ಣವಾದ ಧೋರಣೆಯನ್ನು ಒಳಗೊಂಡಿವೆ. ಶ್ರೀಯುತರ 'ಚಾಮರಾಜೇಂದ್ರರ ಮರಣವಾರ್ತೆ' ಎಂಬುದು ಅತ್ಯುತ್ತಮ ಶೋಕಗೀತೆಯಾಗಿದೆ.

ಬರಸಿಡಿಲು ಹೊಡೆದಂತೆ ಭೂಮೀ
ಶ್ವರನ ಚಾಮನೃಪಾಲ ವರ್‍ಯನ
ಮರಣವಾರ್ತಾ ಶೂಲವೆಲ್ಲರ ಕೊಡಕೆಗಳನಿರಿದು
ಕೊರಗಿಸಿತು ಮರುಗಿಸಿತು ಕಂಬನಿ
ಯೊರತೆಯಲಿ ನನೆಯಿಸಿತು ಮರವೆಯೊ
ಳೊರಗಿಸಿತು ಬಾಯ್ಬಿಡಿಸಿ ತಳಲಿಸಿತನಿಬರನು

ಈ ಸಾಲುಗಳಲ್ಲಿ ಕವಿಹೃದಯ ತನ್ನ ಅಶ್ರುತರ್ಪಣವಿತ್ತಿರುವುದು ವೇದ್ಯ. ಈ ಶೋಕಗೀತೆಯ ಮುಖ್ಯ ಧ್ಯೇಯ ಸತ್ತವನಿಗಾಗಿ ಕಣ್ಣೀರಿಡುವುದಷ್ಟೇ ಅಲ್ಲ, ಅವನ ಉದಾತ್ತ ಗುಣಗಳ ಅಮರತ್ವವನ್ನು ಎತ್ತಿ ಹಿಡಿಯುವುದಾಗಿದೆ. ಸಾವಿನಾಚೆಗಿನ ಅಮರತ್ವದ ಕಡೆಗೆ ಕವಿ ನಮ್ಮನ್ನು ಕೊಂಡೊಯ್ಯುವುದನ್ನು ಶೋಕ ಗೀತೆಯಲ್ಲಿ ಕಾಣುತ್ತೇವೆ. ಎಸ್.ಜಿ.ನ. ಅವರು ಸಾಂಪ್ರದಾಯಿಕ ಮಟ್ಟುಗಳಲ್ಲಿ ಸೊಗಸಾದ ಮಕ್ಕಳ ಕವಿತೆಗಳನ್ನು ರಚಿಸಿ ಆ ಕ್ಷೇತ್ರದ ಅಧ್ಯಯನಕ್ಕೆ ಭದ್ರ ಅಡಿರಚನೆ ಹಾಕಿದರು. ಅವರ ರಚನೆಗಳು ಇಂದಿಗೂ ಮಕ್ಕಳ ನಾಲಿಗೆಯ ಮೇಲ ನಲಿಯುತ್ತವೆ.

೩

ಹೊಸಗನ್ನಡದ ಆರಂಭದ ಭಾಷಾಂತರಕಾರರಲ್ಲಿ ಎಸ್.ಜಿ. ನರಸಿಂಹಚಾರ್ಯರರು ಒಬ್ಬರು. ಅವರು ಸರಕಾರದ ಭಾಷಾಂತರ ಇಲಾಖೆಯಲ್ಲಿ ಕನ್ನಡ ಭಾಷಾಂತರಕಾರರಾಗಿ ಸೇವೆ ಸಲ್ಲಿಸುತ್ತಿದ್ದಾಗ ಸಹಜವಾಗಿಯೇ ಅನ್ಯ ಭಾಷೆಯ ಕೃತಿಗಳನ್ನು ಕನ್ನಡದ ಜಾಯಮಾನಕ್ಕೆ ತಕ್ಕಂತೆ ಸೊಗಸಾಗಿ ಅನುವಾದಿಸಿದ್ದಾರೆ. ಗೋಲ್ಡ್‌ಸ್ಮಿತ್ ಕವಿಯ The Hermit ಎಂಬ ಕವಿತೆಯನ್ನು ಕಂದಪದ್ಯದಲ್ಲಿ **ಪ್ರೋಷಿತ ಪ್ರಿಯಾ ಸಮಾಗಮಂ** ಎಂಬ ಶೀರ್ಷಿಕೆಯಲ್ಲಿ ಅನುವಾದಿಸಿದ್ದಾರೆ. ಕಾಳಿದಾಸನ ರಘುವಂಶದ ಮೊದಲ ಮೂರು ಸರ್ಗಗಳನ್ನು **ದಿಲೀಪ ಚರಿತೆ** (೧೮೯೭) ಎಂಬ ಹೆಸರಿನಲ್ಲಿ ಕುಸುಮಷಟ್ಪದಿ ಶಿಲ್ಪದಲ್ಲಿ ಅನುವಾದಿಸಿದ್ದಾರೆ. ರಘುವಂಶದ ೪ ರಿಂದ ೭ ಸರ್ಗಗಳನ್ನು **ಅಜನೃಪ ಚರಿತೆ** ಎಂಬ ಶೀರ್ಷಿಕೆಯಲ್ಲಿ ಭಾಮಿನಿ ಷಟ್ಪದಿ ಶಿಲ್ಪದಲ್ಲಿ ಅನುವಾದಿಸಿದ್ದಾರೆ. (೧೯೦೦).

ಅದರಂತೆ ಸಂಸ್ಕೃತದ ಉತ್ತರರಾಮಚರಿತ ನಾಟಕವನ್ನು ಉತ್ತರ ರಾಮಚರಿತಂ ಎಂಬ ಶೀರ್ಷಿಕೆಯಲ್ಲಿ ಕನ್ನಡಿಸಿದ್ದಾರೆ. (೧೯೦೦) ಆಂಗ್ಲ ಮೂಲದ 'ಸ್ಟೋರಿ ಆಫ್ ಅಲ್ಲಾದೀನ್ ಅಂಡ್ ದಿ ವಂಡರ್‌ಫುಲ್ ಲ್ಯಾಂಪ್' ಎಂಬ ಕೃತಿಯನ್ನು **'ಅಲ್ಲಾವುದ್ದೀನ ಮತ್ತು ಅದ್ಭುತ ದೀಪ'** ಎಂಬ ಹೆಸರಿನಲ್ಲಿ ಅನುವಾದಿಸಿದ್ದಾರೆ (೧೮೯೯). ಮಕ್ಕಳ ವಾಚನಾಭಿರುಚಿ ಹುಟ್ಟಿಸಲು ಇವು ತುಂಬ ನೆರವಾಗುತ್ತವೆ. ಎಸ್.ಜಿ.ನ. ಅವರ ಅನುವಾದಗಳು ತುಂಬ ಸಮರ್ಪಕವಾಗಿವೆ. ಅನುವಾದ ಕ್ಷೇತ್ರಕ್ಕೆ ಅವರ ಕಾಣಿಕೆ ಗಮನಾರ್ಹವಾಗಿದೆ.

ಹೀಗೆ, ಎಸ್.ಜಿ. ನರಸಿಂಹಾಚಾರ್ಯರು ಪ್ರಾಚೀನ ಸಾಹಿತ್ಯ, ಮಕ್ಕಳ ಸಾಹಿತ್ಯ ಹಾಗೂ ಅನುವಾದ ಕ್ಷೇತ್ರಗಳನ್ನು ಸಮಗ್ರವಾದ ಅವಲೋಕಿಸಿದ್ದಾರೆ. ಅದರ ಬಗೆಗಿನ ಕೂಲಂಕಷವಾದ ಪರಾಮರ್ಶೆ ಮಾಡಿದ್ದಾರೆ. ಈ ದೃಷ್ಟಿಯಿಂದ ಶ್ರೀಯುತರ ಹೆಸರು ಆ ಕ್ಷೇತ್ರದಲ್ಲಿ ಅಜರಾಮರವಾಗಿ ನಿಲ್ಲುವುದರಲ್ಲಿ ಸಂದೇಹವಿಲ್ಲ. ಕನ್ನಡ ಸಾಹಿತ್ಯದ ಸರ್ವಾಂಗೀಣ ಪ್ರಗತಿಗೆ ಶ್ರೀಯುತರು ಸಲ್ಲಿಸಿದ ಸೇವೆ ಕನ್ನಡಿಗರ ಆದರಕ್ಕೆ ಪಾತ್ರವಾಗಿದೆ.

❑

ಹಳತು–ಹೊನ್ನು: ಭಾಷೆಯ ಸ್ವರೂಪ ಮತ್ತು ಸ್ವಭಾವ

• ಡಿ.ವಿ. ಗುಂಡಪ್ಪ

ದೇವೀಂ ವಾಚಮಜನಯನ್ತ ದೇವಾಃ ।
ತಾಂ ವಿಶ್ವರೂಪಾಃ ಪಶವೋ ವದನ್ತಿ ।
ಸಾ ನೋ ಮನ್ದ್ರೇಷಮೂರ್ಜಂ ದುಹಾನಾ ।
ಧೇನುರ್ವಾಗಸ್ಮಾನುಪ ಸುಷ್ಟುತೈತು ॥ ೧ ॥
ಯದ್ವಾಗ್ವದನ್ತ್ಯವಿಚೇತನಾನಿ ।
ರಾಷ್ಟ್ರೀದೇವಾನಾಂ ನಿಷಸಾದ ಮನ್ದ್ರಾ ।
ಚತಸ್ರ ಊರ್ಜಂ ದುದುಹೇ ಪಯಾಗ್‌ಂಸಿ ।
ಕ್ವಸ್ವಿದಸ್ಯಾಃ ಪರಮಂ ಜಗಾಮ ॥ ೨ ॥
ಗೌರೀ ಮಿಮಾಯ ಸಲಿಲಾನಿ ತಕ್ಷತೀ ।
ಏಕಪದೀ ದ್ವಿಪದೀ ಸಾ ಚತುಷ್ಪದೀ ।
ಅಷ್ಟಾಪದೀ ನವಪದೀ ಬಭೂವುಷೀ ।
ಸಹಸ್ರಾಕ್ಷರಾ ಪರಮೇ ವ್ಯೋಮನ್ ॥ ೩ ॥
ತಸ್ಯಾಗ್‌ಂ ಸಮುದ್ರಾ ಅಧಿವಿಕ್ಷರನ್ತಿ ।
ತೇನ ಜೀವನ್ತಿ ಪ್ರದಿಶಶ್ಚತಸ್ರಃ ॥ ೪ ॥

(ತೈತ್ತಿರೀಯ ಬ್ರಾಹ್ಮಣ, ಅ ೨, ಪ್ರ ೪. ಅನು ೬)

(ಸಾಯಣ ಭಾಷ್ಯಾನುಸಾರವಾದ ಅರ್ಥ)–

"ಮೊದಲು ದೇವತೆಗಳೆಲ್ಲರೂ ವಾಕ್ಕನ್ನು ದೇವಭಾಷೆಯ ರೂಪದಲ್ಲಿ ಕಲ್ಪಿಸಿದರು. ಅದೇ ವಾಕ್ಕನ್ನು ದ್ವಿಪಾದಿ, ಚತುಷ್ಪಾದಿ ಮೊದಲಾದ ಬಹುವಿಧ ರೂಪಧಾರಿಗಳಾದ ಮನುಷ್ಯಾದಿ ಪಶುಗಳು ಸ್ವಸ್ವಭಾಷಾ ರೂಪದಲ್ಲಿ ಉಪಯೋಗಿಸುತ್ತಾರೆ. ಆ ವಾಗ್ರೂಪವಾದ ಧೇನುವು ನಮಗೆ ಇಷ್ಟವಾದ ಅನ್ನವನ್ನೂ ಹಾಲನ್ನೂ ಕೊಡತಕ್ಕುದಾಗಿ, ನಮ್ಮ ವೇದಮಂತ್ರಗಳಿಂದ ಚೆನ್ನಾಗಿ ಸ್ತೋತ್ರ ಮಾಡಲ್ಪಟ್ಟುದಾಗಿ, ಹರ್ಷಗೊಂಡು ನಮ್ಮಲ್ಲಿ ಬರಲಿ ॥ ೧ ॥

"ಯಾವ ವಾಗ್ದೇವತೆಯು ಅಚೇತನಸದೃಶರಾದ, ಎಂದರೆ ಮೂಕರಾದ ಪ್ರಾಣಿಗಳನ್ನು ಮಾತನಾಡುವಂತೆ ಮಾಡುತ್ತಾಳೆಯೋ ಮತ್ತು ಯಾರು ದೇವತೆಗಳಿಗೆ ಯಜಮಾನಿಯೋಪಾದಿಯಲ್ಲಿದ್ದುಕೊಂಡು ಹರ್ಷದಿಂದ ನಮ್ಮ ಕರ್ಮಗಳಲ್ಲಿ ಕುಳಿತಿರುವಳೋ ಮತ್ತು ಯಾರ

ಪ್ರಸಾದದಿಂದ ನಾಲ್ವರು ದಿಗ್ದೇವತೆಗಳೂ ಹಾಲು ನೀರುಗಳನ್ನು ಪಡೆಯುತ್ತಿರುವರೋ, ಅಂತಹ ದೇವಿಯ ಪರಮಪದವನ್ನು ಮನುಷ್ಯನೆಲ್ಲಿ ಹೊಂದಿಯಾನು? (ಎಂದರೆ ಯಾವನೂ ಹೊಂದಲಾರನು) ॥ ೨ ॥

"ಪರಬ್ರಹ್ಮನಲ್ಲಿ ನೆಲೆಸಿರುವ ಮತ್ತು ಗೌರವರ್ಣವುಳ್ಳವಳಾದ ವಾಗ್ದೇವಿಯು ಸೃಷ್ಟಿಯ ಉಪಕ್ರಮದಲ್ಲಿ ಸಲಿಲಸದೃಶಗಳಾದ ವರ್ಣಪದವಾಕ್ಯಗಳನ್ನು ನಿರ್ಮಿಸಬೇಕೆಂದು ಶಬ್ದವನ್ನುಂಟು ಮಾಡಿದಳು. ಆಗ ಪ್ರಣವದಿಂದ ಏಕಪದಿಯೂ, ವ್ಯಾಹೃತಿದ್ವಯರೂಪದಿಂದ ದ್ವಿಪದಿಯೂ, ವೇದಚತುಷ್ಟಯರೂಪದಿಂದ ಚತುಷ್ಪದಿಯೂ, ಆರು ವೇದಾಂಗಗಳು, ಪುರಾಣ ಮತ್ತು ಧರ್ಮಶಾಸ್ತ್ರ--ಈ ಎಂಟರ ರೂಪದಿಂದ ಅಷ್ಟಾಪದಿಯೂ, ಮೀಮಾಂಸಾ ನ್ಯಾಯ ಸಾಂಖ್ಯ ಯೋಗ ಪಾಂಚರಾತ್ರ ಪಾಶುಪತ ಆಯುರ್ವೇದ ಧನುರ್ವೇದ ಗಾಂಧರ್ವ-ಈ ಒಂಬತ್ತರ ರೂಪದಿಂದ ನವಪದಿಯೂ ಇನ್ನೂ ಇತರ ಅಸಂಖ್ಯಾತಗಳಾದ ವಾಕ್ಯ ಸಂದರ್ಭಗಳಿಂದ ಸಹಸ್ರಾಕ್ಷರಳೂ, (ಎಂದರೆ ಅನಂತ ವಿಧಳೂ) ಆದಳು ॥ ೩ ॥

"ಆ ವಾಗ್ದೇವತೆಯನ್ನಾಶ್ರಯಿಸಿರುವ ಸಮುದ್ರಸಮಾನಗಳಾದ ವೇದಗಳು (ಭಾಷೆಗಳು) ವಿವಿಧಗಳಾಗಿ ಪ್ರವರ್ತಿಸುತ್ತವೆ. ಅವುಗಳ ವಿವಿಧಪ್ರವರ್ತನೆಯಿಂದ ನಾಲ್ಕು ದಿಕ್ಕುಗಳಲ್ಲಿರುವ ಪ್ರಾಣಿಗಳೂ ಜೀವಿಸುತ್ತವೆ" ॥ ೪ ॥

ಮೂಲತತ್ವಗಳು

ಈ ವೇದವಾಕ್ಯಗಳು ಭಾಷೆಯ ಸ್ವರೂಪ ಸ್ವಭಾವಗಳನ್ನು ಕುರಿತು ತಿಳಿಸಬೇಕಾದ ಮೂಲತತ್ವಗಳನ್ನೆಲ್ಲ ಸಂಕ್ಷೇಪವಾಗಿ ತಿಳಿಸುತ್ತವೆ. ಅವುಗಳ ಸಾರಾಂಶಗಳನ್ನು ಸಾಮಾನ್ಯ ವಚನಗಳಿಂದ ಈ ರೀತಿ ಸಂಗ್ರಹಿಸಬಹುದು :

೧. ಭಾಷೆಯೆಂಬುದು ಪರಮೇಶ್ವರನ ಒಂದು ಶಕ್ತಿ ವಿಶೇಷ.
೨. ಅದು ಸ್ವಯಂ ವ್ಯಕ್ತ ವಸ್ತು.
೩. ಅದು ನಿರ್ಬಂಧಕ್ಕೊಳಪಡದೆ ಸ್ವತಂತ್ರವಾಗಿ ಬೆಳೆಯತಕ್ಕುದು.
೪. ಅದರ ರೂಪಗಳೂ ರೀತಿಗಳೂ ಕಾರ್ಯಗಳೂ ನಾನಾ ಬಗೆಯವು.

ಶಬ್ದಾನುಶಾಸನಕರ್ತನಾದ ಭಟ್ಟಾಕಳಂಕ ದೇವನು ಇದೇ ಮತವನ್ನೇ ಅನುಸರಿಸಿ ಹೀಗೆ ಬರೆದಿರುವನು :-

"ಯಥಾ ಪ್ರಾವೃಟ್ಕಾಲೇ ನಭಸ್ಥಲಾತ್ಪತಿತಮಾಂತರಿಕ್ಷಂ, ಜಲಂ ಏಕಮವ್ಯಕ್ತ ರಸಮಪಿ ಲವಣಕೃಷ್ಣೋಷರಾದಿ ಕ್ಷೇತ್ರಗತಂ ಸತ್ ತದೇವ ಲವಣ ಮಧುರ ಕಷಾಯ ರಸಭೇದ ಭಿನ್ನಂ ನಾನಾತ್ಮಕ ಮನುಭೂಯತೇ; ಯಥಾ ಚ ಶರತ್ಕಾಲೇ ಸ್ವಾತೀಸ್ಥೇ ದಿವಾಕರೇ ಶುಭ್ರಾದಭ್ರಮೇ ಘಾತ್ ಪ್ರಭ್ರಷ್ಟ ಮಾಭ್ರಂ ಜಲಮೇಕಮೇವ ತಾಮ್ರಪರ್ಣೀ ಶುಕ್ತಿ ಸಪ್ತಚ್ಛದಾದ್ಯಧಿಕರಣಗತಂ ಸತ್ ಮೌಕ್ತಿಕ ಕರ್ಪೂರಾದ್ಯಾನೇಕಾಕಾರ ಪರಿಣತಮಖಿಲಧರಣೀ ಪ್ರಸಿದ್ಧಮನುಭೂಯತೇ; ಯಥಾ ವಾ ವೃಕ್ಷವಾಟಿಕಾಯಂ ಕುಲ್ಯಾಜಲಮೇಕ ರಸಮೇಕಮೇವ ನಾನಾತರುವೀರುಧ್ಗುಲ್ಮಾದಿ ಮೂಲದೇಶಕೃತಾಲವಾಲಂ ಪ್ರಾಪ್ಯ ತತ್ತದಂಘ್ರಿಪೀತಂ ಸತ್ ತತ್ತತ್ಫಲಮಾಸಾದ್ಯ ಮಧುರಾಮ್ಲ ಕಟುಕಾದಿ ನಾನಾರಸಾತ್ಮನಾ ಪರಿಣತಂ ಸತ್ ಅನೇಕ ವಿಧ

ಮಖಿಲಜನಾನುಭವಸಾಕ್ಷಿಕ ಮಸ್ವಾದ್ಯತೇ; ತಥಾ ಭಗವದ್ಭಾಷಾಪಿ ಸ್ವೋತ್ಪತ್ತಿಸಮಯೇ ಸಮುದ್ರಘೋಷವತ್ ಅವ್ಯಕ್ತೈಕ ಭಾಷಾ ರೂಪಾಪಿ ತತ್ತಚ್ಛ್ರೋತೃ ಶ್ರೋತ್ರದೇಶಂ ಪ್ರಾಪ್ತಾ ಸತೀತತ್ತದ್ಭಾಷಾತ್ಮನಾ ಪರಿಣಮತಿ, ವಿಚಿತ್ರ ಶಕ್ತಿತ್ವಾತ್...ತದುಕ್ತಂ ಭಗವತಾ ಪದ್ಮನಂದ್ಯಾಚಾರ್ಯೇಣ :-

ಸಮುದ್ರಘೋಷಾಕೃತಿರರ್ಹತಿ ಪ್ರಭೌ ।
ಯದಾ ತ್ವಮುತ್ಕರ್ಷಮುಪಾಗತಾ ಭೃಶಂ ॥
ಅಶೇಷಭಾಷಾತ್ಮತಯಾ ತ್ವಯಾ ತದಾ ।
ಕೃತಂ ನ ಕೇಷಾಂ ಹೃದಿ ಮಾತರದ್ಭುತಂ ॥ –– ಇತಿ.
ತಥಾ ಮಹಾಪುರಾಣೇಪಿ: ––
ದೇವಾ ದೈವೀಂ ನರಾ ನಾರೀಂ ಶಬರಾಶ್ಚಾಪಿ ಶಾಬರೀಂ ।
ತಿರ್ಯಂಚೋಪಿ ಚ ತೈರಶ್ಚೀಂ ಮೇನಿರೇ ಭಗವದ್ಗಿರಂ ॥ –– ಇತಿ

ಇದರಿಂದ ಭಾಷೆಯ ವಿವಿಧತೆಯು ಕೃತಕವೂ, ನಿರರ್ಥಕವೂ, ಆದುದಲ್ಲವೆಂಬುದೂ ಅದಕ್ಕೆ ಸ್ವತಃ ಸಿದ್ಧವೂ ಅನನ್ಯಪರತಂತ್ರವೂ ಆದ ಮೂಲಕಾರಣವು ಇರುವುದೆಂಬುದೂ ಪ್ರಾಚೀನ ಪಂಡಿತರ ಮತವೆಂದು ನಮಗೆ ತಿಳಿದು ಬರುತ್ತದೆ. ಜೀವವಿವಿಧತೆಯೇ ಆ ಕಾರಣವೆಂದು ಮೇಲಿನ ಮಂತ್ರಗಳು ಸೂಚಿಸುತ್ತವೆ. ನಮ್ಮ ವಿಚಾರದಿಂದಲೂ ಅದೇ ಸಿದ್ಧವಾಗುತ್ತದೆ. ಜೀವಿಗಳೆಷ್ಟು ಬಗೆಯೋ ಭಾಷೆಗಳೂ ಅಷ್ಟು ಬಗೆ. ಅವರ ಜೀವನವು ಹೇಗೆಹೇಗೆ ರೂಪಾಂತರಗಳನ್ನು ಪಡೆಯುವುದೋ ಅವರ ಭಾಷೆಯೂ ಹಾಗೆಹಾಗೆ ರೂಪಾಂತರ ಗಳನ್ನು ಪಡೆಯುವುದು. ಭಾಷೆಯು ಜಡಪದಾರ್ಥವಲ್ಲ. ಜೇಡಿಮಣ್ಣನ್ನು ಹಿಸುಕಿ, ಕಲ್ಲನ್ನು ಒಡೆದು, ಮರವನ್ನು ಕಡಿದು, ಲೋಹವನ್ನು ಕರಗಿಸಿ, ಅವಕ್ಕೆ ಬೇಕುಬೇಕಾದ ವಿಕಾರಗಳನ್ನುಂಟು ಮಾಡಲಾಗುವಂತೆ ಭಾಷೆಗೆ ವಿಕಾರಗಳನ್ನು ಯಾವನೂ ತನ್ನಿಷ್ಟಬಂದಂತೆ ಮಾಡಲಾಗುವುದಿಲ್ಲ; ಏಕೆಂದರೆ ಭಾಷೆಯು ಸಚೇತನವಸ್ತು. ಅದಕ್ಕೊಂದು ಪ್ರಾಣವಿದೆ. ಆ ಪ್ರಾಣವು ಆ ಭಾಷೆ ಯನ್ನಾಡುವವರ ಪ್ರಾಣದ ಪ್ರತಿಬಿಂಬವಾಗಿರುವುದು. ಆದುದರಿಂದ ಆ ಪ್ರಾಣಿಗಳ ಜೀವನ ರೀತಿಯು ವ್ಯತ್ಯಾಸಗೊಂಡಲ್ಲದೆ ಅವರ ಭಾಷೆಯ ವ್ಯತ್ಯಾಸಗೊಳ್ಳದು; ಜನಜೀವನದಲ್ಲಿ ವ್ಯತ್ಯಾಸ ಗಳುಂಟಾದಾಗ ಭಾಷಾಪ್ರವೃತ್ತಿಯಲ್ಲಿ ವ್ಯತ್ಯಾಸಗಳುಂಟಾಗಲೇಬೇಕು.

ಭಾಷೆಯು ಬೆಳೆಯುವ ಬಗೆ

ಹಾಗೆ ವ್ಯತ್ಯಾಸಗಳುಂಟಾಗುವುದು ಅಪರೂಪದ ಸಂಗತಿಯೇನೂ ಅಲ್ಲ. ವ್ಯತ್ಯಸಿಸು ತ್ತಿರುವುದೇ ಎಲ್ಲ ವಿಧದ ಜೀವಿತತೆಗೂ ಮುಖ್ಯ ಲಕ್ಷಣ. ನಾವೆಲ್ಲರೂ ಪ್ರತಿದಿನವೂ ಅನೇಕ ವಿಷಯಗಳಲ್ಲಿ ನಮಗೆ ಗೋಚರಿಸಿದಷ್ಟು ಸೂಕ್ಷ್ಮವಾದ ರೀತಿಯಲ್ಲಿ ವ್ಯತ್ಯಾಸ ಹೊಂದುತ್ತಿದ್ದೇವೆ. ನಮ್ಮ ಭಾಷೆಯೂ ಹಾಗೆಯೇ. ಹೀಗೆ ಸತತವಾಗಿ ಯಾರ ಗಮನಕ್ಕೂ ವಿಶೇಷವಾಗಿ ಬಾರದೆ, ಸರ್ವಜನಜನಿತವಾಗಿ ನಡೆಯುತ್ತಿರುವ ಸಣ್ಣಸಣ್ಣ ಮಾರ್ಪಾಟುಗಳನ್ನು ಸಾಮಾನ್ಯ ವ್ಯತ್ಯಾಸ ಗಳೆಂದು ಹೇಳಬಹುದು. ಇವುಗಳಲ್ಲದೆ, ಇಂತಹ ವ್ಯತ್ಯಾಸಗಳ ಫಲಿತಾಂಶಗಳೂ ಈ ವ್ಯತ್ಯಾಸ ಗಳನ್ನು ತಿದ್ದತಕ್ಕವುಗಳೂ ಆಗಿ, ಜನರ ಗಮನಕ್ಕೆ ವಿಶೇಷವಾಗಿ ಬಂದು, ಪ್ರಯತ್ನಪೂರ್ವಕ ವಾಗಿ ಆಗಿಂದಾಗ್ಗೆ ನಡೆಯುವ ವಿಶೇಷ ವ್ಯತ್ಯಾಸಗಳೂ ಉಂಟು. ಇವುಗಳನ್ನು ಇಂಗ್ಲಿಷ್ ಭಾಷೆಯಲ್ಲಿ "ರಿಫಾರಮ್" ಎಂದೂ, ನಮ್ಮ ಮಾತಿನಲ್ಲಿ ಪರಿಷ್ಕಾರ, ಸಂಸ್ಕಾರ, ಸುಧಾರಣೆ,

ಅಥವಾ ತಿದ್ದುಪಾಟು ಎಂದು ಕರೆಯುವೆವು. ಇಂತಹ ತಿದ್ದುಪಾಟುಗಳ ಪ್ರಾರಂಭವು ಜನಸಮುದಾಯದಿಂದೆಲ್ಲ ಒಂದೇ ಬಾರಿ ಆಗುವುದಿಲ್ಲ; ಅದನ್ನು ಪ್ರಾರಂಭಗೊಳಿಸುವವರು ಪ್ರಾಜ್ಞರಾದ ಒಬ್ಬಿಬ್ಬರು. ಜನಜೀವನ ಕ್ರಮದಲ್ಲಿ, ಅಥವಾ ಅವರ ಭಾಷಾಸ್ಥಿತಿಯಲ್ಲಿ, ಸದ್ಯಃ ಇರತಕ್ಕ ಲೋಪಗಳಾವು?-ಮುಂದಕ್ಕೆ ಉಂಟಾಗಬೇಕಾದ ಸ್ಥಿತಿಯೆಂತಹುದು?-ಎಂಬುದನ್ನು ಅವರು ಸೂಕ್ಷ್ಮವಿಚಾರದಿಂದಲೂ ದೂರಾಲೋಚನೆಯಿಂದಲೂ ನಿರ್ಧರಿಸಿ, ಬಳಿಕ ತಮಗೆ ಯುಕ್ತವೆಂದು ತೋರಿದ ಮಾರ್ಪಾಟುಗಳನ್ನು ಜನರಿಗೆ ಸಾರಿ ಹೇಳಿ, ಅವುಗಳನ್ನು ಆಚರಣೆಗೆ ತರಿಸಲು ಯತ್ನಿಸುವರು. ಈ ರೀತಿ ಯಾವ ಮಹಾಪುರುಷರು ಜನರ ಸಾಮಾಜಿಕ ಅಥವಾ ಧಾರ್ಮಿಕ ಸ್ಥಿತಿಗತಿಗಳಲ್ಲಿ ಹೊಸ ಮಾರ್ಪಾಟುಗಳನ್ನು ನಡೆಸಿ, ಜನರ ಮನೋಬುದ್ಧಿಗಳಿಗೆ ನೂತನ ಪ್ರವೃತ್ತಿಯನ್ನುಂಟುಮಾಡಿಕೊಡಲು ಪ್ರಯತ್ನಿಸುವರೋ ಅವರನ್ನು ನಾವು ತತ್ತ್ವದರ್ಶಕರು, ಮತಸ್ಥಾಪಕರು, ಆಚಾರ್ಯಪುರುಷರು ಎಂದು ಕರೆಯುತ್ತೇವೆ. ಯಾರು ಜನರ ಭಾಷೆಯ ಸ್ಥಿತಿಯಲ್ಲಿ ಮಾರ್ಪಾಟುಗಳನ್ನು ನಡೆಸಿ ಲೇಖಕ ವಾಚಕರ ಹೃದಯಗಳಲ್ಲಿ ನೂತನ ಭಾವ ಸಂಕಲ್ಪಗಳನ್ನು ಉತ್ಪಾದನೆ ಮಾಡಲು ಯತ್ನಿಸುವರೋ ಅವರು ಪ್ರಮಾಣ ಗ್ರಂಥಕರ್ತರು ಮಹಾಕವಿಗಳು ಎಂದೆನಿಸಿಕೊಳ್ಳುತ್ತಾರೆ. ಕನ್ನಡದಲ್ಲಿ ಷಟ್ಪದೀ ಸಾಂಗತ್ಯಕಾವ್ಯಗಳನ್ನು ಮೊದಮೊದಲು ಬರೆದವರು ಇಂತಹ ನೂತನ ಸಂಪ್ರದಾಯಕರ್ತರು. ಭಾಷೆಯ ಜೀವನ ಕ್ರಮದಲ್ಲಿ ಅವರು ಹೊಸ ಮಾರ್ಪಾಟುಗಳನ್ನು ಮಾಡಿದವರು. ಜನರಿಗೆ ಆಧ್ಯಾತ್ಮ ತತ್ತ್ವಾನ್ವೇಷಣೆಯಲ್ಲಿ ಹೊಸದಾರಿಗಳನ್ನು ತೋರಿಸಿಕೊಟ್ಟು ಅವಕ್ಕೆ ತಕ್ಕಂತೆ ಅವರ ಆಚಾರ ವ್ಯವಹಾರಕ್ರಮಗಳನ್ನು ತಿದ್ದಲು ಯತ್ನಿಸುವವರಿಗೆ ದೇವಾಂಶಸಂಭೂತರು, ಅವತಾರಪುರುಷರು ಎಂಬ ಹೆಸರು ಸಲ್ಲುವುದಾದರೆ, ಭಾಷೆಯಲ್ಲಿ ಹೊಸತರದ ಪ್ರಬಂಧಗಳನ್ನು ರಚಿಸಿ, ಹೊಸಹೊಸ ಭಾವನೆಗಳನ್ನು ತುಂಬುವವರಿಗೆ ಅವರು ಪರಮೇಶ್ವರನ ವ್ಯಕ್ತರೂಪಳಾದ ವಾಗ್ದೇವತೆಯ ಪ್ರತ್ಯಕ್ಷದೂತರು ಎಂಬ ಒಕ್ಕಣೆಯು ಅತಿಶಯವೆನಿಸದು.

ಭಾಷೆಯೆಂಬುದು (ಈ ಪ್ರಬಂಧದಲ್ಲಿ) ಒಂದು ಗುಂಪಿನ ಮನುಷ್ಯರು ಆಡುವ ಮಾತುಗಳ ಅಥವಾ ಅಕ್ಷರಶಬ್ದಗಳ [೧]ಸಮೂಹದ ಹೆಸರು. ಮಾತು ಎಂದರೆ ಹೆಸರು ಅಥವಾ ಸಂಕೇತ. ಮನುಷ್ಯರು ತಮ್ಮ ಇಂದ್ರಿಯಗಳಿಗೆ ಗೋಚರಿಸುವ ನಾನಾ ಪ್ರಾಣಿಗಳಿಗೂ, ನಾನಾ ಪದಾರ್ಥಗಳಿಗೂ, ಅವುಗಳ ನಾನಾ ವ್ಯಾಪಾರಕ್ರಿಯೆಗಳಿಗೂ, ತಮ್ಮ ನಾನಾ ಅನುಭವಗಳಿಗೂ, ಒಂದೊಂದಕ್ಕೆ ಒಂದೊಂದು ಸಂಕೇತ ಅಥವಾ ಹೆಸರನ್ನು ಗೊತ್ತುಮಾಡಿಕೊಂಡಿರುವಷ್ಟೆ. ಇಂತಹ ಸಂಕೇತ ಅಥವಾ ಮಾತುಗಳ ಸಮೂಹಕ್ಕೆ ಭಾಷೆಯೆಂದು ಹೆಸರು.[೨]

ಭಾಷೆಯ ಜೀವನವೆಂದರೆ ಆ ಭಾಷೆಯಲ್ಲಿರುವ ಎಲ್ಲ ಮಾತುಗಳ ಒಟ್ಟು ಶಕ್ತಿ ಮತ್ತು ಆ ಶಕ್ತಿಯ ಪ್ರವೃತ್ತಿ. ಪ್ರತಿಯೊಂದು ಮಾತಿಗೂ ಜೀವವೊಂದುಂಟು. ಕಣ್ಣು ಕಿವಿಗಳಿಗೆ

---

೧ ನನು ಶ್ರೋತ್ರಗ್ರಾಹ್ಯೋಽರ್ಥೋಹಿ ಶಬ್ದಃ । ಸ ಚ ಸಾಮಾನ್ಯತೋ ದ್ವೇಧಾ :- ಅಕ್ಷರಾತ್ಮಕೋಽನಕ್ಷರಾತ್ಮಕಶ್ಚೇತಿ । ತತ್ರ ಮೇಘಧ್ವನಿಸಮುದ್ರಘೋಷಾದೀನಾಮನಕ್ಷರಾತ್ಮಕಾ ನಾಮವಾಚಕತ್ವಾತ್ ಅನುಶಾಸನಾರ್ಹತ್ವೇಽಪಿ ಅಕ್ಷರಾತ್ಮಕಾಃ ಸಂಸ್ಕೃತಪ್ರಾಕೃತಾದಯೋ ವಾಚಕಾ ಅನುಶಾಸನಾರ್ಹಾ ಬಹವಃ ಸಂತಿ ॥

೨. ಭಾಷಾಃ ಸಂಕೇತವಶಾತ್ ಪದಾರ್ಥಗೋಚರಪ್ರವೃತ್ತಿನಿವೃತ್ತಿ ರೂಪವ್ಯವಹಾರೌಪಯಿಕ ವಾಗ್ವಿಶೇಷಾಃ.
— ಭಟ್ಟಾಕಲಂಕ

ತಿಳಿಯುವ ಅಕ್ಷರಗಳೇ ಅದರ ದೇಹ; ಮನೋಬುದ್ಧಿಗಳಿಗೆ ತಿಳಿದುಬರುವ ಭಾವ ಅಥವಾ ಅರ್ಥವೇ ಅದರ ಜೀವ. ಮನುಷ್ಯನಿಗೆ ಕಾಲಾನುಸಾರವಾಗಿ ದೇಹ ಜೀವಗಳೆರಡರಲ್ಲಿಯೂ ಕೆಲಕೆಲವು ಸಂಸ್ಕಾರಗಳಾಗುವಂತೆ ಮಾತಿಗೂ ಆಗುವವು. ಮನುಷ್ಯನಿಗೆ ಸಂಸ್ಕಾರಾನುರೂಪವಾದ ಸ್ವಭಾವವೆಂಬುದೊಂದು ಇರುವಂತೆ ಮಾತಿಗೂ ಇರುವುದು. ಮಾತುಗಳ ಸಂಸ್ಕಾರಸ್ವಭಾವ ಗಳನ್ನು ಸ್ಥೂಲವಾಗಿ ತಿಳಿಸಿಕೊಡುವುದೇ ವ್ಯಾಕರಣಾದಿ ಲಕ್ಷಣಶಾಸ್ತ್ರಗಳ ಕೆಲಸ. ಅವುಗಳನ್ನು ಸೂಕ್ಷ್ಮವಾಗಿಯೂ ತಿಳಿಯಬೇಕಾದರೆ ಮಹಾಕವಿಗಳ ಪ್ರಯೋಗಗಳನ್ನೂ ನೋಡಬೇಕು.

ನಾವು ಪ್ರತಿಯೊಬ್ಬ ಮನುಷ್ಯನ ವಿಷಯದಲ್ಲಿಯೂ ಹೇಗೆ ನಡೆದುಕೊಳ್ಳಬೇಕೆಂಬ ಮರ್ಯಾದೆಯೊಂದಿರುವುದಷ್ಟೆ. ಆ ಮರ್ಯಾದೆಯನ್ನು ನಾವು ಅನುಸರಿಸದಿದ್ದರೆ ನಮ್ಮ ನಡೆವಳಿಕೆಯು ಯಾರಿಂದ ಯಾವ ಕೆಲಸವನ್ನು ಮಾಡಿಸಬೇಕಾಗಿರುವುದೋ ಅವರಿಂದ ಆ ಕೆಲಸವನ್ನು ನಮ್ಮ ನಿರೀಕ್ಷಣೆಯಂತೆ ಮಾಡಿಸಲಾರದು. ಅದೇ ರೀತಿ ಭಾಷಾ ಮರ್ಯಾದೆ ಎಂಬುದೂ ಒಂದಿರುವುದು. ಅದು ಬಹುಕಾಲದಿಂದ ಮಾತುಗಳಿಗೆ ನಡೆದುಬಂದಿರುವ ಸಂಸ್ಕಾರದ ಫಲಿತಾಂಶ. ಅದು ಅನೇಕ ತಲೆಮೊರೆಗಳ ಗ್ರಂಥಲೇಖಕರು ಅಂಗೀಕರಿಸಿ ಅನುಸರಿಸಿದ ಪದ್ಧತಿ. ಅದರ ಬಾಹ್ಯವಿಧಿಗಳನ್ನೇ ವೈಯಾಕರಣರೂ ಲಾಕ್ಷಣಿಕರೂ ತಿಳಿಸಿಕೊಡಲು ಪ್ರಯತ್ನಿಸುವುದು. ಅದನ್ನು ನಾವು ಅನುಸರಿಸದಿದ್ದರೆ ನಮ್ಮ ಮಾತುಗಳಿಂದ ಯಾವ ಕೆಲಸ ಮಾಡಿಸಬೇಕೆಂದು ನಾವು ಉದ್ದೇಶಪಟ್ಟಿರುವೆವೋ ಆ ಕೆಲಸವನ್ನು ಅವು ಸರಿಯಾಗಿ ಮಾಡವು. ಕನ್ನಡದಲ್ಲಿ ಹೊಸ ಮಾತುಗಳನ್ನೂ ಹೊಸ ಪ್ರಯೋಗಗಳನ್ನೂ ಸೇರಿಸಬೇಕೆನ್ನುವವರು ಈ ತತ್ತ್ವವನ್ನು ಜ್ಞಾಪಕದಲ್ಲಿಡಬೇಕು. ಭಾಷಾ ಮರ್ಯಾದೆಯು ಕಲ್ಲಿನ ಗೋಡೆಯಂತೆ-ಕಬ್ಬಿಣದ ಕಟ್ಟಿನಂತೆ-ಎಂದೆಂದಿಗೂ ಒಂದೇ ರೀತಿ ಇರಲಾರದೆಂಬುದು ದಿಟ. ಮನುಷ್ಯನ ದೇಹಕ್ಕೂ ಜೀವಕ್ಕೂ ಹೇಗೆ ಯಾವಾಗಲೂ ಸಂಸ್ಕಾರಗಳು ನಡೆಯುತ್ತಿರುವುವೋ, ಅವನ ಭಾಷೆಗೂ ಹಾಗೆಯೇ ನಡೆಯುವುವು ಎಂದು ಮೇಲೆ ಹೇಳಿದೆ. ಈ ಸಂಸ್ಕಾರಗಳಲ್ಲಿ ಕೆಲವು ಸ್ವಾಭಾವಿಕವಾಗಿ ನಡೆಯತಕ್ಕವು; ಎಂದರೆ ಇವುಗಳನ್ನು ಯಾರೊಬ್ಬರೂ ಅದೇ ಪ್ರಯತ್ನದಿಂದ ಮಾಡಿಸುವುದಿಲ್ಲ. ಜನರು ಅನುಕೂಲ ಅವಸರಗಳಿಗೆ ತಕ್ಕಂತೆ ಅವರೇ ಯಾರಪ್ಪಣೆಯನ್ನೂ ಕೇಳದೆ, ಯಾರ ಉಪದೇಶವನ್ನೂ ಪಡೆಯದೆ, ಮಾತುಗಳ ರೂಪವನ್ನೂ ಅರ್ಥವನ್ನೂ ಸ್ವಲ್ಪಸ್ವಲ್ಪ ಬದಲಾಯಿಸುತ್ತ ಹೋಗುತ್ತಾರೆ. ಕನ್ನಡದಲ್ಲಿ "ತದ್ಭವ"ಗಳೂ ಅನ್ಯಭಾಷಾಪದಗಳೂ ರೂಢಿಗೆ ಬಂದುದು ಬಹುಶಃ ಹೀಗೆಯೇ. ಸಾಮಾನ್ಯ ಜನರಿಗೆ ಒಂದು ಬಗೆಯ ಕಾರ್ಯಾವಸರವಿದ್ದರೆ, ಮಹಾಕವಿಗೆ ಇನ್ನೊಂದು ಬಗೆಯ ಕಾರ್ಯಾವಸರವಿರುವುದು. ಆತನ ಮನಸ್ಸಿನಲ್ಲಿ ಹೊಸಹೊಸ ಸನ್ನಿವೇಶಗಳೂ ಹೊಸಹೊಸ ಭಾವಗಳೂ ತೋರಿದಂತೆ ಅವುಗಳನ್ನು ಬಣ್ಣಿಸಲು ಆತನಿಗೆ ಹೊಸಹೊಸ ಪದಗಳೂ, ಪದಸಮುಚ್ಚಯಗಳೂ ಅವಶ್ಯಕವಾಗುವುವು. ಈ ಅವಸರದಲ್ಲಿ ಆತನು ಮಾತುಗಳ ರೂಪವನ್ನು ಬದಲಾಯಿಸಿ, ಅವುಗಳನ್ನು ಹೊಸ ರೀತಿಯಲ್ಲಿ ಜೋಡಿಸುವನು. ಈ ರೀತಿ ಭಾಷೆಗೆ ಒಂದು ಪರಿಪಾಕವುಂಟಾಗುವುದು. ನಮ್ಮ ಷಟ್ಪದೀ ಕಾವ್ಯಗಳನ್ನು ಚಂಪೂ ಕಾವ್ಯಗಳೊಡನೆ ಹೋಲಿಸಿ ನೋಡಿದರೆ ಮಹಾಕವಿಗಳಿಂದ ಭಾಷೆಯ ರೂಪರೀತಿಗಳು ಹೇಗೆ ಮಾರ್ಪಡುವು ವೆಂಬುದನ್ನು ಚೆನ್ನಾಗಿ ತಿಳಿಯಲಾಗುವುದು. ಹಿಂದಿನ ಕವಿಗಳು ಬಹುಮಟ್ಟಿಗೆ ಪಂಡಿತ ರಾದವರಿಗಾಗಿ ಬರೆಯುತ್ತಿದ್ದರು; ಅವರಿಗೆ ಸಂಸ್ಕೃತ ಮಾರ್ಗಾವಲಂಬನೆಯೇ ಸಾಧುವೆಂದು

ತೋರಿತ್ತು; ಅವರು ಪ್ರೌಢರೀತಿಯಲ್ಲಿ ಚಂಪೂಗ್ರಂಥಗಳನ್ನು ಬರೆದರು. ಈಚಿನವರು ಜನಸಾಮಾನ್ಯಕ್ಕಾಗಿ ಕಾವ್ಯಗಳನ್ನು ಬರೆಯತೊಡಗಿದರು; ಅವರಿಗೆ ಸೌಲಭ್ಯ, ಧೋರಣೆ ಇವು ಮುಖ್ಯವಾಗಿದ್ದವು. ಆದಕಾರಣ ಅವರು ಸರಳವಾದ ಸಾಧಾರಣ ಶೈಲಿಯಲ್ಲಿ ಷಟ್ಪದಿಗಳನ್ನು ಬರೆದರು. ಹೀಗೆ, ಭಾಷೆಗೆ ಆಗಬೇಕಾದ ಸಂಸ್ಕಾರಸುಧಾರಣೆಗಳು ಜನಜನಿತವಾಗಿಯಾದರೂ ಬರಬಹುದು; ಇಲ್ಲದಿದ್ದರೆ ಮಹಾಕವಿಕೃತವಾಗಿಯಾದರೂ ಬರಬಹುದು. ಪಾಂಡಿತ್ಯವನ್ನು ಮಾತ್ರವೇ ಪಡೆದಿರುವ ಭಾಷಾಶೋಧಕರು ಇಂತಹ ಸುಧಾರಣೆಗಳನ್ನು ಮಾಡುವುದಕ್ಕೂ ಆಗುವುದಿಲ್ಲ; ತಡೆಯುವುದಕ್ಕೂ ಆಗುವುದಿಲ್ಲ. ಏಕೆಂದರೆ ಪಾಂಡಿತ್ಯವನ್ನು ಮಾತ್ರ ಸಂಪಾದಿಸಿ ಲೋಕ ಪರಿಚಯವನ್ನು ಸಂಪಾದಿಸದೆ ಇರುವವರಿಗೆ ಜನಸಾಮಾನ್ಯದ ಕಷ್ಟವೂ ಮಹಾಕವಿಯ ಕಷ್ಟವೂ ಗೊತ್ತಾಗಲಾರವು. ಜನಸಂಘದ ಮನಸ್ಸಿನ ಅವಸ್ಥೆ ಒಂದು ಬಗೆಯಾದುದು; ಕವಿಯ ಮನಸ್ಸಿನ ಅವಸ್ಥೆ ಒಂದು ಬಗೆಯಾದುದು. ಇವೆರಡನ್ನೂ ವ್ಯಾಕರಣಾದಿ ಶಾಸ್ತ್ರಗಳ ಮೂಲಕ ಅನುಭವ ಮಾಡಲಾಗುವುದಿಲ್ಲ. ಪ್ರಾಪಂಚಿಕ ವ್ಯವಹಾರದಲ್ಲಿ ಆಲೋಚನೆಯೂ, ಕವಿಸಹಜವಾದ ಪ್ರತಿಭೆಯೂ ಇವೆರಡೂ ಇಲ್ಲದ ಪಂಡಿತರಿಂದ ಭಾಷಾವಧುವಿಗೆ ಹೊಸ ಆಹಾರ ದೊರೆಯಲಾರದು.

ಪಂಡಿತರಿಂದಾಗಬೇಕಾದ ಉಪಕಾರ

ಆಹಾರವು ಹೇಗೆಯೋ ಔಷಧವೂ ಹಾಗೆಯೇ ಬೆಳವಣಿಗೆಗೆ ಅವಶ್ಯಕವಾದುದು. ಪಂಡಿತರು ಭಾಷೆಯ ಆರೋಗ್ಯವನ್ನು ಕಾಪಾಡುವ ವೈದ್ಯರಾಗಿರಬೇಕು[೩] ಕುಶಲನಾದ ವೈದ್ಯನು ರೋಗಿಯ ಶಾರೀರಪ್ರಕೃತಿಯನ್ನೂ ಮನೋಧರ್ಮವನ್ನೂ ಎರಡನ್ನೂ ಅರಿತು ಚಿಕಿತ್ಸೆಯನ್ನು ವಿಧಿಸುವನು. ಪಥ್ಯಪಾನಗಳನ್ನು ಗೊತ್ತುಮಾಡುವುದರಲ್ಲಿ ಕೂಡಿದಮಟ್ಟಿಗೂ ರೋಗಿಯ ಇಷ್ಟಾನಿಷ್ಟಗಳನ್ನೂ ಅನುಕೂಲ ಪ್ರತಿಕೂಲಗಳನ್ನೂ ತಿಳಿದುಕೊಂಡು ನಡೆಯುವನು. ಅಲ್ಲದೆ ಆತನು ರೋಗವು ಹುಟ್ಟಿದ ಬಳಿಕ ವೈದ್ಯಶಾಸ್ತ್ರವು ಹುಟ್ಟಿತೆಂಬುದನ್ನೂ, ರೋಗಿಗಾಗಿ ಶಾಸ್ತ್ರವೇ ಹೊರತು ಶಾಸ್ತ್ರಕ್ಕಾಗಿ ರೋಗಿಯಲ್ಲವೆಂಬುದನ್ನೂ ಮರೆಯನು. ಅದೇ ರೀತಿ ಯಾವ ಪಂಡಿತರು ಸಾಮಾನ್ಯ ಜನರ ಜೀವನಕಾರ್ಯಗಳಿಗೆ ಬೇಕಾಗುವ ಶಬ್ದಸಂಕೇತಗಳ ರೀತಿಯನ್ನೂ, ಕವಿಗಳ ಮನೋಗತಿಗೆ ಬೇಕಾಗುವ ವಚನಸಂಪತ್ತನ್ನೂ ತತ್ತದ್ಭಾವಾನುಸಂಧಾನದಿಂದ ತಿಳಿದುಕೊಳ್ಳುವರೋ, ಯಾರು ಭಾಷೆಯು ಮೊದಲಿದ್ದು ವ್ಯಾಕರಣಾದಿ ಶಾಸ್ತ್ರಗಳು ಆಮೇಲೆ ಹುಟ್ಟಿದುವೆಂಬುದನ್ನೂ, ಲೋಕಕ್ಕಾಗಿ ತಮ್ಮ ಶಾಸ್ತ್ರವು ನಿರ್ಮಿತವಾದುದೇ ಹೊರತು ತಮ್ಮ ಶಾಸ್ತ್ರಕ್ಕಾಗಿ ಲೋಕವು ನಿರ್ಮಿತವಾಗಿಲ್ಲವೆಂಬುದನ್ನೂ ಮರೆಯರೋ, ಅಂತಹ ಪಂಡಿತರು ಭಾಷೆಗೆ ಸರ್ವಥಾ ಉಪಕಾರಿಗಳೇ. ಪಂಡಿತರು ಜನಸಾಮಾನ್ಯದಲ್ಲಿಯೂ, ನೂತನ ಕವಿಗಳಲ್ಲಿಯೂ ಸಹಾನುಭೂತಿಯುಳ್ಳವರಾಗಿರಬೇಕು. ಅವರಿಂದ ನಾವು ಇದನ್ನು ಅಪೇಕ್ಷಿಸತಕ್ಕವರೇ ಹೊರತು, ಪಂಡಿತರಿಂದ ಪ್ರಯೋಜನವೇ ಇಲ್ಲವೆಂದು ಹೇಳತಕ್ಕವರಲ್ಲ. ಮನುಷ್ಯರ ನಡೆವಳಿಕೆಯಲ್ಲಿ ಸ್ವಾತಂತ್ರ್ಯವೂ ಇರಬೇಕು; ಮರ್ಯಾದೆಯೂ ಇರಬೇಕು. ಮರ್ಯಾದೆ ಮೀರಿದ ಸ್ವಾತಂತ್ರ್ಯವು ಧೃಷ್ಟತನವಾಗುವುದು; ಸ್ವಾತಂತ್ರ್ಯವಿಲ್ಲದ ಮರ್ಯಾದೆಯು ದಾಸತ್ವವಾಗುವುದು. ಭಾಷೆಗೂ ಹಾಗೆಯೇ

೩. 'ಸರ್ವವಿದ್ಯಾನಾಂ ಪ್ರದೀಪಭೂತಂವಾಙ್ಮಲಾನಾಂ ಚಿಕಿತ್ಸಿತರೂಪಂ ಪ್ರಸಿದ್ಧ್ಯರ್ಥನಿರ್ಣಯ ತತ್ತ್ವಜ್ಞಾನದ್ವಾರಾ ನಿಶ್ರೇಯಸಸಾಧನಂ ಚ ನಾಪರಂ ಲೋಕೇ ವ್ಯಾಕರಣಾದಿತ್ಯಾಕಲಯ್ಯ" –ಭಟ್ಟಾಕಲಂಕ

ಸ್ವಾತಂತ್ರ್ಯ ಮರ್ಯಾದೆಗಳೆರಡೂ ಬೇಕು. ಇವುಗಳಲ್ಲಿ ಮೊದಲನೆಯದು ಮಹಾಜನ ಮಹಾಕವಿಗಳಿಂದುಂಟಾಗುತ್ತಿರುವುದು. ಎರಡನೆಯದು ವೈಯಾಕರಣಿ ಲಾಕ್ಷಣಿಕರಿಂದ ಉಂಟಾಗುವುದು.

ನೀರು ಹಳ್ಳದಲ್ಲಿ ನಿಂತರೆ ಕೊಳೆಯಾಗಿ, ನಾರುತ್ತ, ಯಾವ ಕೆಲಸಕ್ಕೂ ಆಗದೆ ಇರುವುದು; ದಡ ಮೀರಿ ಹರಿದರೆ ಎಲ್ಲ ವಸ್ತುಗಳನ್ನೂ ಎತ್ತಿಕೊಂಡು ಹೋಗಿ ಹಾಳು ಮಾಡುವುದು; ದಡದೊಳಗೆ ಹರಿದರೆ ಜೀವರಾಶಿಗಳಿಗೂ ತೋಟಗದ್ದೆಗಳಿಗೂ ಉಪಯೋಗವಾಗುವುದು. ಭಾಷೆಯು ಹಳ್ಳದ ನೀರಿನಂತೆ ನಿಂತಿರಬಾರದು; ಕಟ್ಟೆಯೊಡೆದ ಕೆರೆಯ ನೀರಿನಂತೆ ನುಗ್ಗಬಾರದು; ಕಾಲುವೆಯೊಳಗಿನ ನೀರಿನಂತೆ ಹರಿಯಬೇಕು. ವ್ಯಾಕರಣಾದಿ ಶಾಸ್ತ್ರಗಳು ಕಾಲುವೆಯ ದಡಗಳಂತೆ; ದಡಗಳು ಹರಿಯುವ ನೀರಿನ ಪಕ್ಕಗಳಲ್ಲಿರುವುದು ಬಿಟ್ಟು ಅಡ್ಡವಾಗಿ ನಿಂತರೆ ಅವುಗಳಿಗೆ ಅಪಾಯ, ಇತರರಿಗೆ ನಷ್ಟ. ಪಂಡಿತರಿಗೆ ಇದೇ ನಮ್ಮ ವಿಜ್ಞಾಪನೆ. ಭಾಷೆಯು "ಸಲಿಲ" ಸದೃಶವಾದುದು; ಅದರ ಮೂಲವು ಪರಮೇಶ್ವರನಲ್ಲಿ-"ಪರಮೇ ವ್ಯೋರ್ಮ"- ಎಂದು ಮೇಲಿನ ವೇದಮಂತ್ರವೇ ಹೇಳಿದೆ. ಅದರ ಮಹಾಪ್ರವಾಹವು ಜನಪದ ಜೀವಿತ ಪ್ರವಾಹದಂತೆ ಬಹುಮುಖವಾಗಿ ಅತಿ ರಭಸದಿಂದ ಓಡುತ್ತಿರುವುದು. ಅದನ್ನು ತಡೆಯಲಾಗದು; ತಿದ್ದಿಲಾದೀತು.

ಭಾಷೆಯ ಜೀವಾಳ-ಧ್ವನಿ

ಮನುಷ್ಯನಿಗಿರುವಂತೆ ಮಾತಿಗೂ ಒಂದು ಸ್ವಭಾವ ಅಥವಾ "ಮರ್ಜಿ" ಉಂಟೆಂದು ಸೂಚಿಸಿರುವೆವಷ್ಟೆ. ಈ "ಮರ್ಜಿ"ಯನ್ನು ತಿಳಿದು ಮಾತುಗಳನ್ನು ಹೊಂದಿಸಿರುವುದೇ ಒಳ್ಳೆಯ ಬರೆವಣಿಗೆಯ ಗುರುತು. ಯಾವ ಮನುಷ್ಯನ "ಮರ್ಜಿ"ಯನ್ನು ಎಂದರೆ ಶೀಲ ಸ್ವಭಾವಗಳನ್ನೂ, ಯೋಗ್ಯತಾ ಯೋಗ್ಯತೆಗಳನ್ನೂ ನಾವು ಕಂಡಿಲ್ಲವೋ ಅಂತಹವನಿಂದ ನಾವು ತಕ್ಕ ಉಪಯೋಗವನ್ನು ಪಡೆಯಲಾರೆವು. ಮಾತುಗಳ ಸಮಾಚಾರವೂ ಅಷ್ಟೇ. ಮಾತುಗಳ ಶೀಲಸ್ವಭಾವಗಳನ್ನೂ ಯೋಗ್ಯತಾ ಯೋಗ್ಯತೆಗಳನ್ನೂ ಸೂಕ್ಷ್ಮವಾಗಿ ಹೇಳಿಕೊಡತಕ್ಕವರು ಕವಿಗಳು. ನಿಘಂಟುಗಳಲ್ಲಿ ಮಾತಿನ ಅರ್ಥವು ಸ್ಥೂಲವಾಗಿ ದೊರೆಯುವುದು. ಆದರೆ ಶೀಲಸ್ವಭಾವಗಳೆನ್ನುವುವು ಸೂಕ್ಷ್ಮಾಂಶಗಳು. ಅವುಗಳನ್ನು ಕವಿಪ್ರಯೋಗಗಳಿಂದಲೇ ಕಂಡುಕೊಳ್ಳಬೇಕು. ಕೈಗೆ ಸಿಕ್ಕುವ ಹುವ್ವಿನಲ್ಲಿ ಕೈಗೆ ಸಿಕ್ಕದ ವಾಸನೆಯೊಂದಿರುವಂತೆ, ಫೋಟೋ ಯಂತ್ರಕ್ಕೆ ಸಿಕ್ಕುವ ಆಕೃತಿಯುಳ್ಳ ಮನುಷ್ಯನಲ್ಲಿ ಫೋಟೋ ಯಂತ್ರಕ್ಕೆ ಸಿಕ್ಕದ ಮನೋಬುದ್ಧಿಗಳು ಇರುವಂತೆ,- -ವ್ಯಾಕರಣ ನಿಘಂಟುಗಳಿಗೆ ಸಿಕ್ಕುವ ಮಾತುಗಳಲ್ಲಿ ವ್ಯಾಕರಣ ನಿಘಂಟುಗಳಿಂದ ಚೆನ್ನಾಗಿ ವಿವರಿಸಲಾಗದ ಭಾವವಿಶೇಷಗಳಿರುವುವು. ಅರ್ಥ, ಧ್ವನಿ, ವ್ಯಂಜನಶಕ್ತಿ, ಸೂಚಕ ಶಕ್ತಿ ಎಂಬಿವೇ ಮೊದಲಾದ ಅನೇಕ ಹೆಸರುಗಳುಳ್ಳ ಆ ಭಾವವಿಶೇಷಗಳನ್ನು ಮಾತಿನ ಅಂತರಂಗವೆನ್ನಬಹುದು. ಮಹಾಕವಿಯಾದವನು ಹಿಂದಿನ ಕವಿಗಳ ಪ್ರಯೋಗಗಳಿಂದ ಒಂದು ಮಾತಿನ ಅಂತರಂಗ ಧರ್ಮವನ್ನರಿತು ಅದೇ ಮಾತನ್ನು ಬೇರೊಂದು ಬಗೆಯಾಗಿ ಉಪಯೋಗಿಸಿ, ಅದುವರೆಗೂ ಗುಟ್ಟಾಗಿ ಆ ಮಾತಿನಲ್ಲಡಗಿಕೊಂಡಿದ್ದ ಒಂದು ಗುಣವನ್ನು ಹೊಸದಾಗಿ ಪ್ರಕಾಶಕ್ಕೆ ತರಬಹುದು. ವೈಣಿಕನು ವಿಧವಿಧವಾಗಿ ತಂತಿಗಳನ್ನು ಮೀಟಿ ವಿಧವಿಧವಾದ ಸ್ವರಸಂಯೋಜನೆಗಳಿಂದ ವಿಧವಿಧವಾದ ರಾಗಮರ್ಮಗಳನ್ನು ಹೊರಕ್ಕೆ ತರುವಂತೆ ಕವಿಯಾದವನು ಬಗೆಬಗೆಯ

ಸಂದರ್ಭಗಳಲ್ಲಿ ಬಗೆಬಗೆಯಾಗಿ ಪದಸಂಯೋಜನೆಗಳನ್ನು ಮಾಡಿ ಬಗೆಬಗೆಯ ಶಬ್ದಮರ್ಮಗಳನ್ನು ಹೊರಪಡಿಸುವನು. ಶಬ್ದದಲ್ಲಿ ಗೂಢವಾಗಿರುವ ಶಕ್ತಿವಿಶೇಷಗಳು ಅವನು ಮಾಡುವ ಪರೀಕ್ಷಾ ಪ್ರಯೋಗಗಳಲ್ಲಿ ಹೊರಕ್ಕೆ ಕಾಣಿಸಿಕೊಳ್ಳುವುವು. ಈ ರೀತಿ ಕಾಲಕ್ರಮದಲ್ಲಿ ಮಾತುಗಳ ಶೀಲ ಸ್ವಭಾವಗಳು ಬೆಳೆಯುತ್ತಲೂ, ಮಾರ್ಪಾಡುತ್ತಲೂ ಇರುವುವು. ಆದರೆ ಈ ಬೆಳೆವಣಿಗೆ ಮಾರ್ಪಾಟುಗಳಿಗೆ ಹಿಂದಿನಿಂದ ಬಂದ ಶೀಲ ಸ್ವಭಾವ ವಿಷಯಕ ಜ್ಞಾನವೇ ಆಧಾರವೆಂಬುದನ್ನು ಮರೆಯಬಾರದು. ಎಂತಹ ಕವಿಯಾದರೂ ಹಿಂದಿನಿಂದ ಬಂದ ಭಾಷಾ ಸಂಪ್ರದಾಯವನ್ನು ತಳಹದಿಯಾಗಿಟ್ಟುಕೊಂಡು ಅದರ ಮೇಲೆ ತನ್ನ ಕಟ್ಟಡವನ್ನು ಕಟ್ಟುವನೇ ಹೊರತು ತಾನೇ ಹೊಸದಾಗಿ ತಳಹದಿ ಹಾಕಿ ಕಟ್ಟುವುದಿಲ್ಲ. ಹಾಗೆ ತಾನೆ ಎಲ್ಲವನ್ನೂ ತಳದಿಂದ ಹೊಸದಾಗಿ ಕಟ್ಟುವುದಾದರೆ ಅವನ ಭಾಷೆಯೇ ಬೇರೆಯಾಗುವುದು. ಪಂಪ, ಷಡಕ್ಷರಿ, ಲಕ್ಷ್ಮೀಶ, ಪುರಂದರ,--ಇವರಲ್ಲಿ ಒಬ್ಬೊಬ್ಬರು ಒಂದೊಂದು ಸಂಪ್ರದಾಯವನ್ನು ಎಲ್ಲ ಭಾಗಗಳಲ್ಲಿಯೂ ಹೊಸದಾಗಿ ಕಲ್ಪನೆ ಮಾಡಿಕೊಂಡಿದ್ದಿದ್ದರೆ ಅವರೆಲ್ಲರೂ ಒಂದೇ ಭಾಷೆಯ ಕವಿಗಳೆನ್ನಿಸಿಕೊಳ್ಳುತ್ತಿರಲಿಲ್ಲ. ಒಬ್ಬೊಬ್ಬರದು ಒಂದೊಂದು ಪ್ರತ್ಯೇಕವಾದ ನೂತನಭಾಷೆ ಅಥವಾ ಉಪಭಾಷೆ (Dialect) ಆಗುತ್ತಿತ್ತು. ವಸ್ತುತಃ ಅವರೆಲ್ಲರೂ ಒಂದೇ ಕನ್ನಡದವರೇ. ಅವರ ಕೃತಿಗಳು ಕೆಲವು ಭಾಗಗಳಲ್ಲಿ ಮಾತ್ರ ಬೇರೆಬೇರೆ ಹೊಸ ಸಂಪ್ರದಾಯಗಳನ್ನು ಕಲ್ಪಿಸಿದವು. ಬಹುಭಾಗಗಳಲ್ಲಿ ಅವರು ಪುರಾತನ ಪದ್ಧತಿಯನ್ನೇ ಅಂಗೀಕರಿಸಿದ್ದರು. ಈ ಜಿಜ್ಞಾಸದ ಸಾರಾಂಶವೇನೆಂದರೆ:--ಇರತಕ್ಕ ಶಬ್ದಗಳ ಪ್ರಾಚೀನಾರ್ಥ ಅಥವಾ ಭಾವಗಳೇ ಭಾಷೆಯ ಮೂಲಧನ. ಅವು ಶಬ್ದದ ಮೂಲವನ್ನೇ ಅನುಸರಿಸಿರಬೇಕೆಂಬುದೇನೂ ಇಲ್ಲ. ಬಹುದಿನದ ವಾಡಿಕೆಯಿಂದಲೂ ಅವು ಉಂಟಾಗುತ್ತವೆ. ಈ ಬಗೆಯ ಶಬ್ದಾರ್ಥ ಅಥವಾ ಶಬ್ದ ಭಾವಕ್ಕೆ ಲಾಕ್ಷಣಿಕರು "ಧ್ವನಿ" ಎಂದು ಹೆಸರಿಟ್ಟಿರುವರು. ಈ "ಧ್ವನಿ" ಎಂಬುದನ್ನು ಸಾಹಿತ್ಯವಿದ್ಯಾರ್ಥಿಗಳೆಲ್ಲರೂ ತಿಳಿದುಕೊಳ್ಳುವುದು ಅವಶ್ಯಕ; ಏಕೆಂದರೆ "ಧ್ವನಿ"ಯೇ ಕಾವ್ಯದ ಮುಖ್ಯ ಶಕ್ತಿ. ಒಂದು ಪದದ ಔಚಿತ್ಯ ಅಥವಾ ಅನೌಚಿತ್ಯವು ಅದರ 'ಧ್ವನಿ" ಗನುಸಾರವಾಗಿರುವುದು. ಉದಾಹರಣೆಗಾಗಿ:-

೧. "ನಿಂಬೆಯಹಣ್ಣಿನ ಪಾನಕದಿಂದ ಮೈಗೆ ತಂಪಾಗುತ್ತದೆ.
೨. "ರೋಗಿಗೆ ಕೈಕಾಲುಗಳು ತಣ್ಣಗಾಗಿವೆ."

ಈ ಎರಡು ವಾಕ್ಯಗಳಲ್ಲಿ ಒಂದೇ ಮಾತಿನ ಎರಡು ಬೇರೆ ಬೇರೆ ರೂಪಗಳು ಬೇರೆ ಬೇರೆ ಸಂದರ್ಭಗಳಲ್ಲಿ ಉಪಯುಕ್ತವಾಗಿವೆ. ಅವುಗಳನ್ನು "ಬದಲಾಬದಲಿ" ಮಾಡುವುದು ಉಚಿತವೆನಿಸದು. "ಪಾನಕದಿಂದ ಮೈ ತಂಪಾಗುತ್ತಿದೆ" ಎಂದೂ "ರೋಗಿಗೆ ಕೈಕಾಲುಗಳು ತಂಪಾಗಿವೆ" ಎಂದೂ ಹೇಳುವುದು ನೂತನ ಸಂಪ್ರದಾಯ ಪ್ರವರ್ತನೆಯಲ್ಲ; ಪುರಾತನ ಸಂಪ್ರದಾಯಹಾನಿ. ಬಹುದಿನದಿಂದ ಬಂದಿರುವ ಸಂಪ್ರದಾಯಕ್ಕೆ ಹೀಗೆ ಭಂಗತರುವುದಕ್ಕೆ ಯಾರಿಗೂ ಅಧಿಕಾರವಿಲ್ಲ. "ತಂಪು" "ತಣ್ಣಗೆ" ಎಂಬೆರಡು ಪದಗಳೂ ಒಂದೇ ಶಬ್ದದಿಂದ ಬಂದಿದ್ದರೂ ಅವೆರಡರ "ಧ್ವನಿ"ಗಳೂ ಬೇರೆ ಬೇರೆ. ಹೀಗೆಯೇ ಎಲ್ಲ ಮಾತುಗಳಿಗೂ "ಧ್ವನಿ" ಅಥವಾ "suggestion" ಎಂಬ ವ್ಯಂಜಕ ಶಕ್ತಿ ಅಥವಾ ಸೂಚಕ ಶಕ್ತಿಯುಂಟು.

ಈ ಧ್ವನಿಯೇ ಭಾಷೆಯ ಪರಮಭಾಗ್ಯ. ಈ ಭಾಗ್ಯವನ್ನು ಶಬ್ದಗಳು ಬಹುಕಾಲ ಕೆಲಸಮಾಡಿ ಅದರ ಪ್ರತಿಫಲವಾಗಿ ಪಡದುಕೊಂಡಿರುತ್ತವೆ.

ಅನೇಕ ಮಂದಿ ಮಹಾಕವಿಗಳು ಉತ್ತಮಗಳಾದ ಭಾವನೆಗಳನ್ನು ತಿಳಿಸಿ ಕೊಡುವುದಕ್ಕಾಗಿ ಉಪಯೋಗಿಸಿರುವ ಪ್ರಸಿದ್ಧ ಪದಗಳು ನಮ್ಮ ಕಿವಿಗೆ ಬಿದ್ದೊಡನೆಯೆ ನಿಘಂಟುವಿನಲ್ಲಿ ಕಾಣಬಾರದ ಕೆಲವು ಸಂದರ್ಭವಿಶೇಷಗಳು ಅವುಗಳಿಂದ ನಮ್ಮ ಮನಸ್ಸಿಗೆ ಸ್ಫುರಿಸುತ್ತವೆ. "ಆಶ್ರಮ" ಎಂಬ ಪದವು ಇಂತಹದು. ಉಚ್ಚಾರಣೆಯಾದ ಕೂಡಲೆ ಅದು ಒಂದು ಬಗೆಯ ಪವಿತ್ರ ಸನ್ನಿವೇಶವನ್ನು ನಮ್ಮ ಮನಶ್ಚಕ್ಷುಸ್ಸಿನ ಮುಂದೆ ತಂದು ನಿಲ್ಲಿಸುತ್ತದೆ. ಅದೇ ಬಗೆಯ ಸ್ಫೂರ್ತಿಯು ಅಷ್ಟು ಸಂಪೂರ್ಣವಾಗಿ ಮತ್ತಾವ ಒಂದು ಪದದಿಂದಲೂ ಆಗಲಾರದು; ಅನೇಕ ಪದಗಳಿಂದ ಆಗುವುದು ಕೂಡ ಕಷ್ಟವೇ. "ಋಷಿ" ಎಂಬ ಪದವೂ ಅಂತಹುದೇ. 'ಶಾಂತಿ' 'ಆನಂದ' ಎಂಬ ಪದಗಳೂ ಹಾಗೆಯೇ ಸರಿ; ಸುಮಾರಾಗಿ ಅದೇ ಭಾವವನ್ನು ಬೋಧಿಸುವ ಪದಗಳು ಎಷ್ಟೋಇವೆ; ಆದರೆ ವೇದಗಳಲ್ಲಿ ಪ್ರಯುಕ್ತಗಳಾಗಿರುವ ಈ ಪದ ಗಳಿಗಿರುವ ವ್ಯಂಜನ ಶಕ್ತಿ ಅಥವಾ ಧ್ವನಿಯು ಆ ಇತರ ಪದಗಳಿಗೆ ಅಷ್ಟು ಸಂಪೂರ್ಣ ವಾಗಿರುವುದೆಂದು ಹೇಳಲಾಗುವುದಿಲ್ಲ. ಆಲಂಕಾರಿಕ ಭಾಷೆ ಕೂಡ ಹೀಗೆಯೇ. "ಪಾದಕಮಲ" ವೆಂದು ಹೇಳುವಲ್ಲಿ, ಕಮಲವೆಂಬುದರಿಂದ ಬೋಧೆಯಾಗುವುದು ಅರುಣವರ್ಣಚ್ಛಾಯೆ ಯೊಂದು ಮಾತ್ರವೇ ಅಲ್ಲ; ಅದರೊಡನೆ ಸೌಕುಮಾರ್ಯ, ನೈರ್ಮಲ್ಯ, ಮಾಧುರ್ಯ ಮೊದಲಾಗಿ ವಿಶ್ವಾಸ ಗೌರವಗಳನ್ನು ಹುಟ್ಟಿಸತಕ್ಕ ಅನೇಕ ಗುಣಗಳು ತೋರುವುವು. ಈ ತೋರಿಕೆಗಳೇ ಮಾತಿನಲ್ಲಡಗಿರುವ ಸನ್ನಿವೇಶ ವಿಶೇಷ. ಅದನ್ನು ಇಂಗ್ಲಿಷಿನಲ್ಲಿ Atmosphere ಎನ್ನುತ್ತಾರೆ. ಒಂದು ಮಾತಿನಲ್ಲಿರತಕ್ಕ ಈ ವಿಶೇಷವು ಮತ್ತೊಂದು ಮಾತಿನಲ್ಲಿ ಅಷ್ಟು ಮಾತ್ರ ಇರಲಾರದು. ಗುರು ಹಿರಿಯರ ಪಾದಗಳನ್ನು ಕಮಲಕ್ಕಲ್ಲದಿದ್ದರೆ ಮತ್ತಾವ ಹುವ್ವಿಗೆ ಹೋಲಿಸ ಬಹುದು? ಹೇಳುವುದು ಸುಲಭವಲ್ಲ. ಹಾಗೆಯೇ "ಮಕರಂದ"ವೆಂಬ ಮಾತಿನಿಂದ ಉಂಟಾಗುವ ಭಾವನೆಯು "ಕಮಲದ ರಸ" ವೆಂಬುದರಿಂದ ಉಂಟಾದೀತೆ? ಈ ವಿಧವಾದ ಸನ್ನಿವೇಶ ಸೂಚಕ ಶಕ್ತಿಯು ಒಂದು ಮಾತಿಗೆ ಬರುವುದಕ್ಕೆ ಬಹುಕಾಲ ಹಿಡಿಯುತ್ತದೆ. ಅದಕ್ಕೆ ಅನೇಕ ಕವಿಗಳು ಅನುಗ್ರಹವೂ ಅನೇಕ ಮಂದಿ ರಸಜ್ಞರ ಸಮ್ಮತಿಯೂ ಬೇಕು. ಮನಸ್ಸಿಗೆ ತೋರಿದಂತೆ ಹೊಸ ಹೊಸ ಪದಗಳನ್ನು ರಚಿಸಿ ಬೇಗ ಬೇಗನೆ ಭಾಷೋದ್ಧಾರವನ್ನು ಮಾಡಬೇಕೆನ್ನುವ ಮಹಾಶಯರು ಈ ತತ್ವವನ್ನೂ ಜ್ಞಾಪಕದಲ್ಲಿಡಬೇಕು. ಇಂಗ್ಲಿಷಿನಲ್ಲಿ "Nation" (ನೇಷನ್) ಎಂಬ ಪದದಿಂದ ಮನಸ್ಸಿಗೆ ತೋರುವ ಭಾವನಾತಿಶಯಗಳೆಲ್ಲವು ಕನ್ನಡದಲ್ಲಿ "ಜನಪದ" ಎಂಬ ಮಾತಿನಿಂದ ತೋರಬೇಕಾದರೆ, ಈ ಮಾತು ನಮ್ಮೆಲ್ಲರ ಬಳಕೆಗೆ ಚೆನ್ನಾಗಿ ಬರಬೇಕು. ಹಾಗೆ ಬಳಕೆಗೆ ಬರಬೇಕಾದರೆ ಜಾನಪದ ಭಾವವೂ, ಜಾನಪದ ಸಮಾರಂಭಗಳೂ ನಮ್ಮಲ್ಲಿ ಹೆಚ್ಚಬೇಕು. ಇದಕ್ಕೆ ಕಾಲವು ಬೇಕು.

ಶಬ್ದ ಶಕ್ತಿಯನ್ನು, ಅದರ ಪ್ರವೃತ್ತಿಯನ್ನು, ಅದರ ವ್ಯಾಪನೆಯನ್ನೂ ಚೆನ್ನಾಗಿ ಕಂಡುಕೊಂಡು ಶಬ್ದಗಳನ್ನು ಹೊಂದಿಸಿ ಅವುಗಳ ಹಿಂದಿನ ಶೀಲಸ್ವಭಾವಗಳಿಗೆ ಹಾನಿಯಾಗದ ರೀತಿಯಲ್ಲಿ ಅವುಗಳಿಂದ ಹೊಸ ಹೊಸ ಭಾವನೆಗಳನ್ನು ವ್ಯಕ್ತಮಾಡಿಸುವವನೇ ಮಹಾಕವಿ;

ಶಬ್ದಸಂಯೋಜನೆಯ ರಹಸ್ಯವನ್ನು ಗ್ರಹಿಸಿ, ಅಂತಹವನ ಕಾವ್ಯಗಳನ್ನು ಓದುವವನೇ ರಸಿಕ; ಒಳ್ಳೆಯ ರಸಿಕನಿಗೆ ಒಳ್ಳೆಯ ಕವಿಯು ದೊರೆಯುವುದೂ, ಒಳ್ಳೆಯ ಕವಿಗೆ ಒಳ್ಳೆಯ ರಸಿಕನು ಸಿಕ್ಕುವುದೂ ಈ ಪ್ರಪಂಚದಲ್ಲಿ ನಡೆಯಬಹುದಾದ ಅತ್ಯಂತಾನಂದಾಸ್ಪದಗಳಾದ ಮಹೋತ್ಸವಗಳಲ್ಲಿ ಒಂದು. ಶ್ರುತಿಯೂ ಹೀಗೆಯೇ ಹೇಳುತ್ತದೆ.

"ಏಕಃ ಶಬ್ದಃ ಸುಪ್ರಯುಕ್ತಃ ಸಮ್ಯಗ್ ಜ್ಞಾತಃ ಸ್ವರ್ಗೇ ಲೋಕೇ ಕಾಮಧುಗ್ಭವತಿ"

ಭಾಷಾಂತರದ ಕಷ್ಟ

ಒಬ್ಬೊಬ್ಬ ಮನುಷ್ಯವ್ಯಕ್ತಿಗೆ ಒಂದೊಂದು ವಿಧದ ಶಕ್ತಿಸ್ವಭಾವಗಳೂ, ಒಂದೊಂದು ದೇಶ ಅಥವಾ ಜನಪದಕ್ಕೆ ಸಾಮುದಾಯಿಕವಾಗಿ ಒಂದೊಂದು ಬಗೆಯ ಬುದ್ಧಿಶಕ್ತಿ ಮನಃಪ್ರವೃತ್ತಿಗಳೂ ಹೇಗೆ ಇರುತ್ತವೆಯೋ, ನಾನಾ ಭಾಷೆಗಳಿಗೂ ಹಾಗೆಯೇ ಬೇರೆಬೇರೆಯಾದ ಗುಣಸ್ವಭಾವ ಪ್ರವೃತ್ತಿಗಳು ಇರುತ್ತವೆ. ಇವನ್ನೇ ಇಂಗ್ಲಿಷಿನಲ್ಲಿ The Genious of the Language (ಭಾಷೆಯ ವಿಶೇಷ ಧರ್ಮ) ಎನ್ನುತ್ತಾರೆ. ಒಂದೊಂದು ಭಾಷೆಗೆ ಒಂದೊಂದು ಬಗೆಯ ವಿಶೇಷ ಗುಣವಿಲ್ಲದೆ, ಎಲ್ಲ ಭಾಷೆಗಳ ಗುಣವೂ ಒಂದೇ ಆಗಿದ್ದಿದ್ದರೆ, ಒಂದು ಭಾಷೆಯ ಕಾವ್ಯವನ್ನು ಮತ್ತೊಂದು ಭಾಷೆಗೆ ಪರಿವರ್ತನೆ ಮಾಡುವುದು ಬಹು ಸುಲಭದ ಕೆಲಸವಾಗಿರುತ್ತಿತ್ತು. ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ತರ್ಜುಮೆಯಾಗಿರುವ ಯಾವ ಗ್ರಂಥವನ್ನು ನೋಡಿದರೂ, ಅದರಲ್ಲಿ ಮೂಲಗ್ರಂಥದ ಸ್ವಾರಸ್ಯವೆಲ್ಲವೂ ಕಂಡುಬರುವುದು ದುರ್ಲಭ. ಭಾಷಾಂತರ ಮಾಡುವುದು "ಪರಕಾಯ ಪ್ರವೇಶ" ಮಾಡಿಸುವ-ಮಾಡುವ ಅಲ್ಲ-ಮಾಡಿಸುವಷ್ಟು ಕಷ್ಟದ ಕೆಲಸ. ಪ್ರತಿಯೊಂದು ಜೀವಕ್ಕೂ ಅದರ ಪೂರ್ವ ಸಂಸ್ಕಾರಕ್ಕನುಗುಣವಾದ ದೇಹವಿರುವುದು; ದೇಹವು ಅದರ ಸಂಸ್ಕಾರಫಲದ ಒಂದು ಭಾಗ. ಇಂತಹ ದೇಹದಿಂದ ಅದನ್ನು ಬೇರೆ ಮಾಡುವುದು ಒಂದು ಕಷ್ಟ. ಬೆಂಕಿಯ ಕೆಂಡದಿಂದ ಅದರ ಔಷ್ಣ್ಯವನ್ನಾಗಲಿ ಅದರ ಪ್ರಕಾಶವನ್ನಾಗಲಿ ಬೇರೆ ತೆಗೆಯುವುದು ಎಷ್ಟು ಸುಲಭವೋ ದೇಹದಿಂದ ಜೀವವನ್ನು ಪ್ರತ್ಯೇಕಗೊಳಿಸುವುದು ಅಷ್ಟು ಸುಲಭ. ಹೇಗೋ ಒಂದು ರೀತಿ ಜೀವವನ್ನು ಬಲಾತ್ಕಾರದಿಂದ ಈಚೆಗೆ ಸೆಳೆದರೂ, ಅದನ್ನು ಮತ್ತಾವುದೋ ಒಂದು ದೇಹದೊಳಕ್ಕೆ ಪ್ರವೇಶಗೊಳಿಸುವುದು ಇನ್ನೊಂದು ಕಷ್ಟ. ಜೀವವು ಬಾವಿಯ ಹಗ್ಗದಂತಿರಬಹುದು. ದೇಹವು ಸೂಜಿಯ ಕಣ್ಣಿನಂತಿರಬಹುದು. ಹೇಗೋ ಒಂದು ರೀತಿ ನಿರ್ಬಂಧದಿಂದ ಹಳೆಯ ಜೀವವನ್ನು ಹೊಸದೇಹದಲ್ಲಿ ಸೇರಿಸಿದರೂ, ಅದು ತನ್ನ ಸ್ವಂತದೇಹದಲ್ಲಿ ಕೆಲಸ ಮಾಡುವಂತೆಲ್ಲ ತನ್ನದಲ್ಲದ ಹೊಸ ದೇಹದಲ್ಲಿ ಕೆಲಸ ಮಾಡಲಾಗುವುದೆ? ಕೆಲವು ಮಾತುಗಳನ್ನು ಭಾಷಾಂತರ ಮಾಡಲು ಆಗುವುದೇ ಇಲ್ಲ. "ಧರ್ಮ" ಎಂಬ ಸಂಸ್ಕೃತ ಪದಕ್ಕೆ ಸರಿಯಾದ ಪದವೊಂದು ಇನ್ನಾವ ಭಾಷೆಯಲ್ಲೂ ಇರುವಂತೆ ತೋರುವುದಿಲ್ಲ. ಇಂತಹ ಪದಗಳು ಇಂಗ್ಲಿಷಿನಲ್ಲಿಯೂ ಕೆಲವಿವೆ; ಫ್ರೆಂಚ್, ಜರ್ಮ್ ಭಾಷೆಗಳಲ್ಲಿಯೂ ಉಂಟೆಂದು ಹೇಳುವರು. ಇಂತಹ ಪದಗಳೇ ಭಾಷೆಯ ಜೀವದ ಅಧಿಷ್ಠಾನವೆನ್ನಬಹುದು. ಇಂತಹವುಗಳನ್ನು ಮೂಲಭಾಷೆಯಿಂದ ಅನ್ಯಭಾಷೆಗೆ ಪರಿವರ್ತಿಸುವುದಕ್ಕೆ ಎಷ್ಟು ಕಷ್ಟಪಟ್ಟರೂ ಅದು ಸಕ್ಕರೆಯ ಸವಿಯನ್ನು ಬೆಲ್ಲದ ಮೂಲಕ

ತಿಳಿಸಿಕೊಡುವ ಪ್ರಯತ್ನದಂತೆಯೇ; ತುಪ್ಪದ ರುಚಿಯನ್ನು ಒಳ್ಳೆಣ್ಣೆಯ ಮೂಲಕ ತಿಳಿಸಿಕೊಡುವ ಪ್ರಯತ್ನದಂತೆಯೇ.

ಭಾಷೆಯ ಮುಕ್ಕಾಲುಮಣೆ

ಮಾತಿನ ಗುಟ್ಟನ್ನೆಲ್ಲ ಕಂಡುಕೊಂಡು ಅದರಿಂದ ಹೊಸಹೊಸ ಕೆಲಸಗಳನ್ನು ಮಾಡಿಸುವುದೇ ಕವಿಯ ಚಮತ್ಕಾರ. ಚಿತ್ರಗಾರನು ಕೆಂಪು, ಕಪ್ಪು ಮೊದಲಾದ ಐದಾರು ದೊಡ್ಡ ಬಣ್ಣಗಳನ್ನಿಟ್ಟುಕೊಂಡು ಅವುಗಳನ್ನು ಪರಿಪರಿಯಾಗಿ ಕಲಸಿ ಪರಿಪರಿಯ ಹೊಸ ಛಾಯೆಗಳನ್ನು ನಿರ್ಮಿಸುವಂತೆ, ಕವಿಯು ಎಲ್ಲರಿಗೂ ಸಿಕ್ಕುವ ಕೆಲವು ಪದಗಳನ್ನು ಹೊಸ ರೀತಿಯಲ್ಲಿ ಸೇರಿಸಿ ಹೊಸಭಾವಗಳನ್ನು ಅಂತಶ್ಚಕ್ಷುಸ್ಸಿನ ಮುಂದೆ ತರುತ್ತಾನೆ. ಅವನ ಈ ಚಮತ್ಕಾರಕ್ಕೆ ಎರಡುಬಗೆಯ ಮಿತಿ ಅಥವಾ ತಡೆಕಟ್ಟುಗಳುಂಟು. ಮೊದಲನೆಯದು ಭಾಷೆಯ ಪ್ರಾಚೀನಪದ್ಧತಿ. ಅದನ್ನು ಮೇಲೆ ವಿವರಿಸಿರುವೆವು. ಎರಡನೆಯದು ವಿಷಯದ ಸ್ವಭಾವ. ಅವನು ಎಂತಹ ವಿಷಯವನ್ನು ಕುರಿತು ಬರೆಯ ಹೊರಡುವನೋ ಅವನ ಶೈಲಿಯು ಅದಕ್ಕನುಗುಣವಾಗಿರಬೇಕು. ಒಬ್ಬ ಬಡ ಕೂಲಿಗಾರನು ಗುಡಿಸಲು ಹಾಕಿಕೊಳ್ಳಲು ಮಾಡುವ ಪ್ರಯತ್ನವನ್ನು ವರ್ಣಿಸುವಾಗ ರಾಮನ ಸೇತುನಿರ್ಮಾಣವನ್ನು ವರ್ಣಿಸುವುದರಲ್ಲಿ ತೋರಬಹುದಾದ ಚಮತ್ಕಾರವನ್ನು ತೋರಲಾಗುವುದಿಲ್ಲ. "ಸರ್ಕೀಟು" ಹೋಗಿ ಬಂದ "ಸಾಹೇಬ"ರನ್ನು ಅವರ ಹೆಂಡತಿಯು ನೋಡಿದಾಗ ಅವರಿಗಾಗುವ ಭಾವಗಳನ್ನು ವರ್ಣಿಸುವುದರಲ್ಲಿ ನಳದಮಯಂತಿಯರ ಪುನಸ್ಸಮಾಗಮೋತ್ಸವ ವರ್ಣನೆಯಲ್ಲಿ ತೋರಬಹುದಾದ ಚಮತ್ಕಾರವನ್ನು ತೋರಲಾಗುವುದಿಲ್ಲ. ಕವಿಗೆ ಪೂರ್ವಕವಿಗಳು ಹಾಕಿದ ಸಂಪ್ರದಾಯದಿಂದ ಹೇಗೆ ಸೌಲಭ್ಯವಿರುವಂತೆ ನಿರ್ಬಂಧವೂ ಇರುವುದೋ, ಹಾಗೆಯೇ ತಾನು ತೆಗೆದುಕೊಳ್ಳುವ ವಿಷಯದಲ್ಲಿ ಒಂದು ಸೌಲಭ್ಯ ತೋರುವಂತೆ ಒಂದು ನಿರ್ಬಂಧವೂ ಉಂಟಾಗುವುದು. ಹೀಗೆಂದ ಮೇಲೆ, ಕವಿ ಅಥವಾ ಗ್ರಂಥಕರ್ತೃವೇ ವಿಶೇಷವಾಗಿ--ಎಂದರೆ ಸಾಮಾನ್ಯ ಜನಕ್ಕಿಂತ ಹೆಚ್ಚಾಗಿ--ಭಾಷೆಯನ್ನು ಬೆಳೆಯಿಸುವವನಾದ ಕಾರಣ, ಅವನು ಆರಿಸಿಕೊಳ್ಳುವ ವಿಷಯದ ಶಕ್ತಿಯಿಂದಲೂ ಭಾಷೆಯು ಮಾರ್ಪಡುತ್ತದೆ ಎಂದು ಹೇಳಬಹುದು. ಕಾವ್ಯವಿಷಯ ಅಥವಾ ಗ್ರಂಥವಿಷಯಕ್ಕೆ ತಕ್ಕಂತೆ ಭಾಷಾಸ್ವರೂಪವು ವ್ಯತ್ಯಾಸಹೊಂದುವುದು; ಕಾವ್ಯಗ್ರಂಥಗಳಿಗಾದರೋ ಜನರ ಜೀವನಕ್ಕೆ ಸಂಬಂಧಪಟ್ಟ ಎಲ್ಲ ಆಶೆಗಳೂ, ಎಲ್ಲ ಆಲೋಚನೆಗಳೂ, ಎಲ್ಲ ಕಾರ್ಯಗಳೂ, ಎಲ್ಲ ವ್ಯಾಪಾರಗಳೂ, ಎಲ್ಲ ಆಚಾರಗಳೂ, ಎಲ್ಲ ವಿಚಾರಗಳೂ ವಿಷಯಗಳಾಗುವುವು. ಹೀಗಾದಮೇಲೆ ಜನಜೀವನದ ಲಕ್ಷಣ ವಿಲಕ್ಷಣಗಳೇ ಭಾಷಾಸ್ಥಿತಿಯಲ್ಲಿ ಪ್ರತಿಬಿಂಬಿಸುತ್ತವೆ ಎಂಬ ನಮ್ಮ ಹಿಂದಿನ ಸಿದ್ಧಾಂತವನ್ನೇ ಈಗ ಪುನಃ ಸ್ಥಾಪಿಸಿದಂತಾಯಿತು.[೪] ಭಾಷೆಯನ್ನು ಶ್ರುತಿಯ ಸಮುದ್ರಗಳಿಗೆ ಹೋಲಿಸಿದೆ. ಇದಕ್ಕೆ ಕಾರಣವೇನಿರಬಹುದೆಂದರೆ ಭಾಷೆಗೆ ಮೂಲವಾದ ಜನಜೀವನವು ಸಮುದ್ರದಂತೆ ವಿಸ್ತಾರವಾಗಿಯೂ ಅಗಾಧವಾಗಿಯೂ ಎಡೆಬಿಡದೆ ಮತ್ತು ತಡೆಯಲಾಗದ ಅಲೆಗಳಿಂದ ತುಂಬಿದುದಾಗಿಯೂ ಇರುವುದೇ. ಇಂತಹ ಭಾಷೆಯ ಬೆಳೆವಣಿಗೆಯ ರೀತಿಯನ್ನು ನಿರ್ಧಾರ ಮಾಡಬಲ್ಲ ಕಾರಣಗಳು ಮುಖ್ಯವಾಗಿ ಎರಡು:-

೪. ಈ ಸಂದರ್ಭದಲ್ಲಿ ವಾಚಕರು ಈ ಲೇಖಕನ "ಸಾಹಿತ್ಯ ಮತ್ತು ಜನಜೀವನ" ಎಂಬ ಉಪನ್ಯಾಸವನ್ನು ನೋಡಬಹುದು.

೧. ಜನರ ವ್ಯವಹಾರಕ್ಕೆ ಬೇಕಾದ ಹೊಸ ವಿಷಯ ಅಥವಾ ವಸ್ತುಗಳು.

೨. ಆ ವಿಷಯಗಳನ್ನು ಕುರಿತು ಬರೆಯತಕ್ಕವರಿಗಿರುವ ವಾಕ್ಯರಚನಾ ಚಾತುರ್ಯ.

ಅಥವಾ ಭಾಷಾಭಿವೃದ್ಧಿಯೆಂಬ ಸಂಗತಿಯು ಒಂದು ಮುಕ್ಕಾಲು ಮಣೆಯ ಮೇಲೆ ಕುಳಿತಂತಿದೆ ಎಂದು ಹೇಳಬಹುದು.

೧. ಭಾಷೆಯ ಸಂಪ್ರದಾಯ.

೨. ನೂತನ ಗ್ರಂಥವಿಷಯ.

೩. ನೂತನ ಗ್ರಂಥಲೇಖಕರ ಶಕ್ತಿಯುಕ್ತಿಗಳು.

ಈ ಮೂರು ಆ ಮಣೆಯ ಕಾಲುಗಳು. ಇವುಗಳಲ್ಲಿ ಎರಡನೆಯದನ್ನು ಕುರಿತು ಇನ್ನೂ ಕೆಲವು ಮಾತುಗಳನ್ನು ಇಲ್ಲಿ ಹೇಳಬಹುದಾಗಿದೆ.

ಕನ್ನಡವು ಅನುಸರಿಸಬೇಕಾದುದು ಸಂಸ್ಕೃತವನ್ನೆ ಇಂಗ್ಲಿಷನ್ನೆ?

ಕನ್ನಡದ ಬೆಳವಣಿಗೆಯು ಹಿಂದೆ ಇದ್ದಂತೆ ಇನ್ನು ಮುಂದೆಯೂ ಸಂಸ್ಕೃತ ಮಾರ್ಗಾನುಸಾರವಾಗಿ ಆಗಬೇಕೆ? ಅಥವಾ ಇಂಗ್ಲಿಷ್ ಮೊದಲಾದ ಬಹುಜನ ವ್ಯವಹಾರದ ಭಾಷೆಗಳ ರೀತಿಯಲ್ಲಿ ಆಗಬೇಕೆ? ಹಿಂದೆ ಕನ್ನಡಕ್ಕಾಗಿ ವ್ಯಾಕರಣಾದಿ ಲಕ್ಷಣ ಗ್ರಂಥಗಳನ್ನು ಬರೆದವರು ಅಸಂಸ್ಕೃತಭಾಷೆಯು ಕೂಡಿದ ಮಟ್ಟಿಗೂ ಸಂಸ್ಕೃತ ಭಾಷೆಯನ್ನೇ ಅನುಸರಿಸುವುದು ಒಳ್ಳೆಯದೆಂದು ತಿಳಿದಿದ್ದರು. ಅವರು ಏರ್ಪಡಿಸಿದ ವಿಧಿನಿಯಮಗಳಲ್ಲಿ ಸಂಸ್ಕೃತವು ಗ್ರಂಥಸ್ಥವಾದ ಭಾಷೆ. ಕನ್ನಡವು ಸಾಮಾನ್ಯ ಜನರ ಬಾಯಿಗೆ ಸಿಕ್ಕಿದ ಭಾಷೆ. ಪಂಡಿತ ಮಾತ್ರ ಪ್ರಯುಕ್ತವಾದ ಭಾಷೆಯು ಸಂಸ್ಕೃತವಾಗಿರುವುದು ಸಾಧ್ಯ. ಪಾಮರ ಬಾಹುಳ್ಯವುಳ್ಳ ಮಹಾಜನ ಸಮುದಾಯದ ಭಾಷೆಯು ಸಂಸ್ಕೃತವಾಗುವುದು ಅಸಾಧ್ಯ. ಈ ಕಾರಣದಿಂದ ಕನ್ನಡಕ್ಕಾಗಿ ಒಂದು ಕಾಲದಲ್ಲಿ ಏರ್ಪಾಟಾಗಿದ್ದ ನಿಯಮ ನಿಬಂಧನೆಗಳು ಮತ್ತೊಂದು ಕಾಲದಲ್ಲಿ ಸ್ವಲ್ಪಮಟ್ಟಿಗಾದರೂ ಸಡಿಲವಾಗಲೇಬೇಕಾಯಿತು. ನೃಪತುಂಗನ ಕಾಲದವರೇ ಕೆಲವು ಬದಲಾವಣೆಗಳನ್ನು ಮಾಡಿದ್ದರು. ಕೇಶಿರಾಜನ ಕಾಲದಲ್ಲಿ ಇನ್ನು ಕೆಲವು ನಿರ್ಬಂಧಗಳು ಕಡಿಮೆಯಾದುವು. ಭಟ್ಟಾಕಳಂಕನ ಕಾಲದಲ್ಲಿ ಮತ್ತೆ ಕೆಲವು ಹೋದುವು. ಈಗ ಕನ್ನಡ ವ್ಯಾಕರಣವು[೫] ಪುನಃ ನಮ್ಮ ಕಾಲಕ್ಕೆ ತಕ್ಕಂತೆ ತಿದ್ದುಪಾಟಿಗೆ ಬರಬೇಕಾಗಿದೆ. ಸಂಸ್ಕೃತವು ಬೆಳೆಯುತ್ತಿರುವ ಭಾಷೆಯಲ್ಲ; ಅದು ಪರಿಪೂರ್ಣಸ್ಥಿತಿಗೆ ಬಂದು-ಎಂದರೆ, ಅದರ ಬೆಳವಣಿಗೆ ನಿಂತುಹೋಗಿ ಎಷ್ಟೋ ಕಾಲವಾಯಿತು; ಆದಕಾರಣ ಅದರ ವ್ಯಾಕರಣವು ಬದಲಾಯಿಸತಕ್ಕುದಲ್ಲ. ಕನ್ನಡವು ಬೆಳೆಯುತ್ತಿರುವ ಭಾಷೆ-ಇನ್ನೂ ಬೆಳೆಯಬೇಕಾಗಿರುವ ಭಾಷೆ. ಆದಕಾರಣ ಇದರ ವ್ಯಾಕರಣವು ಆಗಾಗ ಬೆಳೆಯುತ್ತ, ಬದಲಾಯಿಸುತ್ತ ಇರಬೇಕು. ಸಮಸ್ತ ಭಾಷೆಗಳಿಗೂ ಭಗವದ್ವಾಣಿಯೊಂದರ ರೂಪಾಂತರಗಳೇ ಎಂಬ ವೇದವಚನ ಭಟ್ಟಾಕಳಂಕವಚನಗಳನ್ನು ನೋಡಿದರೆ, ಕನ್ನಡದಲ್ಲಿ ದೈವಾನುಗ್ರಹವಿಲ್ಲದೆ ಇಲ್ಲವೆಂದೂ, ಕನ್ನಡವು ಸ್ವತಂತ್ರವಾಗಿ ಬೆಳೆಯಲು ಅನರ್ಹವಾದುದಲ್ಲವೆಂದೂ ಚೆನ್ನಾಗಿ ತೋರಿಬರುವುದು. ಭಟ್ಟಾಕಳಂಕನು ಗೀರ್ವಾಣ ಭಾಷೆಯಲ್ಲಿ ಕನ್ನಡ ವ್ಯಾಕರಣವನ್ನು ಬರೆದುದು ಸ್ವಭಾಷೆಯ ಮೇಲ್ಮೆಯನ್ನು ತೋರಿ ಅದರ ಕೀರ್ತಿಪ್ರಶಸ್ತಿಗಳನ್ನು

೫. ಈ ಅಭಿಪ್ರಾಯವನ್ನು ದಾವಣಗೆರೆಯಲ್ಲಿ ನಡೆದ ಕರ್ಣಾಟಕ ಸಾಹಿತ್ಯ ಸಮ್ಮೇಳನವು ಅಂಗೀಕರಿಸಿದೆ.

ಹೆಚ್ಚಿಸಬೇಕೆಂಬ ಅಭಿಮಾನದಿಂದಲೇ ಹೊರತು, ತನ್ನ ಭಾಷೆಯು ಸಂಸ್ಕೃತಕ್ಕೆ ಅನುಚರನಂತೆ ಮಾತ್ರ ಇರಲು ತಕ್ಕುದೆಂದು ತೋರಿಸಿ ಅದನ್ನು ಹೀಯಾಳಿಸುವುದಕ್ಕಲ್ಲ. ವೇದವಾಕ್ಯಗಳನ್ನು ನೋಡಿದರೂ ಭಾಷಾಚರಿತ್ರೆಯನ್ನು ನೋಡಿದರೂ, ಬೆಳೆದು ಬದಲಾಯಿಸುತ್ತಿರುವುದೇ ಕನ್ನಡದ ಸ್ವಭಾವವಾಗಿರಬೇಕೆಂದು ಊಹ್ಯವಾಗುತ್ತದೆ. ಪ್ರಪಂಚದಲ್ಲಿ ಬಳಕೆಯಲ್ಲಿರುವ ಇತರ ಭಾಷೆಗಳನ್ನು ನೋಡಿದರೂ ಕನ್ನಡವು ಅವುಗಳಂತೆಯೇ ಸ್ವತಂತ್ರವಾಗಿ ಬದುಕಲು ಯತ್ನಿಸುವುದೇ ಉಚಿತವೆಂದು ತೋರುತ್ತದೆ. ಮೂರು ತಿಂಗಳ ಮಗುವಿಗೆ ಹೊಲಿಸಿದ್ದ ಕವಚವನ್ನೇ ಆರು ವರ್ಷದ ಹುಡುಗನೂ ಹದಿನಾರು ವರ್ಷದ ಪ್ರಾಯದವನೂ ತೊಡಬಹುದೆಂದು ಆ ಭಾಷೆಗಳವರು ತಿಳಿದುಕೊಂಡಿಲ್ಲ. ವಯಸ್ಸು ಹೆಚ್ಚಿದ ಹಾಗೆಲ್ಲ ಉಡಿಗೆತೊಡಿಗೆಗಳು ಬದಲಾಯಿಸುತ್ತಿರಬೇಕೆಂಬುದನ್ನು ಅವರು ಬಲ್ಲರು. ಆದುದರಿಂದಲೇ ಅವರು ಕಾಲಕ್ಕೆ ತಕ್ಕ ಸೌಲಭ್ಯಗಳನ್ನು ತಮ್ಮ ಭಾಷೆಗೆ ಉಂಟುಮಾಡಿಕೊಡುತ್ತಿರುವರು. ಸಂಸ್ಕೃತದಲ್ಲಿ ಇನ್ನು ಹೊಸದಾಗಿ ಶಾಸ್ತ್ರಗಳೇನೂ ಹುಟ್ಟಬೇಕಾಗಿಲ್ಲ; ಅದು ಜನಸಾಮಾನ್ಯದಲ್ಲಿ ದಿನಚರಿಯ ಬಳಕೆಗೆ ಬರುವುದೆಂಬ ಸೂಚನೆಯೇನೂ ಈಗ ತೋರುವುದಿಲ್ಲ; ಈಗಿನ ಪ್ರಪಂಚದ ನೂರಾರು ಬಗೆಯ ವ್ಯಾಪಾರ ವ್ಯವಹಾರಗಳನ್ನು ಅದೇನೂ ಗಣನೆಗೆ ತೆಗೆದುಕೊಳ್ಳುವಂತಿಲ್ಲ. ಇಂತಹ ಅತಿಕ್ಲೃಪ್ತಸಂಚಾರವುಳ್ಳ ಭಾಷೆಯ ಕಟ್ಟುಪಾಡಿನಲ್ಲಿ ಅತಿ ವಿಸ್ತಾರವಾಗಿ ಸುತ್ತಾಡಬೇಕಾಗಿರುವ ಕನ್ನಡವು ಬದುಕಲಾದೀತೆ? ದೇವಸ್ಥಾನದಲ್ಲಿರುವ ಅರ್ಚಕನಿಗೆ ತಕ್ಕ ಮಡಿಯು ಸಂತೆಗಳಲ್ಲಿ ಸುತ್ತುವ "ಪೊಲೀಸ್" ಅಧಿಕಾರಿಗೆ ಸರಿಹೋದೀತೆ? ಕನ್ನಡ ವಿವಿಧ ವಿಜ್ಞಾನಶಾಸ್ತ್ರಗಳನ್ನು ಬೋಧಿಸುವವರ ಪ್ರಯತ್ನಗಳಿಗೆ ಒದಗಬೇಕು; ವರ್ತಕರ ಪತ್ರವ್ಯವಹಾರಕ್ಕೆ ಅನುಕೂಲವಾಗಬೇಕು; ರಾಜಕೀಯೋಪನ್ಯಾಸಕರ ಬಾಯ ಧೋರಣೆಯನ್ನೂ ಪತ್ರಿಕಾಕರ್ತರ ಲೇಖನಿಯ ಧೋರಣೆಯನ್ನೂ ತಡೆಯಬೇಕು; ನೀತಿತತ್ತ್ವ ವಿಚಾರಕರ ಜಿಜ್ಞಾಸಕ್ಕೆ ಅನುವಾಗಬೇಕು; ಇತರ ದೇಶಗಳವರ ಸಂಸರ್ಗದಿಂದ ನಮ್ಮಲ್ಲಿ ಉತ್ಪನ್ನವಾಗುವ ನೂತನ ಆಶಯಗಳಿಗೆ ಅನುರೂಪವಾಗಬೇಕು; ನಾನಾತರದ ಸಾಮಾನ್ಯ ಜನರ ಅಸಂಖ್ಯೇಯಗಳಾದ ವೃತ್ತಿಪ್ರವೃತ್ತಿಗಳಿಗೆ ತಕ್ಕುದಾಗಬೇಕು. ಇಂತಹ ಬಹುವಿಧದ ಕೆಲಸವಿರುವುದು ಸಂಸ್ಕೃತಕ್ಕಲ್ಲ; ಇಂಗ್ಲೀಷಿಗೆ; ಆದಕಾರಣ ಕನ್ನಡ ವ್ಯಾಕರಣದಲ್ಲಿ ಶ್ರದ್ಧೆಯುಳ್ಳವರು ಇನ್ನು ಮುಂದೆ ಸಂಸ್ಕೃತ ಪದ್ಧತಿಯೊಂದನ್ನೇ ಲಕ್ಷ್ಯದಲ್ಲಿಡುವುದಕ್ಕೆ ಪ್ರತಿಯಾಗಿ ಇಂಗ್ಲೀಷಿನ ಪದ್ಧತಿಯನ್ನೂ ಲಕ್ಷ್ಯದಲ್ಲಿಟ್ಟುಕೊಂಡಿರುವುದು ಉಚಿತವೆಂದು ನಮಗೆ ತೋರುತ್ತದೆ. ಇಂಗ್ಲಿಷೇನೂ ಮರ್ಯಾದೆಯಿಲ್ಲದ ಭಾಷೆಯಲ್ಲ. ಮೇಲಿನ ಋಷಿವಚನ ಭಟ್ಟಾಕಳಂಕ ವಚನಗಳು ಪ್ರಮಾಣವಾಗುವ ಪಕ್ಷಕ್ಕೆ ಇಂಗ್ಲಿಷಿನಲ್ಲಿಯೂ ಭಗವದ್ವಾಣಿಯ ಅಂಶವು ಇದ್ದೇ ಇರುವುದೆಂದು ಒಪ್ಪಿಕೊಳ್ಳಬೇಕಾಗುವುದು. ಆದುದರಿಂದ ಗುರುಪ್ರಾಯವಾದ ಸಂಸ್ಕೃತದಿಂದ ಮರ್ಯಾದೆಯನ್ನು ಕಲಿಯೋಣ; ಮಿತ್ರಪ್ರಾಯವಾದ ಇಂಗ್ಲೀಷಿನಿಂದ ಸ್ವಾತಂತ್ರ್ಯ ಪ್ರೀತಿಯನ್ನು ಕಲಿಯೋಣ; ಮನುಷ್ಯನು ಸುಖದಿಂದ ಬಾಳುವುದಕ್ಕೆ ಸ್ವಾತಂತ್ರ್ಯ ಮರ್ಯಾದೆಗಳೆರಡೂ ಅವನಲ್ಲಿರಬೇಕೆಂಬುದನ್ನು ಹಿಂದೆ ಹೇಳಿದೆ; ಭಾಷೆಗೂ ಹಾಗೆಯೇ.

ಹಳೆಯ ಮರ್ಯಾದೆ-ಹೊಸ ಸ್ವಾತಂತ್ರ್ಯ

ಇನ್ನು ಮುಂದೆ ಕನ್ನಡದಲ್ಲಿ ಪದ್ಯಗಳನ್ನು ರಚಿಸತಕ್ಕವರು ಹಳೆಗನ್ನಡದ ರೂಪಗಳನ್ನು ಸಂಪೂರ್ಣವಾಗಿ ಬಿಟ್ಟುಬಿಟ್ಟು, ಎಲ್ಲವನ್ನೂ ಬಳಕೆಯಲ್ಲಿರುವ ಹೊಸಗನ್ನಡದ ಮಾತುಗಳಿಂದಲೇ

ಬರೆಯಬೇಕೆಂದು ಕೆಲವರು ಹೇಳುವುದುಂಟು. ಜನರಿಗೆ ಸ್ವಲ್ಪವೂ ತಿಳಿಯದ ಹಳೆಗನ್ನಡ ಮಾತುಗಳನ್ನು ಕೂಡಿದ ಮಟ್ಟಿಗೂ ಬಿಡಬೇಕೆಂಬುದೇನೋ ಒಪ್ಪತಕ್ಕುದೇ. ಆದರೆ ಸಾಮಾನ್ಯವಾಗಿ ಪರಿಚಯವಿರುವ ಹಳೆಗನ್ನಡದ ಪದರೂಪಗಳಿಗೆ ಬಹಿಷ್ಕಾರ ಹಾಕುವುದರಿಂದ ಯಾರಿಗೆ ಯಾವ ಆದಾಯವು ಆಗಬಹುದೋ ತೋರುವುದಿಲ್ಲ. ಸಾಮಾನ್ಯವಾಗಿ ಅರ್ಥವಾಗುವ ಮಾತುಗಳಿರುವಲ್ಲಿ ಕ್ಲಿಷ್ಟಪದಗಳನ್ನು ಉಪಯೋಗಿಸುವುದರಿಂದ ಆ ಬರೆವಣಿಗೆಯು ಸಾಮಾನ್ಯ ಜನರಿಗೆ ಪ್ರಯೋಜಕವಾಗದೆ ಹೋಗುತ್ತದೆ. ಇದು ಜನರಿಗೂ ಭಾಷೆಗೂ ನಷ್ಟವೇ ಸರಿ. ಆದರೆ ಹಳೆಗನ್ನಡ ಪದಗಳು, ಅಥವಾ ಪ್ರತ್ಯಯಗಳು ಸುಲಭವಾಗಿ ಅರ್ಥವಾಗುವುವಾಗಿದ್ದರೆ, ಅವುಗಳನ್ನೇಕೆ ಉಪಯೋಗಿಸಬಾರದು? "ದೇವರು ರಾಜನನ್ನು ಕಾಪಾಡಲಿ" ಎಂಬ ವಾಕ್ಯಕ್ಕೆ ಬದಲಾಗಿ "ರಾಜನ ಸಲಹುಗೆ ದೇವಂ" ಎಂದು ಬರೆದರೆ ಹಳೆಗನ್ನಡದಂತೆ ಕಾಣುವುದು. ಆದರೆ ಇದರಿಂದ ಅರ್ಥಸ್ಫೂರ್ತಿಗೆ ತಡೆಯಾಗುವುದೆಂದು ಯಾರೂ ಹೇಳಲಾರರು. ಹಳೆಗನ್ನಡದ ಪದಗಳನ್ನೂ ಪ್ರತ್ಯಯಗಳನ್ನೂ ಈಗ ಏಕೆ ಉಪಯೋಗಿಸಬೇಕೆಂದರೆ, ಅವುಗಳನ್ನು ತೊರೆಯುವುದರಿಂದ ಕೆಲವು ನಷ್ಟಗಳುಂಟು. (೧) ಈಗ ಇನ್ನೂ ಅಲ್ಪಸ್ವಲ್ಪ ರೂಢಿಯಲ್ಲಿರುವ ಹಳೆಯ ಪದಪ್ರಯೋಗಗಳು ಸ್ವಲ್ಪಕಾಲದಲ್ಲಿ ಲುಪ್ತವಾಗಿ, ಭಾಷೆಯ ವಾಗ್ದಾರಿದ್ರ್ಯವು ಹೆಚ್ಚುವುದು. (೨) ಬಹುಕಾಲದ ಉಪಯೋಗದಿಂದ ಆ ಪದ ಪ್ರತ್ಯಯಗಳಿಗೆ ಒಂದು ವಿಧವಾದ "ಧ್ವನಿ" ಶಕ್ತಿ ಅಥವಾ ವ್ಯಂಜಕಶಕ್ತಿಯು ಬಂದಿರುವುದು. ಅವುಗಳನ್ನು ಬಿಟ್ಟ ಬರೆವಣಿಗೆಯಲ್ಲಿ ಈ ಶಕ್ತಿಯಿರುವುದಿಲ್ಲ. ಹೊಸಗನ್ನಡದ ಮಾತುಗಳಿಗೆ ಅಥವಾ ಮಾತಿನ ರೂಪಗಳಿಗೆ ಆ ಶಕ್ತಿಬರುವುದಕ್ಕೆ--ಒಂದು ವೇಳೆ ಅದು ಬರುವುದಾದರೆ--ಬಹುಕಾಲಹಿಡಿದೀತು. (೩) ಹಳೆಗನ್ನಡದ ರೂಪಗಳಿಗೆ ಇರುವ ಆಕರ್ಷಕ ಶಕ್ತಿ ಹೊಸಗನ್ನಡದ ರೂಪಗಳಿಗೆ ಇನ್ನೂ ಬಂದಿಲ್ಲ. ಹಳೆಗನ್ನಡದ ರೂಪಗಳಿಂದ ಕಾವ್ಯವು ಕಿವಿಗೆ ಇಂಪಾದಂತೆ ಹೊಸಗನ್ನಡದ ರೂಪಗಳಿಂದ ಆಗದು. ಹೀಗೆ ವಿಚಾರಮಾಡಿ ನೋಡಿದರೆ, ಎಂತಹ ಹಳೆಗನ್ನಡ ಮಾತುಗಳನ್ನೂ ರೂಪಗಳನ್ನೂ ಉಪಯೋಗಿಸಿದರೆ ಕಾವ್ಯವು ದುರ್ಬೋಧವಾಗುವುದಿಲ್ಲವೋ ಅಂತಹವುಗಳನ್ನು ಧಾರಾಳವಾಗಿ ಉಪಯೋಗಿಸಬಹುದೆಂದು ತೋರುವುದು. ಕಾವ್ಯವನ್ನು ವೃಥಾ ಕಠಿಣ ಮಾಡಬಾರದು; ಅನಾವಶ್ಯಕವಾಗಿ ಅಪ್ರಸಿದ್ಧಪದಗಳನ್ನೂ ಕ್ಲೇಶಕರಗಳಾದ ರೂಪಗಳನ್ನೂ ಅದರಲ್ಲಿ ತುಂಬಬಾರದು; ಕಾವ್ಯವು ಎಷ್ಟು ಲಲಿತವಾಗಿಯೂ ಸರಳವಾಗಿಯೂ ಇದ್ದರೆ ಅಷ್ಟು ಒಳ್ಳೆಯದು ಎಂಬೀ ಸಾಮಾನ್ಯ ನಿಯಮಗಳನ್ನು ಎಲ್ಲರೂ ಅಂಗೀಕರಿಸುವರು. ಆದರೆ ಅಸಾಧಾರಣಗಳಾದ ಪ್ರಯೋಗಗಳೆಲ್ಲವೂ ಅಪ್ರಸಿದ್ಧಗಳಲ್ಲ; ದಿನಚರಿ ವಾಡಿಕೆಯಲ್ಲಿಲ್ಲದ ಮಾತುಗಳೆಲ್ಲವೂ ಕ್ಲೇಶಕರವಾದುವುಗಳಲ್ಲ. ಆದಕಾರಣ ಕವಿತಾ ಸಂದರ್ಭಗಳಿಗೆ ತಕ್ಕಂತೆ ಸೌಲಭ್ಯಗಳಿಗೆ ಭಂಗತಾರದ ರೀತಿಯಲ್ಲಿ ಭಾವವಿಶೇಷಕ್ಕಾಗಿಯೋ ಶ್ರುತಿಸೌಖ್ಯಕ್ಕಾಗಿಯೋ ಹಳೆಗನ್ನಡದ ರೂಪಗಳನ್ನು ಉಪಯೋಗಿಸಿಕೊಂಡರೆ ಅದು ಒಂದು ಗುಣವಾದೀತೇ ಹೊರತು ದೋಷವಾಗಲಾರದು. ಇಂಗ್ಲೀಷ್ ಭಾಷೆಯಲ್ಲಿ ಕವಿತ್ವ ಮಾಡತಕ್ಕವರು ಬಳಕೆಯ ಮಾತುಗಳನ್ನೇ ಜೋಡಿಸಬೇಕೆಂಬ ವಿಧಿಯಿಲ್ಲ; ಹಳೆಯ ರೂಪಗಳನ್ನು ಬಿಡಬೇಕೆಂಬ ನಿಷೇಧವೂ ಇಲ್ಲ. ಕೆಲವು ಪುರಾತನ ಪ್ರಯೋಗಗಳು ಸಾಮಾನ್ಯವಾಗಿ ಈಗಿನ ಕವಿಗಳ ರೂಢಿಯಲ್ಲಿವೆ. ಯಾವ ಭಾಷೆಯಲ್ಲಿಯೂ ಕವಿತ್ವದ ಮಾತಿನ ರೀತಿಯೂ ಬಾಯಿಮಾತಿನ ರೀತಿಯೂ ಒಂದೇ ಆಗಿರದು.

ಕನ್ನಡದ ಮನೆತನವು ಬಹು ಪುರಾತನವಾದುದು. ಈಗ ಕನ್ನಡಕ್ಕಿಂತ ಹೆಚ್ಚು ಪ್ರಖ್ಯಾತವಾಗಿರುವ ವಂಗೀಯ ಮಹಾರಾಷ್ಟ್ರೀಯ ಭಾಷೆಗಳಿಗಾಗಲಿ ಇಂಗ್ಲಿಷ್ ಭಾಷೆಗೇ ಆಗಲಿ, ಸಾಹಿತ್ಯದೃಷ್ಟಿಯಿಂದ ನೋಡಿದರೆ ಕನ್ನಡದರಷ್ಟು ದೀರ್ಘವಾದ ಅನುಪೂರ್ವಿ ಕಾಣಬರುವುದಿಲ್ಲ. ಇಷ್ಟು ದೊಡ್ಡಮನೆತನಕ್ಕೆ ಸೇರಿದೆನೆಂಬ ಹೆಮ್ಮೆಯಿರುವ ಕಡೆ ಅದಕ್ಕೆ ತಕ್ಕ ಜವಾಬುದಾರಿಯೂ ಇರುವುದು. ಗೌರವ ಹೆಚ್ಚಿದಂತೆಲ್ಲ ಉಚ್ಛೃಂಖಲ ಪ್ರವರ್ತನೆಗೆ ಅವಕಾಶ ಕಡಿಮೆ. ಉಚ್ಛೃಂಖಲ ಪ್ರವರ್ತನೆ ಕೂಡದೆಂದರೆ ನ್ಯಾಯವಾದ ಸ್ವಾತಂತ್ರ್ಯವೂ ದೊರೆಯದೆಂದು ಅರ್ಥವಾಗದು. ರಾಜನಷ್ಟು ಸ್ವತಂತ್ರನು ಯಾರೂ ಇಲ್ಲ; ಅವನಂತೆ ನಿರ್ಬಂಧಕ್ಕೆ ಸಿಕ್ಕಿದವನೂ ಯಾರೂ ಇಲ್ಲ. ಶ್ರೀಮಂತವಂಶದಲ್ಲಿ ಹುಟ್ಟಿದವರಿಗೆ ಪೂರ್ವಿಕರಿಂದ ಬರುವ ಸ್ವತ್ತು ಮನ್ನಣೆಗಳೊಡನೆ ಕೆಲವು ಋಣಗಳೂ ಧರ್ಮಗಳೂ ಪದ್ಧತಿಗಳೂ ಒಂದುಗೂಡಿ, ಬರುತ್ತವೆ. ಹಾಗೆಯೇ ಪುರಾತನವಾದ ಕಾವ್ಯಸಂಪತ್ತನ್ನು ಪಡೆದಿರುವ ಭಾಷೆಗಳ ಮಾತುಗಳಿಗೆ ಅನ್ಯಾದೃಶವಾದ ಭಾವಪರಿಪುಷ್ಟಿಯೂ ಧ್ವನಿಶಕ್ತಿಯೂ ಬಂದಿರುತ್ತವೆ; ಅವುಗಳೊಡನೆ ಕೆಲವು ಮರ್ಯಾದೆಗಳೂ ಕಟ್ಟುಪಾಡುಗಳೂ ಬಂದಿರುತ್ತವೆ. ಈ ಮರ್ಯಾದೆಗಳನ್ನೂ ವಿವೇಚನಾಪೂರ್ವಕವಾಗಿ ಆಚರಣೆಯಲ್ಲಿಟ್ಟುಕೊಂಡರೆ ಸದ್ಯಕ್ಕೆ ಸ್ವಲ್ಪ ತೊಂದರೆಯಾದಂತೆ ಕಂಡರೂ, ಪರಿಣಾಮದಲ್ಲಿ ಲಾಭವೇ ಆಗುವುದು. ಭಾಷೆಗೆ ಬಲವನ್ನು ಕೊಟ್ಟು, ಅದರ ಅಂಗಾಂಗಗಳಿಗೆ ಗೊತ್ತಾದ ರೂಪಸೌಂದರ್ಯವನ್ನು ಕೊಟ್ಟು, ಅದರ ಸಂಚಾರಕ್ರಮವನ್ನು ನಿಷ್ಕರ್ಷೆಗೊಳಿಸುವ ಪೂರ್ವಪದ್ಧತಿಯನ್ನು ಹಾಳುಮಾಡುವುದು ಅತಿ ಕಷ್ಟವಲ್ಲ; ಉಂಟು ಮಾಡಿಕೊಡುವುದು ಅತಿ ಕಷ್ಟ.*

❑

* ಕೃಪೆ : ಪ್ರಬುದ್ಧ ಕರ್ನಾಟಕ, ೧೯೨೩

ಜನಪದ ಮಹಾಭಾರತದಲ್ಲಿ ಶಾಪ ಮತ್ತು ವರ: ಒಂದು ವಿವೇಚನೆ

• ಡಾ. ಕಾ.ವೆಂ.ಶ್ರೀನಿವಾಸಮೂರ್ತಿ

ಪ್ರಸ್ತುತ ಅಧ್ಯಯನವು ಬೆಟ್ಟದಬೀಡು ಸಿದ್ಧಶೆಟ್ಟಿ ಅವರು ವಕ್ತೃವಾಗಿರುವ ಹಾಗೂ ಡಾ.ಪಿ.ಕೆ.ರಾಜಶೇಖರ ಅವರು ಸಂಪಾದಕರಾಗಿರುವ 'ಜನಪದ ಮಹಾಭಾರತ'ವನ್ನು ಕೇಂದ್ರವನ್ನಾಗಿ ಇಟ್ಟುಕೊಂಡಿದೆ. ಈ ಬೃಹತ್ ಕೃತಿಯನ್ನು ಕನ್ನಡ ಸಾರಸ್ವತ ಲೋಕಕ್ಕೆ ಕೊಟ್ಟಿರುವ ಈ ಇಬ್ಬರೂ ಅಭಿನಂದನಾರ್ಹರಾಗಿದ್ದಾರೆ. ಈ ಕೃತಿಯ ವಸ್ತುವು ಮಹಾಭಾರತದ ಕಥಾನಕವಾಗಿರುವುದರಿಂದ ಇದರ ಪರಿಚಯವು ಭಾರತೀಯರಾದ ಎಲ್ಲರಿಗೂ ಸಾಮಾನ್ಯವಾಗಿ ಇರುತ್ತದೆ. ಹೀಗಿದ್ದಾಗಲೂ ಅಸಂಖ್ಯ ಭಾರತ ಕಾವ್ಯಗಳು ನಿರ್ಮಾಣವಾಗುತ್ತಲೇ ಬಂದಿವೆ; ಅವುಗಳನ್ನು ನಾವು ಓದುತ್ತಲೇ ಬಂದಿದ್ದೇವೆ. ಅದಕ್ಕೆ ಕಾರಣ 'ಕತೆಯ ಮೈಗಿಂತ ಮಿಗಿಲದರ ಬಣ್ಣ' ಎಂಬ ಕವಿಬೇಂದ್ರೆ ಮಾತಿನ ಸೂಚಿತಾರ್ಥವೇ ಆಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಪಠ್ಯ ಅಥವಾ ಕಾವ್ಯವೂ ಭಿನ್ನ ಮತ್ತು ವಿಶಿಷ್ಟವೇ ಆಗಿದೆ.

ಸದರಿ ಕಾವ್ಯವು ೧೫೯ ಪರ್ವಗಳಿಂದ ಕೂಡಿದ ಬೃಹತ್ ಕಾವ್ಯವಾಗಿದೆ. ಇದನ್ನು ಹಲವು ಸೈದ್ಧಾಂತಿಕ ನೆಲೆಗಳಲ್ಲಿ ಹಾಗೂ ಹಲವು ಪರಿಕಲ್ಪನೆಗಳನ್ನು ಅನುಲಕ್ಷಿಸಿ ಅಧ್ಯಯನ ಮಾಡಬಹುದಾಗಿದೆ. ಆದರೆ ಇಲ್ಲಿ ನನ್ನ ಅಧ್ಯಯನದ ವಿವಕ್ಷೆ ಈ ಕಾವ್ಯದಲ್ಲಿ ಮೂಡಿರುವ ಶಾಪ ಮತ್ತು ವರಗಳನ್ನು ಸಮೀಕ್ಷೆ ಮಾಡುವುದು ಅಲ್ಲ ಎಂಬುದನ್ನು ಆರಂಭದಲ್ಲಿಯೇ ಸೂಚಿಸುವುದು ಯುಕ್ತವೆನ್ನಿಸುತ್ತದೆ.

ಶಾಪ ಮತ್ತು ವರಗಳು ನಿತ್ಯ ಬದುಕಿನಲ್ಲಿಯೂ ಕಾಣುತ್ತಿರುತ್ತವೆ. ಆದರೆ ಇವುಗಳಿಗೆ ಯಾವುದೇ ಪರಿಣಾಮವಿಲ್ಲ ಎಂಬುದು

ವಾಸ್ತವವೇ ಆಗಿದೆ. ಆದಾಗ್ಯೂ ಇದರ ಬಗ್ಗೆ ನಂಬಿಕೆ ಇರುವವರನ್ನು ಎಂದಿನಿಂದಲೂ ನೋಡಲು ಸಾಧ್ಯವಿದೆ. ಆದ್ದರಿಂದಲೇ ಇದಕ್ಕೆ ಕಾವ್ಯದಲ್ಲಿಯೂ ನೆಲೆ ಸಿಕ್ಕಿರುವುದು.

ಈ ಜನಪದ ಮಹಾಕಾವ್ಯದ ಒಟ್ಟು ೧೫ ಪರ್ವಗಳಲ್ಲಿ ಆರಂಭದ ೧೧ ಪರ್ವಗಳಲ್ಲಿ ಮಾತ್ರ ಶಾಪ ಮತ್ತು ವರಗಳ ಸಂಖ್ಯಾ ಪ್ರಮಾಣ ಹೆಚ್ಚಾಗಿದೆ. ಅವುಗಳನ್ನು ನಿಖರವಾಗಿ ಸೂಚಿಸುವುದಾದರೆ ಇಲ್ಲಿಯ ಶಾಪ ಮತ್ತು ವರಗಳು ಕ್ರಮವಾಗಿ ಏಳು ಮತ್ತು ಎಂಟು ಆಗಿವೆ. ಇವುಗಳನ್ನು ಒಟ್ಟುಗೂಡಿಸಿ ಹೇಳುವುದಾದರೆ ಇವುಗಳ ಮೊತ್ತ ಹದಿನೈದು ಆಗುತ್ತದೆ.

ಇಲ್ಲಿ ನನ್ನಲ್ಲಿ ಹುಟ್ಟಿದ ಕುತೂಹಲ ಮತ್ತು ಪ್ರಶ್ನೆಯೆಂದರೆ: ಒಟ್ಟು ಕಾವ್ಯದ ೧೫ ಪರ್ವಗಳಲ್ಲಿ ಆರಂಭಿಕ ೧೧ ಪರ್ವಗಳಲ್ಲಿ ಮಾತ್ರ ಬಹುಪ್ರಮಾಣದಲ್ಲಿ ಶಾಪ ಮತ್ತು ವರಗಳು ಕಾಣಿಸಿವೆ. ಇದು ಯಾಕೆ? ಇದು ಮೊದಲನೆಯ ಪ್ರಶ್ನೆ.

ಇನ್ನು ಎರಡನೆಯ ಪ್ರಶ್ನೆ: ಇಲ್ಲಿಯ ಪಾತ್ರಗಳ ಕಥಾನಕವು ಈನಂತರ ಬರುವ ಪಾತ್ರಗಳ ಕಥಾನಕಗಳಿಗಿಂತ ಅತ್ಯಂತ ಸಂಕ್ಷಿಪ್ತ ರೂಪದಲ್ಲಿ ಮಾತ್ರ ಬರುತ್ತವೆ. ಯಾಕೆ?

ಮೂರನೆಯ ಪ್ರಶ್ನೆ: ಈ ಕಾವ್ಯದ ಕಥಾನಕವೂ ಎಂದಿನ ಪುರಾಣ ಕಾವ್ಯಗಳ ಕಥಾನಕಗಳಂತೆ ಅತಿಮಾನವ ಅಥವಾ ದೇವಲೋಕದಲ್ಲಿಯೇ ಆರಂಭವಾಗುತ್ತದೆ. ಯಾಕೆ?

ಈ ಮೂರು ನಿಶ್ಚಿತ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಬೆಳೆಯುವ ಚರ್ಚೆ ನನ್ನ ಈ ಪ್ರಬಂಧದ ಆಶಯವಾಗಿದೆ.

ಮೂರನೆಯ ಪ್ರಶ್ನೆಗೆ ಇಲ್ಲಿ ಮೊದಲಿಗೆ ಪ್ರವೇಶ. ಪಾಶ್ಚಾತ್ಯರಂತೆ ಭಾರತೀಯರ ಪರಂಪರೆಯಲ್ಲಿ ಪುರಾಣ ಮತ್ತು ಚರಿತ್ರೆ ಪ್ರತ್ಯೇಕವಲ್ಲ. ಇಲ್ಲಿ 'ವಿಕ್ರಮಾರ್ಜುನ ವಿಜಯ', 'ರಾಮಚಂದ್ರಚರಿತ ಪುರಾಣ' ಮುಂತಾದ ಪುರಾಣಪ್ರಧಾನ ಕಾವ್ಯಗಳಿರಬಹುದು. ಅಂತೆಯೇ 'ಬಿಜ್ಜಳರಾಯ ಪುರಾಣ', 'ರಾಮನಾಥ ಚರಿತ' ಮುಂತಾದ ಚರಿತ್ರೆ ಪ್ರಧಾನ ಕಾವ್ಯಗಳಿರಬಹುದು. ಇಲ್ಲಿ ಪುರಾಣ ಮತ್ತು ಚರಿತ್ರೆಗಳನ್ನು ಪ್ರತ್ಯೇಕಿಸಿ ನೋಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದರ ಜೊತೆಗೆ ಕರ್ಮಸಿದ್ಧಾಂತವನ್ನು ಪಾರಂಪರಿಕವಾಗಿ ಒಪ್ಪಿ ಬಂದಿರುವ ಇಲ್ಲಿ ಮಾನವ ಲೋಕದ ವರ್ತನೆಗಳಿಗೆ ಕಾರಣಗಳನ್ನು ದೇವಲೋಕದಲ್ಲಿಯೇ ಹುಡುಕುವ ಪರಿಪಾಠ ಬೆಳೆದು ಬಂದಿದೆ. ಈ ಹಿನ್ನೆಲೆಯಲ್ಲಿ ಮಹಾಭಾರತದ ಕಥಾನಕದ ಮೂಲ ಪ್ರೇರಣೆ ಅಥವಾ ಕಾರ್ಯಕಾರಣ ಸಂಬಂಧದ ನೆಲೆಗಳನ್ನು ದೇವಲೋಕದಲ್ಲಿಯೆ ಇಲ್ಲಿ ಕಾಣುವುದು ಸಾಧ್ಯವಾಗಿದೆ. ಈ ಕಥಾನಕದ ಆರಂಭಕ್ಕೆ ಪೂರಕವಾಗಿ ಹಾಗೂ ಎರಡನೆಯ ಪ್ರಶ್ನೆಗೆ ಪೂರಕ ಸಾಮಗ್ರಿಯಾಗಿ ಒಂದಾದರೂ ಶಾಪ ಮತ್ತು ವರದ ಪ್ರಸಂಗವನ್ನು ಇಲ್ಲಿ ಉಲ್ಲೇಖಿಸುವುದು ಉಚಿತವೆನ್ನಿಸುತ್ತದೆ.

ಒಮ್ಮೆ ದೇವಲೋಕದಲ್ಲಿ ಪಾರ್ವತಿ, ಲಕ್ಷ್ಮಿ ಹಾಗೂ ಸರಸ್ವತಿಯರ ನಡುವೆ ತಮ್ಮಲ್ಲಿ ಯಾರು ಹೆಚ್ಚು ಶ್ರೇಷ್ಠ ಎಂಬ ಪ್ರಶ್ನೆ ಹುಟ್ಟಿ, ಅದು ವಾಗ್ವಾದವಾಗಿ ಬೆಳೆಯುತ್ತದೆ. ಇಲ್ಲಿ ತನ್ನ ಶಕ್ತಿಯಿಂದಲೇ ಲೋಕ ನಿಂತಿದೆಯೆಂದು ಪಾರ್ವತಿ, ತನ್ನ ಸಂಪತ್ತಿನಿಂದಲೇ ಲೋಕಕ್ಕೆ ಉಳಿಗಾಲವೆಂದು ಲಕ್ಷ್ಮಿ ಹಾಗೂ ತಾನು ನೀಡಿದ ಅರಿವಿನಿಂದಲೇ ಜಗತ್ತು ಸಾಗುತ್ತಿದೆ ಎಂದು ಸರಸ್ವತಿ ಮಾತನಾಡುತ್ತಾಳೆ. ಇದರ ಜೊತೆಯಲ್ಲಿಯೇ ಅನ್ಯರ ಶ್ರೇಷ್ಠತೆಯನ್ನು

ಹೀಗಳೆಯುವುದು ಸಹ ನಡೆಯುತ್ತಿರುತ್ತದೆ. ಇಂತಹ ಸಂದರ್ಭದಲ್ಲಿ ಅಲ್ಲಿಗೆ ಪ್ರವೇಶವಾದ ಗಂಗೆ 'ತಾನೇ ಶ್ರೇಷ್ಠಳು; ತನ್ನಿಂದಲೇ ಈ ಮೂವರು ಮೈಲಿಗೆ ತೊಳೆದುಕೊಂಡು ಮಡಿಯಾಗುವುದು' ಎಂಬ ಮಾತನ್ನು ಆಡುತ್ತಾಳೆ. ಇದು ಮರ್ಮಾಘಾತಕ ಮಾತು. ಇದರಿಂದ ಕೆರಳಿದ ಇವರು ತಾವು ಒಟ್ಟಾಗಿ ಸೇರಿ ಇವಳಿಗೆ ಶಾಪವನ್ನು ಹಾಕುತ್ತಾರೆ. ಅದರಂತೆ ಜೀವಜಂತು ಕೋಟಿ ಇವಳನ್ನು ಎಂಜಲು ಮಾಡಲಿ; ಅವಳನ್ನು ಕುಡಿದು ಅವಳ ಮುಖಕ್ಕೆ ಉಗಿಯಲಿ; ಸತ್ತ ಹೆಣಗಳನ್ನೆಲ್ಲ ಅವಳ ಮಡಿಲಲ್ಲಿ ತುಂಬಲಿ; ಮೈಲಿಗೆ ಬಟ್ಟೆ ಅವಳನ್ನು ತುಂಬಲಿ; ಆಗ ಅವಳಿಗೆ ಎಂಥ ಮಡಿ? ಎಂಬ ಶಾಪವನ್ನು ಹಾಕುತ್ತಾರೆ. ಅದರ ಪರಿಣಾಮದಲ್ಲಿ ಗಂಗೆ ಮೈಲಿಗೆಯ ಮೈಯವಳಾಗಿ ರಭಸದಲ್ಲಿ ಬರುತ್ತಿರುವಾಗ ಹಾದಿಯಲ್ಲಿ ಶನಿಮಹಾತ್ಮ ಅಡ್ಡ ಬರುತ್ತಾನೆ. ಅವನನ್ನು ಲಕ್ಷಿಸುವ ಮನಸ್ಥಿತಿ ಇವಳಲ್ಲಿ ಇರುವುದಿಲ್ಲ. ಆದ್ದರಿಂದ ಇವಳ ನಾಲ್ಕು ಹನಿ ನೀರು ಅವನ ಮೈಮೇಲೆ ಬೀಳುತ್ತದೆ. ಇದರಿಂದ ಕುಪಿತನಾದ ಶನಿ ಅವಳು ಮನುಷ್ಯಳಾಗಿ ಹುಟ್ಟಲಿ ಎಂಬ ಶಾಪವನ್ನು ನೀಡುತ್ತಾನೆ.

ಅಲ್ಲಿಂದ ಬ್ರಹ್ಮನ ಬಳಿ ಬಂದ ಗಂಗೆ ತ್ರಿಮೂರ್ತಿಗಳ ಪತ್ನಿಯರು ನೀಡಿದ ಶಾಪದಿಂದ ತನಗೆ ಯಾವಾಗ ವಿಮೋಚನೆ ಎಂದು ಕೇಳುತ್ತಾಳೆ. ಅದಕ್ಕೆ ಬ್ರಹ್ಮ ಅವಳು ಭೂಮಿಯಲ್ಲಿ ಗಂಗೆಯಾಗಿ ಹರಿಯಬೇಕೆಂದೂ ಆ ಮೂಲಕ ಅನೇಕ ಜೀವ ಜಂತುಗಳಿಗೆ ಸಲಹುವ ತಾಯಿಯಾಗಿ ಭೂಲೋಕದ ಪೂಜೆಗೆ ಅರ್ಹವಾಗಬೇಕೆಂದು ಹೇಳುತ್ತಾನೆ.

ಹೀಗೆ ಆರಂಭಕ್ಕೆ ಗಂಗೆಗೆ ಮೊದಲು ಪಾರ್ವತಿ, ಲಕ್ಷ್ಮಿ, ಸರಸ್ವತಿಯರಿಂದ ಶಾಪ ತಟ್ಟುತ್ತದೆ. ಅನಂತರದಲ್ಲಿ ಶನಿಯಿಂದ ಅದು ತಟ್ಟುತ್ತದೆ. ಆನಂತರದಲ್ಲಿ ಬ್ರಹ್ಮನಿಂದ ಶಾಪವಿಮೋಚನಾ ಮಾರ್ಗ ದೊರೆಯುತ್ತದೆ. ಮುಂದುವರೆದ ಭಾಗದಲ್ಲಿ ಕಾಮಧೇನುವಿನ ಮಗಳಾದ ನಂದಿನಿಯನ್ನು ಹಿಗ್ಗಾಮುಗ್ಗಾ ಎಳೆದಾಡುತ್ತಿದ್ದ ಎಂಟನೆಯವನನ್ನು ಉಳಿದ ಏಳು ಜನ ಅಣ್ಣತಮ್ಮಂದಿರನ್ನು ವಶಿಷ್ಠ ಮುನಿಗಳು ಶಪಿಸಿದ್ದು, ಆನಂತರದಲ್ಲಿ ಆ ಶಪಿತರ ಪಶ್ಚಾತ್ತಾಪಕ್ಕಾಗಿ ಅವರು ಗಂಗೆಯ ಹೊಟ್ಟೆಯಲ್ಲಿ ಮರುಜನ್ಮ ತಾಳಿ ಶಾಪವನ್ನು ಕಳೆದುಕೊಳ್ಳಲಿ ಎಂಬ ಶಾಪ ವಿಮೋಚನೆಯನ್ನು ಹರಸಿದ್ದು; ಅದರಂತೆ ಅವರು ಏಳು ಮಂದಿ ಅವಳ ಗರ್ಭದಲ್ಲಿ ಹುಟ್ಟಿ, ಆಕ್ಷಣದಲ್ಲಿಯೇ ತಾಯಿಯಿಂದ ಹತರಾಗುವುದು; ಎಂಟನೆಯವನಾದ ಮಗು ಅದುವರೆಗಿನ ಮಕ್ಕಳು ಮಾತನಾಡದೇ ಸತ್ತ ಸಂದರ್ಭದಲ್ಲಿ ತಾನು ಮಾತಾಡಿ, ತನ್ನ ತಂದೆಯ ಆಶಯದಂತೆ ತನ್ನನ್ನು ಉಳಿಸಬೇಕೆಂದು ಕೇಳಿಕೊಂಡಾಗ, ಆ ಮಗುವನ್ನು ಉಳಿಸಿ ತಾನು ಗಂಗೆಯಾಗಿ ಹರಿದು ಹೋಗಿಬಿಡುವುದು, ಅದೇ ಸಂದರ್ಭದಲ್ಲಿ ಇವಳಿಂದ ಆ ಮಗುವಿಗೆ ಇಚ್ಛಾಮರಣ ಪ್ರಾಪ್ತಿ ವರವನ್ನು ನೀಡಿದ್ದು, ಆ ಎಂಟನೆಯ ಮಗುವೇ ಮುಂದೆ ಗಾಂಗೇಯ ಅಥವಾ ಭೀಷ್ಮನೆನಿಸಿಕೊಂಡು ಬೆಳೆಯುವುದು, ಮುಂದೆ ಒಂದು ದಿನ ಇವನಿಗೆ ಅಂಬೆಯಿಂದ ಶಾಪ ತಗಲುವುದು. ಅನಂತರದಲ್ಲಿ ತಪಸ್ಸಿನಲ್ಲಿ ಮುನಿ ಮುಚ್ಚೇಂದ್ರನಾಥನನ್ನು ಕೆಣಕಿದ್ದಕ್ಕಾಗಿ ಇವನಿಂದ ಗಂಧರ್ವ ಕುವರಿ ಮೋಹಿನಿಗೆ ಶಾಪ, ಅನಂತರದಲ್ಲಿ ಇವಳ ಪ್ರಾಯಶ್ಚಿತ್ತಕ್ಕಾಗಿ ಶಾಪವಿಮೋಚನಾ ಅಭಯ, ಅದರಂತೆ ಈಕೆ ದುರ್ಗಂಧದೇವಿಯಾಗಿ ಹುಟ್ಟುವುದು; ಇವಳನ್ನು ಮೋಹಿಸಿದ ಮುನಿ ಪರಾಶರನಿಂದ ಈಕೆ ಸುಗಂಧಿನಿಯಾಗುವುದು; ಇವರೀರ್ವರ ಇಲ್ಲಿಯ ಸಂಬಂಧದಿಂದ ವ್ಯಾಸ ಹುಟ್ಟುವುದು; ಹುಟ್ಟುತ್ತಲೇ ಈತ ತಾಯಿಗೆ ನೆನೆದಾಗ ನೆರವಾಗುವೆ ಎಂಬ ಅಭಯವನ್ನಿತ್ತು

ಹೊರಟುಹೋಗುವುದು; ಅದರಂತೆ ವಿಧವೆಯರಾದ ಅಂಬಿಕೆ, ಅಂಬಾಲಿಕೆ, ದಾಸಿಗೆ ಗರ್ಭ ತುಂಬಿಸಿ, ಧೃತರಾಷ್ಟ್ರ, ಪಾಂಡು, ವಿದುರರ ಜನನಕ್ಕೆ ಕಾರಣವಾಗುವುದು ನಡೆಯುತ್ತದೆ.

ಇದಕ್ಕೂ ಪೂರ್ವಪೀಠಿಕೆಯಾಗಿ ಬ್ರಹ್ಮನಿಂದ ಸೊವರ್ಣಕೇಶಿಗೆ ನೂರು ಮಕ್ಕಳ ವರ; ಇವರು ನಾರಾಯಣನಿಂದ ಕೊಲ್ಲಲಾಗದವರು. ನಾರಾಯಣನ ಆರಾಧಕನಾದ ನಾಗರುಸಿಯನ್ನು ನಾರಾಯಣ ದ್ವೇಷಿಯಾದ ಸೊವರ್ಣಕೇಶಿ ಕೆಣಕಿದ್ದರಿಂದ ಆತ ಹುಟ್ಟುಕುರುಡನಾಗಲೆಂಬ ಶಾಪ; ಅವನ ಹೆಂಡತಿ ನೂರು ಕೆಟ್ಟ ಮಕ್ಕಳ ಹೆರಲೆಂಬ ಶಾಪಕ್ಕಾಗಿ ಅವಳ ಗರ್ಭವನ್ನು ದುಷ್ಟ ಹಾಗೂ ಮಾಯ ಹಾವನ್ನು ಹೋಗಿಸಿ, ಹೊರ ಬರುವಂತೆ ಮಾಡಿದ್ದು; ಈತನ ಮಂತ್ರಿಯಾದ ಶ್ವೇತಕೇತುವಿಗೆ ಸಂಸಾರ ಸುಖ ಇಲ್ಲವಾಗಲಿ ಎಂಬ ನಾಗರುಸಿಯ ಶಾಪ ತಟ್ಟುವುದು.

ಇಂತಹ ನೂರು ಜನ ದುಷ್ಟರು ಹುಟ್ಟುತ್ತಾರೆಂಬ ಕಾರಣಕ್ಕಾಗಿ ಹಾಗೂ ಅವರ ನಿರ್ಮೂಲನದ ಕಾರಣಕ್ಕಾಗಿ ನಾರಾಯಣ ತಾನು ಭೂಮಿಯಲ್ಲಿ ಕೃಷ್ಣನಾಗಿ ಅವತರಿಸುತ್ತಾನೆ.

ಸೊವರ್ಣಕೇಶಿ ಸತ್ತಾಗ ಆತನ ತಮ್ಮ ತಾಮ್ರಕೇಶಿ ತಾನು ಯಾರ ತಲೆ ಮೇಲೆ ಕೈಯಿಡುತ್ತಾನೆಯೋ ಅವರು ಭಸ್ಮವಾಗಬೇಕೆಂಬ ವರ ಕೇಳುತ್ತಾನೆ. ಅದನ್ನು ಶಿವ ನೀಡುತ್ತಾನೆ. ಅದರ ಪ್ರಯೋಗವನ್ನು ಪ್ರಾಯೋಗಿಕವಾಗಿ ಕೊಟ್ಟವನ ಮೇಲೆಯೇ ಪ್ರಯೋಗಿಸಲು ಹೊರಟಾಗ ಶಿವ ಪರಾರಿಯಾಗುತ್ತಾನೆ. ಇದರಿಂದ ಕಂಗಾಲಾದ ಪಾರ್ವತಿ 'ಪತಿಭಿಕ್ಷಾಂದೇಹಿ' ಎನ್ನುತ್ತಾಳೆ. ಇದನ್ನು ಸಹಜವಾಗಿಯೇ ಐದು ಬಾರಿ ಉಚ್ಚರಿಸುತ್ತಾಳೆ. ಇದನ್ನು ಕೇಳಿದ ಬ್ರಹ್ಮ, ವಿಷ್ಣು ಅದನ್ನು ಅವಳಿಗೆ ವರವನ್ನಾಗಿ ಕರುಣಿಸುತ್ತಾರೆ. ಅದರಂತೆ ಶಿವನು ತನ್ನ ಒಟ್ಟು ಶಕ್ತಿಯ ಭಾಗವೇ ಆದ ಯಮ, ವಾಯು, ಇಂದ್ರ, ಅಶ್ವಿನಿದೇವತೆಗಳ ರೂಪದಲ್ಲಿ ಅವಳಿಗೆ ಮುಂದಿನ ಜನ್ಮದಲ್ಲಿ ಗಂಡಂದಿರಾಗಿ ಹುಟ್ಟುತ್ತಾರೆ. ಈ ನಡುವೆ ಶಿವನನ್ನು ಹುಡುಕಿ ಪಾರ್ವತಿಯನ್ನು ಕಂಡ ತಾಮ್ರಕೇಶಿ ಅವಳನ್ನು ತಬ್ಬಲು ಹೊರಟಾಗ ಅವಳು ಶಪಿಸುತ್ತಾಳೆ. ಅದರಂತೆ ಅವನು ಶತ್ರುವಿನ ಶತ್ರುಗಳನ್ನು ಶತ್ರುಗಳ ಮೂಲಕ ಕೊಲ್ಲಿಸುವ ಶಕುನಿಯಾಗಿ ಹುಟ್ಟುತ್ತಾನೆ.

ಹೀಗೆ ಒಟ್ಟು ಕಾವ್ಯದ ೧೫೫ ಪರ್ವಗಳಲ್ಲಿ ಆರಂಭಿಕವಾದ ಕೇವಲ ೧೧ ಪರ್ವಗಳಲ್ಲಿ ಮಾತ್ರವೇ ಇವಿಷ್ಟೂ ಶಾಪ ಮತ್ತು ವರಗಳು ಕಂಡುಬರುವುದು. ಇಂತಹವುಗಳ ಅಸ್ತಿತ್ವ ಇಡೀ ಕಾವ್ಯದಲ್ಲಿ ಇರುವುದಾದರೂ ಇವುಗಳ ಸರಾಸರಿ ಪ್ರಮಾಣ ಮಾತ್ರ ಅತ್ಯಂತ ಕಡಿಮೆ ಇದೆ. ಬಹುಶಃ ಇದಕ್ಕೆ ಕಾರಣ–ಇಡೀ ಕೃತಿಯ ವ್ಯಾಪಕ ಹಾಗೂ ಅತ್ಯಂತ ಸಂಕೀರ್ಣ ಕತೆಗೆ ಬೇಕಾದ ಕಾರ್ಯಕಾರಣ ಸಂಬಂಧವನ್ನು ಕೃತಿಯ ಪೀಠಿಕಾ ಸ್ತರದಲ್ಲಿಯೆ ಕಟ್ಟಿಕೊಡಬೇಕು ಎಂಬ ತಿಳಿವಳಿಕೆ ಕವಿಗಿರುವುದಾಗಿದೆ.

ಇಲ್ಲಿ ಅನೇಕ ಸಂಖ್ಯೆಯ ಶಾಪಗಳು, ವರಗಳು ಕಂಡು ಬಂದಿವೆಯೆಂದರೆ; ಇದಕ್ಕೆ ಕಾರಣ ಈಗಾಗಲೇ ಪ್ರಸ್ತಾಪಿಸಿರುವಂತೆ ವಿಸ್ತಾರವಾದ ಮತ್ತು ಸಂಕೀರ್ಣವಾದ ಕತೆಗೆ ಯಾವುದೋ ಒಂದು ಶಾಪ ಮತ್ತು ವರ ಕಾರ್ಯಕಾರಣ ಸಂಬಂಧವಾಗಿ ಬಂದರೆ ಸಾಲದು; ಅವು ಸಂಖ್ಯೆಯಲ್ಲಿ ಹೆಚ್ಚು ಇರಲೇಬೇಕು ಎಂಬ ಇನ್ನೊಂದು ತಿಳಿವಳಿಕೆ ಕವಿಗಿರುವುದಾಗಿದೆ. ಇದರರ್ಥ: ಪ್ರತಿಯೊಂದು ಪಾತ್ರವೂ ಸನ್ನಿವೇಶವೂ ತನ್ನದೇ ಆದ ಕ್ರಿಯಾತ್ಮಕತೆ

(Functional)ಯ ಗುಣವನ್ನು ಹೊಂದಿರುವುದು. ಕ್ರಿಯಾಶೂನ್ಯ ಪಾತ್ರ, ಸನ್ನಿವೇಶಗಳು ಬಿಗಿ ಬಂಧದ ಕೃತಿಗಳಲ್ಲಿ ಈ ಅಸ್ತಿತ್ವವನ್ನು ಪಡೆದಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಇಲ್ಲಿಯ ಪ್ರತೀ ಶಾಪವೂ ವರವೂ ಈ ಕ್ರಿಯಾತ್ಮಕತೆಯ ಗುಣವನ್ನು ಹೊಂದಿಯೇ ಇದೆ. ಕಥಾನಕದ ಪ್ರತೀ ಪಾತ್ರವು ಕತೆಯ ಆಶಯದ ಸಂವಹನಕ್ಕೆ ಹೇಗೆ ಒಂದು ಸಾಧನವೋ ಹಾಗೆಯೇ ಇಲ್ಲಿಯ ಶಾಪ ಮತ್ತು ವರವೂ ಆಗಿದೆ. ಈ ಅಧಿಕ ಸಂಖ್ಯೆಯ ಇವುಗಳಲ್ಲಿ ಯಾವುದಾದ ರೊಂದನ್ನು ಕಳಚಿದರೂ ಕೃತಿಯ ಕತೆಯ ಓಘಕ್ಕೆ ತಾರ್ಕಿಕ ನೆಲೆ ಕುಸಿಯುವುದರಿಂದ ಪ್ರತಿಯೊಂದೂ ಇಲ್ಲಿ ಮುಖ್ಯ. ಇಂತಹ ಶಾಪ ಮತ್ತು ವರಗಳ ನಿರ್ಮಾಣ ಇಲ್ಲಿ ತಂತ್ರದ ಮುಖ್ಯ ಭಾಗವೂ ಹೌದು. ಈ ನೆಲೆಯಲ್ಲಿ ಇಲ್ಲಿಯ ಜನಪದ ಕವಿ ವಿವೇಕವನ್ನೂ ಪ್ರತಿಭೆಯನ್ನೂ ತೋರಿದ್ದಾನೆ. ಇದನ್ನು ಅಷ್ಟೇ ಶಾಸ್ತ್ರೀಯವಾಗಿ ಸಂಪಾದಕರು ಶಾಸ್ತ್ರೀಯ ಗೊಳಿಸಿದ್ದಾರೆ.

ಇಲ್ಲಿಯ ಮುಖ್ಯ ಕತೆ ಪಾಂಡವ ಮತ್ತು ಕೌರವ ಎಂಬ ಎರಡು ಊಳಿಗಮಾನ್ಯ ಪ್ರಭುವರ್ಗಗಳ ನಡುವಿನ ಸಂಘರ್ಷವೆ ಆಗಿದೆ. ಇದು ಜನತೆಯ ನೆಲೆಯ ಸಂಘರ್ಷವಲ್ಲ; ವೈಯಕ್ತಿಕತೆಯ ನೆಲೆಯ ಮತ್ಸರದಲ್ಲಿ ಹುಟ್ಟಿದ ಸಂಘರ್ಷ. ಇಲ್ಲಿಯ ಪಾತ್ರಗಳೆಲ್ಲವೂ ಉಳ್ಳವರ ವರ್ಗದಿಂದಲೇ ಮೈವೆತ್ತವು. ಆದರೆ ಅವೆಲ್ಲವುಗಳ ಜೀವಾಳ ಸಾಮಾನ್ಯ ಮನುಷ್ಯನದ್ದೇ ಆಗಿದೆ. ಅದು ಭಾಷೆ, ಸಂವೇದನೆ, ನಾಟಕೀಯತೆ, ಮಾನವ ಸಹಜ ನಡೆವಳಿಕೆ–ಹೀಗೆ ಅನೇಕ ನೆಲೆಗಳಲ್ಲಿ ಕಾಣುತ್ತದೆ. ಹೀಗೆ ಎರಡು ವರ್ಗಗಳ ನಡುವಿನ ದಾಯಾದಿ ಮತ್ಸರದ ಹುಟ್ಟು, ಬೆಳೆವಣಿಗೆ ಮತ್ತು ಪರಿಣಾಮ ಕಾವ್ಯದ ಕೇಂದ್ರ ನೆಲೆಯಾದುದರಿಂದ ಇದರ ಪರಿಧಿಯಲ್ಲಿ ಬರುವ ಪಾತ್ರಗಳು ಮಾತ್ರ ವಿಶಾಲವಾದ ತಳಹದಿ ಮತ್ತು ವಿಪುಲ ವಿವರಗಳಿಂದ ಕೂಡಿದವುಗಳಾಗಿ ಕಾಣುತ್ತವೆ. ಧರ್ಮ, ಭೀಮ, ಅರ್ಜುನ, ನಕುಲಸಹದೇವರು; ಅಂತೆಯೇ ದುರ್ಯೋಧನ, ದುಶ್ಯಾಸನ ಮುಂತಾದವರು. ಇವರ ಸಮಕಾಲೀನರಾದ ಕರ್ಣ ಮುಂತಾದವರು ಇಲ್ಲಿ ಪ್ರಸ್ತುತ. ಇವರನ್ನುಳಿದಂತೆ ಕೃತಿಯ ಕಥಾನಕದ take upನಲ್ಲಿ ಕಾಣುವ ಪ್ರಬಂಧದ ಆರಂಭದಲ್ಲಿ ಕಾಣಿಸಿದ ಪಾತ್ರಗಳು ಕೃತಿಯ ಆಶಯವೆಂಬ ಮುಖ್ಯ ಕಾರ್ಯಕ್ಕೆ ಕಾರಣವನ್ನು ಕಲ್ಪಿಸುವ ಪಾತ್ರಗಳೆಂಬ ಸಾಧನಗಳಾಗಿ ಮಾತ್ರ ಬರುತ್ತವೆ. ಆದ್ದರಿಂದ ಅವುಗಳ ಬಾಹುಳ್ಯ ಮತ್ತು ಅವುಗಳ ಕ್ರಿಯೆ ಕೂಡ ಚಿಕ್ಕದು ಮತ್ತು ಚೊಕ್ಕದು ಆಗಿ ಕವಿಯಿಂದ ಕಂಡರಣೆಗೆ ಒಳಗಾಗಿರುವುದು.

ಹೀಗೆ 'ಜನಪದ ಮಹಾಭಾರತ'ವೆಂಬ ಅಬ್ಧಿರೂಪದಲ್ಲಿ ಆರಂಭಿಕ ಹನ್ನೊಂದು ಪರ್ವಗಳು ವಿಶಿಷ್ಟ ಚರ್ಚೆಗೆ ಚಾಲನೆ ನೀಡುತ್ತವೆ. ಇವುಗಳನ್ನು ಅನುಸರಿಸಿ ಹೊರಟಾಗ ಜಾನಪದದ ವಿವೇಕ ಪ್ರತಿಭೆ ಅಕ್ಷರವನ್ನು ಸಹ ಒಮ್ಮೆ ಕಂಪಿಸುವಂತೆ ಮಾಡುವುದು ಭಾಸವಾಗುತ್ತದೆ.

❑

ಕೊಲೇರಿಜನ ಕನಸಿನಲ್ಲಿ ಕಂಡ ದರ್ಶನದ ತುಣುಕುಗಳು

• ಎಂ.ಆರ್. ನರಸಿಂಹನ್

ಇಂಗ್ಲೀಷ್ ಸಾಹಿತ್ಯದಲ್ಲಿ ಸ್ಯಾಮ್ಯುಯಲ್ ಟೈಲರ್ ಕೊಲೇರಿಜನ ಸ್ಥಾನ ವಿಶೇಷತೆಯಿಂದ ಕೂಡಿದೆ. ಆತ ವರ್ಡ್ಸ್‌ವರ್ಥ್ ಕವಿಯೊಡನೆ ಸೇರಿಕೊಂಡು 'ಲಿರಿಕಲ್ ಬ್ಯಾಲೆಡ್ಸ್' ಎಂಬ ಪದ್ಯ ಪ್ರಕಾರವನ್ನು ಪ್ರಸಿದ್ಧ ಗೊಳಿಸಿದನೆಂದು ಹೇಳಿಕೆ. ಆತನ "ರೈಮ್ ಆಫ್ ದಿ ಏನ್ಷೆಂಟ್ ಮ್ಯಾರಿನರ್" ಆತನಿಗೆ ಹೆಸರು ತಂದುಕೊಟ್ಟಿತೆಂದು ಸಾಹಿತ್ಯ ಚರಿತ್ರೆಯಿಂದ ತಿಳಿದುಬರುತ್ತದೆ. ಆತನ ಕಾಲ ೧೭೭೨ ರಿಂದ ೧೮೩೪.

ಆತನು ೧೭೯೭ರಲ್ಲಿ 'ಕುಬ್ಲಾಖಾನ್' ಎಂಬ ಒಂದು ಕವಿತೆಯನ್ನು ರಚಿಸಿದ. ಅದರ ರಚನೆಯ ಬಗ್ಗೆ ಸ್ವಾರಸ್ಯಕರವಾದ ವಿಚಾರವಿದೆ.

ಆತನಿಗೆ ಮೈ ಹುಷಾರಾಗಿರಲಿಲ್ಲದ ಪ್ರಯುಕ್ತ ಆತ ಪೋರ್‌ಲಾಕ್ ಮತ್ತು ಲಿಂಟನ್ ಎಂಬ ಊರುಗಳ ನಡುವೆ ಇದ್ದ ತೋಟದ ಮನೆಯೊಂದರಲ್ಲಿ ಏಕಾಂಗಿಯಾಗಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ. ವೈದ್ಯರು ಅವನ ಬಾಯಿಗೆ ಅಫೀಮಿನಿಂದ ಕೂಡಿದ ಔಷಧಿಯನ್ನು ಸೇವಿಸಲು ನೀಡಿದ್ದರು. ಆತ ಆ ಔಷಧಿಯನ್ನು ಸೇವಿಸಿ "ಪರ್‌ಚಾಸಸ್ ಫಿಲ್‌ಗ್ರಿಮೇಜ್" ಎಂಬ ಪುಸ್ತಕವನ್ನು ಓದುತ್ತಾ ಕುರ್ಚಿಯ ಮೇಲೆ ಕುಳಿತಿದ್ದ. "ಕುಬ್ಲಾಖಾನ್ ಎಂಬಾತ ಆ ಜಾಗದಲ್ಲಿ ಅರಮನೆಯೊಂದನ್ನು ನಿರ್ಮಿಸಲು ಆದೇಶ ನೀಡಿ ಅದಕ್ಕಾಗಿ ಹತ್ತುಮೈಲಿಯಷ್ಟು ನಿವೇಶನವನ್ನು ಸಿದ್ಧಗೊಳಿಸಿ ಅದರಲ್ಲಿ ನಂದನವನದ ವೈಭವದ ತೋಟವನ್ನು ನಿರ್ಮಾಣ ಮಾಡಿ ಅದರ ಸುತ್ತಲೂ ಗೋಡೆಯನ್ನು ಎಬ್ಬಿಸಿದ" ಎಂಬ ಭಾಗವನ್ನು ಓದುತ್ತ ಕಲ್ಪನಾ ವಿಲಾಸದಲ್ಲಿ ವಿಹರಿಸುತ್ತಿದ್ದಾಗಲೇ ಅಫೀಮಿನ ಪ್ರಭಾವ ದಿಂದ ಗಾಢ ನಿದ್ರೆ ಆವರಿಸಿಬಿಟ್ಟಿತು. ಮೂರು ಗಂಟೆ ಕಾಲ ಆತ ನಿದ್ರಿಸಿದನೆಂದು ತೋರುತ್ತದೆ. ಹಾಗೆ ಆತನಿಗೆ ನಿದ್ರೆ ಬಾರದಿದ್ದರೆ ಆತನ

ಕಲ್ಪನೆಯಲ್ಲಿ ಮೂಡಿದ್ದ ಭಾವಗಳು ಬಂದು ಸೊಗಸಾದ ಕವಿತೆಯ ೨೦೦ ಅಥವಾ ೩೦೦ ಸಾಲುಗಳಲ್ಲಿ ಆ ಕಾಲದಲ್ಲಿ ಆತನ ಕೈಯಿಂದ ಹೊರಬರುತ್ತಿದ್ದಿತು ಎಂದು ವಿಮರ್ಶಕರು ಅಭಿಪ್ರಾಯ ಪಡುತ್ತಾರೆ. ಆದರೆ ಗಾಢನಿದ್ರೆಯಿಂದ ಇದಕ್ಕೆ ವಿಘ್ನವುಂಟಾಯಿತು. ಆತ ನಿದ್ರೆಯಿಂದ ಎಚ್ಚೆತ್ತಾಗ ಈ ಭಾವನೆಗಳು ಆತನ ಮನಸ್ಸಿನಲ್ಲಿ ಕನಸಿನೋಪಾದಿ ನೆಲೆಗೊಂಡಿದ್ದು ಆತ ತಕ್ಷಣವೇ ಕವಿತೆಯನ್ನು ಬರೆಯಲಾರಂಭಿಸಿಬಿಟ್ಟ, ಸುಮಾರು ಸಾಲುಗಳನ್ನು ಬರೆದೂಬರೆದ. ಆದರೆ ಅವನ ಗ್ರಹಚಾರವೋ ನಮ್ಮ ಗ್ರಹಚಾರವೋ ಆತನಿಗೆ ಪರಿಚಿತನಾಗಿದ್ದ ಓರ್ವ ಆತನೊಡನೆ ಯಾವುದೋ ಮುಖ್ಯ ವಿಚಾರ ಚರ್ಚಿಸಲು ಬಂದಿರಲು ಕೋಲೇರಿಜ್ ಆತನ ಜೊತೆ ಸಂಭಾಷಿಸಲು ತೆರಳಿದ. ಸುಮಾರು ಒಂದು ಗಂಟೆಯ ಕಾಲ ಮಾತುಕತೆ ನಡೆಸಿ ಹಿಂದಕ್ಕೆ ಬಂದು ಬರೆಯುವುದನ್ನು ಮುಂದುವರಿಸಲು ಪ್ರಯತ್ನಿಸಿದಾಗ ಆತನ ಮನಸ್ಸಿನಿಂದ ಭಾವನೆಗಳೆಲ್ಲಾ ಮಸುಕುಮಸುಕಾಗಿಬಿಟ್ಟಿದ್ದವು. ಆತನಿಗೆ ಹೇಗೆ ಮುಂದುವರಿಸಬೇಕೆಂಬುದೆ ತಿಳಿಯದೇ ಹೋಗಿ ಗೊಂದಲ ಪರಿಸ್ಥಿತಿ ಏರ್ಪಟ್ಟಿತು. ಹಾಗೂ ಹೀಗೂ ಕೆಲವು ಸಾಲುಗಳನ್ನು ಬರೆದರೂ ಅವನಿಗೇ ಮೊದಲಿನ ಅರ್ಧ ಕವಿತೆಯ ವಸ್ತುವಿಗೂ ಈಗಿನ ಸಾಲುಗಳ ವಿನ್ಯಾಸಕ್ಕೂ ಸಾಮಂಜಸ್ಯವೇ ತೋರಿಬರದೆ ಪದ್ಯ ಅಪೂರ್ಣವಾಗಿಯೇ ಇದೆಯೆಂಬ ಭಾವ ಅವನಲ್ಲಿ ಜನಿಸಿತು. ಆದ್ದರಿಂದಲೇ ಆತನೇ ಅಸಂತುಷ್ಟಿಯಿಂದ ಈ ಕವಿತೆಯನ್ನು "ಕುಬ್ಲಾಖಾನ್- ಒಂದು ಕನಸ್ಸಿನಲ್ಲಾದ ದರ್ಶನದ ತುಣುಕುಗಳು" ಎಂಬುದಾಗಿ ಕರೆದನು ಎಂಬುದಾಗಿ ಸಾಹಿತ್ಯದ ಇತಿಹಾಸದಿಂದ ತಿಳಿದುಬರುತ್ತದೆ.

ಇದರ ಪ್ರಕಟನೆಯ ವಿಚಾರವೂ ಗೊಂದಲಮಯವಾಗಿಯೇ ಇದೆ. ಅದೂ ಸಾಕಷ್ಟು ಕುತೂಹಲಕರವಾಗಿದೆ ಎನ್ನಬಹುದು. ಕೊಲೆರೀಜನೇ ಒಂದು ಕಡೆ ಈ ಪದ್ಯ ೧೭೯೭ರ ಬೇಸಿಗೆಯ ಸಮಯದಲ್ಲಿ ಬರೆಯಲ್ಪಟ್ಟಿತೆಂದು ಹೇಳಿಕೆ ನೀಡಿದ್ದಾನೆ. ಇಂಗ್ಲೀಷ್ ಸಾಹಿತ್ಯದ ಬಗ್ಗೆ ಬಲ್ಲವರು ಇದು ಆ ಕಾಲದಲ್ಲಿ ಬರೆಯಲ್ಪಡಲೇ ಇಲ್ಲವೆಂದೂ ವಾದಿಸುತ್ತಾರೆ. ಏಕೆಂದರೆ ಇದು ಪ್ರಕಟಗೊಂಡದ್ದೇ ೧೮೧೬ರಲ್ಲಿ. ಆಗಲೂ ಇದನ್ನು ಓದಿದ ಜನ "ಇದೂ ಒಂದು ಕವಿತೆಯೇ?" ಎಂದು ಮೂಗುಮುರಿದರಂತೆ. ೧೮೧೭ರಲ್ಲಿ "ಮಂತ್ಲೀ ರೆವ್ಯೂ" ಎಂಬ ಪತ್ರಿಕೆಯು "ಇದು ವಿಮರ್ಶೆಗೇ ಅನರ್ಹವಾದ ಕವಿತೆ" ಎಂದೂ ೧೮೨೮ರಲ್ಲಿ ಲಂಡನ್ ವೀಕ್ಲಿ ರೆವ್ಯೂ" ಎಂಬ ಪತ್ರಿಕೆ "ನಾವು ಕೀರ್ತಿಯ ಹೊಸ್ತಿಲ ಮೇಲೆ ನಿಲ್ಲುವಂತಹ ಕವಿತೆ ಎಂಬುದಾಗಿ ಇದನ್ನು ಪರಿಗಣಿಸಲಾಗುವುದಿಲ್ಲ" ಎಂಬುದಾಗಿಯೂ ವಿಮರ್ಶಿಸಿದವು.

ಆದರೆ ಕಾಲಕ್ರಮದಲ್ಲಿ ಇಂಗ್ಲೀಷ್ ಸಾಹಿತ್ಯದ ಲಾಕ್ಷಣಿಕರು "ಆ ಹಿಂದಿನ ವಿಮರ್ಶಕರಿಗೆ ಈ ನವೀನ ರೀತಿಯ ಕವಿತಾಪ್ರಕಾರ ಸೃಷ್ಟಿಯ ಬಗ್ಗೆ ಸ್ವಲ್ಪವೂ ಪರಿಚಯ ಇರದುದ್ದರಿಂದ ಆ ರೀತಿ ಅಸಂಬದ್ಧವಾಗಿ ಹೇಳಿಕೆ ನೀಡಿದ್ದಾರೆ. ಆದರೆ ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ಇದೊಂದು ಹೊಸ ತರಹದ ಕವಿತಾ ವಿಧಾನ. ಇದು ಅಸಾಧಾರಣ ಕವಿತಾ ಪ್ರಕಾರದಿಂದ ಕಂಡಿರುವುದು ಮಾತ್ರವಲ್ಲದೆ ಇದರಲ್ಲಿ ತುಂಬಿರುವ ಕಲ್ಪನಾ ವಿಲಾಸವೂ ಕೂಡ (ರೊ-ಮ್ಯಾಂಟಿಸಿಸಂ) ಉತ್ತಮವಾದ ಭಾವಗೀತೆಯೆಂದು ಸಾರುವುದಕ್ಕೆ ಅರ್ಹತೆ ಪಡೆದಿದೆ"

ಎಂಬುದಾಗಿ ಕಂಡುಕೊಂಡರು. ಹೀಗೆ ಕವಿತಾಪ್ರಪಂಚದಲ್ಲೇ 'ಕುಬ್ಲಾಖಾನ್' ಒಂದು ನವೀನ ದಾಖಲೆ ಸ್ಥಾಪಿಸಿತು, ಕೊಲೇರಿಜನು ನವ ಕವಿತಾ ಮಾರ್ಗದ ನಿರ್ಮಾಪಕನೆನಿಸಿಕೊಂಡನು.

ಆದರೆ ಇನ್ನೊಂದು ಹೇಳಿಕೆಯೂ ಇದೆ. ಈತ ಅಫೀಮುಕೋರರ ಗುಂಪಿಗೆ ಸೇರಿ ಅಸಂಬದ್ಧವಾಗಿಯೂ, ಅಸ್ಪಷ್ಟವಾಗಿಯೂ ಕವಿತೆ ರಚಿಸಿದ್ದಾನೆಂಬ ಅಪವಾದಕ್ಕೂ ಈತ ಗುರಿಯಾಗಿದ್ದಾನೆ. ಈತನ ಕಡೆಗಾಲದಲ್ಲಿ ಈತ ಅಫೀಮಿನ ದಾಸನಾಗಿಯೂ, ಏಕಾಂಗಿಯಾಗಿಯೂ, ದಾರುಣತೆಯಲ್ಲೂ ಇರಬೇಕಾಗಿ ಬಂದಿತೆಂದು ಹೇಳಿಕೆ ಇದೆ.

ಇವು ಹೇಗಾದರೂ ಇರಲಿ, ಕುಬ್ಲಾಖಾನ್ ಅಪೇರಾಗಳಲ್ಲಿ ಹಾಡಲು ವಾದ್ಯ ವೃದಂಗಳಿಗೆ ಸ್ಫೂರ್ತಿದಾಯಕವಾಗಿಯೂ, ರಾಗಬದ್ಧವಾಗಿಯೂ ಸಂಯೋಜಿಸಲ್ಪಟ್ಟಿದೆಯೆಂಬ ಪ್ರಶಂಸೆಗೆ ಪಾತ್ರವಾಯಿತು. ಇಂದಿಗೂ ಲಂಡನ್‌ನ ಬ್ರಿಟೀಷ್ ಮ್ಯೂಸಿಯಂನಲ್ಲಿ ಇದರ ಹಸ್ತಪ್ರತಿಯು ಕೊಲೇರಿಜನ "ಕನಸಿನಲ್ಲಿ ಕಂಡ ದರ್ಶನದ ತುಣುಕುಗಳು" ಎಂಬ ಷರಾದೊಂದಿಗೆ ಖಾಯಂ ಆಗಿ ಪ್ರದರ್ಶನಗೊಳ್ಳುತ್ತಿದೆ ಎಂದಾಗ ಅದರ ಮಹತ್ವದ ಅರಿವಾದೀತು. ಈ ಕವನದ ಪೂರ್ವಾರ್ಧ ಮತ್ತು ಉತ್ತರಾರ್ಧಗಳನ್ನು ಗಮನಿಸಿದಾಗ ಮೊದಲಿನ ಭಾಗದಲ್ಲಿ ಒಂದು ಓಟವೂ ವಸ್ತುಗಳ ಸಂಬಂಧವೂ, ಒಂದು ಕಥಾಚಿತ್ರಣವೂ ಕಾಣಬರುತ್ತದೆ. ಆದರೆ ಎರಡನೆ ಭಾಗದ ವಸ್ತುವು ಮೊದಲಿನ ಭಾಗದೊಂದಿಗೆ ಹೊಂದಾಣಿಕೆಯೂ ಇಲ್ಲದೆ ವಿಚಾರವು ಅಸ್ಪಷ್ಟವಾಗಿಯೇ ಇರುವುದು ಮಾತ್ರವಲ್ಲದೆ ಕವಿಯು ಏನು ಹೇಳಬೇಕೆಂದಿರುವನೆಂಬುದೇ ಗೊಂದಲಗೊಂಡಿರುವಂತಿದೆ. ಈ ಭಾಗ ಕೊಲೇರಿಜನು ಆತನ ಗೆಳೆಯನೊಂದಿಗೆ ಮಾತು ಮುಗಿಸಿ ಹಿಂದಕ್ಕೆ ಬಂದಾಗ ಆತನ ಮನಸ್ಸಿನಲ್ಲಿದ್ದ ಭಾವಗಳು ಕರಗಿಹೋಗಿದ್ದು, ಅವುಗಳ ವಿನ್ಯಾಸ ಮಸುಕುಮಸುಕಾಗಿ ಉಳಿದು ಅವುಗಳನ್ನು ಕಷ್ಟಪಟ್ಟು ವಿವರಿಸುವ ರೀತಿಯಲ್ಲಿ ಸಂಯೋಜನೆಗೊಂಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಹೀಗಾಗಿ ಈ ಕವಿತೆ ಅರ್ಧಂಬರ್ಧ ರಚನೆ ಎನ್ನಲೂ ಅಡ್ಡಿ ಇಲ್ಲ. ಒಂದು ರೀತಿಯಿಂದ ಪೂರ್ಣವೆಂದರೂ ಅದೂ ಸರಿ ಎಂಬುವಂತೆ ತೋರುತ್ತದೆ. ಆ ಕವಿತೆಯ ಕನ್ನಡಾನುವಾದವನ್ನು ನಾನು ಈ ರೀತಿ ಮಾಡಿದ್ದೇನೆ. ಮೂಲ ಕವಿತೆಯಲ್ಲಿ ಕವಿ ಮೂರು ನಾಲ್ಕು ಇಂಗ್ಲೀಷ್ ವೃತ್ತಗಳಲ್ಲಿ ಇದರ ರಚನೆ ಮಾಡಿದ್ದಾನೆ. ಆದರೆ ಅನುವಾದದಲ್ಲಿ ನಾನು ಮೊದಲಿನಿಂದ ಕಡೆಯವರೆಗೂ ಒಂದೇ ರೀತಿಯ ಶೈಲಿಯಲ್ಲಿ ರಚಿಸಿದ್ದೇನೆ. ಇದಕ್ಕಾಗಿ ವಾಚಕರ ಕ್ಷಮೆ ಕೋರುತ್ತೇನೆ.

ಕುಬ್ಲಾಖಾನ್

(ಕನಸಿನಲ್ಲಿ ಕಂಡ ದೃಶ್ಯಗಳ ತುಣುಕುಗಳು)

ಜೇನಾಡೊಳಗೆ ಕುಬ್ಲಾಖಾನನು
ಗುಮ್ಮಟ ಹೊಂದಿದ ವಿಹಾರ ಮಹಲನು
ಪವಿತ್ರವೆನಿಪಾ ಆಲ್ಫ್ ಹೊನಲದು
ನರಮಿತಿಗತೀತ ಗುಹೆಗಳೊಳಿಳಿದು

ಸಾಗುತರವಿಭವಿ ಕಾಣದುದಧಿಯನು
ಸೇರ್ವೆಡೆ ನಿರ್ಮಿಸೆ ಆಣತಿಯಿತ್ತನು !

ಹತ್ತು ಮೈಲಿ ಫಲವತ್ತು ನೆಲದೊಳು
ಎದ್ದುವು ಕೋಟೆ ಕೊತ್ತಳ ಸುತ್ತಲು
ಝುರಿಗಳು ಹರಿಯುವ ನಂದನದಲ್ಲಿ
ಕರುಗಳು ನಿಂದುವು ಕಂಪನು ಚೆಲ್ಲಿ !
ಪ್ರಾಕೃತ ಗಿರಿಬನ ಬಳಸಿದುವವನು
ವಿಹಾರ ನೆಲೆಗಳು ಹೊತ್ತವು ಹಸಿರನು !

ಆದರೆ ಓ ! ಗಿರಿ ಜಾರಲಿ ಬಿರುಕು-
ಮರೆಗಳ ಮರೆಯಲಿ ಹಬ್ಬಿತು ತಳಕು !
ಮಾಂತ್ರಿಕ ನೆಲವದು ! ಕಾಂತವದೆಂತು
ಭೀಮವು ಅಂತೇ ತಾರಾಭರ್ತು
ಕಾಂತಿಗುಂದಿರಲು, ನಡುನಿಶೆಯಲ್ಲು
ನಿತ್ಯ ನಿರೀಕ್ಷೆಯಲೊರ್ವಳು ನಿಲುವಳು
ಭೂತಪ್ರಣಯಿಯ ವಿರಹೋನ್ಮತ್ತೆ
ಆಕ್ರಂದನವೆಲ್ಲೆಡೆ ಹಬ್ಬಿಸುತೆ !

ಬಿರುಕಿನ ತಳದಿಂ ಕೇಳಿಬರುತ್ತಿದೆ
ಕುದಿಯುವ ದ್ರವದ ರವ ಸಂತತದೆ !
ಚಲ್ಲಣ ಬಿಗಿದಿರೆ ಉಬ್ಬಸ ಪಡುವೊಲು
ತಿರೆಯೇದುಸಿರಿಂ ತಪಿಸಿರಲು,
ಚಿಲ್ಲನೆ ಚಿಲುಮೆಯು ಒಮ್ಮೆಲೆ ಚಿಮ್ಮಿತು
ನಿಲ್ಲುತ, ನೆಗೆಯುತಲೆತ್ತರಕೆರಚಿತು
ಬಂಡೆಗಲ್ಲುಗಳ; ಮತ್ತವು ಬೀಳಲು
ತೋರಿತು ಐಕಿಲ್ ವರ್ಷದೊಲು!
ತೆನೆಗಳ ಬಡಿಯುವ ಯಂತ್ರದಿ ಸಿಡಿದುದೊ
ಹೊಟ್ಟುಕಳಚಿದ ಧಾನ್ಯದ ಪರಿಯದೊ !

ಕೆಡೆಯುತುರುಳುವ ಅರೆಗಳ ಮಧ್ಯದಿ
ಹೊಮ್ಮಿತು ಒಮ್ಮೆಗೆ ಪುಣ್ಯನದಿ !
ಐದು ಮೈಲಿಗಳ ಚೆಲ್ಲನಡಿಗೆಯಿಂ
ಕಾಡು ಮೇಡೊಳು ಗುರಿಯಿಲ್ಲದೆಯುಂ,
ಹಾದು ಹರಿಯುತ ಗವಿಯಾಳಂಗಳ

ಮಾನವನಳತೆಗೆ ಮೀರಿದ ನೆಲೆಗಳ,
ಕಳೆಯುತ ಮೊರೆಯಿತು ವಾರಿಯಧಾರೆ
ನಿರ್ಜೀವಾಂಬುಧಿಗರ್ಭವ ಸೇರೆ !

ಅಬ್ಬರವಿದರೊಳು ಕುಬ್ಲನಾಲಿಸಿದ
ಸಮರಭವಿಷ್ಯವ ಪಿತೃಗಳೊರೆದುದ !
ವಿಹಾರ ಮಹಲಿಗ ಗೋಪುರನೆರಳು
ತೇಲುತಲರ್ಧದೊಳೋಡಿದುವಲೆಯೊಳು !
ಮಿಶ್ರಕ್ರಿಯೆಯಿವು ಕೇಳಿಸಿತೆಲ್ಲಿಂ ?
ಚಿಲುಮೆಗವಿಗಳಿಂದೆದ್ದಾಸೊಲ್ಲಿಂ !
ಅದ್ಭುತವೆನಿಪಾ ವಿರಳ ಹಂಚಿಕೆಯು
ವಿಹಾರಗೋಪುರ, ಮಂಜಿನ ಗವಿಯು !

ವೀಣೆಯ ಪಿಡಿದಾ ವನಿತಾ ಮಣಿಯ
ನ್ನೆಂದೋ ಕಂಡಿರ್ದ ಅದ್ಭುತದೃಶ್ಯ
ಸ್ಫುರಿಸಿದುದೀಗ ಮನಸಿನೊಳು !
ಅಬಿಸೀನಿಯದ ಕನ್ಯೆಯೆ ಅವಳು-
ವೀಣಾಗಾಯನವೆಸಗಿದಳು;
ಅಬೋರಗಿರಿಯ ಸ್ತವನದೊಳು !
ಆದನಿಯಿಂಪು, ಗಾನದ ಪೆಂಪು
ಚಿತ್ತಕಿತ್ತವು ಅತಿಶಯ ತಂಪು !

ಆ ಗಾಯನದ ಭವ್ಯದೆತ್ತರಕೆ
ನಿರ್ಮಿಪೆನಿದಿಗೋ ಭವನವ ಗಾಳಿಗೆ !
ಹೊಳೆದಿರೆ ಗೋಪುರ, ಮಂಜಿನಗಹ್ವರ
ಕೇಳಿರ್ದರೆಲ್ಲರು, ಕಾಂಬರಿದಚ್ಚರ !
ಕಂಡುಗ್ಗಡಿಸುವರೆನಗೆಚ್ಚರವೆಚ್ಚರ !
ಅವನಕ್ಷಿಯ ಹೊಳಹುಗಳಲಕೆಗಳ್ ಬಂಧುರ
ರಚಿಸುಗೆ ವೃತ್ತವ ಸುತ್ತಲು ಮೂರ !
ಧನ್ಯತೆಯಿಂ ನೀವೆವೆ ಮುಚ್ಚುವಿರ !

ಏಕೆನೆ ಅವ ಹಿಮಮಣಿ ಮಧುಹೀರಿಹ;
ಸಂಗಡಸಗ್ಗದ ಪಾಲನುಸವಿದಿಹ !

ಈ ಪದ್ಯ ಮೂಲದಲ್ಲಿ ೫೪ ಸಾಲಿನದಾಗಿದೆ. ಆದರೆ ಅನುವಾದದಲ್ಲಿ ೬೪ ಸಾಲುಗಳಿಗೆ

ಸಾಗಿದೆ. ಈ ಪದ್ಯ ರಚನೆಯನ್ನು ಗಮನಿಸಿದಾಗ ಮೇಲೆ ನೋಡಲು ಸರಳವಾಗಿ ತೋರಿದರೂ ಏನೋ ಸಾಂಕೇತಿಕ ಭಾಷೆಯಿಂದ ಒಳಗೊಂಡಿರುವುದು ಸ್ಪಷ್ಟವಾಗುತ್ತದೆ.

ಆದ್ದರಿಂದ ಇದರ ಸ್ಥೂಲ ಅಧ್ಯಯನ ಮಾಡಿಕೊಳ್ಳುವುದು ಅವಶ್ಯಕವೆನಿಸುತ್ತದೆ. ಇದರ ಮೂಲ ಪುರುಷ ಕುಬ್ಲಾಖಾನ್ ಎಂಬುವನು ಕಾಲ್ಪನಿಕ ವ್ಯಕ್ತಿಯೇನಲ್ಲ. ವಿಶ್ವವಿಖ್ಯಾತನೂ, ಅಪರಾಜಿತನೂ, ಅತಿಕ್ರೂರಿಯೂ ಆಗಿದ್ದ. ಮಂಗೋಲಿಯದ ಪ್ರಭು ಚೆಂಗೇಸ್‌ಖಾನನ ಮೊಮ್ಮಕ್ಕಳಲ್ಲಿ ಒರ್ವನಂತೆ. ಈತ ೧೨೧೫ರಲ್ಲಿ ಜನಿಸಿದನಂತೆ. ಈತನಿಗೂ ತಾತನಂತೆಯೇ ಪ್ರಪಂಚವನ್ನೇ ಜಯಿಸುವ ಹುಚ್ಚು. ಚೈನಾ ದೇಶವನ್ನೆಲ್ಲಾ ಆಕ್ರಮಿಸಿಕೊಂಡು ಪಶ್ಚಿಮದೇಶಗಳ ಕಡೆಗೆ ದಂಡಯಾತ್ರೆ ಹೊರಟು ಹಲವು ಕಡೆ ಜಯಶಾಲಿಯಾಗಿಯೂ ಹಲವು ಕಡೆ ಸೋಲನ್ನು ಅನುಭವಿಸಿಯೂ, ಹಿಡಿದ ಹಟ ಬಿಡದೆ ಸಾಧಿಸುತ್ತ ಮುನ್ನುಗ್ಗಿ ಗ್ರೀಕ್, ರೋಂವರೆಗೂ ಬಂದಿರುವಂತೆ ವ್ಯಾಖ್ಯಾನಕಾರರ ವಿಮರ್ಶೆ ತಿಳಿಸುತ್ತದೆ. ಪದ್ಯದಲ್ಲಿ ಕಂಡುಬರುವ ಜೇನಾಡು ಎಲ್ಲಿರುವುದೆಂಬುದು ಸ್ಪಷ್ಟವಿಲ್ಲ. ಆದರೆ ಗ್ರೀಕ್ ಪುರಾಣದಲ್ಲಿ ಉಕ್ತವಾಗಿದೆ ಎನ್ನಲಾದ ಪವಿತ್ರ ಅಂತರ್ವಾಹಿನಿಯಾದ ಆಲ್ಫ್‌ನದಿ ಸಮುದ್ರವನ್ನು ಸೇರುವೆಡೆಯಲ್ಲಿ ಇರುವುದಾಗಿ ಪದ್ಯ ತಿಳಿಸುತ್ತದೆ. ಆದರೆ ಆಲ್ಫನ ಪಥವೇ ಸ್ಪಷ್ಟವಿಲ್ಲದಿರುವಾಗ ಜೇನಾಡಿನ ಅಸ್ತಿತ್ವವೂ ಅಷ್ಟೇ ಕಲ್ಪನೆಗೆ ಆಸ್ಪದವಾದದ್ದು. ಆದ್ದರಿಂದ ಅದರ ಅನ್ವೇಷಣೆಗೆ ಕೈಹಾಕುವುದು ಅವಿವೇಕ. ಕವಿ ಹೇಳಿದ್ದಾನೆ. ಅದನ್ನು ನಾವು ಅಂಗೀಕರಿಸಿದರೆ ಸಾಕು.

ಗ್ರೀಕ್ ಪುರಾಣದ ಪ್ರಕಾರ ಆಲ್ಫ್, ಅಥವಾ ಆಲ್ಫಸ್, ಗುಪ್ತಗಾಮಿನಿಯಾಗಿ ಪ್ರವಹಿಸಿ ನೆಲದಡಿಯ ಕಂದರಗಳಲ್ಲಿ ಸಂದು ಸೂರ್ಯಕಿರಣವೇ ಬೀಳದೆ ಸಾಗರವನ್ನು ಸೇರುವುದಂತೆ. ಈ ಪ್ರಾಂತ್ಯವನ್ನು ಬೈಬಲ್‌ನ ಈಡನ್ ಇರಬಹುದೇ ಎಂದು ಪ್ರಶ್ನಿಸುತ್ತಾರೆ. ಈಡನ್ ತಾನೇ ಪ್ರಪಂಚದ ಮೊದಲಿನ ಜೀವರಾಶಿಗಳ ಸೃಷ್ಟಿಗೆ ಮಾತೃಸ್ಥಾನವೆನಿಸಿರುವುದು. ಸೇಕ್ರೆಡ್ ಎಂಬ ಪದ್ಯದಲ್ಲಿ ಅಲ್ಲಿಗೆ ಉಪಯೋಗಿಸಿರುವ ವಿಶೇಷಣ ಪವಿತ್ರವೆಂದೂ ಅರ್ಥ ಮಾಡಬಹುದು. ಇಲ್ಲವೆ ಸೇಕರ್ ಎಂಬ ಪದಕ್ಕೆ ಲ್ಯಾಟಿನ್‌ನಲ್ಲಿ ಪಾತಾಳಕ್ಕೆ ಸಂಬಂಧಪಟ್ಟದೆಂದೂ ಅದರಿಂದ ಪಾತಾಳ ಮಾಂತ್ರಿಕ ಶಕ್ತಿಯಿಂದ ಆವಿಷ್ಟವಾದ ದೇವತೆಗಳ ಆವಾಸಸ್ಥಾನವೆನಿಸಲ್ಪಡುವುದರಿಂದ ಈ ನದಿಗೂ ಅದೇ ಅಪವಿತ್ರತೆ ಏರ್ಪಡುವುದೆಂದು ವಿಮರ್ಶಕರ ಅಭಿಪ್ರಾಯ. ಇದನ್ನು ಅವರ ಮಾತಿನಿಂದಲೇ ಕೇಳೋಣವೇನು? The latin origin of the word sacre has two meanings sacre = "holy" or "connected with a God of the underworld" i.e., cursed. The surroundings of the river perhaps suit the second meaning best. At least a considerable stretch of the River runs underground through caveins (Caves etc) of the measureless "Super human" dimensions i.e., expances which man (human skill or the power of human mind) is not able to "fathom" both in a literal and figurative sense. ಇದಕ್ಕೆ ಅರ್ಥ ವಿವರಣೆ ಬೇಕಿಲ್ಲ ಎನಿಸುತ್ತದೆ. ಹೀಗೆ ಕುಬ್ಲಾಖಾನ್ ತನ್ನ ಅರಮನೆಯ ನಿರ್ಮಾಣಕ್ಕೆ ಆರಿಸಿಕೊಂಡಿರುವ ಜಾಗ ಪವಿತ್ರ ಎಂದರೂ ಸರಿಯೆ.

ಮಾಂತ್ರಿಕಸ್ಥಳವೆಂದರೂ ಸರಿಯೆ. ಇದನ್ನು ಪುಷ್ಟೀಕರಿಸಲು ಓರ್ವ ಹೆಂಗಸೋ ಅವಳ ಪ್ರೇತವೋ ಏನೋ ಪ್ರತಿರಾತ್ರಿಯೂ ಅಪರನಿಶೆಯಲ್ಲಿ (ಅದೇ ತಾನೇ ಪಿಶಾಚಿ ಭೂತಗಳಿಗೆ ಓಡಾಡಲು ಅನುಕೂಲವಾದ ವೇಳೆ) ತನ್ನ ಪ್ರಣಯಿಯಾದ ಭೂತವನ್ನೋ ಪ್ರೇತವನ್ನೋ ಕಾಯುತ್ತ ವಿರಹದಿಂದ ನೊಂದು ಆಕ್ರಂದನವೆಬ್ಬಿಸಿ ಆ ಜಾಗವನ್ನು ಮತ್ತಷ್ಟು ಭೀಕರವಾಗಿಯೂ, ಅಪವಿತ್ರವಾಗಿಯೂ ಮಾಡುವ ವಿಚಾರವನ್ನು ಕವಿ ವರ್ಣಿಸಿದ್ದಾನೆ. ಇದು ಸಾಲದೆನ್ನುವಂತೆ ಬೆಟ್ಟದಲ್ಲಿ ಬಿರುಕೊಂದು ಆಳಕ್ಕೆ ಹಬ್ಬಿರುವಂತೆಯೂ ಅದರೊಳಗಿನಿಂದ ದ್ರವ ಕುದಿಯುವ ಸದ್ದು ಕೇಳುತ್ತಿರುವಂತೆಯೂ ಚಿತ್ರಣ ನೀಡುತ್ತಾನೆ. ಮನುಷ್ಯನ ಚಲ್ಲಣದ ಬಿಗಿತದಿಂದ ಆತ ಉಸಿರಾಡಲು ತೊಂದರೆಪಡುತ್ತ ಕೊನೆಗೊಮ್ಮೆ ತನ್ನ ಕಫವನ್ನು ಕಕ್ಕುವಂತೆ ಈ ಕಾದದ್ರವ ಭೂಮಿಯಿಂದ ಚಿಲುಮೆಯಂತೆ ಆಕಾಶದತ್ತ ವೇಗವಾಗಿ ಚಿಮ್ಮುವ ಚಿತ್ರ ನೀಡಿ ಪರಿಸರವನ್ನು ಮತ್ತಷ್ಟು ಭೀಕರವಾಗಿ ಕಾಣಿಸುತ್ತಾನೆ. ಈ ಕಾದದ್ರವದ ಚಿಲುಮೆಯೊಂದಿಗೆ ಕಲ್ಲು ಬಂಡೆ ಮರಳುಗಳು ಮೇಲಕ್ಕೆ ಎರಚಲ್ಪಟ್ಟು ಮತ್ತೆ ಅವು ಕೆಳಕ್ಕೆ ಬೀಳುವಾಗ ಆನೆಕಲ್ಲು ವರ್ಷಿಸು ವಂತೆಯೂ, ಕಣದಲ್ಲಿ ತೆನೆ ಬಡಿದಾಗ ಹೊಟ್ಟು ಕಳಚಿದ ಧಾನ್ಯ ಅಷ್ಟಗಲಕ್ಕೂ ಚೆಲ್ಲಾಡುವಂತೆ ಈ ಬಂಡೆಯ ತುಣುಕುಗಳ ವರ್ಷವನ್ನು ಹೋಲಿಸುತ್ತಾನೆ. ಇಂತಹ ಕುಣಿದು ಕೆಡೆಯುವ ಬಂಡೆಗಳ ಸಂದಿನಿಂದ ನದಿಯೊಂದು ಉದ್ಭವಗೊಂಡು ಐದು ಮೈಲಿಗಳ ಪರ್ಯಂತ ಅಂಕುಡೊಂಕಾಗಿ ಸಾಗಿ ಸೂರ್ಯ ಕಾಣದ ಕಡಲಿನಲ್ಲಿ ಲೀನವಾಗುತ್ತದೆ ಎಂದು ಹೇಳುತ್ತಾನೆ. ಎಂದರೆ ಇಲ್ಲಿ ಕಾದದ್ರವದ ನೆಗೆತ ಒಂದು ಕಡೆ ಆದರೆ ಮತ್ತೊಂದು ಕಡೆ ನದಿಯು ಉದ್ಭವಗೊಂಡಾಗ ನೆಲದಿಂದ ಮೇಲಕ್ಕೆ ಹೊಮ್ಮುವ ಸನ್ನಿವೇಶ ಇವುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ವಿವರಿಸುತ್ತಾನೆ.

ಹೀಗೆ ಕುಬ್ಲಾಖಾನನ ಸುಂದರ ವಿಹಾರಧಾಮದ ಸೊಬಗು, ಆಕರ್ಷಣೆ ಎಲ್ಲವೂ ಈ ಪ್ರಕೃತಿ ವಿಕೋಪದಿಂದ ನಾಶಗೊಳ್ಳುತ್ತದೆ. ಕುಬ್ಲಾಖಾನ್ ತನ್ನ ಪದವಿ ಪ್ರತಿಷ್ಠೆ ಇವುಗಳ ಬಲದಿಂದ ಭೂಲೋಕದಲ್ಲಿಯೇ ಸ್ವರ್ಗಸ್ಥಾಪನೆ ನಡೆಸುವೆನೆಂದು ಪ್ರಯತ್ನಿಸಿದ್ದಕ್ಕೆ ದೈವಶಕ್ತಿ, ಭೂತಶಕ್ತಿ ಇವುಗಳು ತಮ್ಮ ವಿರೋಧವನ್ನು ಈ ರೀತಿ ಪ್ರಕಟಿಸುತ್ತವೆ. ದೈವಶಕ್ತಿ, ಭೂತಶಕ್ತಿ ಇವುಗಳ ಮುಂದೆ ಮಾನವನ ದರ್ಪದ ಸೃಷ್ಟಿ ಎಂದಿಗೂ ಬಾಳಲಾರದು ಎಂಬ ನೀತಿಪಾಠ ಇಲ್ಲಿ ನಿರೂಪಣೆಗೊಳ್ಳುತ್ತದೆ. ಇದರ ಜೊತೆಗೆ ಕುಬ್ಲಾಖಾನನ ಪಿತೃಗಳಿಗೂ ಆತ ಯುದ್ಧ ಕಾರ್ಯದಲ್ಲಿ ತೊಡಗದೆ ವಿಶ್ರಾಂತಿ ಸುಖದಲ್ಲಿ ಮೈಮರೆಯುವುದು ಇಷ್ಟವಿಲ್ಲ ಎಂಬಂತೆ ಅವರ ಭವಿಷ್ಯವಾಣಿ ಆತನನ್ನು ಯುದ್ಧದಲ್ಲಿ ತೊಡಗಬೇಕೆಂದು ಪ್ರಚೋದಿಸುತ್ತದೆ. ಇಲ್ಲಿ ವಿಮರ್ಶಕರ ಮಾತಿನಿಂದಲೇ ಹೇಳಬೇಕೆಂದರೆ Ancestral voices eh? I will bet it was kubla's architect who took one look at the plans of Xanadu and Said "Man you are going to have to conquor all of Chaina to pay for this thing" ಎಂದರೆ ಈ ಸ್ವರ್ಗ ಸೌಧದ ನಿರ್ಮಾಣ ನಿನ್ನಿಂದ ಸಾಧ್ಯವಾಗದ ಕೆಲಸ ಎಂಬ ಬುದ್ಧಿವಾದ ಎಂದು ಹೇಳುವಂತೆ ತೋರುತ್ತದೆ. ಅಂತೂ ಕುಬ್ಲಾಖಾನನ ಸ್ವರ್ಗ ಸೌಧದ ಆಸೆಯೆಲ್ಲ ಕುಸಿದು ಕೊಚ್ಚಿಕೊಂಡು ಹೋಯಿತು ಎನ್ನುತ್ತಾನೆ ಕವಿ. ವಿಮರ್ಶಕ ಇಲ್ಲಿ ಇನ್ನೊಂದು ಟೀಕೆ

ಮಾಡುತ್ತಾನೆ. ಇದ್ದಕ್ಕಿದ್ದಂತೆ ಚಿಲುಮೆ ಭೂಮಿಯಿಂದ ಚಿಮ್ಮುವುದು, ಅದರೊಂದಿಗೆ ಲಾವ ಎರಚಲ್ಪಡುವುದು, ಕಲ್ಲುಚೂರು, ಮರಳು ಎಲ್ಲವೂ ಹೊರಕ್ಕೆ ಹರಡುವುದು ಈ ಚಿತ್ರಣವನ್ನು ಪ್ರಕೃತಿಯ ಸೆಕ್ಸ್ ಚೆಲ್ಲಾಟವೆಂದು ವಿಮರ್ಶಿಸುತ್ತಾನೆ. ಮರುಸೃಷ್ಟಿಯ ಜೀವಕೋಶದ ಉತ್ಪತ್ತಿ ಬೀಜಾವಾಪ ಮುಂತಾದ ಕ್ರಿಯೆಗಳನ್ನು ಈ ವರ್ಣನೆ ಸಾಂಕೇತಿಕವಾಗಿ ಹೇಳುತ್ತದೆ ಎನ್ನುತ್ತಾನೆ.

ಪದ್ಯದ ಇಲ್ಲಿಯವರೆಗಿನ ಭಾಗ ಕವಿ ಅಫೀಮಿನ ಗುಂಗಿನಲ್ಲಿ ಕಂಡು ಜ್ಞಾಪಕ ಇಟ್ಟುಕೊಂಡಿದ್ದ ಕಥಾವಸ್ತು ಎನ್ನಬಹುದು. ಏಕೆಂದರೆ ಕವಿತೆಯಲ್ಲಿ ಇಲ್ಲಿಯವರೆಗಿನ ಓಟ ನಿರರ್ಗಳವಾಗಿಯೂ, ಕತೆ ಹೇಳುವಂತೆಯೂ ಸಾಗುತ್ತದೆ. ಆದರೆ ಇನ್ನು ಮುಂದಿನ ನಿರೂಪಣೆಯ ರೀತಿಯೇ ಬೇರೆಯ ತೆರನಾಗಿದೆ. ಇಂಗ್ಲೀಷ್ ವೃತ್ತವೂ ಬೇರೆಯದೇ ಆಗಿದೆ. ಈ ಭಾಗ ಕವಿಯ ಮನಸ್ಸಿನಿಂದ ಅಳಿಸಿ ಹೋಗಿದ್ದ ಭಾವವನ್ನು ಆತ, ಜ್ಞಾಪಿಸಿಕೊಂಡು ಹೀಗಿರಬಹುದು ಎಂದು ಭಾವಿಸಿಕೊಂಡು ಬರೆದಿರುವಂತೆ ಕಾಣುತ್ತದೆ. ಕವಿ ಇಲ್ಲಿ ತನ್ನ ಭವನವನ್ನು sunney pleasure dome ಎಂಬುದಾಗಿಯೂ ಅದರ ಕೆಳಗೆ ಇರುವ ಪ್ರದೇಶವನ್ನು caves of sea ಎಂದೂ ಹೇಳಿ ಎರಡಕ್ಕೂ ಸಂಬಂಧ ಕಲ್ಪಿಸಿರುವಂತೆ ಒಗಟುಮಯವಾಗಿ ಹೇಳುತ್ತಾನೆ. Sunny dome ಎಂದಾಗ, ಬಿಸಿ ಮತ್ತು ಪ್ರಕಾಶವನ್ನು ತೋರಿಸಿ caves of ice ಎಂದಾಗ ಛಳಿ ಮತ್ತು ಕತ್ತಲು ತುಂಬಿದ ಪ್ರದೇಶ ಎಂದು ವಿಮರ್ಶಕನ ವ್ಯಾಖ್ಯಾನವಿದೆ. ಈ ಪ್ರಕಾಶಮಾನದಿಂದ, ಸಂತೋಷಕರವಾದ ಜಾಗವನ್ನು ವಿನಾಶಗೊಳಿಸಿದ್ದು ಕತ್ತಲು ತುಂಬಿದ ದೈವಭೂತಗಳ ನೆಲೆ ಈ ಮಂತ್ರಶಕ್ತಿಯು ಸ್ವರ್ಗಸೃಷ್ಟಿಯ ನಾಶಕ್ಕೆ ಕಾರಣವಾಯಿತೆಂಬುದರ ಸಂಕೇತ ಸಂದೇಶ ಇದರಿಂದ ಸ್ಪಷ್ಟವಾಗಿಲ್ಲದಿದ್ದರೂ ಅಸ್ಪಷ್ಟವಾಗಿಯಾದರೂ ತೋರಿಬರುತ್ತದೆ ಎಂದು ಅಭಿಪ್ರಾಯ ಪಡುತ್ತೇನೆ. ಇದನ್ನೇ ಕವಿ rare device ಎಂದು ಕರೆದಿದ್ದಾನೆಂದೂ ಊಹಿಸಬಹುದಾಗಿದೆ. ಇದು unexpected event of a supernatural kind, miracle ಎಂಬುದಾಗಿ ಆತ ವಿವರಿಸಿದ್ದಾನೆ.

ಕವಿಯ ಮನಸ್ಸಿಗೆ ಕುಬ್ಲಾಖಾನ್ ಸಾಧಿಸಲಾಗದ್ದನ್ನು ತಾನು ಸಾಧಿಸಬೇಕೆಂಬ ಹಟ, ಛಲ, ಅದಕ್ಕಾಗಿ ಆತ ಪ್ರಯತ್ನಿಸುತ್ತಾನೆ. ಆತನ ಪ್ರಯತ್ನಕ್ಕೆ ಸಹಕಾರಿಯಾಗಿ ದೈವವೂ ವರ್ತಿಸುತ್ತದೆ ಎನ್ನಬೇಕು. ಕವಿತೆಯಲ್ಲಿ ಕವಿ ಕುಬ್ಲಾಖಾನನನ್ನು ಮರೆತು ತನ್ನನ್ನೇ ಕಥಾ ನಾಯಕನನ್ನಾಗಿಸಿಕೊಂಡು ಮುಂದುವರಿಯುತ್ತಾನೆ. ಆತ ಎಂದೋ ಅಬಿಸೀನಿಯದ ದೇವ ಕನ್ಯೆಯೊರ್ವಳು ವೀಣೆಯಲ್ಲಿ ದೇವಗಾನ ನುಡಿಸಿದ್ದನ್ನು ಜ್ಞಾಪಿಸಿಕೊಳ್ಳುತ್ತಾನೆ. ಆಕೆ ಗಾಯನ ರೂಪದಲ್ಲಿ ದೇವತೆಗಳ ಆವಾಸಸ್ಥಾನವೆನಿಸುವ ಅಬೋರಗಿರಿಯನ್ನು ಸ್ತುತಿಸುವ ಚಿತ್ರಣವನ್ನು ಕವಿ ನೀಡಿದ್ದಾನೆ. ಆ ಅಬೋರ ಗಿರಿಯೇ ಗ್ರೀಕ್ ಪುರಾಣದಲ್ಲಿ ಬರುವ ಮೌಂಟ್ ಅಮರವಂತೆ ಇದೇ ನಿಜವಾದ ಸ್ವರ್ಗವೆಂದು ನಂಬಿಕೆ. ಅದರ ಸ್ತುತಿಯನ್ನು ಆಲಿಸಿದ ಕಥಾನಾಯಕ ಆ ಗಾನದ ಗುಂಗಿನಲ್ಲಿ ಗಾಳಿಯಲ್ಲೇ ಸ್ವರ್ಗಸೃಷ್ಟಿಯನ್ನು ಮಾಡುತ್ತಾನೆ. ಈ ಕಲ್ಪನಾ ಸ್ವರ್ಗ ಆತನಿಗೆ ಬ್ರಹ್ಮಾನಂದವನ್ನು ನೀಡುತ್ತದೆ. ಕುಬ್ಲಾಖಾನ್ ನೆಲದ ಮಟ್ಟದಲ್ಲಿ ಸ್ವರ್ಗ ರಚನೆ ಮಾಡಲು ಪ್ರಯತ್ನಿಸಿ ವಿಫಲನಾದ. ಆದರೆ ನಮ್ಮ ಕಥಾನಾಯಕ ಗಾಳಿಯಲ್ಲಿ ಎಂದರೆ ನೆಲದಿಂದ ಮೇಲಕ್ಕೆ ಇರುವ ಪ್ರದೇಶದಲ್ಲಿ ಸ್ವರ್ಗ ಸೃಷ್ಟಿಯನ್ನು ಕಲ್ಪಿಸಿಕೊಂಡು ಸುಖಿಸುತ್ತಾನೆ.

ಆ ಸ್ವರ್ಗ ಕುಬ್ಲಾಖಾನ್ ಸ್ವರ್ಗಕ್ಕಿಂತ ನಿಜಕ್ಕೂ ಹಿರಿದಾದದ್ದು, ಶ್ರೇಷ್ಠವಾದದ್ದು ಎಂಬ ಭಾವ ಇದರ ಸೃಷ್ಟಿಗೆ ದೇವತೆಗಳ ಅಂಗೀಕಾರವೂ ಇದೆ ಎಂದು ಅರ್ಥ. ಈ ಸ್ವರ್ಗ ಸುಖಾನುಭವ ತನಗೆ ಲಭಿಸಿದ್ದನ್ನು ಕಲ್ಪನಾ ವಿಲಾಸಿಗಳಾದ ಇತರರೂ ಹಿಂದೆ ಕೇಳಿರುವುದನ್ನು ಈಗ ಕಂಡು ಎಂದರೆ ಕಾಣುವ ಕಣ್ಣಿನಿಂದ ಈ ಕಥಾನಾಯಕನ ಕಲ್ಪನೆಯು ಮೂಡಿರುವ ದೃಶ್ಯವನ್ನು ಊಹಿಸಿಕೊಂಡು ದರ್ಶನಹೊಂದಿ ಆನಂದ ಪರವಶರಾಗಿ ಆ ಕಥಾನಾಯಕನನ್ನು "ಉಘೇ ಉಘೇ" ಎಂದು ಕೊಂಡಾಡುವುದು ಮಾತ್ರವಲ್ಲದೆ ಅವನ ತಲೆಯ ಸುತ್ತ ಮೂರು ಸಲ ವೃತ್ತಗಳನ್ನು ರಚಿಸುವುದರ ಮೂಲಕ ಆತನ ಭಾವುಕತೆಯನ್ನು ಮೆಚ್ಚಿಕೊಂಡು ತಮ್ಮ ಕಣ್ಣುಗಳನ್ನು ಮುಚ್ಚಿಕೊಳ್ಳುವುದರ ಮೂಲಕ ತಾವೂ ಆತ ನೀಡಿದ ಅನುಭವದ ಆನಂದವನ್ನು ಅನುಭವಿಸಿ ಧನ್ಯತೆಯನ್ನು ವ್ಯಕ್ತಪಡಿಸುತ್ತಾರೆಂಬ ಭಾವ. ಆ ಕಥಾನಾಯಕನೋ ಇಂತಹ ದಿವ್ಯ ದೃಶ್ಯದ ಕಾಣ್ಕೆಯನ್ನೂ ಸ್ವರ್ಗ ಪ್ರಾಪ್ತಿಯ ಸುಖ ಆನಂದವನ್ನೂ ಇತರರಿಗೂ ನೀಡಿದೆನೆಂಬ ತೃಪ್ತಿಯಿಂದ ತಾನೇ ಅಮರನಾದಂತೆ ದೇವಲೋಕದ ಅಮೃತಪಾನ ಮಾಡಿದಷ್ಟು ನೆಮ್ಮದಿಯನ್ನು ಅನುಭವಿಸುತ್ತಾನೆಂಬ ಮಂಗಳ ವಾಕ್ಕಿನಿಂದ ಕವನದ ಮುಕ್ತಾಯವಾಗುತ್ತದೆ.

ಈ ಕವನ ಅರ್ಥಂಬರ್ಥವೆಂದರೂ ಸರಿಯೆ. ಕವಿ ಕಂಡ ದರ್ಶನದ ತುಣುಕುಗಳೆಂದು ಭಾವಿಸಿದರೂ ಸರಿಯೆ, ಒಂದು ರೀತಿಯಿಂದ ಸಂಪೂರ್ಣವಾಗಿದೆ ಎಂದರೂ ಸರಿಯೆ, ಎಲ್ಲ ರೀತಿಯ ವಿಮರ್ಶೆಯನ್ನೂ ನಿಷ್ಪಕ್ಷಪಾತದಿಂದ ಸ್ವೀಕರಿಸುತ್ತದೆ ಎನ್ನಬಹುದು. ಈ ರೀತಿಯ ಮೌನ ಸಂದೇಶವನ್ನು ವಾಚಕರ ಪಾಲಿಗೇ ಬಿಟ್ಟು ಪ್ರತಿಮಾ ವಿಧಾನದಿಂದ ಕಾವ್ಯ ಕವನವನ್ನು ನೀಡಿರುವ ಸ್ಯಾಮ್ಯುಯಲ್ ಟೈಲರ್ ಕೊಲೇರಿಜನನ್ನು ಮಹಾಕವಿಯ ಪಂಕ್ತಿಗೇರಿಸುವ ಕಾರ್ಯ ನಮಗೆ ಸೇರಿದ್ದು ಅಥವಾ ಬಿಟ್ಟಿದ್ದು !

ಹೀಗೆ ಮನುಷ್ಯ ನಿರ್ಮಿತ ಭೂಲೋಕ ಸ್ವರ್ಗವು ದೈವಶಕ್ತಿಯಿಂದಲೂ, ಮಾಂತ್ರಿಕಶಕ್ತಿಯಿಂದಲೂ ಎದುರಿಸಿ ನಿಲ್ಲಲಾರದೆ ಪುಡಿಪುಡಿಯಾಗುವ ಉದಾಹರಣೆ ಇಲ್ಲಿ ಕಾಣುವುದು ಮಾತ್ರವಲ್ಲದೆ ನಿಜದಿಂದ ಸ್ವರ್ಗದ ಪರಿಮಿತಿಯನ್ನೂ ಕವಿ ಸೂಕ್ಷ್ಮವಾಗಿ ತೋರಿಸಿಕೊಟ್ಟಿದ್ದಾನೆ. ಇದರ ಜೊತೆಗೆ ಪ್ರತಿಷ್ಠೆ ಅಧಿಕಾರ ಇವುಗಳ ಸೃಷ್ಟಿ ಸಾಹಸಕ್ಕಿಂತ ಆತನ ಸರ್ವತಂತ್ರ ಸ್ವತಂತ್ರ ಸೃಷ್ಟಿ ಸಾಹಸಕ್ಕೆ ಎಂದಿಗೂ ಜಯ ಸಿದ್ಧ ಎಂಬ ಅಂಶವನ್ನೂ ಮನಗಾಣಿಸಲು ಪ್ರಯತ್ನಿಸಿದ್ದಾನೆ. ಕುಬ್ಲಾಖಾನ್ ದೈವೀಕವಾದ ನಿಯಮಗಳನ್ನು ಕಡೆಗಣಿಸಿ ಸ್ವರ್ಗಸೃಷ್ಟಿಗೆ ಆರಂಭ ಮಾಡಿದ ಆದರೆ ಪದ್ಯದ ಕಡೆಯ ಭಾಗದಲ್ಲಿ ಮಾಂತ್ರಿಕ ಶಕ್ತಿಗಳಿಗೇ ಆಕ್ರಮಿಸಲಸಾಧ್ಯವಾದಂತಹ ನ್ಯಾಯಬದ್ಧವೂ ಚಿರಂತನವೂ ಆದ ದೈವೀಕ ವಿಲಾಸದ ಪಾರಮ್ಯವನ್ನು ಕವಿ ಕಾಣಿಸುತ್ತಾನೆ. ಮತ್ತೆ ಈ ಮಾದಕ ದ್ರವ್ಯ ಸೇವನೆಯಿಂದ ಮಾನಸಿಕ ವ್ಯಾಪಾರ ಅನುಭವಿಸುವ ವ್ಯಾಕುಲತೆ ಅಥವಾ ವೇದನೆಗಳನ್ನೂ ಸೂಚ್ಯವಾಗಿ ನಿವೇದಿಸಿದ್ದಾನೆ ಎನ್ನಬಹುದು.

ವ್ಯಾಖ್ಯಾನಕಾರರು ಮೊದಲಿನ ಭಾಗವನ್ನು ಪ್ಯಾರಡೈಸ್ ಲಾಸ್ಟ್ ಅಥವಾ ಸ್ವರ್ಗಚ್ಯುತಿ ಎಂಬುದಾಗಿಯೂ ಎರಡನೇ ಭಾಗವನ್ನು ಪ್ಯಾರಡೈಸ್ ರೀಗೇಯ್ನಂಡ್ ಎಂದರೆ ಸ್ವರ್ಗದ ಪುನಃ ಸಂಪಾದನೆ ಎಂದೂ ಕರೆದು ಮಿಲ್ಟನ್ ಮಹಾಕವಿಯ ಮಹಾಗ್ರಂಥಕ್ಕೆ ಈ ಪುಟ್ಟ ಕವನ ಸಂಗ್ರಹ ಭಾಷ್ಯ ರೂಪಕವಾಗಿದೆ ಎಂದು ವಿಮರ್ಶೆ ಮಾಡುತ್ತಾರೆ.

ಈ ರೀತಿಯ ಭೂಲೋಕದಲ್ಲೇ ಸ್ವರ್ಗಸುಖವನ್ನು ಅಳವಡಿಸುತ್ತೇವೆಂಬ ಭ್ರಾಂತಿ ನಮ್ಮ ಪೌರಾಣಿಕ ವ್ಯಕ್ತಿಗಳನ್ನು ಬಿಟ್ಟಿಲ್ಲವೆಂದು ಹೇಳಬಹುದು. ದೈವ ನಿಯಮಕ್ಕೆ ಪಂಥಾಹ್ವಾನ ಮಾಡಿದ ಹಿರಣ್ಯಕಶಿಪು, ರಾವಣ ಮುಂತಾದವರು ಔದ್ಧತ್ಯದಿಂದ ಮೆರೆದು ಮಣ್ಣುಮುಕ್ಕಿದರೆ ನಹುಷ, ತ್ರಿಶಂಕು ಮುಂತಾದವರು ಸ್ವಾರ್ಥಹಿತಕ್ಕಾಗಿ ಸ್ವರ್ಗಲಾಭ ಮಾಡಿಕೊಳ್ಳಲು ಹೆಣಗಿ ಪ್ರಪಂಚದ ನಿಯತಿ ನಿಯಮವನ್ನು ಉಲ್ಲಂಘಿಸಿ ಅದಕ್ಕೆ ತಕ್ಕ ಫಲವನ್ನು ಹೊಂದಿದ ವಿಚಾರ ನಮ್ಮಲ್ಲೂ ಇದೆ.

ಆದರೆ ಕುಬ್ಲಾಖಾನನಿಗೆ ಭೂಲೋಕದಲ್ಲೇ ಸ್ವರ್ಗ ಸೃಷ್ಟಿಮಾಡಿ ಸುಖಪಡುವ ಭಾವನೆ ಏಕೆ ಉಂಟಾಯಿತು ಎಂಬುದನ್ನು ಕವಿ ಸ್ಪಷ್ಟಪಡಿಸಿಲ್ಲದಿರುವುದು ಕೊರತೆಯೇ ಸರಿ. ಅವನು ಸ್ವಾರ್ಥಕ್ಕಾಗಿಯೋ, ಪರಾರ್ಥಕ್ಕಾಗಿಯೋ ಈ ವಿಹಾರಭವನ ನಿರ್ಮಾಣಕ್ಕೆ ಮನಸ್ಸು ಮಾಡಿದ ಎಂಬುದನ್ನು ವಿವರಿಸಿದ್ದರೆ ಚೆನ್ನಾಗಿದ್ದಿತು. ಅದೂ ಅಲ್ಲದೆ ಆತ ಯುದ್ಧದಲ್ಲೇ ತೊಡಗಿದ್ದು ವಿಶ್ವವನ್ನೇ ಆಕ್ರಮಿಸಿಬೇಕೆಂಬ ಹಟ ಇದ್ದದ್ದು ಆತನಿಗೆ ಮನಃಪರಿವರ್ತನೆ ಆಯಿತೇ ಅಥವಾ ಯುದ್ಧದ ಮೇಲೆ ಜಿಹಾಸೆ ಉಂಟಾಗಿ ಆತ ಈ ರೀತಿ ಮನಸ್ಸು ಮಾಡಿದನೇ ಎಂಬ ಅಂಶವೂ ಸ್ಪಷ್ಟವಿಲ್ಲದಿರುವುದು ಕವಿತೆಯ ಅಪೂರ್ಣತೆಗೆ ಕಾರಣವೆನಿಸುತ್ತದೆಯಲ್ಲವೆ? ಒಟ್ಟಿನಲ್ಲಿ ಈ ಕವನದ ಭಾವ ಸಾಂಕೇತಿಕವಾಗಿಯೂ ಒಗಟಾಗಿಯೂ ಇದೆ ಎಂದು ಹೇಳಿದರೆ ತಪ್ಪಾಗಲಾರದು. ಕೊಲೇರಿಜ್ ಮಹಾಕವಿ ರೈಮ್ ಆಫ್ ದಿ ಏನ್ಷೆಂಟ್ ಮ್ಯಾರಿನರ್‌ನಲ್ಲಿ ಒಂದು ಬಗೆಯ ನೀತಿಯನ್ನು ಸಾರಿದರೆ ಈ ಪದ್ಯದಲ್ಲಿ ಮತ್ತೊಂದು ರೀತಿಯಲ್ಲಿ ನೀತಿ ಸಂದೇಶವನ್ನು ನೀಡಿರುತ್ತಾನೆ. ದೈವ ನಿಯಮದ ಎದುರು ಯಾವುದೂ ಇಲ್ಲ ಎಂಬುದೆ ಅದು ಎಂದು ಮತ್ತೆ ಹೇಳಬೇಕಾಗಿಲ್ಲ. ಮೊದಲಿಗೆ ಆಲ್ಫ್ ನದಿಯ ಉಗಮ, ಸಂಗಮಗಳನ್ನು ತಿಳಿಸಿದ ಕವಿ ಮತ್ತೆ ಒಂದು ಸಾರಿ ನದಿಯ ಜನ್ಮ, ಅದರ ಪ್ರಯಾಣ, ಅದರ ಗುರಿ ಇವುಗಳ ವರ್ಣನೆ (ಪ್ರಾಯಶಃ ಆಲ್ಫ್‌ನ್ನೇ ಹೇಳಿದನೇ) ಏಕೆ ಮಾಡಿದ ಎನ್ನುವುದು ಸಮಸ್ಯೆಯೆ?

ಹಲವರು ವಿಮರ್ಶಕರು, ಕೋಲರಿಜ್ ಅಫೀಮು ಸೇವಿಸಿ ಗಾಢ ನಿದ್ರಿಸಿದ್ದಕ್ಕೂ ಈ ಕವನದ ರಚನೆಗೂ ಸಂಬಂಧವನ್ನು ಒಪ್ಪುವುದಿಲ್ಲ. ಉದಾಹರಣೆಗೆ, 'ದ ಕನ್‌ಸೈಸ್ ಕೇಮ್‌ಬ್ರಿಜ್ ಹಿಸ್ಟರಿ ಆಫ್ ಇಂಗ್ಲಿಷ್ ಲಿಟರೇಚರ್' ತಾನು ಕನಸಿನ ಮನಸ್ಥಿತಿಯಲ್ಲಿ 'ಕುಬ್ಲಾಖಾನ್' ಕವನವನ್ನು ರಚಿಸಿದೆ ಎನ್ನುವ ಕೋಲರಿಜ್‌ನ ವೃತ್ತಾಂತವನ್ನು 'a piece of self-deception' ಎನ್ನುತ್ತದೆ. ಆದರೆ ಕವಿಯ ಸುಪ್ತಮನಸ್ಥಿತಿಗೂ ಈ ಕವನದ ಸೃಷ್ಟಿಗೂ ಸಂಬಂಧವಿದೆ ಎಂದು ಸಾಮಾನ್ಯವಾಗಿ ಎಲ್ಲ ವಿಮರ್ಶಕರೂ ಒಪ್ಪುತ್ತಾರೆ.

ಪ್ರೊ. ಎಲ್.ಎಸ್. ಶೇಷಗಿರಿರಾವ್

❑

ಸಂಶೋಧನೆ

• *ಪ್ರೊ. ಎಲ್.ಎಸ್. ಶೇಷಗಿರಿರಾವ್*

ಇಂದು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಇತಿಹಾಸದಲ್ಲಿ ಸೇವೆ, ಸಾಧನೆಗಳ ಹೊಸ ಅಧ್ಯಾಯ ಪ್ರಾರಂಭವಾಗುತ್ತಿದೆ. ಇದಕ್ಕೆ ಪ್ರತಿಷ್ಠಾನವನ್ನೂ ಕನ್ನಡ ವಿಶ್ವವಿದ್ಯಾಲಯವನ್ನೂ ಅಭಿನಂದಿಸುತ್ತೇನೆ.

ಸಂಶೋಧನೆ ಎನ್ನುವುದು ಕೆಲವೊಮ್ಮೆ ಪ್ರಕೃತಿಯೊಡನೆ ಸೆಣಸು. ಕೆಲವೊಮ್ಮೆ ಕಾಲನೊಡನೆ ಸೆಣಸು, ಕೆಲವೊಮ್ಮೆ ಹೊಸ ಮಾರ್ಗಗಳನ್ನು ತೆರೆಯುವ ಪ್ರಯತ್ನ. ವಿಜ್ಞಾನ, ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಂಶೋಧನೆ ಮಾಡುವವರು ಪ್ರಕೃತಿಯೊಡನೆ ಸೆಣಸುತ್ತಾರೆ. ಪ್ರಕೃತಿಯ ರಹಸ್ಯಗಳನ್ನು ಹೊರಗೆಳೆಯಲು ಶ್ರಮಿಸುತ್ತಾರೆ. ಪ್ರಾಚೀನ ಇತಿಹಾಸವನ್ನು ತಿಳಿಯಬಯಸುವವರು ಕಾಲನೊಡನೆ ಸೆಣಸುತ್ತಾರೆ. ಹಿಂದಿನ ಸಾಹಿತಿಗಳನ್ನು, ಕೃತಿಗಳನ್ನು ಆರಿಸಿಕೊಂಡವರು ಆ ಸಾಹಿತಿಗಳ ಮತ್ತು ಕೃತಿಗಳ ಅಧ್ಯಯನ ಮಾಡುವುದರಲ್ಲಿ ಮಾತ್ರವಲ್ಲ, ಸಾಹಿತ್ಯದ ಅಧ್ಯಯನದಲ್ಲಿಯೇ ಹೊಸ ಮಾರ್ಗಗಳನ್ನು ತೆರೆಯುತ್ತಾರೆ. ಕೆಲವು ಸಂಶೋಧನಗಳ ಲೌಕಿಕ ಪ್ರಯೋಜನ ಸ್ಪಷ್ಟವಾಗಿರುತ್ತದೆ. ಕೆಲವು ಲೌಕಿಕವಾಗಿ ಉಪಯುಕ್ತವಾಗುತ್ತವೆ ಎಂದು ಕಾಣದಿದ್ದರೂ ಮುಂದೆ ಉಪಯುಕ್ತವಾಗಬಹುದು. (ವಿಜ್ಞಾನಿ ಮೈಕೆಲ್ ಫ್ಯಾರಡೆ, ತನ್ನ ವಿದ್ಯುಚ್ಛಕ್ತಿ ಸಂಶೋಧನೆಗಳಿಗೆ ಸಂಬಂಧಿಸಿ ಒಂದು ಪ್ರದರ್ಶನವನ್ನು ಏರ್ಪಡಿಸಿದ. ಬ್ರಿಟನಿನ ಆಗಿನ ಪ್ರಧಾನಿ ರಾಬರ್ಟ್ ಪೀಲ್, ಇವುಗಳಿಂದ ಏನು ಪ್ರಯೋಜನ ಎಂದು ಪ್ರಶ್ನಿಸಿದ. ಫ್ಯಾರಡೆ, 'I know not, but I wager one day you will tax it' ಎಂದ!) ಕೆಲವು ಸಂಶೋಧನೆಗಳು ಉದಾ: 'ಕವಿರಾಜ ಮಾರ್ಗವನ್ನು ಬರೆದ ಶ್ರೀ ವಿಜಯ ಯಾರು?") ಲೌಕಿಕವಾಗಿ ಉಪಯುಕ್ತವಾಗಿಲ್ಲದಿರಬಹುದು. ಆದರೂ ವಿದ್ವಾಂಸ ಈ ವಿಷಯವನ್ನೇಕೆ

ಆರಿಸಿಕೊಳ್ಳುತ್ತಾನೆ? ನಮ್ಮ ತಿಳಿವಳಿಕೆ ನಿಖರವಾಗಿರಬೇಕು ಎನ್ನುವ ಕಾರಣಕ್ಕಾಗಿ. ಖಚಿತತೆ ನಿಜವಾದ ವಿದ್ವತ್ತಿನ ಲಕ್ಷಣಗಳಲ್ಲಿ ಒಂದು.

ಆದರೆ ಸಂಶೋಧನೆ ಯಾವ ಬಗೆಯದಾಗಿರಲಿ, ಅದನ್ನು ನಡೆಸುವ ಮನೋಧರ್ಮ ಒಂದೇ-ಮುಂದಿರುವ ಸಾಕ್ಷ್ಯಕ್ಕೆ ಬದ್ಧನಾಗಿ ಸತ್ಯದ ಅನ್ವೇಷಣೆ. ಸಂಶೋಧಕ ತನ್ನ ಸಂಶೋಧನೆಯಲ್ಲಿ ತೊಡಗಿರುವಾಗ, ಪ್ರಾಣದಾಯಕ ಆಮ್ಲಜನಕ ಅವನಿಗೆ ಪ್ರಿಯವಲ್ಲ, ಮಾರಕ ರೋಗಾಣು ಹಗೆಯಲ್ಲ. ಪ್ರಯೋಗಾಲಯದ ಹೊರಗಡೆ ಅವನ ಬೇಕು-ಬೇಡಗಳು ಏನಾದರೂ ಇರಬಹುದು. ಪ್ರಯೋಗದ ಉದ್ದೇಶ ಏನೇ ಇರಬಹುದು, ಆದರೆ ಸಂಶೋಧಕನಾಗಿ ಅವನು ಸಾಕ್ಷ್ಯಕ್ಕೆ ನಿಷ್ಠ, ಸತ್ಯಕ್ಕೆ ಬದ್ಧ. ಆದುದರಿಂದ ಸಂಶೋಧನೆಯಲ್ಲಿ ತನ್ನ ಬಯಕೆ-ಬೇಡಗಳಿಗೆ ಅನುಗುಣವಾಗಿ ಸಾಕ್ಷ್ಯವನ್ನು ಸೃಷ್ಟಿಸುವುದು ಅಥವಾ ತಿರುಚುವುದು ಸಂಶೋಧನೆಗೆ ದ್ರೋಹ. ಸ್ಟಾಲಿನ್‌ನ ಕಾಲದ ರಷ್ಯನ್ ವಿಜ್ಞಾನಿ ಲೈಸೆಂತೊ ಇಂಥ ಅಪರಾಧ ಮಾಡಿದವನು.

ಒಂದು ಡಿಗ್ರಿಗಾಗಿ ವಿಷಯವನ್ನು ಆರಿಸಿಕೊಳ್ಳುವ ಸಂಶೋಧಕ ಎಚ್ಚರಿಕೆ ವಹಿಸಬೇಕು. ಸೂಕ್ತ ಅವಧಿಯಲ್ಲಿ ಸಂಶೋಧನೆ ಮುಗಿಯುವಂತಿರಬೇಕು. ಆದರೆ ಡಿಗ್ರಿ ಬಂದ ನಂತರವೂ, ತಾನು ಆವರೆಗೆ ಮಾಡಿದ ಕೆಲಸವನ್ನು ಅಡಿಗಲ್ಲಾಗಿ ಮಾಡಿಕೊಂಡು ತನ್ನ ಸಂಶೋಧನೆಯನ್ನು ಮುಂದುವರಿಸುವಂತಿರಬೇಕು. ಡಿಗ್ರಿಗಾಗಿ ಮಾಡಿದ ಕೆಲಸ ಜೀವಮಾನದ ಕೆಲಸಕ್ಕೆ ನಾಂದಿ ಆಗಬೇಕು. ಒಬ್ಬ ಕವಿಯ ಕಾಲವನ್ನು ಆರಿಸಿಕೊಂಡರೆ, ಅದರ ವಿಷಯ ನಿರ್ಣಯಕ್ಕೆ ಬಂದರೆ ಆ ಕ್ಷೇತ್ರದಲ್ಲಿ ಅವನ ಕೆಲಸ ಮುಗಿಯಿತು. ವಿಲಿಯಂ ಎಂಸನ್ ಎನ್ನುವ ಪ್ರಸಿದ್ಧ ವಿಮರ್ಶಕ (Seven Types of Ambiguity ಎನ್ನುವ ಮೌಲಿಕ ಕೃತಿಯನ್ನು ಬರೆದವನು). ಕವನವನ್ನು ಅರ್ಥೈಸುವ ವಿಧಾನ, ಪ್ರಕ್ರಿಯೆಗಳನ್ನು ಆರಿಸಿಕೊಂಡ. ಇದು ಸಂಶೋಧಕನ ಕೃಷಿಗೆ ಫಲವತ್ತಾದ ಭೂಮಿ.

ತೌಲನಿಕ ಅಧ್ಯಯನ ಕ್ಷೇತ್ರದಲ್ಲಿ ಸಂಶೋಧನೆಗೆ ವಿಪುಲ ಅವಕಾಶಗಳಿವೆ. ಉದಾಹರಣೆಗೆ, ಕುವೆಂಪು ಕಾದಂಬರಿಗಳು-ನೈಜೀರಿಯದ ಚಿನುವ ಅಚೀಬೆಯ ಕಾದಂಬರಿಗಳು ಇವನ್ನು ಹೋಲಿಸಿ ಅಧ್ಯಯನ ಮಾಡಬಹುದು.

ಈ ಹೊಸ ಕ್ಷೇತ್ರದಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನಕ್ಕೆ ಮತ್ತು ಇಲ್ಲಿಗೆ ಬರುವ ಸಂಶೋಧಕರಿಗೆ ಯಶಸ್ಸನ್ನು ಹಾರೈಸುತ್ತೇನೆ.*

❑

---

* ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಉದ್ಘಾಟನಾ ಸಂದರ್ಭದಲ್ಲಿ ಮಾಡಿದ ಭಾಷಣ.

ಜನ್ನ ಕವಿಯ ಒಂದು ಪದ್ಯದ ಊಹಾತ್ಮಕ ಪಾಠ ಪರಿಷ್ಕರಣ

• ಡಾ. ಬಿ. ರಾಜಶೇಖರಪ್ಪ

ಕನ್ನಡ ಸಾಹಿತ್ಯದಲ್ಲಿ ಪ್ರಖ್ಯಾತವಾಗಿರುವ ಜನ್ನ ಕವಿಯ ಕೃತಿಗಳಲ್ಲೊಂದು 'ಅನಂತನಾಥ ಪುರಾಣಂ'. ಈ ಚಂಪೂ ಕೃತಿಯನ್ನು ಅವನು ಬರೆದದ್ದು ಕ್ರಿ.ಶ. ೧೨೩೦ರಲ್ಲಿ ಎಂಬುದು ಈಗಾಗಲೇ ತಿಳಿದ ಸಂಗತಿ. ಗುಣಭದ್ರಾಚಾರ್ಯರಿಂದ ರಚಿತವಾದ ಸಂಸ್ಕೃತದ ಉತ್ತರ ಪುರಾಣ, ಚಾವುಂಡರಾಯನಿಂದ ರಚಿತವಾದ ಚಾವುಂಡರಾಯ ಪುರಾಣ ಇಂಥ ಕೃತಿಗಳಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ಬರುವ ಕಥೆ ಒಂದು ಮಹಾಕಾವ್ಯದ ಗಾತ್ರಕ್ಕೆ ವಿಸ್ತರಿಸಿ ರಚಿಸಿದ ಪ್ರೌಢರಚನೆ ಈ ಕಾವ್ಯ ಎಂಬುದೂ ಈಗಾಗಲೇ ವಿದಿತ. ಅನಂತನಾಥ ತೀರ್ಥಂಕರನ ಚರಿತ್ರೆಯ ಕಥೆಯ ಒಡಲಲ್ಲಿ ಬರುವ ಚಂಡಶಾಸನ ಪ್ರಸಂಗ ಪ್ರಸಿದ್ಧವಾದದ್ದು. ಆ ಪ್ರಸಂಗ ಮಧ್ಯದಲ್ಲಿ ಬರುವ ತ್ರುಟಿತ ಪದ್ಯವೊಂದರ ಊಹಾತ್ಮಕ ಪಾಠ ಪರಿಷ್ಕರಣ ಈ ಚಿಕ್ಕ ಲೇಖನದ ಉದ್ದೇಶ. ಆ ಕೃತಿಯ ಏಕದಶಾಶ್ವಾಸದಲ್ಲಿ ೪೮ನೆಯ ಕ್ರಮಸಂಖ್ಯೆಯದಾಗಿ ಬರುವ ಆ ಪದ್ಯ ಹೀಗಿದೆ :

ಮನಮಿತ್ತು ಮಾತನಾಡಿದ
ಳನುವಿಸಿದಪಳೊಲ್ದಳೆಂದೊಡಂ ಕೇಳ ಪರಾಂ
ಗನೆಗೆ ...ವಯರ್ಗಂಡ
ರ್ಮನವಜೆಯದೆ ಎಳೆಯ ಮನಕೆ ಸವಜುವೆ ಪೊಲೆಯಾ

ಇಲ್ಲಿ ಪಾಠಪೂರಣವಾಗಬೇಕಾಗಿರುವುದು ಪದ್ಯದ ಮೂರನೆಯ ಪಂಕ್ತಿಯಲ್ಲಿ ಚುಕ್ಕಿಯಿಂದ ಗುರುತುಮಾಡಿರುವ ಭಾಗ. ಈ ಪಂಕ್ತಿಗೆ ಪ್ರಸ್ತಾರ ಹಾಕಿ ನೋಡಿದಾಗ, ಇಲ್ಲಿ ಬಿಟ್ಟುಹೋಗಿರುವ ಭಾಗ-ಇದು ಕಂದಪದ್ಯವಾಗಿರುವ ಕಾರಣ-ಕೇವಲ ಎರಡು ಲಘುಗಳದ್ದೆಂದು ಸ್ಪಷ್ಟವಾಗಿದೆ. ಆದುದರಿಂದ ಇಲ್ಲಿ ಎರಡು ಲಘುಗಳ ಲೆಕ್ಕಕ್ಕೆ ಸರಿಹೊಂದು ವಂತೆ ಎರಡು ಲಘ್ವಕ್ಷರಗಳನ್ನು ಊಹಾತ್ಮಕ ಪರಿಷ್ಕರಣದಿಂದ

ತುಂಬಬಹುದೆನಿಸುತ್ತದೆ. ಇಲ್ಲಿ ಒಂದು ಸಂಗತಿಯನ್ನು ಸ್ಪಷ್ಟಮಾಡಿಕೊಳ್ಳಬೇಕು. ತ್ರುಟಿತ ಭಾಗದಲ್ಲಿ ತುಂಬಲಿಕ್ಕೆ ಅವಕಾಶವಿರುವುದು ಕೇವಲ ಎರಡು ಲಘುಗಳೇ ಹೊರತು (ಎರಡು ಲಘುಗಳ ಲೆಕ್ಕಕ್ಕೆ ಸಮೀಪವಾಗುವಂತಿದ್ದರೂ) ಒಂದು ಗುರು ಅಲ್ಲ. ಏಕೆಂದರೆ ಇಲ್ಲಿ ಗುರುವನ್ನು ಹಾಕಿದರೆ, ಕಂದಪದ್ಯದ ಲಕ್ಷಣದ ಪ್ರಕಾರ ಮೂರನೆಯ ಪಂಕ್ತಿಯಲ್ಲಿ ನಾಲ್ಕು ಮಾತ್ರೆಯ ಮೂರು ಗಣಗಳು ಬರುವುದು ಸಾಧ್ಯವಾಗುವುದಿಲ್ಲ.

ತ್ರುಟಿತ ಭಾಗದ ಊಹಾತ್ಮಕ ಪಾಠಪೂರಣಕ್ಕೆ ಈ ಪದ್ಯದ ಸಂದರ್ಭವನ್ನು ನೋಡುವುದು ಅತ್ಯವಶ್ಯ : ಒಂದು ರಾಜ್ಯದ ರಾಜನಾಗಿದ್ದ ಚಂಡಶಾಸನ, ಇನ್ನೊಂದು ರಾಜ್ಯದ ರಾಜನೂ ಸ್ನೇಹಿತನೂ ಆಗಿದ್ದ ವಸುಷೇಣನಲ್ಲಿಗೆ ಅತಿಥಿಯಾಗಿ ಹೋಗಿದ್ದಾಗ, ಪರಮಸುಂದರಿಯಾಗಿದ್ದ ವಸುಷೇಣನ ಹೆಂಡತಿ ಸುನಂದೆಯನ್ನು ನೋಡಿ ಅವಳಲ್ಲಿ ಮೋಹಿತನಾಗುತ್ತಾನೆ. ಕಡೆಗೆ ವಸುಷೇಣನನ್ನು ವಂಚಿಸಿ, ಏನೂ ತಿಳಿಯದ ಸುನಂದೆಯನ್ನು ರಥದಲ್ಲಿ ತನ್ನ ರಾಜ್ಯಕ್ಕೆ ಕೊಂಡೊಯ್ಯುತ್ತಿರುತ್ತಾನೆ. ಆಗ ಎಲ್ಲ ವಿಷಯ ತಿಳಿದ ಸುನಂದೆ ಅವನ ಅಕೃತ್ಯಕ್ಕೆ ಅವನನ್ನು ನಾನಾ ರೀತಿ ನಿಂದಿಸಿ, ತನ್ನನ್ನು ಕಾಪಾಡುವಂತೆ ಪ್ರಕೃತಿಯ ನಾನಾ ಶಕ್ತಿಗಳನ್ನೂ ಜನರನ್ನೂ ಮೊರೆಯಿಟ್ಟು ಕರೆದು, ಕಡೆಯಲ್ಲಿ ಚಂಡಶಾಸನನಿಗೆ ಎಚ್ಚರಿಕೆಯನ್ನೂ ಬುದ್ಧಿವಾದವನ್ನೂ ಹೇಳುತ್ತಾಳೆ. ಆಗ ಈ ಪದ್ಯ ಬರುತ್ತದೆ. ಸದ್ಯದಲ್ಲಿರುವಂತೆ ಈ ಪದ್ಯದ ಅರ್ಥ ಹೀಗಾಗುತ್ತದೆ: "ಮನಸ್ಸು ಕೊಟ್ಟು ಮಾತನಾಡಿದಳು; ಒಪ್ಪುವಳು, ಪ್ರೀತಿಸಿರುವಳು ಎಂದು ಪರಸ್ತ್ರೀಯ ಬಗ್ಗೆ ತಿಳಿದರೆ ಅಂಥ ಪುರುಷರು... ವಯರೆ ಸರಿ. ನನ್ನ ಮನಸ್ಸನ್ನರಿಯದೆ ನನ್ನ ಮುಗ್ಧ ಮನಸ್ಸಿಗೆ ಹೊಲೆಯನ್ನು ಸವರುತ್ತೀಯಾ?" ಎಂದು ಸುನಂದೆ ಹೇಳುವಂತೆ ಆ ಪದ್ಯವಿದೆ. ಇಲ್ಲಿ ತ್ರುಟಿತವಾಗಿರುವ ಭಾಗದ ಎರಡು ಲಘು ಅಕ್ಷರಗಳು ಏನಿರಬಹುದೆಂದು ಗೊತ್ತು ಹಚ್ಚಲು ಈ ಮುಂದಿನಂತೆ ಕೆಲವು ಸಾಧ್ಯತೆಗಳನ್ನು ನೋಡೋಣ:

೧. ಪರಸ್ತ್ರೀ ತನ್ನನ್ನು ಒಲಿದಿದ್ದಾಳೆ ಎಂದು ತಪ್ಪಾಗಿ ತನಗೆ ತಾನೆ ಹಾಗೆಲ್ಲ ತಿಳಿದ ಪುರುಷರು ಮುಂದೆ ಏನೋ ಕೆಡುಕಿಗೆ ಬೀಳುತ್ತಾರೆ ಎಂಬುದನ್ನು ಅವಳ ಮಾತಿನ ಧಾಟಿ ಸೂಚಿಸುವಂತಿದೆ.

೨. ಪದ್ಯದಲ್ಲಿ ಚುಕ್ಕಿಗಳ ಹಿಂದಿನ ಪದ 'ಪರಾಂಗನೆಗೆ' ಎಂಬುದು ವ್ಯಾಕರಣದ ದೃಷ್ಟಿಯಿಂದ ಪೂರ್ಣತೆ ಇರುವ ಪದವಿದ್ದು, ಚುಕ್ಕಿಗಳ ಭಾಗದ ಅಕ್ಷರಗಳು ಬಹುಶಃ ಅದಕ್ಕೆ ಸೇರಿದವು ಇರಲಾರವು. 'ಪರಾಂಗನೆಗೆ' ಎಂಬುದಕ್ಕೆ ಸಂಬಂಧಿಸಿದಂತೆ ಯಾವ ಪಾಠಾಂತರಗಳಿಲ್ಲ ಎಂಬುದನ್ನೂ ಇಲ್ಲಿ ಗಮನಿಸಬೇಕು.

೩. ಚುಕ್ಕಿಗಳ ಭಾಗದ ನಂತರ 'ವಯರ್ ಗಂಡರ್' ಎಂದು ಬಂದಿದೆ. ಇಲ್ಲಿ 'ಗಂಡರ್' ಎಂಬುದು ಕೂಡ ವ್ಯಾಕರಣದ ದೃಷ್ಟಿಯಿಂದ ಪೂರ್ಣತೆ ಇರುವ ಪದವಾಗಿದ್ದು, 'ವಯರ್' ಎಂಬುದರಿಂದ ಪೂರ್ಣ ಪ್ರತ್ಯೇಕವಾದ ಪದವಾಗಿದೆ.

೪. ಇಲ್ಲಿ 'ವಯರ್' ಎಂಬುದು ವಯಸ್ಸಿನವರು, ಆಯುಸ್ಸಿನವರು ಎಂಬರ್ಥ ಕೊಡುವ

ಪದವಾಗಿದ್ದು ಇಲ್ಲಿ ತುಂಬಿಸಲ್ಪಡಬೇಕಾದ ಎರಡು ಲಘ್ವಕ್ಷರಗಳ ಭಾಗ ಅದಕ್ಕೆ ಒಂದು ರೀತಿಯಲ್ಲಿ ವಿಶೇಷಣದಂತೆ ಸೇರಬೇಕಾದ್ದು ಎಂಬಂತೆ ಕಾಣಿಸುತ್ತದೆ.

೫. ಸಾಧ್ಯತೆಯ ಮೇಲಿನ ೧ನೆಯ ಅಂಶದಂತೆ ಇಲ್ಲಿ 'ವಯರ್' ಎಂಬುದು, ಸೇರಿಕೊಳ್ಳಬೇಕಾಗಿರುವ ಆ ಎರಡು ಲಘ್ವಕ್ಷರಗಳಿಂದ ಕೂಡಿ, ಅಂಥ ಪುರುಷರು ಏನೋ ಕೆಡುಕಿಗೆ ಬೀಳುವರೆಂಬುದನ್ನು ಸೂಚಿಸುವಂಥ ಪದವಾಗಬೇಕಾಗುತ್ತದೆ. 'ವಯರ್' ಸಂಸ್ಕೃತ ಮೂಲದ್ದಾದುದರಿಂದ ಅದಕ್ಕೆ ಸೇರಬೇಕಾದ್ದು ಪ್ರಾಯಃ ಒಂದು ಉಪಸರ್ಗ ಆಗಿರುವ ಸಾಧ್ಯತೆ ಇದೆ.

ಈ ಮೇಲಿನ ಅಂಶಗಳನ್ನು ಮನದಂದು, ಇಲ್ಲಿ 'ವಯರ್' ಎಂಬುದಕ್ಕೆ ಹಿಂದೆ ಸೇರಬೇಕಾದ ಲಘು ಅಕ್ಷರಗಳು ಬಹುಶಃ 'ಅಪ' (ಎಂಬ ಉಪಸರ್ಗ) ಎಂದಿಟ್ಟುಕೊಂಡಲ್ಲಿ ಮೇಲೆ ತಿಳಿಸಿದ ರೀತಿಯ ಅರ್ಥ ಹೊರಡುತ್ತದೆ. ಅಂದರೆ 'ಅಪವಯರ್' ಎಂಬುದು ಅಲ್ಪಾಯುಷಿಗಳು ಎಂಬರ್ಥ ಕೊಡುವುದರಿಂದ 'ಪರಸ್ತ್ರೀಯರ ಸೌಜನ್ಯದ ವರ್ತನೆಯನ್ನು ತನ್ನ ಮೇಲಿನ ಮೋಹ ಎಂದು ಅಪಾರ್ಥಮಾಡಿಕೊಂಡು ದುಡುಕುವ ಪುರುಷರು ಅಲ್ಪಾಯುಗಳು' ಎಂದು ಹೇಳಿದಂತಾಗುತ್ತದೆ.

ಈಗ ಈ ಪದ್ಯವನ್ನು ಹೀಗೆ ಪೂರ್ಣಗೊಳಿಸಬಹುದು :

ಮನಮಿತ್ತು ಮಾತನಾಡಿದ
ಳನುವಿಸಿದಪಳೊಲ್ದಳೆಂದೊಡಂ ಕೇಳ ಪರಾಂ
ಗನೆಗೆ (ಅಪ)ವಯರ್ಗಂಡ
ರ್ಮನವಜೆಯದೆ ಎಳೆಯ ಮನಕೆ ಸವಜುವೆ ಪೊಲೆಯಾ

ಈಗ ಈ ಪದ್ಯಕ್ಕೆ ಛಂದಸ್ಸಿನ ದೃಷ್ಟಿಯಿಂದ ಮತ್ತು ಸಂದರ್ಭದ ಅರ್ಥದ ದೃಷ್ಟಿಯಿಂದ ಒಂದು ಪೂರ್ಣತೆ ಬಂದಂತಾಗುತ್ತದೆ.

(ಈ ಲೇಖನದಲ್ಲಿ ಪ್ರಸ್ತಾಪಿಸಿರುವ ಪದ್ಯದ ಆಕರ : ಜನ್ನ ಕವಿ ವಿರಚಿತ 'ಅನಂತನಾಥ ಪುರಾಣಂ', ಸಂ.: ಎಚ್. ದೇವಿರಪ್ಪ ಮತ್ತು ಎಂ.ಸಿ. ಪದ್ಮನಾಭಶರ್ಮ, ಪ್ರ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೨. ಪು. ೨೨೭)

❑

ಕಪ್ಪುಬೆಪ್ಪು ಮರೆತು ಹುರುಪು ಸೊಪ್ಪು ಪೊರೆದು ಪ್ರಫುಲ್ಲರಾಗಿರಿ

• *ಟಿ.ವಿ. ಶ್ರೀನಾಥಶಾಸ್ತ್ರೀ*

ಕನ್ನಡದಲ್ಲಿನ ೩೪ ವ್ಯಂಜನಗಳ ಪೈಕಿ (ಕ, ಖ, ಗ, ಘ, ಙ, ಚ, ಛ, ಜ, ಝ, ಞ, ಟ, ಠ, ಡ, ಢ, ಣ, ತ, ಥ, ದ, ಧ, ನ, ಪ, ಫ, ಬ, ಭ, ಮ, ಯ, ರ, ಲ, ವ, ಶ, ಷ, ಸ, ಹ, ಳ) ಯಾವುದೇ ವ್ಯಂಜನದೊಡನೆ ಕನ್ನಡದ ಸ್ವರಗಳ ಪೈಕಿ (ಅ, ಆ, ಇ, ಈ, ಉ, ಊ, ಋ, ಎ, ಏ, ಐ, ಒ, ಓ, ಔ) ಯಾವುದೇ ಒಂದು ಸ್ವರವು ಸೇರುವ ಸಂದರ್ಭದಲ್ಲಿ ಆ ವ್ಯಂಜನದ ಜೊತೆಗೆ ಆ ಸ್ವರಕ್ಕೆ ಸಂಬಂಧಿಸಿದ ಸ್ವರಚಿಹ್ನೆಯು ಸೇರಿದಾಗ ಅದನ್ನು ಒಂದು ಗುಣಿತಾಕ್ಷರ ಎನ್ನುತ್ತೇವೆ. ಈ ೧೩ ಸ್ವರಗಳ ಪೈಕಿ ಉ, ಊ, ಒ ಮತ್ತು ಓ ಸ್ವರಗಳು ಸೇರಿ ಆಗುವ ಗುಣಿತಾಕ್ಷರಗಳ ಬರೆವಣಿಗೆಯನ್ನು ಗಮನಿಸಿ. ಈ ಸ್ವರಗಳ ಚಿಹ್ನೆಗಳು (ು, ೂ, ೊ, ೋ.....ಚಿಹ್ನೆಗಳು) ಯಾವುದೇ ವ್ಯಂಜನವಾಗಲೀ ಅದರ ಪಕ್ಕಕ್ಕೆ ಸೇರಿಕೊಳ್ಳುತ್ತವೆ. ಉದಾಹರಣೆಗೆ, ಕು, ಚು, ಭು, ದು, ರು, ಲು, ಹು; ಕೂ, ಚೂ, ಭೂ, ದೂ, ರೂ, ಲೂ, ಹೂ; ಕೊ, ಚೊ, ಭೊ, ದೊ, ಸೊ, ಮೊ, ನೊ; ಕೋ, ಗೋ, ಟೋ, ಡೋ, ತೋ, ಸೋ, ಳೋ ಇತ್ಯಾದಿ.

ಈ ನಾಲ್ಕೂ ಸ್ವರಗಳ ಸ್ವರಚಿಹ್ನೆಗಳು ಈ ಎಲ್ಲ ವ್ಯಂಜನಗಳ ಪಕ್ಕದಲ್ಲೇ ಸೇರಿಕೊಳ್ಳುವುದನ್ನು ನಾವು ಮುಖ್ಯವಾಗಿ ಗಮನಿಸಬೇಕು. ಆದರೆ ಒಂದು ಅಪವಾದವಿದೆ. 'ವ' ವ್ಯಂಜನವನ್ನು ಗಮನಿಸಿ. ಈ ವ್ಯಂಜನದ ಪಕ್ಕದಲ್ಲಿ ಈ ಯಾವುದೇ ಸ್ವರ ಚಿಹ್ನೆಯು ಸೇರಬೇಕಾದಲ್ಲಿ ಅದು ವ್ಯಂಜನದ ಪಕ್ಕದಲ್ಲಂತೂ ಸೇರಲು ಸಾಧ್ಯವಿಲ್ಲ. ವ ವ್ಯಂಜನದ ಜೊತೆಗೆ ಉ ಸ್ವರಚಿಹ್ನೆ (ು) ಸೇರಿದರೆ ಆಗ ಇವೆರಡು ಸೇರಿದ

ಗುಣಿತಾಕ್ಷರದ ಬದಲು ಮ ವ್ಯಂಜನ ಆಗಿಬಿಡುತ್ತದೆ. ಆದ್ದರಿಂದ ಈ ಗುಣಿತಾಕ್ಷರಗಳು ಸಿದ್ಧವಾಗುವ ನಿಯಮಕ್ಕೆ ಅಪವಾದವೆಂದರೆ ವ ವ್ಯಂಜನದ ಜೊತೆಗೆ ಉ, ಊ, ಒ, ಓ ಸ್ವರ ಚಿಹ್ನೆಗಳು ಸೇರುವಾಗ ಆ ಚಿಹ್ನೆಗಳು ವ ವ್ಯಂಜನದ ಪಕ್ಕದ ಬದಲು ಅದರ ಕೆಳಗಡೆ ಜೋಡಣೆಗೊಳ್ಳುತ್ತವೆ. ಅಂದರೆ ಈ ಗುಣಿತಾಕ್ಷರಗಳನ್ನು ವು, ವೂ, ವೊ, ವೋ ಎಂದು ಬರೆಯಲಾಗುತ್ತದೆ. **ವ ವ್ಯಂಜನವನ್ನು ಬಿಟ್ಟು ಕ ವ್ಯಂಜನದಿಂದ ಹಿಡಿದು ಳ ವ್ಯಂಜನದವರೆಗೆ ಉಳಿದೆಲ್ಲ ವ್ಯಂಜನಗಳ ಜೊತೆಗೆ ಈ ನಾಲ್ಕು ಸ್ವರಚಿಹ್ನೆಗಳು ಆಯಾ ವ್ಯಂಜನದ ಪಕ್ಕದಲ್ಲೇ ಸೇರಿಕೊಳ್ಳುವುದು ಅತ್ಯಂತ ತಾರ್ಕಿಕ, ನೆನಪಿಗೆ ಸುಲಭ, ಕಲಿಕೆ ಮತ್ತು ಬರೆವಣಿಗೆಯಲ್ಲಿ ಯಾವ ತೊಡಕೂ ಇರುವುದಿಲ್ಲ ಎಂಬುದು ಗಮನಿಸಬೇಕಾದ ಸಂಗತಿ.**

ಈಗ ಪ, ಫ ಮತ್ತು ಹ ವ್ಯಂಜನಗಳೊಡನೆ ಉ, ಊ, ಒ ಮತ್ತು ಓ ಸ್ವರಗಳು ಸೇರಿ ಆಗುವ ಗುಣಿತಾಕ್ಷರಗಳನ್ನು ಗಮನಿಸೋಣ. ಇವುಗಳನ್ನು ಬರೆಯುವಾಗ ಈ ಸ್ವರಗಳ ಚಿಹ್ನೆಗಳನ್ನು ಈ ವ್ಯಂಜನಗಳ ಕೆಳಗೆ ಬರೆಯುವುದು ರೂಢಿಯಲ್ಲಿ ಬಂದಿದೆ. ಹೀಗೆ ಬರೆಯುವ ಗುಣಿತಾಕ್ಷರಗಳೆಂದರೆ ಪು, ಪೂ, ಪೊ, ಪೋ, ಫು, ಫೂ, ಫೊ, ಫೋ ಮತ್ತು ಹು, ಹೂ, ಹೊ, ಹೋ.

ಆದರೆ ಕರ್ನಾಟಕದ ಹಲವು ಭಾಗಗಳಲ್ಲಿ, ಮುಖ್ಯವಾಗಿ ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ, ಈ ಸ್ವರಚಿಹ್ನೆಗಳನ್ನು ಈ ವ್ಯಂಜನಗಳ ಪಕ್ಕದಲ್ಲೇ ಬರೆಯುವ ತಾರ್ಕಿಕವಾದ ಕ್ರಮವನ್ನು ಅನುಸರಿಸಿಕೊಂಡು ಬಂದಿದ್ದಾರೆ. ಅಂದರೆ ಇವುಗಳನ್ನು **ಪು, ಪೂ, ಪೊ, ಪೋ, ಫು, ಫೂ, ಫೊ, ಫೋ, ಹು, ಹೂ, ಹೊ, ಹೋ** ಎಂಬ ರೂಪದಲ್ಲೂ ಬರೆಯಲಾಗುತ್ತದೆ. ಈ ರೀತಿಯಲ್ಲಿ ಬರೆಯುವುದನ್ನು ಕುರಿತಂತೆ ಕೆಲವು ಮುಖ್ಯವಾದ ಸಂಗತಿಗಳನ್ನು ಗಮನಿಸ ಬಹುದಾಗಿದೆ.

ಯಾವುದೇ ವ್ಯಂಜನಕ್ಕೆ ಈ ನಾಲ್ಕು ಸ್ವರಗಳು ಸೇರಿ ಆಗುವ ಗುಣಿತಾಕ್ಷರಗಳನ್ನು ಹೇಗೆ ಬರೆಯಬೇಕು ಎಂಬ ಸಾಮಾನ್ಯ ನಿಯಮವನ್ನು ಉಪಾಧ್ಯಾಯರು ವಿದ್ಯಾರ್ಥಿಗಳಿಗೆ ಸುಲಭವಾಗಿ ಹೇಳಿಕೊಡಬಹುದು. ಇದು ವಿದ್ಯಾರ್ಥಿಗಳ ನೆನಪಿಗೆ, ಅವರು **ತಾರ್ಕಿಕವಾಗಿ ಯೋಚಿಸುವುದಕ್ಕೆ** ಯಾವ ಧಕ್ಕೆಯನ್ನೂ ತಾರದು. ವ ವ್ಯಂಜನಕ್ಕೆ ಮಾತ್ರ ಇದು ಅಪವಾದ, ಏಕೆಂದರೆ ವ ಮತ್ತು ಮ ವ್ಯಂಜನಗಳ ಬರೆವಣಿಗೆಯಲ್ಲಿ ಇರುವ ಅತಿ ಸಾಮೀಪ್ಯದ ಹೋಲಿಕೆ ಎಂಬ ಸಕಾರಣ ವಿಷಯವನ್ನು ಹೇಳಿದಾಗಿ ಯಾವ ವಿದ್ಯಾರ್ಥಿಯಾದರೂ ಇದನ್ನು ಗ್ರಹಿಸಿ ಅನುಸರಿಸುತ್ತಾನೆ. ಈಗಾಗಲೇ **ಹು, ಹೂ, ಹೊ, ಹೋ** ಗುಣಿತಾಕ್ಷರಗಳನ್ನು **ಹು, ಹೂ, ಹೊ, ಹೋ** ಎಂದು ಬರೆಯುವ ರೂಢಿ ಬಂದು ಇದನ್ನು ಎಲ್ಲರೂ ಒಪ್ಪಿದ್ದಾರೆ. ಅಂತೆಯೇ ಪ, ಫ ವ್ಯಂಜನಗಳಿಗೆ ಸಂಬಂಧಿಸಿದಂತೆಯೂ ಇಂತಹ ಹೊಸ ಬರೆವಣಿಗೆಯ ರೂಢಿಗೆ ಕ್ರಮೇಣ ಒಪ್ಪುವುದರಲ್ಲಿ ಸಂಶಯವಿಲ್ಲ.

ಪ, ಫ ವ್ಯಂಜನಗಳಿಗೆ ಸಂಬಂಧಿಸಿದಂತೆ ಅನೇಕ ಮಕ್ಕಳು ಈ ಹೊಸ ರೀತಿಯಲ್ಲಿ ಬರೆಯಲಾರಂಭಿಸಿದ್ದಾರೆ. ಪ ಮತ್ತು ಫ ವ್ಯಂಜನಗಳಿಂದ ಆರಂಭವಾಗಿ ಇನ್ನೂ ಒಂದು

ಅಥವಾ ಎರಡು ವ್ಯಂಜನಗಳು ಮತ್ತು ಈ ನಾಲ್ಕರಲ್ಲಿ ಯಾವುದೇ ಸ್ವರವು ಸೇರಿ ಉಂಟಾಗುವ ಸಂಯುಕ್ತಾಕ್ಷರಗಳನ್ನು ಬರೆಯುವಾಗ ಹಾಗೂ ಮುದ್ರಣಕ್ಕೆ ಸಿದ್ಧಪಡಿಸುವಾಗ (ಉದಾಹರಣೆಗೆ ಪ್ು, ಪ್ೊ, ಪ್ೋ, ಫ್ರೊ, ಪ್ೌ ಇತ್ಯಾದಿ) ಬರೆವಣಿಗೆಯಲ್ಲಿ ಕೆಲವು ತೊಡಕುಗಳನ್ನು ನಾವು ಇಲ್ಲಿ ಗಮನಿಸಬೇಕು. ಆದರೆ ಇವುಗಳ್ನು ತಾರ್ಕಿಕವಾದ ರೀತಿಯಲ್ಲಿ ಪು, ಪೊ, ಪೋ, ಫೊ, ಪೌ ಎಂದು ಬರೆದಾಗ ಅವುಗಳಿಂದಲೇ ಆಗಬಹುದಾದ ಇಂತಹ ಸಮಸ್ಯೆಗಳು ಇಲ್ಲವಾಗುತ್ತವೆ. ಆದರೆ ಹಿಂದಿನ ಅಭ್ಯಾಸದಿಂದಲೂ, ಹಿಂದಿನ ರೀತಿಯಲ್ಲಿ ಬರೆದು ಮತ್ತು ಆ ಬರೆವಣಿಗೆಯನ್ನು ನೋಡಿ ಮನಸ್ಸಿನಲ್ಲಿ ಅದೇ ಸರಿ ಎಂಬ ಸಹಜವಾದ ಭಾವನೆ ಇರುವಾಗ ಹೊಸತನ್ನು, ಅದು ಸರಿಯಾಗಿದ್ದರೂ ಈ ತಾರ್ಕಿಕ ಬರೆವಣಿಗೆಯನ್ನು ಒಪ್ಪಿಕೊಳ್ಳಲು ಮನಸ್ಸು ಹಿಂಜರಿಯುವುದರಿಂದ ಕೆಲವರು ಆಕ್ಷೇಪಿಸುತ್ತಾರೆ ಎಂಬುವುದನ್ನು ಬಿಟ್ಟರೆ ಇದನ್ನು ಯಾರೂ ವಿರೋಧಿಸಿಲ್ಲ ಮತ್ತು ವಿರೋಧಿಸುವುದಿಲ್ಲ. ಬಹಳ ವ್ಯಾಪಕವಾಗಿ ಬಳಕೆಗೆ ಬಂದಿರುವ ಕರ್ನಾಟಕ ಸರ್ಕಾರದ 'ನುಡಿ' ತಂತ್ರಾಂಶದಲ್ಲಿ ಪ, ಫ ಮತ್ತು ಹ ಅಕ್ಷರಗಳು ಸೇರಿದ ಗುಣಿತಾಕ್ಷರಗಳು ಮತ್ತು ಸಂಯುಕ್ತಾಕ್ಷರಗಳು ಹೊಸ ರೀತಿಯಲ್ಲಿ ಮೂಡುತ್ತಿದ್ದು ನುಡಿ ತಂತ್ರಾಂಶವನ್ನು ಬಳಸುವ ಕರ್ನಾಟಕ ಸರ್ಕಾರದ ಎಲ್ಲ ಇಲಾಖೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಅನೇಕ ವ್ಯಕ್ತಿಗಳು, ಸಂಸ್ಥೆಗಳು, ಪತ್ರಿಕೆಗಳು, ಪ್ರಕಾಶನ ಸಂಸ್ಥೆಗಳು ಮುಂತಾಗಿ ಎಲ್ಲರೂ ಈ ಬದಲಾವಣೆಗೆ ಹೊಂದಿಕೊಳ್ಳುತ್ತಿದ್ದಾರೆ.

ಕನ್ನಡವನ್ನು ಕಲಿಸುವ, ಕಲಿಯುವ ಹಾಗೂ ಬಳಸುವ ಎಲ್ಲರೂ ಈ ವಿಚಾರಗಳನ್ನು ಗಮನಿಸಿ ಈ ಬದಲಾವಣೆಗಳನ್ನು ಅಳವಡಿಸಲು ಸೂಕ್ತಕ್ರಮಗಳನ್ನು ಕೈಗೊಳ್ಳಬೇಕಾಗಿ ವಿನಂತಿ. ಮೈಕ್ರೋಸಾಫ್ಟ್ ಸೇರಿದಂತೆ ಗಣಕಗಳಲ್ಲಿ ಕನ್ನಡ ಲಿಪಿಯನ್ನು ಮೂಡಿಸಬಲ್ಲ ಎಲ್ಲ ಪರಿಕರಗಳಲ್ಲೂ ಈ ಬದಲಾವಣೆಗಳನ್ನು ಅಳವಡಿಸಲು ಸೂಕ್ತಕ್ರಮಗಳನ್ನು ಕೈಗೊಳ್ಳಬೇಕಾಗಿ ವಿನಂತಿ.

❑

ಪುರಂದರದಾಸರ ಸಮಗ್ರ ಶುದ್ಧ ಸಾಹಿತ್ಯದ ಪ್ರಕಟಣೆ ಸಾಧ್ಯವೇ?

• *ಪ್ರೊ. ಜಿ. ಅಶ್ವತ್ಥನಾರಾಯಣ*

ಇತ್ತೀಚೆಗೆ (೨೮-೭-೨೦೦೭) ಬೆಂಗಳೂರಿನ ಭಾರತ ಸಂಸ್ಕೃತಿಯ ಪ್ರತಿಷ್ಠಾನ ಮತ್ತು ಮುಳಬಾಗಿಲಿನ ಶ್ರೀ ಪುರಂದರದಾಸರ ಆರಾಧನಾ ಸಮಿತಿ ಟ್ರಸ್ಟ್ ಆಶ್ರಯದಲ್ಲಿ ಶ್ರೀ ಸರ್ವೋತ್ತಮ ಪೈ ಮತ್ತು ಶ್ರೀ ಬಿ.ಎನ್. ಮೂರ್ತಿ ಅವರು ವ್ಯವಸ್ಥೆ ಮಾಡಿದ ಸಂಶೋಧಕರ ಮತ್ತು ದಾಸಸಾಹಿತ್ಯಾಸಕ್ತರ ಸಭೆಯೊಂದು ಡಾ. ಎಂ. ಚಿದಾನಂದಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಜರುಗಿತು.

ಆ ಸಭೆಯಲ್ಲಿ "ಇಂದು ಪ್ರಕಟವಾಗಿರುವ ಪುರಂದರದಾಸರ ಕೀರ್ತನೆಗಳೆಲ್ಲ ಅವರದೇನೇ? ಇತರರದೇ? ಅವರದೆಷ್ಟು? ಉಳಿದವರದೆಷ್ಟು? ಅವುಗಳ ನಿರ್ಧಾರಕ್ಕೆ ಮಾನದಂಡಗಳೇನು? ಇದುವರೆಗೆ ಪುರಂದರದಾಸರ ಕೀರ್ತನೆಗಳು ಪ್ರಕಟವಾಗಿರುವುದೆಷ್ಟು? ಅಪ್ರಕಟಿತವೆಷ್ಟು? ಅವರು ೪,೭೫,೦೦ ಕೀರ್ತನೆಗಳನ್ನು ರಚಿಸಿರುವುದು ನಿಜವೇ? ಈಗ ಉಳಿದು ಬಂದಿರುವ ಸಾಹಿತ್ಯವೆಷ್ಟು? ಅಚ್ಚಾಗಿರುವುದು ಎಷ್ಟು? ಮೌಖಿಕ ಪರಂಪರೆಯಲ್ಲೇ ಉಳಿದಿರುವುದೆಷ್ಟು? ಅಚ್ಚಿನ ಪರಂಪರೆಯಲ್ಲಿ ಹಾಗೂ ಮೌಖಿಕ ಪರಂಪರೆಯಲ್ಲಿ ಉಳಿದಿರುವುದನ್ನು ಸಂಗ್ರಹಿಸುವ ಪರಿ ಹೇಗೆ? ಈ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳೇನು? ಈ ಪ್ರಯತ್ನದಲ್ಲಿ ಬರುವ ಸಮಸ್ಯೆಗಳಾವುವು?" ಇತ್ಯಾದಿ ವಿಚಾರಗಳನ್ನು ಚರ್ಚಿಸಲಾಯಿತು.

ಈ ಸಭೆಗೆ ಡಾ. ಎಂ. ಚಿದಾನಂದಮೂರ್ತಿ, ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ, ಶ್ರೀ ಸರ್ವೋತ್ತಮ ಪೈ, ಶ್ರೀ ಬಿ.ಎನ್. ಮೂರ್ತಿ, ಶ್ರೀ ಮ.ನ. ರಾಜಾರಾವ್, ಡಾ. ನಾರಾಯಣ ಪ್ರಸಾದ್, ಡಾ. ಎಸ್. ಮುರಳೀಧರ, ಡಾ. ಎ.ವಿ. ನಾವಡ, ಪ್ರೊ. ಸೀತಾರಾಮ ಜಾಗೀರ್‌ದಾರ್,

ಡಾ. ಆರ್. ಗಣೇಶ್, ಪ್ರೊ. ನಾ. ಗೀತಾಚಾರ್ಯ, ಶ್ರೀ ಐರ್ಯ ಲಕ್ಷ್ಮೀನಾರಾಯಣ ಆಳ್ವ, ಪ್ರೊ. ಜಿ. ಅಶ್ವತ್ಥನಾರಾಯಣ, ಶ್ರೀಮತಿ ಪರಿಮಳಾಬಾಯಿ, ಶ್ರೀರಾಮವಿಠಲಾಚಾರ್ಯ ಇನ್ನೂ ಹಲವರು ಬಂದಿದ್ದರು.

ಈ ಸಭೆಯಲ್ಲಿ ನಡೆದ ಚರ್ಚೆಯ ಹಿನ್ನೆಲೆಯಲ್ಲಿ ಪುರಂದರದಾಸರ ಸಾಹಿತ್ಯದ ಸಮಗ್ರ ಶುದ್ಧ ಕೀರ್ತನೆಗಳ ಸಂಪಾದನೆಯನ್ನು ಕುರಿತು ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಿದೆ.

ಸರ್ವೋತ್ತಮ ಪೈ ಅವರು ಪುರಂದರದಾಸರ ಕಾಲದ ಕವಿಪಾಠದ ಪ್ರತಿ ಅಥವಾ ಸಮಕಾಲೀನರು ಬರೆದ ಪ್ರತಿ ಸಿಕ್ಕಬಹುದೇ? ಎಂದು ಕೇಳಿದರು. ನಾಲ್ಕು ಸಾವಿರ ಎಪ್ಪತ್ತೈದು ಸಾವಿರ ಕೀರ್ತನೆಗಳನ್ನು ರಚಿಸಿದ್ದಾರೆಂದು ಪ್ರತೀತಿ ಇದ್ದರೂ ದೊರೆತಿರುವುದು ಕೇವಲ ೨-೩ ಸಾವಿರವಷ್ಟೆ ಇದಕ್ಕೆ ಕಾರಣವೇನು? ವಿದ್ವಾಂಸರು ಹೇಳಬೇಕು ಎಂದರು. ಆಶುಕವಿಗಳಾಗಿ ಸಮಯಸ್ಫೂರ್ತಿಯಿಂದ ಭಕ್ತಿ ಆವೇಶದಿಂದ ದಾಸರು ಹಾಡಿರುವಾಗ ಅದು ಬರೆಹ ರೂಪದಲ್ಲಿ ಸಿಗುವುದು ಹೇಗೆ ಎಂಬುದು ಮುರಳೀಧರರ ಪ್ರಶ್ನೆ ಆಗಿತ್ತು. ದಾಸ ಸಾಹಿತ್ಯದ ಕೀರ್ತನೆಗಳನ್ನು ಹಳೆಗನ್ನಡ ಚಂಪೂ ಕಾವ್ಯಗಳನ್ನು ಸಂಪಾದಿಸುವ ರೀತಿಯಲ್ಲಿ ಅಧಿಕೃತ ಪಾಠ ಅಥವಾ ಸೂಕ್ತ ಪಾಠ ಇಲ್ಲವೇ ಮೂಲಪಾಠವನ್ನು ಪಠ್ಯದಲ್ಲಿ ಉಳಿದ ಪಾಠಗಳನ್ನು ಅಡಿ ಟಿಪ್ಪಣಿಯಲ್ಲಿ ಕೊಟ್ಟಂತೆ ಸಂಪಾದಿಸಲಾಗದು. ಪ್ರತಿಯೊಂದು ಪ್ರಾದೇಶಿಕ ಪಾಠ ಪರಂಪರೆಯನ್ನು ಮೂಲ ಪಾಠವೆಂದೇ ಪರಿಗಣಿಸಬೇಕು ಎಂದು ಅಭಿಪ್ರಾಯಪಟ್ಟರು. ೧೮೭೧ರಲ್ಲಿ ಗದಗಿನಲ್ಲಿ ಕಲ್ಲಚ್ಚಿನಲ್ಲಿ ಅಚ್ಚಾದ ಸುಮಾರು ೧೦೦ ಪುರಂದರದಾಸರ ಕೀರ್ತನೆಗಳ ಪ್ರತಿಯೊಂದನ್ನು ತೋರಿಸಿ ಇದುವರೆಗೆ ಇದರಲ್ಲಿರುವ ಕೀರ್ತನೆಗಳು ಯಾರ ಗಮನಕ್ಕೂ ಬಂದಂತಿಲ್ಲವೆಂದರು. ಹೊಸಪೇಟೆ ದಳಿಯ ಮರಿಯಮ್ಮನ ಹಳ್ಳಿಯಲ್ಲಿರುವ ಹಾಡುಗಾರ ತಿಮ್ಮಯ ವಿಗ್ರಹದಲ್ಲಿ ತಿಮ್ಮಯನ ಕೈಲಿ ಇರುವುದು ದಂಡಿಗೆ. ಹರಿದಾಸರ ವೇಷಭೂಷಣ. ಎಂದರೆ ಪುರಂದರ, ಬಸವರ ಕಾಲದಲ್ಲಿ ಬಳಕೆ ವಾದ್ಯ ದಂಡಿಗೆ ಆಗಿತ್ತು, ತಂಬೂರಿ ಅಲ್ಲ ಎನ್ನಿಸುತ್ತೆ ಎಂದರು. ಡಾ. ಎಂ. ಚಿದಾನಂದಮೂರ್ತಿಯವರು ಹೊಸತುಹೊಸತು ಗ್ರಂಥದಲ್ಲಿ ತಾವು ಬರೆದ ಲೇಖನಚಿತ್ರವನ್ನು ಸಭೆಗೆ ತೋರಿಸಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದಾಸಸಾಹಿತ್ಯ ವಿಭಾಗದಲ್ಲಿ ಸಂಗ್ರಹವಾದ ಓಲೆಗರಿ ಸಾಹಿತ್ಯದಲ್ಲಿ ಇರುವ ಪುರಂದರದಾಸರ ಕೀರ್ತನೆಗಳನ್ನು ಗಮನಿಸಲು ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀಗಳು ತಿಳಿಸಿದರು.

ಲಂಡನ್ನಿನಲ್ಲಿರುವ ನಂದಕುಮಾರ್ ಅವರು ಪುರಂದರದಾಸರ ಸಾಹಿತ್ಯದ ಮೇಲೆ ಮಾಡಿರುವ ಪಿಎಚ್.ಡಿ. ಗ್ರಂಥ ಗಮನಿಸುವ ಅಗತ್ಯವಿದೆ. ಅಲ್ಲದೆ ದಿವಾಣಜಿ ಅವರು ಪುರಂದರದಾಸರ ಮೇಲೆ ರಚಿಸಿರುವ ಪ್ರಸಾದಯೋಗ ಪಿಎಚ್.ಡಿ. ಮತ್ತು ಇದುವರೆಗೆ ಕನ್ನಡದಲ್ಲಿ ದಾಸಸಾಹಿತ್ಯಕ್ಕೆ ಸಂಬಂಧಿಸಿದಂತೆ ಪ್ರಕಟವಾದ ಪಿಎಚ್.ಡಿ.ಗಳನ್ನು ಪರಿಶೀಲಿಸುವ ಅಗತ್ಯವನ್ನು ಪ್ರೊ. ಜಿ. ಅಶ್ವತ್ಥನಾರಾಯಣರು ತಿಳಿಸಿದರು. ಹೀಗೆ ಹತ್ತಾರು ವಿಷಯಗಳನ್ನು ಸಭೆಯಲ್ಲಿ ಪ್ರಸ್ತಾಪಿಸಲಾಯಿತು.

ಈ ಸಂದರ್ಭದಲ್ಲಿ ಇನ್ನು ಕೆಲವು ಸಂಗತಿಗಳನ್ನು ಇಲ್ಲಿ ಹೇಳಬೇಕಾಗಿದೆ.

೧. ಪುರಂದರದಾಸರ ಕೀರ್ತನೆಗಳನ್ನು ತಮಗೆ ದೊರೆತದ್ದನ್ನು ಸಮಗ್ರವಾಗಿ ಕೆಲವು ವಿದ್ವಾಂಸರು ಪ್ರಕಟಿಸಿದ್ದಾರೆ. ಗೋರಬಾಳ ಹನುಮಂತರಾಯರು, ಸುಬೋಧ ರಾಮರಾಯರು, ಪಾವಂಜೆ ಗುರುರಾವ್, ಅರಳುಮಲ್ಲಿಗೆ ಪಾರ್ಥಸಾರಥಿ, ಎಸ್ಕೆ ರಾಮಚಂದ್ರರಾವ್, ಕಲಮದಾನಿ ಗುರುರಾಯರು, ಬೆಟಗೇರಿ ಕೃಷ್ಣಶರ್ಮ ಮತ್ತು ಶ್ರೀ ಹುಚ್ಚುರಾವ್ ಬೆಟಗೇರಿ ಇನ್ನೂ ಹಲವರು ಪ್ರಕಟಿಸಿದ್ದಾರೆ.

೨. ಪುರಂದರದಾಸರ ಕೀರ್ತನೆಗಳನ್ನು ಸಂಗ್ರಹವಾಗಿ ಪ್ರಕಟಿಸಿದವರು ಇದ್ದಾರೆ. ಕಾವ್ಯಪ್ರೇಮಿ, ಆರ್.ಎಚ್. ಕುಲಕರ್ಣಿ, ಭದ್ರಗಿರಿ ಕೇಶವದಾಸರು ಮೊದಲಾದವರು ಸಂಗ್ರಹಗಳನ್ನು ಪ್ರಕಟಿಸಿದ್ದಾರೆ.

೩. ಬೆಟಗೇರಿ ಕೃಷ್ಣಶರ್ಮ ಮತ್ತು ಬೆಟಗೇರಿ ಹುಚ್ಚುರಾವ್ ಅವರು ೬ ಸಂಪುಟಗಳಲ್ಲಿ ಸಂಪಾದಿಸಿರುವ ಪುರಂದರದಾಸರ ಕೀರ್ತನೆಗಳನ್ನು ಬುರ್ಲಿಬಿಂದು ಮಾಧವರು ಪ್ರಕಟಿಸಿದ್ದಾರೆ. ಇದುವರೆಗೆ ಪ್ರಕಟವಾಗಿರುವ ಪುರಂದರದಾಸರ ಕೀರ್ತನ ಸಾಹಿತ್ಯದ ಗ್ರಂಥಗಳಲ್ಲಿ ಸಂಶೋಧಿತವು ಶುದ್ಧ ಪ್ರಯೋಗಗಳನ್ನು ಒಳಗೊಂಡದ್ದು, ಶಾಸ್ತ್ರೀಯ ವಾಗಿ ಸಂಪಾದಿಸಲ್ಪಟ್ಟ ಗ್ರಂಥ ಇದೊಂದೇ ಎನ್ನಬಹುದು.

ತಾಳೆಗರಿ ಪ್ರತಿ, ಕಾಗದದ ಪ್ರತಿ, ಕಲ್ಲಚ್ಚಿನ ಪ್ರತಿ, ಮುದ್ರಿತ ಪ್ರತಿ, ಕೈ ಬರೆಹದ ಪ್ರತಿ ಇವೇ ಮುಂತಾದ ಲಿಖಿತ ದಾಖಲೆಗಳನ್ನೆಲ್ಲ ಪರಿಶೀಲಿಸಿ, ಟಿಪ್ಪಣಿ, ಪೀಠಿಕೆ, ಪಾಠಾಂತರ, ಶಬ್ದಾರ್ಥ, ಅನುಬಂಧಗಳೊಡನೆ ಸಂಪಾದಕರು ಪ್ರಕಟಿಸಿದ್ದಾರೆ. ಸದ್ಯಕ್ಕೆ ಮೂಲ ಆಕರಗಳನ್ನು ನೋಡಿ ಸಿದ್ಧಪಡಿಸಿರುವ ಆಕರಗ್ರಂಥ ಇದೊಂದೇ ಆಗಿದೆ.

ಇಷ್ಟಾದರೂ ಕನ್ನಡದಲ್ಲಿ ಪುರಂದರದಾಸರ ಸಮಗ್ರ ಕೀರ್ತನ ಸಾಹಿತ್ಯ ಪ್ರಕಟವಾಗಿಲ್ಲ. ಏಕೆಂದರೆ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿರುವ ತಾಳೆಗರಿ ಕಾಗದದ ಪ್ರತಿಗಳಲ್ಲಿ ಇರುವ ದಾಸಸಾಹಿತ್ಯವನ್ನೆಲ್ಲ ಪರಿಶೀಲಿಸಿಲ್ಲ.

ಪ್ರಕಟವಾಗಿರುವ ಹಸ್ತಪ್ರತಿಸೂಚಿಗಳಲ್ಲಿ ಸೂಚಿತವಾದ ದಾಸಸಾಹಿತ್ಯ ಗ್ರಂಥಗಳೆಲ್ಲ ಪ್ರಕಟವಾಗಿಲ್ಲ. ಖಾಸಗಿ ವ್ಯಕ್ತಿಗಳ ಬಳಿ ಇರುವ ತಾಳೆಗರಿ, ಕಾಗದ ಪ್ರತಿಗಳ ಸಮೀಕ್ಷೆ ಆಗಿಲ್ಲ.

ಎಷ್ಟೋ ವಿಶ್ವವಿದ್ಯಾಲಯ ಮತ್ತು ಸಂಸ್ಥೆಗಳಲ್ಲಿ ಇರುವ ತಾಳೆಗರಿ ಗ್ರಂಥಗಳ ವರ್ಣನಾತ್ಮಕ ಸೂಚಿ ಸಮಗ್ರವಾಗಿ ಸಿದ್ಧವಾಗಿಲ್ಲ, ಸಿದ್ಧವಾದ ಸೂಚಿಗಳು ಪೂರ್ಣ ಪ್ರಕಟವಾಗಿಲ್ಲ. ಈ ಕೆಲಸ ಮೊದಲು ಆಗಬೇಕು.

ಮುದ್ರಣಯಂತ್ರದ ಬಳಕೆ ಬಂದ ಮೇಲೆ ಕಳೆದ ೨ ಶತಮಾನಗಳಿಂದ ದಾಸಸಾಹಿತ್ಯಕ್ಕೆ ಹಾಗೂ ಪುರಂದರದಾಸರಿಗೆ ಸಂಬಂಧಿಸಿದಂತೆ ಸಾಕಷ್ಟು ಗ್ರಂಥಗಳು, ಲೇಖನಗಳು ಪ್ರಕಟವಾಗಿವೆ. ಅವೆಲ್ಲ ಒಂದೆಡೆ ಸಂಗ್ರಹವಾದ ಒಂದು ಭಂಡಾರ ನಾಡಿನಲ್ಲಿ ಇಲ್ಲ. ಸಮಗ್ರ ವಚನ ಸಾಹಿತ್ಯ ಗ್ರಂಥ ಭಂಡಾರದ ಸ್ಥಾಪನೆಗೆ ನಡೆದಿರುವ ಪ್ರಯತ್ನಗಳು ದಾಸಸಾಹಿತ್ಯದ ಬಗೆಗೆ ನಡೆದಿಲ್ಲ. ಈ ಕೆಲಸವನ್ನು ಮಠಗಳು, ವಿಶ್ವವಿದ್ಯಾನಿಲಯಗಳು, ಪ್ರತಿಷ್ಠಿತ ಖಾಸಗಿ ಸಂಸ್ಥೆಗಳು ಕೈಗೊಳ್ಳಬೇಕು.

ವೈದಿಕ ಸಮಾಜದವರಲ್ಲಿ ಭಜನಾ ಮಂಡಳಿಗಳಿವೆ. ಭಜನಾ ಪದ್ಧತಿಗಳಿವೆ. ಭಜಕರ ಬಳಿ ಇರುವ ಭಜನೆ ಪುಸ್ತಕಗಳಲ್ಲಿ ಸಾಕಷ್ಟು ಅಪ್ರಕಟಿತ ಕೀರ್ತನೆಗಳ ಸಂಗ್ರಹವಿದೆ. ಇವುಗಳ ಸಂಗ್ರಹ ಆಗಬೇಕು. ದಾಸ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅನೇಕ ವಿಶೇಷ ಸಂಚಿಕೆಗಳು ಪ್ರಕಟವಾಗಿವೆ. ಹರಿದಾಸರ ಆರಾಧನೆ ದಿನಗಳಂದು ಗ್ರಂಥಗಳು ಪ್ರಕಟವಾಗಿವೆ. ಅವುಗಳಲ್ಲಿ ಕೀರ್ತನೆಗಳ ಉಪಯುಕ್ತ ಮಾಹಿತಿ ಇವೆ. ಅವುಗಳನ್ನು ಸಂಗ್ರಹಿಸಬೇಕು.

ಸಂಪ್ರದಾಯ ಹಾಡುಗಳ ಪರಂಪರೆಯೊಂದು ನಮ್ಮಲ್ಲಿ ಇದೆ. ವಿಶೇಷವಾಗಿ ಮಹಿಳೆಯರಲ್ಲಿ ಇದನ್ನು ಕಾಣುತ್ತೇವೆ. ಹಬ್ಬ ಹರಿದಿನಗಳಲ್ಲಿ ವ್ರತ-ನೋಂಪಿಗಳಲ್ಲಿ ಹಾಡಿಕೊಳ್ಳುವ ಸಂಪ್ರದಾಯವಿದೆ. ದಿನನಿತ್ಯ ಹಾಡಿಕೊಳ್ಳುವ ಹಾಡುಗಳಿವೆ. ಧ್ವನ, ಮಟ್ಟುಗಳಲ್ಲಿ ರಾಗ, ತಾಳಯುಕ್ತವಾಗಿ ಹಾಡಿಕೊಳ್ಳುವುದನ್ನು ಕಾಣುತ್ತೇವೆ. ಇಂಥ ಸಾಹಿತ್ಯವನ್ನು ಈಗಾಗಲೇ ನಾಡಪದಗಳು, ಗೃಹಿಣಿಗೀತಗಳು, ಹೃದಯಗೀತ, ಹಳ್ಳಿಯ ಹಾಡುಗಳು, ಮೊದಲಾದ ಹತ್ತಾರು, ಸಂಪ್ರದಾಯದ ಹಾಡುಗಳ ಸಂಗ್ರಹಗಳಲ್ಲಿ ಕಾಣುತ್ತೇವೆ. ಈ ಬಗೆಯ ಗ್ರಂಥಗಳಲ್ಲಿ ಮತ್ತು ಈ ರೀತಿ ಹಾಡುವ ಸಂಪ್ರದಾಯದ ಮಹಿಳೆಯರಲ್ಲಿ ಪುರಂದರದಾಸರ ಮತ್ತು ಇತರ ದಾಸರ ಕೀರ್ತನೆಗಳು ಸಾಕಷ್ಟಿವೆ. ಉದಾಹರಣೆಗೆ ವಾಗೀಶ್ವರಿ ಶಾಸ್ತ್ರಿ ಅವರ ಹೃದಯ ಸಂಪುಟದಲ್ಲಿ ಆಸೂರಿ ರಾಮಸ್ವಾಮಿ ದಾಸರ ಸಂಪುಟದಲ್ಲಿ ಪ್ರಕಟವಾಗದಿರುವ ಹತ್ತಾರು ಕೀರ್ತನೆಗಳನ್ನು ಕಾಣಬಹುದು. ಆದರೆ ಸಂಪ್ರದಾಯದ ಹಾಡುಗಳೆಲ್ಲ ಅಚ್ಚಾಗಿಲ್ಲ. ಆದ ಕಾರಣ ಅಚ್ಚಾದ ಹಾಡುಗಳನ್ನು ಅಚ್ಚಾಗದೆ ಬಾಯಲ್ಲೇ ಉಳಿದ ಹಾಡುಗಳನ್ನೂ ಧ್ವನಿಮುದ್ರಣದ ಮೂಲಕ, ಗ್ರಂಥ ಸಂಗ್ರಹದ ಮೂಲಕ ಸಂಗ್ರಹಿಸಬೇಕಾಗಿದೆ. ಈ ಕಾರ್ಯದಲ್ಲಿ ಅನೇಕ ಪುರಂದರರ ಕೀರ್ತನೆಗಳು ಸಿಗಲಿವೆ.

ದಾಸಸಾಹಿತ್ಯಕ್ಕೆ ಸಂಬಂಧಿಸಿದ ಹತ್ತಾರು ಮಾಸಪತ್ರಿಕೆಗಳು ಇತರ ಪತ್ರಿಕೆಗಳು ಪ್ರಕಟವಾಗಿದ್ದವು. ಅವುಗಳ ಸಂಚಿಕೆಗಳನ್ನೆಲ್ಲ ಸಂಗ್ರಹಿಸಲಾಗುತ್ತಿದೆ. ಅವುಗಳಲ್ಲಿ ಸಾಕಷ್ಟು ಅಪರಿಚಿತ ಕೀರ್ತನೆಗಳಿವೆ. ಮಾಹಿತಿಗಳಿವೆ, ವಿಮರ್ಶೆಗಳಿವೆ.

ಹೊರನಾಡ ಕನ್ನಡಿಗರಲ್ಲಿ, ಹೊರನಾಡ ಸಂಸ್ಥೆಗಳಲ್ಲಿ ಇರುವ ಕೀರ್ತನ ಸಾಹಿತ್ಯ ಸಂಗ್ರಹವಾಗಬೇಕು. ರಾಜ್ಯ ಪತ್ರಾಗಾರದಲ್ಲಿ ಹೊರರಾಜ್ಯಗಳ ಗ್ರಂಥ ಭಂಡಾರಗಳಲ್ಲಿ ಇರುವ ಕೀರ್ತನ ಸಾಹಿತ್ಯವನ್ನು ಸಂಗ್ರಹಿಸಬೇಕು. ಅಲ್ಲೆಲ್ಲ ಪುರಂದರದಾಸರ ಸಾಹಿತ್ಯ ಸಿಗುವ ಸಂಭವವಿದೆ.

ಹೀಗೆ ನಾನಾ ಮೂಲಗಳಿಂದ ಪುರಂದರ ಸಾಹಿತ್ಯ ಸಂಗ್ರಹ ಮೊದಲು ಆಗಬೇಕು.

ಈಗ ಲಭ್ಯವಿರುವ ಕೀರ್ತನೆಗಳ ಅಕಾರಾದಿ ಸಿದ್ಧವಾಗಬೇಕು. ನಾಡಿನಲ್ಲಿ ದಾಸರ ಕೀರ್ತನೆ ಹಾಡುತ್ತಿರುವ ಗಾಯಕರಲ್ಲಿ ಸಂಪ್ರದಾಯಸ್ಥ ಮಹಿಳೆ, ಪುರುಷರಲ್ಲಿ ಇರುವ ಮೌಖಿಕ ಪರಂಪರೆಯ ಕೀರ್ತನೆಗಳನ್ನು ಧ್ವನಿಮುದ್ರಣದ ಮೂಲಕ ಸಂಗ್ರಹಿಸಬೇಕು.

ಗಾಯಕರು, ಗ್ರಂಥಗಳು ಮೊದಲಾದವುಗಳ ಬಗ್ಗೆ ಮಾಹಿತಿ ಪಡೆಯಲು, ಸಾರ್ವಜನಿಕ ಪ್ರಕಟಣೆಗಳನ್ನು ನೀಡಬೇಕು.

ಸಂಗ್ರಹಿಸಿದ ಸಾಹಿತ್ಯವನ್ನು ಪರಿಷ್ಕರಿಸಲು ವಿದ್ವಾಂಸರ, ತಜ್ಞರ ಸಮಿತಿಯನ್ನು ರಚಿಸಬೇಕು.

ಪ್ರಕಟಣೆಯ ರೂಪುರೇಷೆಗಳನ್ನು ನಿರ್ಧರಿಸಲು ಹಲವಾರು ವಿಚಾರಗೋಷ್ಠಿಗಳನ್ನು ಏರ್ಪಡಿಸಬೇಕು.

ಕ್ಷೇತ್ರಕಾರ್ಯಕ್ಕೆ ಎಂದರೆ, ಓಲೆಗರಿಗಳಿಂದ ಸಾಹಿತ್ಯ ಸಂಗ್ರಹಿಸಲು ಹಾಡುವವರ ಬಳಿ ಹೋಗಿ ಧ್ವನಿಮುದ್ರಣ ಮಾಡಿಕೊಳ್ಳಲು, ವಿದ್ವಾಂಸರ ಬಳಿ ಇರುವ ಗ್ರಂಥ ಲೇಖನಗಳನ್ನು ಸಂಗ್ರಹಿಸಲು ಅಥವಾ ಪ್ರತಿ ಮಾಡಿಕೊಳ್ಳಲು ಒಂದು ಕಾರ್ಯ ಪಡೆಯನ್ನು, ಸಿಬ್ಬಂದಿಯನ್ನು, ವ್ಯವಸ್ಥೆಗೊಳಿಸಬೇಕು.

ಈ ಬೃಹತ್ ಯೋಜನೆ ಕಾರ್ಯಗತವಾಗಲು ಅಪಾರ ಆರ್ಥಿಕ ನೆರವು ಬೇಕು. ಇದಕ್ಕೆ ಸರ್ಕಾರ, ವಿಶ್ವವಿದ್ಯಾನಿಲಯ, ಶ್ರೀಮಂತರು, ಮಠಗಳು, ಸಾರ್ವಜನಿಕರು, ಸಂಸ್ಥೆಗಳು ಮುಂದೆ ಬರಬೇಕು. ಈ ಆರ್ಥಿಕ ನೆರವನ್ನು ಸಂಯೋಜಿಸಲು ಒಂದು ಆರ್ಥಿಕ ಸಮಿತಿ ರೂಪುಗೊಳ್ಳಬೇಕು. ಹೀಗೆ, ಸಾಹಿತ್ಯ ಸಂಗ್ರಹ ಸಮಿತಿ, ಪರಿಷ್ಕರಣ ಸಮಿತಿ, ಪ್ರಕಟನಾ ಸಮಿತಿ, ಪ್ರಚಾರ ಸಮಿತಿ, ಆರ್ಥಿಕ ಸಮಿತಿ, ಕಾರ್ಯಕ್ರಮ ಸಮಿತಿ, ಮೇಲ್ವಿಚಾರಕ ಸಮಿತಿ ಮೊದಲಾದ ಹಲವಾರು ಸಮಿತಿಗಳು ರೂಪುಗೊಂಡು ಕಾರ್ಯಪ್ರವೃತ್ತವಾಗಬೇಕು.

ನಿರ್ದಿಷ್ಟ ಕಾಲಮಿತಿಯ ಯೋಜನೆಯೊಂದನ್ನು ಇದಕ್ಕೆ ಸಿದ್ಧಪಡಿಸಬೇಕು. ಹತ್ತಾರು ಕೈಗಳು-ತಲೆಗಳು ಒಂದಾಗಬೇಕು, ಮುಂದೆ ಬರಬೇಕು.

ಬೆಕ್ಕಿಗೆ ಗಂಟೆ ಕಟ್ಟುವರಾರು?

ಸಮಗ್ರ, ಶುದ್ಧ ಅಧಿಕೃತ ಪುರಂದರ ಸಾಹಿತ್ಯ ಪ್ರಕಟಣೆಗೆ ಸುವರ್ಣ ಕರ್ನಾಟಕ ವರ್ಷದಲ್ಲಿ ಕಾರ್ಯಾರಂಭವಾದರೂ ಆಗಲಿ ಎಂದು ಹಾರೈಸಬೇಕಾಗಿದೆ.

❑

ಬಿ. ವೆಂಕಟಾಚಾರ್ಯರ ಇತರ ಕೃತಿಗಳು

• ಪ್ರೊ. ಜಿ. ಅಬ್ದುಲ್ ಬಷೀರ್

ಪೀಠಿಕೆ:

೧೯೨೦ರಲ್ಲಿ ಪ್ರಾರಂಭವಾದ ನವೋದಯ ಕನ್ನಡ ಸಾಹಿತ್ಯಕ್ಕೆ ಹಿನ್ನೆಲೆಯಾಗಿ ಕೆಲಸ ಮಾಡಿದ ಕೆಲವು ಮುಖ್ಯ ಕೃತಿಕಾರರನ್ನು ಅಗತ್ಯವಾಗಿ ಹೆಸರಿಸಬೇಕಾಗಿದೆ. ಅಂಥವರಲ್ಲಿ ಬಿ. ವೆಂಕಟಾಚಾರ್ಯ ಅವರೂ ಒಬ್ಬರು.* ದೇಸೀನಿಷ್ಠ ಸಂಸ್ಕೃತ ಶೈಲಿಯಲ್ಲಿ ಗದ್ಯದ ಮುಖಾಂತರ ವೈಚಾರಿಕತೆಯನ್ನು ಪ್ರಕಟಿಸಿದವರಲ್ಲಿ ಇವರು ಮುಖ್ಯರು. ಇವರ ಅನುವಾದ ಕೃತಿಗಳೂ ಸಹ ಸೃಜನಶೀಲವಾಗಿವೆ ಎಂಬುದನ್ನು ಗಮನಿಸ ಬೇಕು. ಶ್ರೀಯುತರು ಧಾರ್ಮಿಕಶ್ರದ್ಧೆಯ, ಸಾಹಿತ್ಯಾಭಿರುಚಿಯ ಕನ್ನಡಾಭಿಮಾನಿ.

ಬಿ.ವೆಂಕಟಾಚಾರ್ಯ ಅವರು ಎಂಬತ್ತಕ್ಕೂ ಮೀರಿದ ಸ್ವತಂತ್ರ ಕೃತಿಗಳನ್ನೂ ಅನುವಾದಿತ ಕೃತಿಗಳನ್ನೂ ಹೊರತಂದಿದ್ದಾರೆ. ಆ ಕಾಲದಲ್ಲಿ ಅನೇಕ ಕುಂದುಕೊರತೆಗಳ ನಡುವೆಯೂ ಅಪಾರ ಸಂಖ್ಯೆಯ ಕೃತಿ ಗಳನ್ನವರು ಹೊರತಂದಿರುವುದು ಸ್ತುತ್ಯರ್ಹವಾದ ಕಾರ್ಯವಾಗಿದೆ. ಕೃತಿಗಳನ್ನು ಕನ್ನಡದಲ್ಲಿ ರಚಿಸುವುದರ ಮುಖಾಂತರ ಇವರು ಕನ್ನಡ ಸಾಹಿತ್ಯಕ್ಕೆ ಕ್ರಿಯಾಶೀಲತೆಯನ್ನು ತಂದುಕೊಟ್ಟರು. ಈ ಕಾರ್ಯ ಸ್ವತಂತ್ರ ಕೃತಿನಿರ್ಮಾಣದ ಮೂಲಕವೂ ಇಂಗ್ಲಿಷ್ ಹಾಗೂ ಬಂಗಾಲಿ ಕೃತಿಗಳ ಅನುವಾದ ಕಾರ್ಯದ ಮುಖಾಂತರವೂ ನಡೆಯಿತು. ಇವರನ್ನು ನಡುಗನ್ನಡ ಮತ್ತು ಹೊಸಗನ್ನಡದ ಸಂಧಿಕಾಲದ(ಅರುಣೋದಯ) ಇಲ್ಲವೆ ಸಂಕ್ರಮಣ ಕಾಲದ ಲೇಖಕರೆಂದು ಗುರುತಿಸುವುದೊಳ್ಳೆಯದು.

ಲೌಕಿಕ-ಧಾರ್ಮಿಕ-ಆಧ್ಯಾತ್ಮಿಕ ವಿಚಾರಗಳನ್ನು ಆಲಂಕಾರಿಕವಾದ ಪದ್ಯರೂಪದಲ್ಲಿ ವ್ಯಕ್ತಿಪಡಿಸುವುದಕ್ಕಿಂತ ಕಾಗದ-ಮುದ್ರಣಗಳ ಬಳಕೆಯಿದ್ದ ಆ ಕಾಲದಲ್ಲಿ ಬಿ.ವೆಂ. ಅವರು ಗದ್ಯರೂಪವನ್ನೇ ಆಶ್ರಯಿಸಿದ್ದು ಸಹಜವಾಗಿದೆ. ಈ ಕಾಲದಲ್ಲಿ ಸ್ವತಂತ್ರ ಕೃತಿನಿರ್ಮಾಣಕ್ಕೆ ಹೆಗಲೆಣೆಯಾಗಿ

ಅನುವಾದ ಕಾರ್ಯವೂ ಸಾಹಿತ್ಯೇತರ ಕೃತಿಗಳೂ ಹೇರಳವಾಗಿ ನಿರ್ಮಾಣವಾದವು; ಅಷ್ಟೇ ಅಲ್ಲ, ಈ ಕಾಲದ ಬಹುಪಾಲು ಲೇಖಕರು ಸಹೃದಯರಲ್ಲಿ ವಾಚನಾಭಿರುಚಿಯನ್ನು ಬೆಳೆಸಿದ್ದು ಬಹುಮುಖ್ಯವಾದ ವಿಚಾರವಾಗಿದೆ. ಈ ಮೂಲಕ ಅವರು ಅನೇಕ ಲೇಖಕರನ್ನು ಸೃಷ್ಟಿಸಿದ್ದು ಮರೆಯಲಾಗದು.

ವ್ಯಕ್ತಿತ್ವ :

ಬಿ. ವೆಂಕಟಾಚಾರ್ಯ ಅವರ ಕಾಲ ೧೮೪೫-೧೯೧೪.[೧] ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಬಿಂಡಿಗನವಿಲೆ ಇವರ ಊರು.[೨] ತಂದೆ ಗರುಡಾಚಾರ್ಯರು, ಇವರ ವಿದ್ಯಾಭ್ಯಾಸ ಕೊಳ್ಳೆಗಾಲ ಹಾಗೂ ತುಮಕೂರಿನಲ್ಲಿ ನಡೆಯಿತು.

ಬಿ.ವೆಂಕಟಾಚಾರ್ಯ ಅವರು ಬಂಗಾಳಿ ಲೇಖಕ-ಸಮಾಜ ಸುಧಾರಕ ಈಶ್ವರಚಂದ್ರ ವಿದ್ಯಾಸಾಗರರ ಕಾದಂಬರಿಗಳನ್ನೂ ಬಂಕಿಮಚಂದ್ರರ ಕಾದಂಬರಿಗಳನ್ನೂ ಕನ್ನಡಕ್ಕೆ ತಂದಿದ್ದಾರೆ. ಇವರು ಸಂಸ್ಕೃತ ವಿದ್ವಾಂಸರು.[೩] ಇವರ ಕೃತಿಗಳಲ್ಲಿ ಭಾಷಾಕೌಶಲ, ಉತ್ತಮ ವರ್ಣನೆ, ನೇರ ನಿರೂಪಣೆಗಳನ್ನು ಗುರುತಿಸಬಹುದು. 'ಅವಕಾಶ ತೋಷಿಣಿ' ಎಂಬ ಮಾಸಪತ್ರಿಕೆಯನ್ನು ನಡೆಸುತ್ತಿದ್ದ ಇವರು ಕಥೆ ಹಾಗೂ ವೈಚಾರಿಕ ಲೇಖನಗಳನ್ನು ಬರೆಯುತ್ತಿದ್ದರು; ಸುಪ್ರಸಿದ್ಧ ಪತ್ರಿಕೋದ್ಯಮಿಗಳು; ಒಳ್ಳೆಯ ಆಟಗಾರರು. ಕನ್ನಡದ ಬಗ್ಗೆ ಅನಾದರ, ಪರಭಾಷಾ ವ್ಯಾಮೋಹ, ಓದುಗರ ವೃತ್ತವಿಲ್ಲದ ಕಾಲದಲ್ಲಿ ಇವರು ಸಮಯ-ಸಮಕಾಲೀನ ಪ್ರಜ್ಞೆಯಿಂದ ಕೃತಿರಚಿಸಿದ್ದು ಬಹುಮುಖ್ಯವಾದ ಸಂಗತಿಯಾಗಿದೆ.

ತುಮಕೂರಿನ ಇಂಗ್ಲಿಷ್‌ಶಾಲೆಯಲ್ಲಿ ಜೂನಿಯರ್-ಸೀನಿಯರ್ ಪರೀಕ್ಷೆಗಳನ್ನು ಮುಗಿಸಿದ ಅವರು ಸರಕಾರದ ಗುಮಾಸ್ತೆಯಾಗಿ ಕೆಲಸಕ್ಕೆ ಸೇರಿದರು. ಅಕೌಂಟೆಂಟ್ ಆಗಿ ಚಿತ್ರದುರ್ಗಕ್ಕೆ ಹೋದರು; ಅನಂತರ ಡಿವಿಜನ್ ಹೆಡ್ ಮುನ್ಷಿ, ಜಿಲ್ಲಾ ನ್ಯಾಯಾಲಯ ಶಿರಸ್ತೇದಾರ್ ಹಾಗೂ ಪಬ್ಲಿಕ್ ಪ್ರಾಸಿಕ್ಯೂಟರ್ ಅಗಿ ಕೊನೆಗೆ ಮುನ್ಸೀಫರಾಗಿ ಬಡ್ತಿಪಡೆದ ಪ್ರತಿಭಾವಂತ, ಕಾರ್ಯ ದಕ್ಷತೆಯ, ಶ್ರದ್ಧೆ-ನಿಷ್ಠೆಗಳ ಸಾಕಾರಮೂರ್ತಿ. ಪ್ರಾರಂಭದ ಬದುಕಿನಲ್ಲಿ 'ಸ್ತೋತ್ರ'ಗಳನ್ನು ರಚಿಸುತ್ತಿದ್ದರು. ಔಷಧಿಗಳನ್ನು ಸುತ್ತಿದ್ದ ಬಂಗಾಳಿ ಪತ್ರಿಕೆಯ ಹಾಳೆಯೊಂದನ್ನು ಗಮನಿಸಿ ಅದರಲ್ಲಿ ಆಸಕ್ತಿ ಮೂಡಿದ ಅವರು ಬಂಗಾಲಿ ಭಾಷೆಯನ್ನು ಕಲಿತರು-ಅವರ ಬಂಧು ಗಳೊಬ್ಬರಿಂದ. ಈಶ್ವರಚಂದ್ರ ವಿದ್ಯಾಸಾಗರರೊಡನೆ ಪತ್ರವ್ಯವಹಾರ ನಡೆಸುತ್ತಿದ್ದರು. ಆ ಕಾಲದಲ್ಲಿ ಇವರ ಅನೇಕ ಕೃತಿಗಳು-ದುರ್ಗೇಶನಂದಿನಿ, ಆನಂದಮಠ, ವಿಷವೃಕ್ಷ ಮುಂತಾದವು ಶಾಲಾ-ಕಾಲೇಜುಗಳಲ್ಲಿ ಪಠ್ಯಗ್ರಂಥಗಳಾದವು.

ಬಿ. ವೆಂಕಟಾಚಾರ್ಯ ಅವರು ಬಂಗಾಲಿಲೇಖಕ ಬಂಕಿಮಚಂದ್ರರ ಕೃತಿಗಳನ್ನೇ ಅನುವಾದಕ್ಕೆ ಆರಿಸಿಕೊಳ್ಳಲು ಕಾರಣ: ಅವರ ಕೃತಿಗಳಲ್ಲಿ ದೇಶಾಭಿಮಾನ, ಸ್ತ್ರೀವಾದ ಪರವಾದ ವೈಚಾರಿಕ ನಿಲುವು, ಧಾರ್ಮಿಕ ನಿಷ್ಠೆ, ಆಚಾರ ವಿಚಾರಕ್ಕೆ ಸಂಬಂಧಪಟ್ಟ ಚರ್ಚೆಗಳು, ರಂಜನೀಯ-ಅದ್ಭುತ ರಮ್ಯ ಹಾಗೂ ರೋಮಾಂಚನವನ್ನುಂಟುಮಾಡುವ ಘಟನೆಗಳು-ಅಲೌಕಿಕ ಸಂಗತಿಗಳು, ಆಕರ್ಷಕ ನಿರೂಪಣೆ ಇದ್ದುದರಿಂದ. "A novel is the sense it

is Understood in English is not familiar to the Kanarese speaking public" ಎಂದು ದುರ್ಗೇಶನಂದಿನಿ ಎಂಬ ಕಾದಂಬರಿಯಲ್ಲಿ ಹೇಳುವುದರ ಮುಖಾಂತರ ಕನ್ನಡ ಸಾಹಿತ್ಯಕ್ಷೇತ್ರದ ಕಾದಂಬರಿ ಅಭಾವವನ್ನು ನೀಗಿದರು. ವೈವಿಧ್ಯಮಯ ಕೃತಿರಚನೆಯನ್ನು ಮಾಡಿರುವ ಬಿ.ವೆಂಕಟಾಚಾರ್ಯ ಅವರು ಬಂಗಾಳಿ ಸಾಹಿತ್ಯವನ್ನು ಕನ್ನಡಕ್ಕೆ ತಂದು ಬಹುದೊಡ್ಡ ಉಪಕಾರಮಾಡಿದರು. ಹೀಗಾಗಿ ಅವರು 'ಕರ್ನಾಟಕ ಕಾದಂಬರಿ ಪಿತಾಮಹ'ರೆನಿಸಿದರು.

ಕೃತಿವಿಭಾಗ:

ಬಿ. ವೆಂಕಟಾಚಾರ್ಯ ಅವರ ಕೃತಿಗಳನ್ನು ಮೂರುಭಾಗ ಮಾಡಬಹುದು:

೧) ಸ್ವತಂತ್ರ ಕೃತಿಗಳು
೨) ಅನುವಾದಿತ ಕೃತಿಗಳು
೩) ಇತರ ಕೃತಿಗಳು

ಬಿ. ವೆಂಕಟಾಚಾರ್ಯ ಅವರ ಸ್ವತಂತ್ರ ಕೃತಿಗಳಲ್ಲಿ ಕಥೆ-ಕಾದಂಬರಿಗಳನ್ನು ಬಿಟ್ಟು ಉಳಿದವನ್ನು ಇತರ ಕೃತಿಗಳೆಂದು ಕರೆಯಬಹುದು. ಅನುವಾದಿತ ಕೃತಿಗಳಲ್ಲಿ ಕಥೆ-ಕಾದಂಬರಿಗಳನ್ನು ಬಿಟ್ಟು ಉಳಿದವನ್ನು ಇತರ ಕೃತಿಗಳೆಂದು ಪರಿಗಣಿಸಬಹುದು. ಸದ್ಯಕ್ಕೆ ಇತರ ಕೃತಿಗಳೆಂದರೆ ಕಾದಂಬರಿ, ಕಥೆ, ನಾಟಕಗಳಂಥ ಪ್ರಕಾರದ ಕೃತಿಗಳನ್ನು ಬಿಟ್ಟು-ಅವು ಸ್ವತಂತ್ರವಿರಲಿ, ಅನುವಾದಿತವಿರಲಿ-ಚರಿತ್ರೆ, ದರ್ಶನ, ಹೆಣ್ಣಿನ ಸಮಸ್ಯೆ, ಧರ್ಮ, ಸಮಾಜ ಸುಧಾರಣೆ, ರಾಜನೀತಿ, ವಿಜ್ಞಾನ, ದೇಶ ಮುಂತಾದ ವಿಚಾರಗಳನ್ನೊಳಗೊಂಡ ಕೃತಿಗಳೆಂದು ಭಾವಿಸಿ ಅಂಥ ಕೆಲವು ಲಭ್ಯ ಕೃತಿಗಳನ್ನು ಕುರಿತು ಕೆಲವು ಮಾತುಗಳನ್ನು ಹೇಳಲು ಇಲ್ಲಿ ಪ್ರಯತ್ನಿಸಲಾಗಿದೆ.

ಬಿ. ವೆಂಕಟಾಚಾರ್ಯ ಅವರು ತಮ್ಮ ಬರೆವಣಿಗೆಯ ಉದ್ದೇಶವನ್ನು ಒಂದು ಕಡೆ ಹೀಗಿ ಹೇಳಿದ್ದಾರೆ: "ಕಾದಂಬರಿ ಸಮಾಜದ ಹಾಗೂ ಸಮಾಜದ ಅಂಗಭೂತವಾದ ಮನುಷ್ಯನ ಚರಿತ್ರೆ ನಡೆವಳಿಕೆಗಳಲ್ಲಿ ಕಂಡುಬರುವ ದುರ್ನಡತೆ ಮುಂತಾದವುಗಳನ್ನು ಉದಾಹರಣೆಗಳೊಡನೆ ಚಿತ್ರಿಸಿ ಪ್ರತಿಯೊಬ್ಬನೂ ಸದ್ಭಾವದಿಂದ ನಡೆದುಕೊಳ್ಳುವುದನ್ನು ತೋರ್ಪಡಿಸತಕ್ಕದ್ದಾಗಿದೆ" (ದುರ್ಗೇಶನಂದಿನಿ' ಎಂಬ ಅನುವಾದಿತ ಕಾದಂಬರಿಯ ಇಂಗ್ಲಿಷ್ ಪೀಠಿಕೆಯಲ್ಲಿ). ಬಿ. ವೆಂಕಟಾಚಾರ್ಯ ಅವರ ಸ್ವಂತ ಅಥವಾ ಅನುವಾದಿತ ಲೇಖನಗಳನ್ನೂ ಪ್ರಬಂಧಗಳನ್ನೂ ಕೃತಿಗಳನ್ನೂ ಗಮನಿಸಿದರೆ ಮೇಲಿನ ವಿಚಾರ ಇನ್ನಷ್ಟು ನಿಚ್ಚಳವಾಗುತ್ತದೆ. 'ಇತರ ಕೃತಿಗಳು' ಅನುವಾದವಾಗಿದ್ದರೂ (ಕೆಲವು) ಅನುವಾದಕರ ಕೃತಿಯ ಆಯ್ಕೆ ಅವರ ಮನೋಧರ್ಮವನ್ನು ಬಿಂಬಿಸುತ್ತದೆ; ಅವರ ಪಾಂಡಿತ್ಯ, ಪ್ರತಿಭಾಶಕ್ತಿಗಳ ಅರಿವು ಆ ಕೃತಿಗಳಿಂದಾಗುತ್ತದೆ; 'ಪಾಲಿಟಿಕ್ಸು ಅಥವಾ ರಾಜನೀತಿ',[೪] ಲೋಕರಹಸ್ಯ,[೫] ಸ್ತ್ರೀ ಶಿಕ್ಷೆಯ ರಹಸ್ಯ[೬] ಸುಶಿಕ್ಷಿತ ಸಭ್ಯರಾದ ಹಿಂದೂಗಳು[೭] ದೇಶಾಂತರಗಳಲ್ಲಿ ಪ್ರಾಚೀನ ಭಾರತದ ಉಪನಿವೇಶನಗಳು,[೮] ಪ್ರಾಚೀನ ಮತ್ತು ನವೀನ ಕಾಲದ ಹೆಂಗಸರು[೯] ಕಮಲಾಕಾಂತ[೧೦] ಗೀತೋಕ್ತಧರ್ಮ[೧೧] ಎಂಬ ಕೃತಿಗಳಲ್ಲಿ ಕೆಲವು ಕೃತಿಗಳ ಬಗ್ಗೆ ಸಂಕ್ಷೇಪವಾಗಿ ನಿರೂಪಿಸಬಹುದು.

'ಪಾಲಿಟಿಕ್ಸ್ ಅಥವಾ ರಾಜನೀತಿ':

'ವಂಗ ದರ್ಶನದ' ಸಂಪಾದಕನಿಂದ ರಾಜನೀಯ ಮೇಲೆ ಬರೆಯಲು ಕೋರಿಕೆ ಬಂದಾಗ, ಕಮಲಾಕಾಂತನು ವ್ಯಕ್ತಪಡಿಸುವ ಅಭಿಪ್ರಾಯಗಳಿಲ್ಲಿವೆ. ಈ ಎಲ್ಲ ಅಭಿಪ್ರಾಯಗಳೂ ಬಿ. ವೆಂಕಟಾಚಾರ್ಯ ಅವರವೇ. 'ತಾನೇನು ರಾಜನೇ, ಸ್ತುತಿ ಪಾಠಕನೇ, ಠಕ್ಕನೇ, ಭಿಕ್ಷುಕನೇ, ಸಂಪಾದಕನೇ, ರಾಜನೀತಿಯ ಮೇಲೆ ಬರೆಯುವುದಕ್ಕೆ? ವಂಗದರ್ಶನದ ಸಂಪಾದಕನ ಈ ಬುದ್ಧಿ ವೈಪರೀತ್ಯವನ್ನು ಭಾವಿಸುತ್ತ, ಕಮಲಾಕಾಂತನು ಅಲ್ಲಿ ಉರುಳಿ ಬಿದ್ದಿದ್ದ ಒಂದು ಮರದ ಮೋಟಿನ ಮೇಲೆ ಕುಳಿತು ಅಫೀಮು ನುಂಗಿದನು. ಎದುರಿಗೆ ಒಬ್ಬ ಗಾಣಿಗನ ಹಟ್ಟಿ ಅಂಗಳದಲ್ಲಿ ಎರಡು ಮೂರು ಎತ್ತುಗಳನ್ನು ಕಟ್ಟಿಹಾಕಿದೆ. ಅವು ತೊಟ್ಟಿಯಲ್ಲಿ ಬಾಯಿ ಹಾಕಿಕೊಂಡು ಸುಖವಾಗಿ ಹುಲ್ಲು ತಿನ್ನುತ್ತಿವೆ. ಹದಿನೇಳುಜನ ಸವಾರರು ಬಂದು ಗೆದ್ದ ಈ ಜನಕ್ಕೆ ರಾಜನೀತಿ ಏನಿದೆ? ಜಯರಾಧೆ ಕೃಷ್ಣ? ಎನ್ನುವುದೇ ಇವರ ಪಾಲಿಟಿಕ್ಸ್!' ಎಂದು ಅವನು ಯೋಚಿಸುತ್ತಿರಲು, ಗಾಣಿಗನ ಮೊಮ್ಮಗ–ಹತ್ತು ವರ್ಷದ ಹುಡುಗ–ಒಂದು ಕಂಚಿನ ತಣಿಗೆಯಲ್ಲಿ ಊಟವನ್ನು ತಂದು ಅಂಗಳದಲ್ಲಿ ತಿನ್ನುತ್ತ ಕುಳಿತನು. ಒಂದು ನಾಯಿ ಅದನ್ನು ನೋಡಿ ಹಲ್ಲು ಕಿರಿದು, ಬಾಲ ಅಲ್ಲಾಡಿಸಿ, ಮೆಲ್ಲಮೆಲ್ಲಗೆ ಒಂದೊಂದೇ ಹೆಜ್ಜೆ ಮುಂದೆ ಬಂತು. ಆಗ ಕಮಲಾಕಾಂತನಿಗೆ ದಿವ್ಯದೃಷ್ಟಿ ಬಂದು 'ಇದು ರಾಜನೀತಿ! ನಾಯಿಯು ಪಾಲಿಟಿಷಿಯನ್' ಎನ್ನಿಸಿತು. ಅದರ ಬಡಕಲ ದೇಹವನ್ನು ನೋಡಿ ಹುಡುಗನಿಗೆ ದಯೆಯುಂಟಾಗಿ ಒಂದು ಮೀನು–ಮೂಳೆಯನ್ನು ಚೆನ್ನಾಗಿ ಚೀಪಿ ಎಸೆದನು. ನಾಯಿಗೆ ಆನಂದವೋ ಆನಂದ! ಅದನ್ನು ನೆಕ್ಕಿ, ಕಡಿದು, ಅಗಿದು, ನುಂಗಿ, ಸ್ವಲ್ಪ ಹೊತ್ತಿನ ಮೇಲೆ ಧೈರ್ಯಮಾಡಿ ಮತ್ತಷ್ಟು ಮುಂದೆ ಬಂದು, ಮೆಲ್ಲಮೆಲ್ಲನೆ ಕೊಇಇ್‌ಗುಟ್ಟಿತು. ಆಗ ಹುಡುಗನು ಒಂದು ತುತ್ತು ಅನ್ನವನ್ನು ಎಸೆದನು. ಅದನ್ನು ಆ ನಾಯಿಯು ದೇವೇಂದ್ರನು ನಂದನವನದಲ್ಲಿ ಕುಳಿತು ಅಮೃತಪಾನ ಮಾಡುವಷ್ಟು ಸಂತೋಷದಿಂದ ತಿನ್ನುತ್ತಿತ್ತು. ಆ ಸಮಯದಲ್ಲಿ ಗಾಣಿಗಿತ್ತಿ ಬಂದು ನೋಡಿ ಒಂದು ಇಟ್ಟಿಗೆಯ ತುಂಡನ್ನು ಬೀರಿ ಅದನ್ನು ಓಡಿಸಿದಳು.

ಅತ್ತ, ಒಂದು ಗೂಳಿಯು ಅಂಗಳಕ್ಕೆ ನುಗ್ಗಿ ಎತ್ತುಗಳು ಮೇಯುತ್ತಿದ್ದ ತೊಟ್ಟಿಗೆ ಬಾಯಿ ಹಾಕಿತು. ಅದರ ಕೊಂಬುಗಳನ್ನೂ ಭೀಮ ಕಾಯವನ್ನೂ ನೋಡಿ ಹೆದರಿ ಎತ್ತುಗಳು ಸರಿದು ಸುಮ್ಮನೆ ನಿಂತುವು. ಗಾಣಿಗಿತ್ತಿಯು ಒಂದು ಬಿದುರುದೊಣ್ಣೆಯನ್ನು ತಂದು ಅದನ್ನು ಓಡಿಸುವುದಕ್ಕೆ ಹೋದಳು, ಗೂಳಿಯು ಒಂದು ಹೆಜ್ಜೆಯೂ ಕದಲದೆ, ಅವಳನ್ನು ತಿವಿಯುವಂತೆ ಅಟ್ಟಿಸಿಕೊಂಡು ಬಂತು. ಅವಳು ಹೆದರಿ ಮನೆಯೊಳಕ್ಕೆ ಹೋದಳು. ಅದು ತೊಟ್ಟಿಯನ್ನು ಖಾಲಿಮಾಡಿ ಲೀಲಾಜಾಲವಾಗಿ ತನ್ನ ದಾರಿಹಿಡಿದು ಹೋಯಿತು.

ಇದೂ ಪಾಲಿಟಿಕ್ಸ್! ಹೀಗೆ, ಇದರಲ್ಲಿ ಎರಡು ಬಗೆಯನ್ನು ನೋಡಿದ್ದಾಯಿತು. ಬಿಸ್ಮಾರ್ಕ್, ಗರ್ಷಾಕಫ್, ಇವರು ಗೂಳಿತರದ ಪಾಲಿಟಿಷಿಯನರು. 'ವುಲ್ಸಿಯಿಂದ ಹಿಡಿದು ರಾಜಾಮುಚಿರಾ ರಾಮರಾಯ ಬಹದ್ದೂರನವರೆಗೆ ಇರುವ ಅನೇಕರು ನಾಯಿತರದ ಪಾಲಿಟಿಷಿಯನರು" (ಎ.ಆರ್.ಕೃ).

ಬಂಕಿಮರ ಶ್ರೀಕೃಷ್ಣ ಚರಿತ್ರ, ಧರ್ಮತತ್ತ್ವ, ದೇವತತ್ತ್ವ, ಭಗವದ್ಗೀತೆಯ ಟೀಕೆಯಂಥ ಗ್ರಂಥಗಳ ಪ್ರೇರಣೆ ಹಾಗೂ ಪ್ರಭಾವಗಳಿಂದ ಬಿ. ವೆಂಕಟಾಚಾರ್ಯ ಅವರು 'ಗೀತೋಕ್ತಧರ್ಮ', ಭಗವಚ್ಛಾಸ್ತ್ರ ಭಾಸ್ಕರದಂಥ ಕೃತಿಗಳನ್ನು ಬರೆದಿದ್ದಾರೆ. ಬಂಕಿಮರ ಸಾಮಾಜಿಕ ಹಾಗೂ ಧಾರ್ಮಿಕ ನೀತಿಗಳ, ವಿಚಾರಗಳ ಪ್ರತಿಧ್ವನಿಯನ್ನು ಬಿ. ವೆಂಕಟಾಚಾರ್ಯ ಅವರ ಸ್ವತಂತ್ರ ಇಲ್ಲವೆ ಅನುವಾದ ಕೃತಿಗಳಲ್ಲಿ ಕಾಣುತ್ತೇವೆ. ಹೀಗಾಗಿ ಇಬ್ಬರೂ ಸಮಾನಮನಸ್ಕರಾಗಿದ್ದರೆಂಬುದು ಇದರಿಂದ ವ್ಯಕ್ತಪಡುವಂಶ, ಕೃಷ್ಣನ ದೈವತ್ವವನ್ನು ಪ್ರತಿಪಾದಿಸುವುದು ಅವರ ಉದ್ದೇಶವಲ್ಲ. ಅವನ ಮಾನವ ಚರಿತ್ರೆಯನ್ನು ಸಮಾಲೊಚಿಸುವುದು ಇವರ ದೃಷ್ಟಿಯಾಗಿತ್ತು.

ಲೋಕರಹಸ್ಯ:

ಬಂಕಿಮಚಂದ್ರರ ಕಿರುಕೃತಿಯ ಅನುವಾದ ಕೃತಿಯೇ 'ಲೋಕರಹಸ್ಯ'. ಮಾನವ ಸ್ವಭಾವವನ್ನೂ ಸಂಪ್ರದಾಯವ್ಯವಸ್ಥೆಗಳನ್ನೂ ಕುರಿತು ವಿಮರ್ಶಿಸುವಂತಹ ಬರೆಹಗಳಿಲ್ಲಿವೆ. ಇಂಗ್ಲಿಷ್ ಭಾಷೆ ಹಾಗೂ ಅದು ಪ್ರಕಟಿಸುತ್ತಿದ್ದ ಧೋರಣೆಗಳ ಬಗ್ಗೆ ವಿರೋಧ ಹಾಗೂ ಟೀಕೆಗಳನ್ನು ವ್ಯಕ್ತಪಡಿಸಿದ್ದಾರೆ. ಅದಕ್ಕಾಗಿ ಪ್ರಾಣಿಗಳನ್ನು ಬಳಸಿಕೊಳ್ಳಲಾಗಿದೆ. ಉದಾ: ವ್ಯಾಘ್ರಾಚಾರ್ಯ ಬೃಹಲ್ಲಾಂಗೂಲ, ಇಂಗ್ಲಿಷ್‌ನ ಸ್ತೋತ್ರ, ಬಾಬು, ಗರ್ಧಭ, ದಾಂಪತ್ಯದಂಡನವಧಿ, ವಸಂತ ಮತ್ತು ವಿರಹ, ಚಿನ್ನದ ಗುಂಡು, ರಾಮಾಯಣದ ಸಮಾಲೋಚನೆ, ಒಬ್ಬ ಸ್ಪೆಷಲ್‌ನ ಪತ್ರ ಇತ್ಯಾದಿ.

ಪ್ರಾಚೀನ ಮತ್ತು ನವೀನ ಕಾಲದ ಹೆಂಗಸರು:

ಬಂಕಿಮಚಂದ್ರ ಚಟ್ಟೋಪಾಧ್ಯಾಯ, ಶ್ರೀರಾಜನಾರಾಯಣವಸು ಮುಂತಾದ ಲೇಖಕರು ರಚಿಸಿದ ಪ್ರಬಂಧಗಳಲ್ಲಿ ಉಕ್ತವಾಗಿರುವ ಮಾತುಗಳನ್ನಾಧರಿಸಿ ರಚನೆಯಾದ ಕೃತಿಯಿದು. ಧರ್ಮಮೂಲವಿಲ್ಲದ ವಿದ್ಯಾಭ್ಯಾಸವು ಹೆಂಗಸರಿಗಾಗಲಿ, ಗಂಡಸರಿಗಾಗಲಿ ಉದ್ದಿಷ್ಟಫಲದಾಯಕ ವಾಗಲಾರದೆಂದು ತೋರುವ ಅಂಶವನ್ನು ಈ ಪ್ರಬಂಧದಲ್ಲಿ ಸೂಚಿಸಿದೆ' ಎಂದು ಈ ಕೃತಿಯ ವಿಜ್ಞಾಪನೆಯಲ್ಲಿವರು ನುಡಿದಿದ್ದಾರೆ. ಈ ಕೃತಿಯಲ್ಲಿ ಸುಂದರವಾದ ನುಡಿ ತೋರಣ ಗಳಿವೆ; 'ಕತ್ತೆಯಲ್ಲಿ ಖಂಡುಗ ಹಾಲು ಇದ್ದ ಹಾಗಾಗುತ್ತದೆ', 'ಸ್ತ್ರೀ ಪುರುಷರ ಸಮಷ್ಟಿಗೆ ಸಮಾಜವೆಂದು ಹೆಸರು'. ಉಭಯರ ಸಮಾನವಾದ ಉನ್ನತಿಯಿಂದಲೇ ಸಮಾಜದ ಉನ್ನತಿ ಯಾಗಬೇಕು. ಒಂದು ಭಾಗದ ಉನ್ನತಿಯ ಸಮಾಜ ಸಂಸ್ಕರಣಕ್ಕೆ ಮುಖ್ಯವಾದ ಉದ್ದೇಶ ವೆಂದೂ ಆ ಉನ್ನತಿಗೆ ಸಹಕಾರಿಯಾಗಿ ಮತ್ತೊಂದು ಭಾಗದ ಉನ್ನತಿಯು ಗೌಣವಾದ, ಉದ್ದೇಶವೆಂದೂ ಹೇಳುವುದು ನೀತಿ ವಿರುದ್ಧವಾದ ಮಾತಾಗಿದೆ!

ಪ್ರಾಚೀನ ಕೃತಿಗಳಲ್ಲಿ ನಿರೂಪಿತವಾಗಿರುವ ಸ್ತ್ರೀಯರ ಮನೋಧರ್ಮಗಳ ವಿಚಾರಗಳನ್ನು ಪ್ರಸ್ತಾಪಿಸಲಾಗಿದೆ. ಮಹಿಳಾ ಸ್ವಾತಂತ್ರ್ಯ, ಅಕ್ಷರ ಕಲಿಕೆ ಹಾಗೂ ಆಸ್ತಿಯ ಹಕ್ಕುಗಳನ್ನು ಚರ್ಚಿಸಿದೆ. ಪ್ರಾಚೀನಕಾಲದ ಸ್ತ್ರೀಯರ ಗುಣಗಳು ಉತ್ತಮವಾಗಿದ್ದವೆಂಬ ಅಭಿಪ್ರಾಯಗಳಿವೆ. ಪತಿಯು ಪತಿತನಾಗಲೀ ಪಾತಕನಾಗಲೀ ಬೇರೆ ವಿವಾಹವನ್ನು ಮಾಡಿಕೊಳ್ಳಬೇಕಾದ ವಿಧಿಯಿದ್ದರೂ ಅವನನ್ನು ಬಿಟ್ಟು ಬೇರೆ ಮದುವೆಯನ್ನು ಮಾಡಿಕೊಳ್ಳುವವಳಿಗೆ ನಾಯಿ ಜನ್ಮ ಬರುವುದೆಂದು ಹೇಳಲ್ಪಡುತ್ತದೆ".

"ಹೆಣ್ಣಿನ ತ್ಯಾಗ, ಪ್ರೇಮ, ಔದಾರ್ಯಗಳ ಬಗ್ಗೆ ಉದಾತ್ತ ಭಾವನೆಯುಳ್ಳವರಾಗಿದ್ದವರು ಅವರು. ಅವರ ಕಾಲದಲ್ಲಿ ಮಹಿಳಾ ಪ್ರಗತಿಪರವಿಚಾರಗಳು ಪ್ರಾಬಲ್ಯಪಡೆದಿದ್ದವು. ಪಾಶ್ಚಿಮಾತ್ಯ ಶಿಕ್ಷಣ, ಮಿಷನರಿಗಳ ಪ್ರಚಾರ, ಮಹಿಳಾ ವಿಷಯಕ ಚರ್ಚೆ, ಮಹಿಳಾ ಶಿಕ್ಷಣದ ಆವಶ್ಯಕತೆ, ವಿಧವಾ ವಿವಾಹಕ್ಕೆ ಪ್ರೋತ್ಸಾಹ, ಬಾಲ್ಯವಿವಾಹ ಪದ್ಧತಿಯ ಖಂಡನೆ ಮುಂತಾದ ಅಪೂರ್ವ ವಿಚಾರಗಳು ಈ ಕೃತಿಯನ್ನು ಕನ್ನಡಕ್ಕೆ ತರಲು ಸ್ಫೂರ್ತಿ ನೀಡಿದವು. ತಮ್ಮ ಅನುವಾದ ಕೃತಿಗಳ ಮೂಲಕ ಮಹಿಳಾಪರವಾದ ವಿಚಾರ-ವಿಷಯಗಳನ್ನು ಉದಾತ್ತ ಭಾವನೆಗಳಾದಂತಹ ತ್ಯಾಗ, ಸೇವಾಮನೋಭಾವ, ದೈವಭಕ್ತಿ, ಕಾಯಕನಿಷ್ಠೆ, ರಾಷ್ಟ್ರಾಭಿಮಾನ, ಮಹಿಳಾ ವಿದ್ಯಾಭ್ಯಾಸ ಮುಂತಾದವುಗಳನ್ನು ಪ್ರಚಾರ ಮಾಡಿದರು. ಪ್ರಾಚೀನ ಜನಾಂಗದ ಸೀತೆ-ಶಕುಂತಲೆ-ಸಾವಿತ್ರಿ ಬದುಕಿನ ಆದರ್ಶಗಳನ್ನು ಪ್ರತಿಭೆಯನ್ನು ಹಿಂದೂ ಮಹಿಳೆಯರು ಬದುಕಿನಲ್ಲಳವಡಿಸಿ ಕೊಳ್ಳಬೇಕೆಂದೂ ಆಸೆಪಟ್ಟರು. ತಾವು ರಚಿಸಬೇಕೆಂದಿದ್ದ ಕೃತಿಗಳ ರೂಪರೇಖೆಗಳು ಬಂಕಿಮರ ಕೃತಿಗಳಲ್ಲಿಯೇ ಕಂಡ ಬಿ. ವೆಂಕಟಾಚಾರ್ಯ ಸ್ವತಂತ್ರ ಕೃತಿರಚನೆಗಿಂತ ಹೆಚ್ಚಾಗಿ ಅನುವಾದವನ್ನೇ ಕೈಗೊಂಡರು. ತಾವು ಅನುವಾದಕ್ಕೆ ಆರಿಸಿಕೊಳ್ಳುವ ಕೃತಿಗಳು ಸಮಾಜಕ್ಕೆ, ಸಾಹಿತ್ಯಕ್ಕೆ ಪ್ರಯೋಜನಕಾರಿಯಾಗಬೇಕೆಂದು ನೋಡಿ ಆರಿಸಿಕೊಳ್ಳುತ್ತಿದ್ದರು. ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ತಿಳಿವಳಿಕೆ ಜನಕ್ಕೆ ಲಭಿಸಬೇಕೆಂಬ ನಿಲುವು ಅವರದು. ಮಹಿಳೆಯರ ಬಗ್ಗೆ ಅವರಿಗೆ ಎಲ್ಲಿಲ್ಲದ ಗೌರವಾಭಿಮಾನ. ಬಂಕಿಮಚಂದ್ರ, ರಮೇಶಚಂದ್ರದತ್ತ, ನನಿಲಾಲವಂದೋಪಾಧ್ಯಾಯ, ಸತ್ಯೇಂದ್ರ ಕುಮಾರ, ಸತೀಶ ಚಂದ್ರಬಾಬು, ಹರಿಪ್ರಸಾದ ಶಾಸ್ತ್ರಿಯವರ ಕೃತಿಗಳನ್ನು ಆ ಕಾರಣಕ್ಕಾಗಿಯೇ ಕನ್ನಡಕ್ಕೆ ತಂದರು.

ಕಮಲಾಕಾಂತ:

ಶಿವರಾಮ ಕಾರಂತರ ಮೂಕಜ್ಜಿಯ ಕನಸುಗಳಂತಿರುವ ಈ ಕೃತಿಯಲ್ಲಿ ಬಂಕಿಮರು ತಮ್ಮ ವಿಚಾರಗಳನ್ನು ಕಮಲಾಕಾಂತನ ಮುಖಾಂತರ ವ್ಯಕ್ತಪಡಿಸಿದ್ದಾರೆ. ಮನಸ್ಸು ಬಿಚ್ಚಿ ವಿಚಾರಗಳನ್ನು ಹೇಳಲು ಲೇಖಕರಿಗೆ ಇದರಿಂದ ಅನುಕೂಲವಾಗಿದೆ. ಇಲ್ಲಿರುವುದು ಪುಟ್ಟ ವಿಡಂಬನ ಲೇಖನಗಳು. ಕಮಲಾಕಾಂತದ ಮೊದಲ ಭಾಗದಲ್ಲಿ ಮನುಷ್ಯಫಲ, ನನ್ನ ಮನಸ್ಸು, ಹೆಂಗಸರ ರೂಪ, ಹೂವಿನ ಮದುವೆ, ದೊಡ್ಡಪೇಟೆ, ಬೆಕ್ಕು ಎಂಬಿವೇ ಮುಂತಾದ ಹದಿನಾಲ್ಕು ಲೇಖನಗಳಿವೆ. ಎರಡನೆಯ ಭಾಗದಲ್ಲಿ ಪಾಲಿಟಿಕ್ಸ್ (ರಾಜನೀತಿ), ಮುಪ್ಪಿನ ಕಾಲದ ಮಾತು, ಕಮಲಾಕಾಂತನ ಬೀಳ್ಕೊಡುಗೆ ಎಂಬಿವೇ ಮುಂತಾದ ಐದು ಪತ್ರಗಳಿವೆ.

ಗೀತೋಕ್ತಧರ್ಮ:

ಭಗವದ್ಗೀತೆಯ ವ್ಯಾಖ್ಯಾನವೇ 'ಗೀತೋಕ್ತ ಧರ್ಮ'. ಗೀತೋಕ್ತ ಧರ್ಮವು ಎಲ್ಲ ಮನುಷ್ಯರಿಗಾಗಿ. ಚಿತ್ತಶುದ್ಧಿ ಮತ್ತು ಇಂದ್ರಿಯ ಸಂಯಮಗಳು ಗೀತೆಯ ಉದ್ದೇಶ. ಇಂಥ ವಿಶ್ವಲೌಕಿಕ ಮತ್ತು ಸರ್ವವ್ಯಾಪಕಧರ್ಮವು ಪೃಥಿವಿಯಲ್ಲಿ ಮತ್ತಾವಾಗಲೂ ಪ್ರಚಾರಿತವಾಗಿಲ್ಲ. ಯಾರಿಗೆ ಎಷ್ಟು ಅಧಿಕಾರವೋ ಅವರು ಅಷ್ಟನ್ನು ಗ್ರಹಿಸುತ್ತಾರೆ" ಎಂಬ ಬಂಕಿಮರ ತೀರ್ಮಾನವೇ ಬಿ. ವೆಂಕಟಾಚಾರ್ಯ ಅವರ ತೀರ್ಮಾನ.

ಬಿ. ವೆಂಕಟಾಚಾರ್ಯ ಅವರು ಸ್ವತಂತ್ರ ಕೃತಿಗಳಾಗಿರಲಿ ಅನುವಾದ ಕೃತಿಗಳಾಗಿರಲಿ ಧಾರ್ಮಿಕ ಆದರ್ಶ, ಸಾಮಾಜಿಕ ನೀತಿ, ವ್ಯಕ್ತಿಯ ಪರಿಪೂರ್ಣತೆಗಳತ್ತ ಧ್ಯಾನ ಹರಿಸಿದ್ದನ್ನು ಕಾಣಬಹುದು.

ಅಲಭ್ಯವಾಗಿದ್ದರೂ ಅವರ ಇತರ ಕೃತಿಗಳು ಹೀಗಿವೆ:

ಗೀತೋಕ್ತಧರ್ಮ, ದೇಶಾಂತರಗಳಲ್ಲಿ ಪ್ರಾಚೀನಭಾರತ ಪುರುಷರು, ಭಗವಚ್ಛಾಸ್ತ್ರಭಾಸ್ಕರ, ಭರತಖಂಡದ ಪೂರ್ವವೃತ್ತ, ಲೋಕರಹಸ್ಯ: ಭಾಗ ೧, ೨; ವೈಜ್ಞಾನಿಕ ಪ್ರಹಸನ, ಸ್ತ್ರೀ ಶಿಕ್ಷೆಯರಹಸ್ಯ, ಸುಶಿಕ್ಷಿತಸಭ್ಯರಾದ ಹಿಂದುಗಳು, ದಾಡಿಯ ಹೇಳಿಕೆ, ಪ್ರಾಚೀನ ಮತ್ತು ನವೀನ ಕಾಲದ ಸ್ತ್ರೀ ಪುರುಷರು, ಭಾರತ ಮಹಿಳಾ, ಭರತಖಂಡದಲ್ಲಿ ವಿದೂಷಿಯರಾಗಿದ್ದ ರಮಣಿಯರು, ಪಾಲಿಟಿಕ್ಸ್ ಅಥವಾ ರಾಜನೀತಿ, ಸೂರ್ಯಪೂಜೆ ಇತ್ಯಾದಿ.*

❑

ಅಡಿ ಟಿಪ್ಪಣಿಗಳು

* ದಿನಾಂಕ:೨೨-೧೧-೧೯೯೫ರಂದು ಬಿ.ಎಂ.ಶ್ರೀ. ಪ್ರತಿಷ್ಠಾನ ಹಾಗೂ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಗಳ ಸಹಯೋಗದಲ್ಲಿ ನಡೆಸಿದ 'ಬಿ. ವೆಂಕಟಾಚಾರ್ಯ ಅವರ ಸಾಹಿತ್ಯ' ವಿಚಾರಗೋಷ್ಠಿಯಲ್ಲಿ ಮಾಡಿದ ಉಪನ್ಯಾಸ.

೧. ೨೬-೦೬-೧೯೧೪ರಲ್ಲಿ ಬೆಂಗಳೂರಿನಲ್ಲಿ ನಿಧನರಾದರು.

೨. ಇವರ ಹುಟ್ಟಿದ ಊರು ಕೊಳ್ಳೆಗಾಲ ಎಂದು ಒಂದು ಕಡೆ ಉಲ್ಲೇಖವಿದೆ.

೩. ಮಾತೃಭಾಷೆ ತಮಿಳು. ಇಂಗ್ಲಿಷ್, ಬಂಗಾಲಿ, ಕನ್ನಡ, ಸಂಸ್ಕೃತ ಭಾಷಾ ಪಂಡಿತರು. ಇವರು ಧಾರ್ಮಿಕ ಪರಿಸರದಲ್ಲಿ ಬೆಳೆದವರು.
'ದಾಡಿಯ ಹೇಳಿಕೆ' ಬಿ.ವೆಂಕಟಾಚಾರ್ಯ ಅವರು ಬರೆದ ಮೊದಲ ಸ್ವತಂತ್ರ ಪ್ರಬಂಧವೆಂಬುದು ಉಲ್ಲೇಖಾರ್ಹವಾದ ಸಂಗತಿಯಾಗಿದೆ.

೪. ಇದರಲ್ಲಿ ಶಿಕ್ಷಣ, ರಾಜನೀತಿ ವಿಚಾರಗಳಿವೆ

೫. ಬಂಗಾಳಿ ಅನುವಾದ ಪ್ರಬಂಧಗಳು

೬. ಅದೇ!

೭. ಅದೇ!

೮. ಇತಿಹಾಸ ಕೃತಿ

೯. ಸ್ವತಂತ್ರ ಕೃತಿ

೧೦. ಅನುವಾದ ಕೃತಿ

೧೧. ಭಗವದ್ಗೀತೆಯ ವ್ಯಾಖ್ಯಾನ ಕೃತಿ.

ತೀ.ನಂ.ಶ್ರೀ ಅವರ ಛಂದಸ್ಸು-ಗ್ರಂಥ ಸಂಪಾದನೆಯ ಕಾರ್ಯ

• ಪ್ರೊ. ನಾ.ಗೀತಾಚಾರ್ಯ

೧

ಆಚಾರ್ಯ ತೀ.ನಂ.ಶ್ರೀಕಂಠಯ್ಯನವರು ಆಚಾರ್ಯ ಬಿ.ಎಂ.ಶ್ರೀಕಂಠಯ್ಯನರ ಗರಡಿಯಲ್ಲಿ ತಯಾರಾದ ಇನ್ನೊಬ್ಬ ಕನ್ನಡದ ಜಟ್ಟಿಗಳು. ಬಿ.ಎಂ.ಶ್ರೀಯವರು ಮಹಾರಾಜ ಕಾಲೇಜಿನ ಮೂಲಕ ಅನೇಕ ಧೀಮಂತ ಕನ್ನಡಿಗರನ್ನು ಕೊಟ್ಟರು. ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ ತೆರೆಯುವ ಮೂಲಕ ಕುವೆಂಪು ಆದಿಯಾಗಿ ಎಲ್ಲ ಶ್ರೇಷ್ಠಕವಿಗಳೂ ವಿದ್ವಾಂಸರೂ ಕನ್ನಡದಲ್ಲಿ ರೂಪುಗೊಳ್ಳುವಂತಾಯಿತು. ಕುವೆಂಪು, ಆರ್.ನರಸಿಂಹಾಚಾರ್, ಡಿ.ಎಲ್. ನರಸಿಂಹಾಚಾರ್, ಕ.ವೆಂ.ರಾಘವಾಚಾರ್ ಮುಂತಾದ ಅನೇಕ ದಿಗ್ಗಜರು ತೀ.ನಂ.ಶ್ರೀಯವರ ಸಹಪಾಠಿಗಳಾಗಿ ಬಿ.ಎಂ. ಶ್ರೀ, ಟಿ.ಎಸ್.ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿ ಅವರುಗಳ ಕೈಕೆಳಕೆ ನುರಿತರು. ಈ ಮಹನೀಯರುಗಳಿಂದಲೇ ಬಿ.ಎಂ.ಶ್ರೀಯವರ ಆಶಯ ಈಡೇರಿತು. ಕನ್ನಡ ಸುಭದ್ರವಾಯಿತು, ಸುಪುಷ್ಟವಾಯಿತು, ಸುಮೇರುವಾಯಿತು. ಕೊರಗುತ್ತಿದ್ದ ಹಿಂಜರಿಯುತ್ತಿದ್ದ ಕನ್ನಡ ತಾಯಿ ನಗುವಂತಾಯಿತು. ಆ ಕಾಲದಲ್ಲಿ ಅಧೋಗತಿಯಲ್ಲಿದ್ದ ಕನ್ನಡವನ್ನು ಬಿ.ಎಂ.ಶ್ರೀಯವರು ಮೂರು ರೀತಿಯಲ್ಲಿ ಕಟ್ಟಿಕೊಟ್ಟರು. (೧)ಶೈಕ್ಷಣಿಕವಾಗಿ ಕನ್ನಡ ಬಿ.ಎ, ಎಂ.ಎ ಪದವಿಗಳನ್ನು ತೆರೆದು ಶಿಸ್ತುಬದ್ಧವಾಗಿ ಅಧ್ಯಯನಕ್ಕೆ ತೊಡಗಿಸಿದುದು, (೨) ಸಂಸ್ಕೃತ-ಇಂಗ್ಲಿಷ್ ಭಾಷೆ-ಸಾಹಿತ್ಯಗಳಿಗೆ ಸರಿಸಮನಾಗಿ ಕನ್ನಡ ಸಾಹಿತ್ಯವನ್ನು ಎತ್ತಿನಿಲ್ಲಿಸಿದುದು(೩) ನಾಡು-ನುಡಿಯ ಬಗ್ಗೆ ನಾಡವರಲ್ಲಿ ಅಭಿಮಾನ ಮೂಡಿಸಿದುದು.

ಶಿಸ್ತುಬದ್ಧ ಕನ್ನಡ ಶಿಕ್ಷಣದ ಪದವಿಗಳ ಮೂಲಕ ಎಲ್ಲ ಆಸಕ್ತ ಕನ್ನಡಿಗರನ್ನು ಸೆಳೆದು ಹೊಸಸಾಹಿತ್ಯ ರಚನೆ ಮತ್ತು ಹಳೇಸಾಹಿತ್ಯದ ಪರಿಷ್ಕರಣೆ ಕಾರ್ಯದಲ್ಲಿ ತೊಡಗಿಸುವ ಮೂಲಕ ಮೊದಲೆರಡು ಕಾರ್ಯಗಳನ್ನು ತಮ್ಮ ಶಿಷ್ಯರುಗಳಿಂದಲೇ ಮುಂದುವರಿಯುವಂತೆ, ಅವ್ಯಾಹತವಾಗಿ ನಡೆದಕೊಂಡು ಹೋಗುವಂತೆ ಮಾಡಿದ ಬಿ.ಎಂ.ಶ್ರೀಯವರ ದೂರದೃಷ್ಟಿ ಫಲ ನೀಡಿತು. ಕನ್ನಡ ಹುಲುಸಾಗಿ ಬೆಳೆಯಿತು; ತಲೆಯೆತ್ತಿನಿಂತಿತು. ಹೊಸ ಹೊಸ ಜ್ಞಾನಶಿಸ್ತುಗಳನ್ನು ಕನ್ನಡಕ್ಕೆ ತಂದುಕೊಂಡ ಶ್ರೀಯವರು ಒಂದೊಂದು ಕ್ಷೇತ್ರದಲ್ಲಿ ಒಬ್ಬೊಬ್ಬರನ್ನು

ಗುರುತಿಸಿ ಬೆಳೆಸಿ ಕನ್ನಡಕ್ಕೆ ಶಾಸ್ತ್ರನಿಷ್ಠೆಯನ್ನು ಪ್ರೌಢಪ್ರಜ್ಞೆಯನ್ನು ತಂದುಕೊಟ್ಟರು. ಅದರಂತೆ ಕುವೆಂಪು ಕಾವ್ಯಸೃಷ್ಟಿಯಲ್ಲಿ, ಆರ್.ನರಸಿಂಹಾಚಾರ್ ಪ್ರಾಚೀನ ಸಾಹಿತ್ಯ ಪರಿಷ್ಕರಣೆಯಲ್ಲಿ, ಡಿ.ಎಲ್.ನರಸಿಂಹಾಚಾರ್ ಗ್ರಂಥಸಂಪಾದನೆ, ನಿಘಂಟುವಿನಲ್ಲಿ, ಕೆ.ವಿ.ರಾಘವಾಚಾರ್ ಗ್ರೀಕ್ ಸಾಹಿತ್ಯದಲ್ಲಿ ತೀ.ನಂ.ಶ್ರೀ ಕಾವ್ಯಮೀಮಾಂಸೆ, ಭಾಷಾವಿಜ್ಞಾನದಲ್ಲಿ ಬೆಳೆದು ಶ್ರೇಷ್ಠ ಮಾದರಿಗಳಾದರು.

ತೀ.ನಂ.ಶ್ರೀಯವರು ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎ. ಮಾಡುತ್ತಿದ್ದ ಕಾಲವು ಈ ಘಟಾನುಘಟಿ ಶಿಷ್ಯರುಗಳಿಂದ ತುಂಬಿದ್ದ, ಬಿ.ಎಂ.ಶ್ರೀಯವರ ಕನ್ನಡಾಭಿಮಾನದ ಅಯಸ್ಕಾಂತೀಯ ಸೆಳೆತಕ್ಕೆ ಪಕ್ಕಾಗಿದ್ದ ಕನ್ನಡದ ಸುವರ್ಣಕಾಲ. ತೀನಂಶ್ರೀ ಅವರು ೧೯೨೬ರಲ್ಲಿ ಬಿ.ಎ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿ ಮೈಸೂರು ಸಿವಿಲ್ ಪರೀಕ್ಷೆಯಲ್ಲೂ ೧೯೨೮ರಲ್ಲಿ ಸರ್ವ ಪ್ರಥಮರಾಗಿ ಆಯ್ಕೆಯಾಗಿ ಮೈಸೂರು ಸರ್ಕಾರದಲ್ಲೇ ರೆವಿನ್ಯೂ ಅಧಿಕಾರಿಗಳಾಗಿ ವೃತ್ತಿ ಅರಂಭಿಸಿ ಪ್ರೊಬೆಷನರ್ ಆಗಿ ಶ್ರೀರಂಗಪಟ್ಟಣದಲ್ಲಿ ಕಾರ್ಯನಿರತರೂ ಆದರು. ಇದರ ನಡುವೆಯೇ ವ್ಯಾಸಂಗವನ್ನು ಮುಂದುವರಿಸಿ ೧೯೨೯ರಲ್ಲಿ ಇಂಗ್ಲಿಷ್ ಎಂ.ಎ. ಪದವೀಧರ ರಾದರು, ಆದರೆ ಕನ್ನಡ ಅಭಿಮಾನ, ಸಾಹಿತ್ಯಾಸಕ್ತಿ, ಬಿ.ಎಂ.ಶ್ರೀಯವರ ಆಕರ್ಷಣೆ. ಅವರನ್ನು ಅಲ್ಲಿ ಇರಗೊಡಲಿಲ್ಲ, ಮಹಾರಾಜ ಕಾಲೇಜಿಗೆ ಬರಮಾಡಿಕೊಂಡಿತು. ತೀ.ನಂ.ಶ್ರೀ. ಯವರು ಕನ್ನಡ ಅಧ್ಯಾಪಕರನ್ನಾಗಿ ಸೇರಿಸಿಕೊಂಡರು. ಬಿ.ಎ ಪದವಿಗೆ ಅಧ್ಯಾಪಕರಾಗಿ ಕಾರ್ಯನಿರ್ವಹಿಸು ತ್ತಲೇ ೧೯೩೧ರಲ್ಲಿ ಕನ್ನಡ ಎಂ.ಎ ಪದವಿಯನ್ನು ಗಳಿಸಿದರು, ಕನ್ನಡ ಕೈಂಕರ್ಯಕ್ಕೆ ಸಜ್ಜಾದರು.

ತೀ.ನಂ.ಶ್ರೀ.ಯವರ ಪ್ರತಿಭೆ ಮುಖ್ಯವಾಗಿ ಮೊಳಗಿರುವುದು 'ಭಾರತೀಯ ಕಾವ್ಯಮೀಮಾಂಸೆ' ಕೃತಿಯಲ್ಲಿ. ಇದು ಅವರ ಆಚಾರ್ಯ ಕೃತಿ. ಈವರೆಗೂ ಭಾರತೀಯ ಸಾಹಿತ್ಯದಲ್ಲಿಯೇ ಬೇರಾವ ಭಾಷೆಯಲ್ಲಿಯೂ ಬಂದಿರದಂತಹ ಶ್ರೇಷ್ಠದರ್ಜೆಯ ಅಪರೂಪದ ಏಕೈಕ ಕೃತಿಯೆಂಬ ಮನ್ನಣೆಗಳಿಸಿರುವ ಕೃತಿ. ತಮ್ಮ ಎಲ್ಲ ವಿದ್ವತ್ತು-ಪ್ರತಿಭೆಯನ್ನು ಧಾರೆ ಎರೆದು ಈ ಕೃತಿಯನ್ನು ಕನ್ನಡಕ್ಕೆ ಕೊಟ್ಟಿದ್ದಾರೆ. ಇದರಮೂಲಕ ಇವರ ಹೆಸರು ಚಿರಸ್ಥಾಯಿಯಾಗಿರುತ್ತದೆ. ತೀ.ನಂ.ಶ್ರೀ.ಯವರ ಇನ್ನೊಂದು ಪ್ರಧಾನವಾದ ಕಾರ್ಯಕ್ಷೇತ್ರವೆಂದರೆ ಭಾಷಾವಿಜ್ಞಾನ. ಆಗತಾನೆ ಬೆಳೆಯುತ್ತಿದ್ದ ಭಾಷಾವಿಜ್ಞಾನದ ಕ್ಷೇತ್ರವನ್ನು ಪ್ರವೇಶಿಸಿ ಅದರಲ್ಲಿ ಪ್ರೌಢತೆಯನ್ನು ಪಡೆದು ಸಮ್ಮೇಳನ-ವಿಚಾರಗೋಷ್ಠಿಗಳಲ್ಲಿ ಭಾಗವಹಿಸಿ ಕನ್ನಡ ಭಾಷೆಯನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ ಅದರ ಸ್ಥಾನಮಾನವನ್ನು ಅಂತರರಾಷ್ಟ್ರಮಟ್ಟದಲ್ಲಿ ಗುರುತಿಸುವಂತೆ ಮಾಡಿದರು. ಹಲವಾರು ಮೌಲಿಕ ಲೇಖನಗಳನ್ನು ಪ್ರಕಟಿಸಿದರು. ವಿದೇಶಕ್ಕೂ ಹೋಗಿ ಹೆಚ್ಚಿನ ಅನುಭವವನ್ನು ಪಡೆದಿದ್ದರು. ಹೀಗಾಗಿ ತೀ.ನಂ.ಶ್ರೀ.ಯವರು ಉನ್ನತ ಮಟ್ಟದ ಪ್ರಥಮ ಕನ್ನಡ ಭಾಷಾವಿಜ್ಞಾನಿಗಳಾಗಿದ್ದಾರೆ.

ಈ ಎರಡು ಕ್ಷೇತ್ರಗಳನ್ನು ಬಿಟ್ಟರೆ ತೀ.ನಂ.ಶ್ರೀ. ಅವರನ್ನು ಮುಖ್ಯವಾಗಿ ಗುರುತಿಸ ಬೇಕಾಗಿರುವುದು ಛಂದಸ್ಸು ಮತ್ತು ಗ್ರಂಥಸಂಪಾದನೆ ಕ್ಷೇತ್ರದಲ್ಲಿ. ಒಂದರಲ್ಲಿ ಸಾಹಿತ್ಯದ ಆಧುನಿಕ ವಿಶ್ಲೇಷಣೆಯಿದ್ದರೆ ಇನ್ನೊಂದರಲ್ಲಿ ವೈಜ್ಞಾನಿಕ ನಿಷ್ಕರ್ಷೆಯಿದೆ. ಇವೆರಡಕ್ಕೂ ಅವರಿಗೆ

ಕಾವ್ಯಮೀಮಾಂಸೆ ಮತ್ತು ಭಾಷಾವಿಜ್ಞಾನದ ಹಿನ್ನೆಲೆಯಿದೆ. ಜೊತೆಗೆ ಕವಿಮನಸ್ಸಿನ ಸೃಜನಶಕ್ತಿಯಿದೆ.

೨

ಛಂದಸ್ಸಿನ ಬಗ್ಗೆ ತೀ.ನಂ.ಶ್ರೀ ಅವರಿಂದ ಯಾವುದೇ ಸ್ವತಂತ್ರ ಕೃತಿ ರಚನೆಯಾಗದೇ ಹೋದರೂ ಕನ್ನಡ ಛಂದಸ್ಸಿಗೆ ಅವರ ಕೊಡುಗೆ ಅಸಾಧಾರಣವಾದದ್ದು. ಕೇವಲ ನಾಲ್ಕು ಬಿಡಿ ಲೇಖನಗಳನ್ನು ಮಾತ್ರ ಈ ಕ್ಷೇತ್ರದಲ್ಲಿ ಅವರು ಬರೆದಿದ್ದಾರೆ. ಅವುಗಳೆಂದರೆ,

೧) ಅಪೂರ್ವ ಷಟ್ಪದಿಯ ಲಕ್ಷಣ (ಸಮಾಲೋಕನ-೧೯೭೪ರ ಮುದ್ರಣ, ಪು. ೨೩೩)

೨) ಕನ್ನಡದ ಹೊಸ ಮಟ್ಟುಗಳಿಗಿರುವ ಅವಶ್ಯಕತೆ (ಇಂಗ್ಲಿಷ್ ಗೀತಗಳು-ಮುನ್ನುಡಿ-೧೯೩೧)

೩) ಹೊಸ ಛಂದಸ್ಸಿನ ಲಯಗಳು(೧೯೪೧)

೪) ಮಾತ್ರೆ, ಮುಡಿ, ಪದ್ಮಗಣ(೩ನೆಯ ಲೇಖನದ ಪರಿಷ್ಕರಿಸಿದ ರೂಪ, ಸಮಾಲೋಕನ ೧೯೫೮)

ಇವುಗಳಲ್ಲಿ ಹಳಗನ್ನಡ ಛಂದಸ್ಸನ್ನು ಕುರಿತು 'ಅಪೂರ್ವಷಟ್ಪದಿಯ ಲಕ್ಷಣ' ಎಂಬ ಒಂದು ಲೇಖನ ಮಾತ್ರ ಇದೆ. ಉಳಿದ ಮೂರು ಲೇಖನಗಳು ಹೊಸಗನ್ನಡ ಛಂದಸ್ಸನ್ನು ಕುರಿತವಾಗಿವೆ. ತೀ.ನಂ.ಶ್ರೀ ಅವರ ಛಂದಸ್ಸನ್ನು ಕುರಿತ ಚಿಂತನೆಗಳು ಹುರಿಗಟ್ಟಿರುವುದು ಹೊಸಗನ್ನಡ ಛಂದಸ್ಸಿನಲ್ಲಿಯೇ. ಈ ಲೇಖನಗಳೇ ಹೊಸಗನ್ನಡ ಛಂದಸ್ಸಿನ ಚರಿತ್ರೆಗೆ ಆದ್ಯಲೇಖನಗಳು. ತೀ.ನಂ.ಶ್ರೀ. ಅವರಿಂದಲೇ ಹೊಸಗನ್ನಡ ಕಾವ್ಯದ ರಚನೆಗೆ ಒಂದು ತತ್ವ ನಿಯತತೆ ರೂಪಗೊಂಡು ಪುಷ್ಟಿದೊರಕಿದುದು. ಅದರ ಕಾರಣದಿಂದಲೇ ಹೊಸಗನ್ನಡ ಕಾವ್ಯ ವ್ಯಾಪಕವಾಗಿ, ವೈವಿಧ್ಯತೆಯಿಂದ ಬೆಳೆಯುವಂತಾಯಿತು ಎಂದರೆ ಉತ್ಪ್ರೇಕ್ಷೆಯಾಗದು. ಆಚಾರ್ಯ ಬಿ.ಎಂ.ಶ್ರೀಯವರ ಹೊಸಗನ್ನಡ ಕವಿತೆಗಳಿಗೆ-ಇಂಗ್ಲಿಷ್‌ಗೀತಗಳಿಗೆ-ನಿಶ್ಚಿತತೆಯನ್ನು, ಒದಗಿಸಿ ಅದನ್ನು ಗಟ್ಟಿಗೊಳಿಸಿದುದು ತೀ.ನಂ.ಶ್ರೀಯವರ ಈ ತತ್ವಾಧಾರಿತ ವಿಮರ್ಶಾತ್ಮಕ ಮುನ್ನುಡಿ. ಕವಿತೆಗಳನ್ನು ಬರೆಯುವ ಉತ್ಸಾಹದಲ್ಲಿದ್ದವರಿಗೆ ಇದೊಂದು ಬೆಂಗಾವಲಾಯಿತು. ಈ ಬಗೆಯ ಹೊಸ ಪ್ರಾಸರಹಿತ ಛಂದೋರಹಿತ ಕವಿತೆಗಳ ಬಗ್ಗೆ ಮೂರು ಮುರಿಯುತ್ತಿದ್ದ ಸಂಪ್ರದಾಯಶರಣರ ಬಾಯಿಯನ್ನು ತೀ.ನಂ.ಶ್ರೀಯರ ಈ ಹೊಸ ಛಂದಸ್ಸಿನ ವಿಚಾರ ಮುಚ್ಚಿಸಿತು. ಪರಿಣಾಮವಾಗಿ ಕುವೆಂಪು, ಮಾಸ್ತಿ, ಪು.ತಿ.ನ, ಬೇಂದ್ರೆ, ವಿ.ಸೀ., ಡಿ.ವಿ.ಜಿ. ಮುಂತಾದ ದಿಗ್ಗಜ ಕವಿಗಳು ಕಾವ್ಯ ಕಾನನದಲ್ಲಿ ಯಥೇಚ್ಛವಾಗಿ ವಿಹರಿಸಲು ಸಾಧ್ಯವಾಯಿತು. ಕನ್ನಡ ಕಾವ್ಯ ಸಂಪುಷ್ಟವಾಯಿತು.

ಇಂಗ್ಲಿಷ್‌ಗೀತಗಳು ಹೊಸಗನ್ನಡ ಕವಿಗಳಿಗೆ ವಿಷಯ ವೈವಿಧ್ಯತೆ, ವಸ್ತು ವೈವಿಧ್ಯತೆ, ಲಯ ವೈವಿಧ್ಯತೆ ಮತ್ತು ರಚನಾ ವೈವಿಧ್ಯತೆಗಳನ್ನು ತೋರಿಸಿಕೊಟ್ಟು ರಾಜಮಾರ್ಗವನ್ನು ಹಾಕಿಕೊಟ್ಟಿದ್ದರೆ, ತೀ.ನಂ.ಶ್ರೀ. ಅವರ 'ತತ್ವನಿರ್ಮಿತಿ' ಅದಕ್ಕೊಂಡು ಚೌಕಟ್ಟನ್ನು ಹಾಕಿಕೊಟ್ಟಿತು'.

ಇದೂ ಕೂಡ ಕನ್ನಡ ಕಾವ್ಯಪರಂಪರೆಯ ಒಂದು ಬದಲಾವಣೆ','ಹೊಸ ಬಗೆಯ ಕಾವ್ಯ' ಎಂದು ಸಾರುವ ಮೂಲಕ ಪಂಡಿತ ಮುದ್ರೆಯನ್ನು ಒತ್ತಿ, ಬರೆಯುವವರಿಗೆ ಕೈಮರವಾದರು. ಹೀಗಾಗಿ ಬಿ.ಎಂ.ಶ್ರೀ ಅವರು ಹೊಸಗನ್ನಡ ಕಾವ್ಯದ ಪ್ರವರ್ತಕರಾದರೆ ತೀ.ನಂ.ಶ್ರೀ ಅವರು ಹೊಸಗನ್ನಡ 'ಕಾವ್ಯತತ್ವದ' ಪ್ರವರ್ತಕರಾಗಿದ್ದಾರೆ ಎಂದೇ ಹೇಳಬೇಕಾಗುತ್ತದೆ.

ಇವರು ಹೊಸಗನ್ನಡ ಕಾವ್ಯಕ್ಕೆ ಹಾಕಿಕೊಟ್ಟ ತಾತ್ವಿಕ ಚಿಂತನೆ ಮತ್ತು ಲಯಗಳ ವೈವಿಧ್ಯತೆಗಳಿಗೆ ಕೊಟ್ಟ ಪರಿಭಾಷೆಗಳು 'ಹೊಸಗನ್ನಡ ಛಂದಸ್ಸು' ಎಂಬ ಒಂದು ಶಾಸ್ತ್ರವನ್ನೇ ತೆರೆದುಕೊಟ್ಟಿತು. 'ಗಣಪರಿವೃತ್ತಿ', 'ಅನಾಗತ', 'ಮುಡಿ' 'ಪದ್ಮಗಣ', ಹ್ರಸ್ವೀಕರಣ (ತ್ವರಿತ) ದೀರ್ಘೀಕರಣ (ಪ್ಲುತ) ವೃತ್ತಿ 'ಮೌನ', 'ವಿಷಮಗಣ' ಮುಂತಾಗಿ ಅವರು ಇಟ್ಟ ಹೆಸರುಗಳೇ ರೂಢಿಯಾದವು. ಒಂದೊಂದು ಛಂದೋವೈವಿಧ್ಯತೆಯನ್ನೂ ವಿಸ್ತಾರವಾದ ವಿವರಣೆ ಮತ್ತು ನಿದರ್ಶನಗಳ ಮೂಲಕ ವಿಶ್ಲೇಷಿಸಿ ಹೊಸಗನ್ನಡ ಕಾವ್ಯದ ಸೊಗಸನ್ನು ಎತ್ತಿಹಿಡಿದರು. ಕವಿಗಳ ಮನೋಭಾವ ವನ್ನು ಕಾವ್ಯದ ಸನ್ನಿವೇಶ ಸ್ವಾರಸ್ಯವನ್ನು ಕನ್ನಡಭಾಷೆಯ ವೈಶಿಷ್ಟ್ಯತೆಯನ್ನು ಇವುಗಳ ಛಂದಸ್ಸಿನ ಮೂಲಕ ಗುರುತಿಸಿ ಹೊಸಗನ್ನಡ ಕಾವ್ಯಕ್ಕೆ ಘನತೆ–ಗಾಂಭೀರ್ಯತೆಯನ್ನೂ ಬಿಗಿಬನಿ–ಸೌಂದರ್ಯಗಳನ್ನೂ ತಂದುಕೊಟ್ಟರು.

ತೀನಂ.ಶ್ರೀ ಅವರ ಈ ಹೊಸಛಂದಸ್ಸಿನ ವಿಶ್ಲೇಷಣೆಗೆ ಮತ್ತು ರೂಪಿಸಿದ ಪರಿಭಾಷೆಗಳಿಗೆ ವಿಸ್ತಾರವಾದ ಹಿನ್ನೆಲೆಯಿದೆ, ಆಳವಾದ ಅಧ್ಯಯನವಿದೆ. ಪ್ರಾಚೀನ ಪರಂಪರೆಯ ಸ್ಪಷ್ಟ ತಿಳಿವಳಿಕೆಯಿದೆ. ಭಾರತೀಯ ಮತ್ತು ಕನ್ನಡ ಕಾವ್ಯ ಪರಂಪರೆಯ ರಚನಾವೈವಿಧ್ಯತೆಯ ನಿರ್ದುಷ್ಟತೆಯಿದೆ. ಅವರ ಮೂಲ ಜ್ಞಾನದ ಒರತೆಗಳಾದ ಕಾವ್ಯಮೀಮಾಂಸೆ ಮತ್ತು ಭಾಷಾ ವಿಜ್ಞಾನಗಳ ಹಿನ್ನೆಲೆಯಿದ್ದುದರಿಂದಲೇ ತೀನಂಶ್ರೀ ಅವರಿಗೆ ಈ ಹೊಸಗನ್ನಡ ಛಂದೋಲಯ ಗಳನ್ನು ಗುರುತಿಸಿ ವಿಶ್ಲೇಷಿಸಲು ಸಾಧ್ಯವಾಯಿತೆಂದು ಬೇರ ಹೇಳಬೇಕಾಗಿಲ್ಲ. ತೀ.ನಂ.ಶ್ರೀ ಅವರಿಗೆ ಇಂಗ್ಲಿಷ್ ಸಾಹಿತ್ಯ ಚರಿತ್ರೆಯ ಹಿನ್ನೆಲೆಯು ಆಧುನಿಕ ಕನ್ನಡ ಸಾಹಿತ್ಯದ ಮುನ್ನೋಟವನ್ನು ತಂದುಕೊಟ್ಟಿದೆ. ಭಾರತೀಯ ಕಾವ್ಯಮೀಮಾಂಸೆಯ ಹರಹು ಕನ್ನಡ ಕಾವ್ಯಪರಂಪರೆಯ ವೈವಿಧ್ಯತೆಯನ್ನು ಹಿಡಿದುಕೊಟ್ಟಿದೆ. ಕನ್ನಡ ಪ್ರಾಚೀನ ಕವಿಗಳ ಛಂದೊವೈವಿಧ್ಯತೆ, ಮತ್ತು ಹೊಸಲಯಗಳ ಹುಡುಕಾಟ ಕನ್ನಡ ಸಾಹಿತ್ಯದ ನವನಾವೀನ್ಯತೆಯನ್ನು ಕಲ್ಪಿಸಿಕೊಟ್ಟಿದೆ. ಭಾಷಾವಿಜ್ಞಾನದ ವೈಜ್ಞಾನಿಕ ದೃಷ್ಟಿ ಭಾಷೆ ವಿಸ್ತರಿಸಿಕೊಳ್ಳುವ ಅರ್ಥ ವೈಶಾಲ್ಯತೆಯನ್ನು ರೂಪಿಸಿಕೊಟ್ಟಿದೆ. ಹೀಗೆ ಹಲವು ದೃಷ್ಟಿಕೋನಗಳಿಂದ ಆಧುನಿಕ ಕನ್ನಡ ಸಾಹಿತ್ಯವನ್ನು ನೋಡಿದ್ದ ರಿಂದಲೇ ತೀನಂಶ್ರೀಅವರ ಕರ್ತೃತ್ವ ಶಕ್ತಿ ಹೊಸಗನ್ನಡ ಕಾವ್ಯದಲ್ಲಿನ ಹೊಸ ಛಂದೋಲಯಗಳನ್ನು ಗುರುತಿಸುವುದರಲ್ಲಿ ಜಾಗೃತವಾಗಿದೆ ಮತ್ತು ಯಶಸ್ವಿಯಾಗಿದೆ ಎಂದು ಹೇಳಬಹುದಾಗಿದೆ. ತೀನಂಶ್ರೀ ಅವರ ವಿಮರ್ಶೆ ಸೃಜನಶೀಲ ವಿಮರ್ಶೆಯೇವಿನಾ ಪಂಡಿತ ವಿಮರ್ಶೆಯಲ್ಲ. ಕಾರಣ ತೀನಂಶ್ರೀ ಸ್ವತಃ ಸೃಜನಶೀಲ ಲೇಖಕರೇವಿನಾ ಶಾಸ್ತ್ರನಿಷ್ಠರಲ್ಲ. ಇವರ 'ನಂಟರು' ಮತ್ತು 'ಒಲುಮೆ' ಎರಡು ಶ್ರೇಷ್ಠ ಸೃಜನಶೀಲ ಮಾದರಿಗಳಾಗಿ ನಮ್ಮ ಕಣ್ಮುಂದೆ ಇವೆ. ಇವರ ಹೊಸ ಛಂದಸ್ಸಿನ ಸೃಷ್ಟಿಯೂ ಇಂತಹ ಸೃಜನಶೀಲ ಪ್ರತಿಕ್ರಿಯೆಯೇ ಆಗಿದೆ ಎಂಬುದನ್ನು ನಾವು ಬಹಳ ಮುಖ್ಯವಾಗಿ ಗಮನಿಸಬೇಕಾಗುತ್ತದೆ.

ಕನ್ನಡ ಛಂದಸ್ಸಿನ ಚರಿತ್ರೆಯಲ್ಲಿ ತೀ.ನಂ.ಶ್ರೀ ಅವರು ರೂಪಿಸಿಕೊಟ್ಟ ಹೊಸ ಛಂದಸ್ಸಿನ ಲಯಗಳ ಹೆಸರುಗಳೇ ಇಂದಿಗೂ ತತ್ವಗಳು ಮತ್ತು ಪರಿಭಾಷೆಗಳಾಗಿ ಚರ್ಚೆಯಾಗುತ್ತಿವೆ. 'ಹುಸಿಗಣ' ಎಂಬ ಒಂದು ಹೊಸ ಪರ್ಯಾಯ ಪದ ಪ್ರಯೋಗವನ್ನು ಬಿಟ್ಟರೆ ಬೇರೆ ಯಾವ ಹೊಸ ಪರಿಕಲ್ಪನೆಗಳೂ ಈವರೆಗೆ ಆವಿಷ್ಕಾರವಾಗಿಲ್ಲ. ಇವರು ಟಂಕಿಸಿದ ಪರಿಭಾಷೆಗಳೇ ಹೆಚ್ಚು ಹೆಚ್ಚು ನಿದರ್ಶನಗಳೊಂದಿಗೆ ವಿವರಣೆಗೊಳಪಟ್ಟಿವೆ. (ನೋಡಿ: ೧)ಕನ್ನಡ ಛಂದಸ್ಸಿನ ಚರಿತ್ರೆ, ಮೈಸೂರು ವಿಶ್ವವಿದ್ಯಾಲಯ, ಹೊಸಗನ್ನಡ ಛಂದಸ್ಸಿನ ತತ್ವಗಳು, ಪರಿಭಾಷೆ, ಪುಟ ೭೬; ೨) ಕನ್ನಡ ಛಂದೋವಿಕಾಸ–ಡಿ.ಎಸ್. ಕರ್ಕಿ; ೩) ಹೊಸಗನ್ನಡ ಕವಿತೆಯ ಛಂದಸ್ಸು ಒಂದು ಅಧ್ಯಯನ–ಕೆ.ಜಿ.ನಾರಾಯಣ ಪ್ರಸಾದ್; ೪) ಕನ್ನಡ ಛಂದಸ್ಸ್ವರೂಪ–ಟಿ.ವಿ.ವೆಂಕಟಾಚಲಶಾಸ್ತ್ರೀ; ೫) ಛಂದೋಗತಿ–ಸೇಡಿಯಾಪು ಕೃಷ್ಣಭಟ್ಟ; ೬)ಕನ್ನಡ ಛಂದಶ್ಶಾಸ್ತ್ರ ಕ್ಷೇತ್ರದಲ್ಲಿ ಸಂಶೋಧನೆ ಕೆ.ಜಿ. ನಾರಾಯಣಪ್ರಸಾದ್ – ಶ್ರೀಮುಖ ಟಿವಿವಿ ಅಭಿನಂದನ ಸಂಪುಟ ಪುಟ ೬೦) ಈ ಹಿನ್ನೆಲೆಯಲ್ಲಿಯೇ ಡಾ॥ ಎಂ.ಚಿದಾನಂದ ಮೂರ್ತಿಯವರ ಈ ಮಾತು ಹೆಚ್ಚು ಪ್ರಸ್ತುತವೆನಿಸುತ್ತದೆ. "ಹೊಸ ಛಂದಸ್ಸಿನ ಜೀವಲಯಗಳನ್ನು ಗುರುತಿಸಿ ಮೂಲ ಲಯ ಮತ್ತು ವೈವಿಧ್ಯಕ್ಕಾಗಿ ತರುವ ಬೇರೆ ಬಗೆಯ ಗಣಗಳು (ಗಣಪರಿವೃತ್ತಿ) ಮೌನವು ಮಾತ್ರೆಗಳ ಜಾಗದಲ್ಲಿ ಬರುವ ಸಾಧ್ಯತೆ ಇತ್ಯಾದಿಗಳನ್ನು ಅವರು ಗುರುತಿಸಿ ಆಯಾತತ್ವಗಳಿಗೆ ಹೆಸರನ್ನು ಕೊಡದೆ ಹೋಗಿದ್ದರೆ ಹೊಸಗನ್ನಡ ಛಂದಸ್ಸಿನ ಬಗ್ಗೆ ನಮಗಿರುವ ಅರಿವು ಎಷ್ಟು ತೆಳುವಾಗಿರುತ್ತಿತ್ತು ಎಂಬುದನ್ನು ನೆನೆದು ಭಯವಾಗುತ್ತದೆ. ಈ ದಿನ ಒಂದು ಪದ್ಯವನ್ನು ಅಸಮರ್ಪಕವಾಗಿಯಾದರೂ ವಿಶ್ಲೇಷಿಸುವುದಕ್ಕೆ ಸಾಧ್ಯವಾಗಿದ್ದರೆ ಅದು ತೀ.ನಂ.ಶ್ರೀ ಅವರಿಂದ." ಅವರ ನಂತರ ಆ ದೃಷ್ಟಿಯಲ್ಲಿ ಹೊಸ ಪರಿಭಾಷೆಗಳ ತತ್ವಗಳ ಹುಡುಕಾಟ ಆಗಿಲ್ಲ ಎಂಬ ಕೊರತೆಯನ್ನು 'ಚಿಮೂ' ಅವರ ಬರೆಹ ಎತ್ತಿಹಿಡಿಯುತ್ತದೆ. ತೀ.ನಂ.ಶ್ರೀ ಅವರಂತೂ ತಮ್ಮ ಪ್ರಬಂಧದ ಕೊನೆಯಲ್ಲಿ "ಈ ಸಂಧಿಕಾಲದಲ್ಲಿ ಛಂದಸ್ಸಿನ ಪ್ರಯೋಗಗಳನ್ನು ಕುರಿತು ಇದೇ ಕೊನೆಯ ಮಾತೆಂದು ವಿಮರ್ಶಕನು ಏನನ್ನೂ ಖಚಿತವಾಗಿ ಸಿದ್ಧಾಂತಿಸಲಾರನು; ಹಾಗೆ ಸಿದ್ಧಾಂತಿಸಲೂಬಾರದು. ಮೇಲೆ ಮಾಡಿರುವ ಎಲ್ಲ ವಿಚಾರವೂ ನಿರ್ದುಷ್ಟವೆಂಬ ಹಠ ಈ ಲೇಖಕನಿಗಂತೂ ಇಲ್ಲವೇ ಇಲ್ಲ" ಎಂದು ಖಚಿತವಾಗಿ ಹೇಳುತ್ತ ಸಿದ್ಧಾಂತಿಗಳಿಗೆ ತೆರೆದ ಬಾಗಿಲಾಗಿದ್ದಾರೆ. ಆದರೂ ಈವರೆಗೂ ಅಂತಹ ಒಂದು ಹೊಸ ಸಿದ್ಧಾಂತವನ್ನೂ ಹೊಸಗನ್ನಡ ಛಂದಸ್ಸಿನ ಬಗ್ಗೆ ರೂಪಿಸಲಾಗದೆ ಹೋಗಿರುವುದು ನಮ್ಮ ಅಧ್ಯಯನದ ಕೊರತೆಯೇ ಆಗಿದೆ. ಈ ಶತಮಾನೋತ್ಸವ ಸಂದರ್ಭದ ವಿಶ್ಲೇಷಣೆ–ಚರ್ಚೆ–ಅಧ್ಯಯನಗಳಿಂದಲಾದರೂ ಇಂತಹ ಪೂರ್ವಸೂರಿಗಳ ಮಾರ್ಗದಲ್ಲಿ ಅವರ ಶೋಧನೆಗಳಿಗೆ ಒಂದೆರಡು ಹೊಸ ಅಂಶಗಳನ್ನಾದರೂ ಸೇರಿಸಬಹುದಾದಂತಹ ಸೃಜನ ಶೋಧನೆಯ ಬರೆಹಗಳು ಮೂಡುವಂತಾಗಲಿ ಎಂದು ನಿರೀಕ್ಷಿಸೋಣ. [ಇಲ್ಲಿ ನಾನು ಯಾವುದೇ ಪರಿಭಾಷೆಗಳ ನಿದರ್ಶನ–ವಿವರಣೆಗಳಿಗೆ ಹೋಗದೆ ಅವರ ಚಿಂತನೆಗಳ ಬಗ್ಗೆ ನಡೆದಿರುವ ಕಾರ್ಯಗಳ ಹಿನ್ನೆಲೆಯಲ್ಲಿ ತೀ.ನಂ.ಶ್ರೀ ಅವರ ಸೃಜನ ಶೋಧನೆಯ ಮಹತ್ವವನ್ನು ನನ್ನ ಕೆಲವು ಚಿಂತನೆಗಳ ತೊದಲು ನುಡಿಗಳಲ್ಲಿ ಮಾತ್ರ ಹೇಳಿದ್ದೇನೆ.]

೩

ಗ್ರಂಥ ಸಂಪಾದನೆಯ ಕ್ಷೇತ್ರದ ಬಗೆಗಿನ ತೀ.ನಂ.ಶ್ರೀಯವರ ಸಾಧನೆಗಳಿಗೂ ಇದೇ ಮಾತುಗಳನ್ನು ವಿಸ್ತರಿಸಬಹುದಾಗಿದೆ. ತೀ.ನಂ.ಶ್ರೀ ಅವರು ಸಂಪಾದಿಸಿದ ಕೃತಿಗಳು ಎರಡು ಮಾತ್ರ, ೧) ನಂಬಿಯಣ್ಣನರಗಳೆ (೧೯೪೬), ಗದಾಯುದ್ಧ ಸಂಗ್ರಹ (೧೯೪೯) ಈ ಎರಡು ಕೃತಿಗಳೂ ಒಂದು ದೃಷ್ಟಿಯಿಂದ ಅಸಮಗ್ರ ಇನ್ನೊಂದು ದೃಷ್ಟಿಯಿಂದ ಪರಿಪೂರ್ಣ. ಸಂಪಾದಿತವಾದ ಗ್ರಂಥವೊಂದಕ್ಕೆ ವಿವರವಾದ ಪ್ರಸ್ತಾವನೆ-ಕವಿಕಾವ್ಯ ವಿಚಾರ ಸಂಪಾದನೆಯ ಸ್ವರೂಪ ಮುಂತಾದ ಅಂಶಗಳನ್ನೊಳಗೊಂಡ 'ಉನ್ನತವಿಮರ್ಶೆ' ಈ ಗ್ರಂಥಗಳಲ್ಲಿಲ್ಲ ಎಂಬ ಒಂದೇ ಕಾರಣದಿಂದ ಇವು ಪ್ರಕಟಿತ ಸಂಪಾದಿತ ಗ್ರಂಥದ ದೃಷ್ಟಿಯಲ್ಲಿ ಅಸಮಗ್ರವೆನಿಸಿದರೂ ಆ ಕೊರತೆಯನ್ನು ಗೌಣವಾಗಿಸುವಂತೆ, ಮುಚ್ಚಿಹಾಕುವಂತೆ ಗ್ರಂಥವನ್ನು ಸಂಪಾದಿಸಿರುವ ರೀತಿಯ ದೃಷ್ಟಿಯಿಂದ ಇವು ಪರಿಪೂರ್ಣತೆಯನ್ನು ಪಡೆದಿವೆ. ಶ್ರೇಷ್ಠ ಗ್ರಂಥಸಂಪಾದನೆಗೆ ಮಾದರಿಗಳಾಗಿವೆ. ಈವರೆಗಿನ ಗ್ರಂಥಸಂಪಾದನೆಗಳ ಚರ್ಚೆಗಳಲ್ಲೆಲ್ಲ ಇವುಗಳನ್ನು ಉತ್ಕೃಷ್ಟ ಸಂಪಾದಿತ ಗ್ರಂಥಗಳನ್ನಾಗಿಯೇ ಎಲ್ಲರೂ ಪರಿಭಾವಿಸುತ್ತ ಬಂದಿದ್ದಾರೆ. ಇದೇ ಇವುಗಳ ಪ್ರಸ್ತಾವನೆಯ ಕೊರತೆಯನ್ನು ಗೌಣವಾಗಿಸಿವೆ ಎಂಬುದಕ್ಕೆ ನಿದರ್ಶನವಾಗಿದೆ.

ತೀ.ನಂ.ಶ್ರೀ ಅವರೇನೋ ಈ ಕೊರತೆಯನ್ನು ಮನಗಂಡು ಈ ಭಾಗವನ್ನು ೨ನೆಯ ಸಂಪುಟದಲ್ಲಿ ಪ್ರಕಟಿಸಲಾಗುವುದು ಎಂದು 'ಅರಿಕೆ'ಯಲ್ಲಿ ಮತ್ತು ಶೀರ್ಷಿಕೆ ಪುಟದಲ್ಲಿ ಸ್ಪಷ್ಟವಾಗಿ ನಮೂದಿಸುವ ಮೂಲಕ ಶ್ರೇಷ್ಠ ಸಂಪಾದಕನಿಗಿರಬೇಕಾದ ವಸ್ತುನಿಷ್ಠತೆಯ ಅರಿವು ಮತ್ತು ಪ್ರಾಮಾಣಿಕತೆಗೆ ಸಾಕ್ಷಿಯಾಗಿದ್ದಾರೆ. ಎರಡೂ ಗ್ರಂಥಗಳಲ್ಲಿ ಶೀರ್ಷಿಕೆ ಪುಟಗಳಲ್ಲಿ 'ಸಂಪುಟ-೧ ಮೂಲ ಮತ್ತು ಪಾಠಾಂತರಗಳು' ಎಂದು ಸ್ಪಷ್ಟವಾಗಿ ನಮೂದಿಸಿದ್ದಾರೆ. ೨ನೆಯ ಸಂಪುಟದಲ್ಲಿ ಪ್ರಸ್ತಾವನೆಯ ಭಾಗದ ವಿವರವಾದ ಕವಿಕಾವ್ಯ ವಿಮರ್ಶೆಯಿರುತ್ತದೆಂಬುದು ಅದರಿಂದಲೇ ಸ್ಪಷ್ಟವಾಗುತ್ತದೆ. ಆದರೆ ಆ ೨ನೆಯ ಸಂಪುಟಗಳು ಕನ್ನಡಿಗರಿಗೆ ಲಭ್ಯವಾಗಲೇ ಇಲ್ಲ ಎಂಬುದನ್ನು ಅತ್ಯಂತ ವಿಷಾದದಿಂದ ದಾಖಲಿಸಬೇಕಾಗಿದೆ. ಪ್ರಬುದ್ಧ ಕರ್ನಾಟಕದಲ್ಲಿ ಮೊದಲೇ ಪ್ರಕಟವಾಗಿದ್ದ ಕಾವ್ಯಭಾಗ ಮತ್ತು ಟಿಪ್ಪಣಿಗಳನ್ನು ಪೀಠಿಕಾ ಭಾಗದ ಸಿದ್ಧತೆಯ ನಂತರವೇ ಒಟ್ಟಿಗೇ ಪ್ರಕಟಿಸಬೇಕೆಂಬ ಉದ್ದೇಶದಿಂದಲೇ ಕೆಲವಾರುವರ್ಷ ಪುಸ್ತಕವಾಗಿ ಪ್ರಕಟಿಸುವುದನ್ನು ತಡೆಯಲಾಗುತ್ತೆಂದೂ "ಆದರೆ ಒಂದಲ್ಲ ಒಂದು ಕಾರಣದಿಂದ ನನ್ನ ಉದ್ದೇಶ ಕೈಗೂಡಲಿಲ್ಲ, ಪೀಠಿಕೆಗಾಗಿ ಕಾಯುತ್ತ ಮೂಲಗ್ರಂಥವೇ ಮೂಲೆಯಲ್ಲಿ ಎಷ್ಟು ದಿನವಾದರೂ ಅಡಗಿರುವುದು ಉಚಿತವಲ್ಲವೆಂದು ಮನಗಂಡು ಈಗ ಗ್ರಂಥದ ಮೊದಲನೆಯ ಸಂಪುಟವನ್ನು ಪ್ರಕಟಿಸಲಾಗಿದೆ. ಆದಷ್ಟು ಬೇಗ ಎರಡನೆಯ ಸಂಪುಟವನ್ನು ಹೊರಕ್ಕೆ ತರುವ ಉದ್ದೇಶವಿದೆ" ಎಂದೂ ಅರಿಕೆಯಲ್ಲಿ ಹೇಳಿದ್ದರೂ ಅದು ಸಾಧ್ಯವಾಗದೇ ಹೋದದ್ದು ಕನ್ನಡ ಪಾಂಡಿತ್ಯಕ್ಷೇತ್ರಕ್ಕೆ ದೊಡ್ಡ ಕೊತರೆಯೇ ಸರಿ, ಇದು ಸಾಧ್ಯವಾಗಿದ್ದಿದ್ದರೆ ಈಗಿಗಿಂತ ಉತ್ತಮವಾದ ಮಾದರಿ ನಮ್ಮ ಮುಂದೆ ಇರುತ್ತಿದ್ದಿತೆಂದು ನಂತರದ ಎಲ್ಲ ವಿದ್ವಾಂಸರೂ ಉದ್ಗಾವೆತ್ತಿದ್ದಾರೆ.

ಪ್ರೊ. ಎಂ.ವಿ. ಸೀತಾರಾಮಯ್ಯನವರು ಈ ಕೊರತೆಯನ್ನು ನೀಗಿಸುವಲ್ಲಿ ಒಂದಂಶದ ಪ್ರಯತ್ನವನ್ನು ತಮ್ಮ ಲೇಖನದಲ್ಲಿ ಮಾಡಿದ್ದಾರೆ (ಶ್ರೀಕಂಠತೀರ್ಥ, ಪು.೨೧೧). ಈ ಎರಡೂ ಗ್ರಂಥಗಳಿಗೆ ತೀ.ನಂ.ಶ್ರೀ ಅವರು ಸಂಪಾದನೆಗೆ ಬಳಸಿಕೊಂಡಿರುವ ಹಸ್ತಪ್ರತಿಗಳ ಸಂಗ್ರಹ, ಪಾಠಾಂತರ ಸಂಕಲನ, ಪಾಠನಿರ್ಣಯ, ಪಾಠಾಂತರ ಚಿಹ್ನೆಗಳ ವಿವರಗಳನ್ನು ತೀ.ನಂ.ಶ್ರೀ ಅವರ ಹಸ್ತಪ್ರತಿಗಳು, ಟಿಪ್ಪಣಿಯ ಹಾಳೆಗಳು ಮತ್ತು ಅನುಬಂಧದ ಪತ್ರವ್ಯವಹಾರಗಳ ಆಧಾರದ ಮೇಲೆ ಸ್ವಲ್ಪಮಟ್ಟಿಗೆ ತುಂಬಿಕೊಟ್ಟಿದ್ದಾರೆ. ಆದರೆ ಇದು ತೀ.ನಂ.ಶ್ರೀ. ಅವರು ಬರೆಯಬಹುದಾಗಿದ್ದ ವಿದ್ವತ್‌ಪೂರ್ಣಪ್ರಸ್ತಾವನೆಯ ಕೊನೆಯ ಭಾಗವಷ್ಟೇ ಆಗಿರುತ್ತಿತ್ತು. ಕವಿಕಾವ್ಯ ವಿಚಾರವಾಗಲಿ, ಕೃತಿಯ ಸ್ಥಾನನಿರ್ದೇಶನ, ಮೌಲ್ಯವಿವೇಚನೆ ಪ್ರಭಾವ–ಪ್ರೇರಣೆಗಳಂತಹ ಪಾಂಡಿತ್ಯಪೂರ್ಣ ಚರ್ಚೆಗಳು ಅವರೊಂದಿಗೇ ಮರೆಯಾದದ್ದು ಯಾರೂ ತುಂಬಿಕೊಡಲಾಗದ ನಿಧಿಯಾದರೆ ಅವರನ್ನು ಕಳೆದುಕೊಂಡದ್ದಂತೂ ಇನ್ನೂ ಅಮೂಲ್ಯನಿಧಿಯ ಕೊರತೆಯೇ ಆಗಿದೆ.

ಗ್ರಂಥಸಂಪಾದನೆ ಆಗತಾನೆ ಒಂದು ನಿಶ್ಚಿತ ರೂಪವನ್ನು ಕಟ್ಟಿಕೊಳ್ಳುತ್ತಿದ್ದ ಕಾಲ. ಡಿ.ಎಲ್.ನರಸಿಂಹಾಚಾರ್ಯರೇ ಗ್ರಂಥಸಂಪಾದನೆಯ ಪಠ್ಯವನ್ನು ಬೋಧಿಸುತ್ತಿದ್ದವರಾದರೂ ತೀ.ನಂ.ಶ್ರೀ ಅವರೂ ಆ ಶಿಸ್ತಿನ ಬಗ್ಗೆ ಆಳವಾದ ಜ್ಞಾನವನ್ನು ಹೊಂದಿದ್ದರು. ಇಂಗ್ಲಿಷಿನ 'ಟೆಕ್ಸ್‌ಚುಯಿಲ್ ಕ್ರಿಟಿಸಿಸಮ್'ನ ತಿಳಿವಳಿಕೆ ತೀ.ನಂ.ಶ್ರೀಯವರಲ್ಲಿತ್ತು ಎಂಬುದಕ್ಕೆ ಎಂ.ವಿ.ಸೀ. ಯವರು ಸಾಧಾರಭೂತವಾಗಿ ತಮ್ಮ ಲೇಖನದಲ್ಲಿ ಅವರ ಪಾಠ ಪ್ರವಚನಗಳ ಉದಾಹರಣೆಗಳ ಮೂಲಕ ನಿರೂಪಿಸಿದ್ದಾರೆ. ಡಿ.ಎಲ್.ಎನ್. ಅವರ ಪುಸ್ತಕ ರಚನೆ, ಕತ್ರೆಯವರ ಪುಸ್ತಕ ಪ್ರಕಟಣೆಗಳೆಲ್ಲ ತೀ.ನಂ.ಶ್ರೀ ಅವರ ಅರಿವಿನಲ್ಲಿದ್ದುದು ಸ್ಪಷ್ಟ ಈ ಭೂಮಿಕೆಯ ಹಿನ್ನೆಲೆಯಲ್ಲಿಯೇ ಆ ಕಾಲದ ತೀ.ನಂ.ಶ್ರೀ., ಡಿ.ಎಲ್.ಎನ್. ಎ.ಆರ್.ಕೃ. ಟಿ.ಎಸ್.ವೆಂ. ಮುಂತಾದವರೆಲ್ಲ ಗ್ರಂಥಸಂಪಾದನಾ ಕಾರ್ಯವನ್ನು ಶಿಸ್ತುಬದ್ಧವಾಗಿ, ಶಾಸ್ತ್ರನಿಷ್ಠವಾಗಿ ಮಾಡಿದ್ದಾರೆ.

ಪೀಳಿಗೆ ರಚಿಸುವಲ್ಲಿ, ಪಾಠಗಳ ಆಯ್ಕೆಯಲ್ಲಿ ತೀ.ನಂ.ಶ್ರೀ ಅವರು ಅನುಸರಿಸಿರುವ ರೀತಿ ಆದರ್ಶಪ್ರಾಯವಾದದ್ದು. ತೀ.ನಂ.ಶ್ರೀ ಅವರಿಂದಲೇ ನಂಬಿಯಣ್ಣನರಗಳೆ ಮೊದಲ ಬಾರಿಗೆ ಸಂಪಾದಿತವಾಯಿತು. ಐದು ಪ್ರತಿಗಳ ಸಹಾಯದಿಂದ ಪೀಳಿಗೆ ರಚಿಸಿದ್ದಾರೆ. ಪ್ರತಿ ಪುಟದಲ್ಲೂ ಹೆಚ್ಚು ಕಡಮೆ ಅರ್ಧಪುಟದಷ್ಟು ಪಾಠಾಂತರಗಳಿವೆ. ಇವುಗಳನ್ನು ವ್ಯವಸ್ಥಿತವಾಗಿ ಸೂಕ್ತ ಚಿಹ್ನೆಗಳ ಮೂಲಕ ಬಳಕೆಗೆ ತಂದಿರುವುದು ಗ್ರಂಥಸಂಪಾದನೆಗೆ ತೀ.ನಂ.ಶ್ರೀಯವರ ಉಪಯುಕ್ತ ಕೊಡುಗೆಯಾಗಿದೆ ಎಂದು ಎಂ.ವಿ.ಸಿ.ಯವರೂ ವಡ್ಡಾರಾಧನೆಯನ್ನು ಬಿಟ್ಟರೆ ಇಷ್ಟೊಂದು ಪ್ರಮಾಣದಲ್ಲಿ ಶ್ರಮಿಸಿರುವ ಕೃತಿ ಇದೊಂದೇ ಎಂದು ಚಿದಾನಂದಮೂರ್ತಿಗಳೂ ಗುರುತಿಸಿದ್ದಾರೆ. (ಮಣಿಹ ಪು ೩೦೭) ಪುಟಗಳಲ್ಲೆಲ್ಲ ಅಕ್ಷತೆ ಚೆಲ್ಲಿದಂತಿದೆಯೆಂದೂ ಪಾಠಾಂತರಗಳ ಅಂಕಿಗಳ ಭಾರದಲ್ಲಿ ಪಠ್ಯ ಕುಸಿಯುತ್ತಿದೆ, ಕಾವ್ಯವೋ ಗಣಿತ ಗ್ರಂಥವೊಂದೂ ಹಲವರು ಹೇಳಿದ್ದಾರೆ. ತೀ.ನಂ.ಶ್ರೀ ಅವರಿಗೂ ಇದರ ಅರಿವು ಸ್ಪಷ್ಟವಾಗಿದ್ದು ಪಾಠನಿರ್ದುಷ್ಟತೆಗಾಗಿ ಹೀಗೆ ಕೊಡಬೇಕಾಯಿತೆಂದೂ ಖಚಿತಪಡಿಸಿದ್ದಾರೆ.

ಗದಾಯುದ್ಧ ಸಂಗ್ರಹ ಪಠ್ಯಪುಸ್ತಕಕ್ಕಾಗಿ ಸಿದ್ಧಪಡಿಸಿದ ಸಂಗ್ರಹವಾದರೂ ಶಾಸ್ತ್ರೀಯ ರೀತಿಯಲ್ಲಿ ಸಂಪಾದಿತವಾಗಿರುವ ಶ್ರೇಷ್ಠ ಕೃತಿ. ಈಗಾಗಲೆ ಮುಂ.ಆ.ರಾಮಾನುಜಯ್ಯಂಗಾರ್ಯರ ಪೂರ್ತಿಕೃತಿ ಲಭ್ಯವಿದ್ದರೂ ಪಾಠಕ್ಲೇಶಗಳ ನಿವಾರಣೆಗಾಗಿ ಆ ಕೃತಿಯ ಸಂಪಾದನೆಗೆ ಅವರು ಬಳಸಿದ್ದ ಹಸ್ತಪ್ರತಿಗಳನ್ನೇ ಪುನಃ ಸಂಪಾದನೆಗೆ ಬಳಸಿದುದು ಅವರ ಶಾಸ್ತ್ರಶ್ರದ್ಧೆಗೆ ದ್ಯೋತಕವಾಗಿದೆ. ಜೊತೆಗೆ ಕಾವ್ಯಾವಲೋಕನದಲ್ಲಿರುವ ಈ ಕಾವ್ಯದ ಉಲ್ಲೇಖಿತ ಪದ್ಯಗಳನ್ನೂ ಬಿಎಂಶ್ರೀಯವರ ಗದಾಯುದ್ಧ ನಾಟಕವನ್ನೂ ಸಂಸ್ಕೃತ ಆಕರಗಳನ್ನೂ ಬಳಸಿಕೊಂಡು ತುಂಬ ಶ್ರಮವಹಿಸಿ ಆದಷ್ಟೂ ನಿಷ್ಕೃಷ್ಟವಾಗಿ ಸಂಪಾದಿಸಿ ಬೆರೆಗುಗೊಳಿಸಿದ್ದಾರೆ. ವಿದ್ವತ್‌ಲೋಕ ಇವರ ಈ ಸಂಪಾದನಾ ವೈಖರಿಗೆ ತಲೆದೂಗಿದೆ. ಇದೊಂದು ಶ್ರೇಷ್ಠ ಗ್ರಂಥಸಂಪಾದನೆಯ ಸವಾಲಾಗಿದೆ ಎಂದರೆ ಅತಿಶಯೋಕ್ತಿಯಿಲ್ಲ. ಇವರು ನಿಷ್ಕರ್ಷಿಸಿರುವ ಪಾಠಗಳನ್ನು ಬದಲಿಸಲು ಸಾಧ್ಯವೇ ಇಲ್ಲ ಎಂಬಷ್ಟು ಕರಾರುವಾಕ್ಕಿನ ಆಯ್ಕೆ ಇವರ ಪಾಠಗಳಲ್ಲಿದೆ. ಈ ಗ್ರಂಥದ ಈಚಿನ ಪರಿಷ್ಕರಣಗಳಲ್ಲೆಲ್ಲ ಬಹುಮಟ್ಟಿಗೆ ಇವರ ಆಯ್ಕೆಯ ಮೊದಲ ಪಾಠಗಳನ್ನೇ ಸ್ವೀಕರಿಸಿರುವುದನ್ನು ನೋಡಬಹುದು (ಟಿವಿವಿ).

'ತೀ.ನಂ.ಶ್ರೀಯವರ ಪರಿಷ್ಕರಣಕಾರ್ಯ ನಂಬಿಯಣ್ಣನರಗಳೆ ಯಲ್ಲೇ ಆಗಲಿ ಗದಾಯುದ್ಧ ಸಂಗ್ರಹದಲ್ಲೇ ಆಗಲಿ ಸರ್ವಾಂಗ ಸುಂದರವಾಗಿದೆ, ಸರ್ವಸಮರ್ಪಕವಾಗಿದೆ ಎಂದು ಹೇಳಲು ಸ್ವಲ್ಪವೂ ಹಿಂಜರಿಯಬೇಕಾಗಿಲ್ಲ' ಎಂಬ ಎಂ.ವಿ.ಸೀ. ಅವರ ಮಾತು ಎಲ್ಲರ ಅಭಿಪ್ರಾಯವೂ ಆಗೇತೀರುತ್ತದೆ.

ತೀ.ನಂ.ಶ್ರೀ ಅವರ ಪಾಠಪರಿಷ್ಕರಣದ ಇನ್ನೊಂದು ನಿದರ್ಶನವಾಗಿ ವಯಸ್ಕರ ಶಿಕ್ಷಣ ಸಮಿತಿಗೆ ಸಂಪಾದಿಸಿಕೊಟ್ಟ ಹೆಣ್ಣುಮಕ್ಕಳ ಪದಗಳು ಎಂಬ ಜನಪದ ಗೀತೆಗಳ ಸಂಗ್ರಹವನ್ನು ಗಮನಿಸಬಹುದು. ಅಗಾಧ ಪಾಂಡಿತ್ಯ-ವಿಸ್ತಾರವಾದ ಅನುಭವ ಮತ್ತು ನಿಷ್ಕೃಷ್ಟವಾದ ಶಾಸ್ತ್ರ ನಿಷ್ಠೆಯಿದ್ದ ತೀ.ನಂ.ಶ್ರೀಯವರು ಈ ಕೃತಿಯಲ್ಲಿ ಅದನ್ನೆಲ್ಲ ಬದಿಗಿಟ್ಟು ಅತ್ಯಂತ ಸರಳವಾಗಿ ಹಾಡಿನ ಶೈಲಿಗೆ ಅನುಗುಣವಾಗಿ ತ್ರಿಪದಿಗಳನ್ನು ಸಂಪಾದಿಸಿರುವುದು ಹಾಡಿನ ಧಾಟಿಗೆ ಅನ್ವಯವಾಗುವಂತೆಯೇ ಅಕ್ಷರಗಳನ್ನು ಅಚ್ಚಿಸಿರುವುದು ಬರೆಹ ನಿಷ್ಠೆಯನ್ನು ಪಕ್ಕಕ್ಕಿಟ್ಟು ನೋಡಿರುವುದು ಅವರ ಭಾಷೆಯ ಬಳಕೆಯ ವೈಜ್ಞಾನಿಕ ತಿಳಿವಳಿಕೆಯ ದ್ಯೋತಕವೇ ಆಗಿದೆ. ಮಸುಕ್ಹಾಗಿ, ಹೊತ್ಕೊಂಡು, ಕಟ್ಹಾಳು ಇತ್ಯಾದಿ. (ಇದನ್ನು ಎಂ.ವಿ.ಸೀ. ಅವರು ಗ್ರಾಂಥಿಕ ರೂಪಕ್ಕೆ ತರಬಹುದಿತ್ತೆಂದು ಸೂಚಿಸಿದ್ದಾರೆ.)

ತೀ.ನಂ.ಶ್ರೀಯವರ ಇನ್ನೆರಡು ಲೇಖನಗಳು ಗ್ರಂಥಸಂಪಾದನೆಯ ದೃಷ್ಟಿಯಿಂದ ಮುಖ್ಯ ವಾಗುತ್ತದೆ.

೧) ಅಪೂರ್ವ ಷಟ್ಪದಿಯ ಲಕ್ಷಣ (ಸಮಾಲೋಕನ ೧೯೫೮) (ಪಿ.ಬಿ.ದೇಸಾಯವರ ಅಮ್ಮಿನಬಾವಿ ಶಾಸನ)

೨) ಎನಿತ್ತೆನಿತ್ತಂಬುಜಪತ್ರನೇತ್ರೆಯಾ, (ಕಸಾಪ-೩೧-೨, ೪೬, ಕೇಶಿರಾಜನ ಉದಾಹೃತ ಪದ್ಯದ ಪಾಠ ಪರಿಷ್ಕರಣ.)

ಇವೆರಡರಲ್ಲೂ ತೀ.ನಂ.ಶ್ರೀಯವರ ಪಾಠಪರಿಷ್ಕರಣ ಪ್ರಶ್ನಾತೀತವಾದ ನಿಲುವನ್ನು ಪಡೆದು ವಿದ್ವಾಂಸ ವಲಯದಲ್ಲಿ ವ್ಯಾಪಕ ಚರ್ಚೆ ಪ್ರತಿಚರ್ಚೆಗೆ ಕಾರಣವಾಗಿ ಕೊನೆಗೂ ಇವರ ನಿರ್ಣಯಕ್ಕೇ ಬಂದು ನಿಂತಿರುವುದು ಇವರ ಗ್ರಂಥಸಂಪಾದನಾ ನಿಷ್ಠೆಗೆ ನಿದರ್ಶನವಾಗಿದೆ.

ಈ ಕ್ಷೇತ್ರದಲ್ಲಿ ಛಂದಸ್ಸಿನ ಕ್ಷೇತ್ರದಲ್ಲಿರುವಂತಹ ನಿರಾಸೆಯಿಲ್ಲ. ಇದೊಂದು ಬಹುಶಿಸ್ತಿಯ ಅಧ್ಯಯನವಾಗಿದ್ದು ಹಸ್ತಪ್ರತಿಗಳನ್ನೇ ಆಕರವಾಗಿಟ್ಟುಕೊಂಡು ವಿವಿಧ ದೃಷ್ಟಿಕೋನಗಳಿಂದ ಅಧ್ಯಯನ ಮಾಡುವಷ್ಟು ವ್ಯಾಪಕತೆಯನ್ನು ಪಡೆದಿದೆ. ಶಾಸನಗಳ ಸಾಂಸ್ಕೃತಿಕ ಅಧ್ಯಯನದಂತೆ ಹಸ್ತಪತ್ರಿಗಳ ಸಾಂಸ್ಕೃತಿಕ ಅಧ್ಯಯನವನ್ನು ನಡೆಸಬಹುದಾದ ವೈವಿಧ್ಯತೆಯನ್ನು ಇದು ಒಳಗೊಂಡಿದೆ. ಈ ಎರಡೂ ಕ್ಷೇತ್ರಗಳನ್ನು ಬೆಳೆಸುವಲ್ಲಿ ಬಿ.ಎಂ.ಶ್ರೀ ಪ್ರತಿಷ್ಠಾನ ಮಹತ್ವದ ಪಾತ್ರವಹಿಸಿದೆ. ಇಂದು ಗ್ರಂಥಸಂಪಾದನಾ ಕ್ಷೇತ್ರ ವ್ಯಾಪಕವಾಗಿ ಬೆಳೆದಿದೆ. 'ಹಸ್ತಪ್ರತಿಶಾಸ್ತ್ರ'ವಾಗಿ ತನ್ನ ಅಸ್ತಿತ್ವವನ್ನು ಹುಡುಕಿಕೊಂಡಿದೆ. ಈ ಎರಡೂ ಜೊತೆ ಜೊತೆಯಾಗಿ ವ್ಯಾಪಕ ಚರ್ಚೆಯಲ್ಲಿದ್ದು 'ಹಸ್ತಪ್ರತಿ ಅಧ್ಯಯನ'ದತ್ತ ಈಗ ಹೊರಳಿದೆ.

ಪರಿಶಿಷ್ಟ: ತೀ.ನಂ.ಶ್ರೀ ಅವರು ಟಂಕಿಸಿದ ಹೊಸಗನ್ನಡ ಛಂದೋವೈವಿಧ್ಯಗಳು

೧. **ಗಣಪರಿವೃತ್ತಿ** : "ಲಯದಲ್ಲಿ ಒಂದು ಜಾತಿಯ ಗಣಗಳ ಸ್ಥಾನದಲ್ಲಿ ಅದೇ ಮಾತ್ರಾ ಪರಿಮಿತಿಯ ಇನ್ನೊಂದು ಜಾತಿಯ ಗಣಗಳನ್ನು ಇರಿಸುವುದು"

ಉದಾ : ೩ ೩
ಅಜ್ಞನಲ್ಲ ಪ್ರಾಜ್ಞನಲ್ಲ
೪ ೨
ಅನಸೂಯನು ಸಹನಶೀಲ ಸ್ನೇಹಪೂರ್ಣನು (ಪುತಿನ)

೨. **ಅನಾಗತ**: ಚರಣದ ಮೊದಲಲ್ಲೇ ಲಯಕ್ಕೆ ಹೊರತಾಗಿ ನಿಲ್ಲುವ ಹೆಚ್ಚುವರಿ ಮಾತ್ರೆ,
ಉದಾ: ಅ) ನಾಥೆ ಇವಳಿನ್ನೊಬ್ಬಳೀ;
ಕು) ಮಾರವ್ಯಾಸನು ಹಾಡಿದನೆಂದರೆ

೩. **ಮುಡಿ**: ಚರಣದಕೊನೆಯಲ್ಲಿ ನಿಲ್ಲುವ ಹೆಚ್ಚುವರಿ ಮಾತ್ರೆಯ ಮುಕ್ತಾಯಧ್ವನಿ.
ಉದಾ: ಗಾನಮೆಲುಪಿನ ಕೊರಲುಕೂಗ್ಗಲು
ಹೊಳಲು ಕೊಡುವುದು ಮನದೊಳು.

೪. **ದೀರ್ಘೀಕರಣ (ಪ್ಲುತ)**: ಗುರು ಮೂರು ಮಾತ್ರೆಯ ಸ್ಥಾನದಲ್ಲಿ ಉಚ್ಚರಿಸುತ್ತದೆ.
ಉದಾ: ಹಿಂದೆ ಸೆರೆಗೆ ಸಿಲುಕುತ
ಕಂಸಭಯಕೆ ನಡುಗುತ
ಹಡೆದ ಕೂಸು ಬಾಳ್ವುದೆಂತು ಎನುತ ತಲ್ಲಣಿಸುತ

೫. **ಹ್ರಸ್ವೀಕರಣ**: ಗುರುವನ್ನು ತ್ವರಿತಗತಿಯಲ್ಲಿ ಹೇಳಿ ಹ್ರಸ್ವಗೊಳಿಸುವುದು
ಉದಾ: **ಕುರಿನೆಗೆದಾಟ ಕುರುಬರ ಕೊಳಲಿನೂದಾಟ**

೬. **ಮೌನ**: ಲಯ ಕೆಡುವಂತಿದ್ದು ಅಧಿಕಮಾತ್ರೆಯ ಬೆಲೆ ಕೊಡುವ ಪಕ್ಷದಲ್ಲಿ ವಿರಾಮಕ್ಕೆ ಆಸ್ಪದವಿದ್ದಲ್ಲಿ ವಿರಾಮ ಮೌನವನ್ನೇ ತುಂಬಿ ಮಾತ್ರೆಯನ್ನು ಲಯವನ್ನು ಸರಿಪಡಿಸುವುದು. ಮೌನ=ಮಾತ್ರೆ
ಉದಾ: ಒಲವಿನುಯ್ಯಾಲೆಯಲಿ ಒಲಿದಳ್ ವಿಜಯಲಕ್ಷ್ಮೀ

೭. **ಪದ್ಮಗುಣ**: ಸಮಾನಗಣಗಳ ನಡುವೆ ಅಸಮ (ಕಡಿಮೆ) ಗಣಬರುವುದು
ಉದಾ: **ಮಳೆಬಂದು ಬೆಳೆ ಬೆಳೆದು ಧರೆತಣಿಯಲೆಂದು**

೭ ವಿಷಮಗಣ: ಶಾಸ್ತ್ರಕಾರರು ನಿಷೇಧಿಸಿರುವ U-, U-U, U- -, U-UUಗಳು ಬಳಕೆಯಾದಲ್ಲಿ ಅವು ವಿಷಮಣ ಗಣಗಳು
ಉದಾ: ಬೊಬ್ಬುಳಿ ತೆರೆಯನು ದಡಕ್ಕೆ ಹೊಮ್ಮಿಸಿ (ಪಂಜೆ)

* ದಿನಾಂಕ: ೩೧-೮-೨೦೦೬ರಂದು (ಶಿವಮೊಗ್ಗ, ಶಂಕರಘಟ್ಟ) ಕುವೆಂಪು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ನಡೆದ ತೀನಂಶ್ರೀ ಶತಮಾನೋತ್ಸವ ವಿಚಾರ ಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧ.

❑

ವಿಳಾಸಗಳು

ಸಂಪಾದಕರ ವಿಳಾಸಗಳು:

೧. **ಪ್ರೊ. ಜಿ. ಅಬ್ದುಲ್ ಬಷೀರ್**
ನಿವೃತ್ತ ಕನ್ನಡ ಪ್ರಾಧ್ಯಾಪಕರು
ನಂ. ೫, ೮ನೆಯ ಅಡ್ಡರಸ್ತೆ, ಬೈರಸಂದ್ರ
ಜಯನಗರ ೧ನೆಯ ವಿಭಾಗ ಪೂರ್ವ
ಬೆಂಗಳೂರು – ೫೬೦ ೦೧೧.
ದೂರವಾಣಿ: ೨೨೪೫೦೪೨೫.

೨. **ಡಾ. ಎಚ್. ಶಶಿಕಲಾ,**
'ಬೆಳಕು' ನಂ. ೧೮೯
೫ನೆಯ 'ಎ' ಮುಖ್ಯರಸ್ತೆ
ಆರ್.ಪಿ.ಸಿ. ಬಡಾವಣೆ
ವಿಜಯನಗರ ೨ನೆಯ ಹಂತ
ಬೆಂಗಳೂರು – ೫೬೦ ೦೪೦
ದೂರವಾಣಿ: ೨೩೩೫೨೨೮೮

ಲೇಖಕರ ವಿಳಾಸಗಳು

೧. **ಬಿ.ಆರ್. ಸತ್ಯನಾರಾಯಣ**
ಸಂಶೋಧನಾ ವಿದ್ಯಾರ್ಥಿ
ಶಾಸನಶಾಸ್ತ್ರ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ - ೫೮೩ ೨೭೬

೨. **ಡಾ. ಬಿ.ಎಸ್. ಗೀತಾ**
೬೮೮, ೯೧ನೆಯ ಅಡ್ಡರಸ್ತೆ
೫ನೆಯ ವಿಭಾಗ, ರಾಜಾಜಿನಗರ
ಬೆಂಗಳೂರು - ೫೬೦ ೦೧೦

೩. **ಪ್ರೊ. ಕೆ.ಎಸ್. ಮಧುಸೂದನ**
ನಿವೃತ್ತ ಕನ್ನಡ ಪ್ರಾಧ್ಯಾಪಕರು ಮತ್ತು ಪ್ರಾಂಶುಪಾಲರು
ಎಪಿಎಸ್ ಕಲೆ ಮತ್ತು ವಿಜ್ಞಾನ ಕಾಲೇಜು
ಎನ್.ಆರ್. ಕಾಲೋನಿ
ಬೆಂಗಳೂರು - ೫೬೦ ೦೧೯

೪. **ಎಸ್.ವಿ. ಸೋಮಶೇಖರ್**
ಸಂಪಾದನಾ ಮತ್ತು ಹಸ್ತಪ್ರತಿ ವಿಭಾಗ
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು - ೫೬೦ ೦೫೬

೫. **ಡಾ. ಎಸ್.ಎಸ್. ಅಂಗಡಿ**
ಪ್ರವಾಚಕರು, ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ - ೫೮೩ ೨೭೬

೬. **ಡಾ. ಕಾ.ವೆಂ. ಶ್ರೀನಿವಾಸಮೂರ್ತಿ**
ಹಿರಿಯ ಶ್ರೇಣಿ ಉಪನ್ಯಾಸಕರು,
ಕನ್ನಡ ಅಧ್ಯಯನ ವಿಭಾಗ
ಸ್ನಾತಕೋತ್ತರ ಕೇಂದ್ರ,
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು–೫೬೩ ೧೦೧

೭. **ದಿ|| ಎಂ.ಆರ್. ನರಸಿಂಹನ್**
೫/೧, 'ತಿರುವೇಂಗಡಮ್'
ಮಹಂತ ಲೇಔಟ್, ಬುಲ್‌ಟೆಂಪಲ್ ರಸ್ತೆ
ಬೆಂಗಳೂರು - ೫೬೦ ೦೧೯

೮. **ಪ್ರೊ. ಎಲ್.ಎಸ್. ಶೇಷಗಿರಿರಾವ್**
ಪಾರಿಜಾತ, # ೧೧, ೨೨ನೆಯ ಮೇನ್
ಮಾರೇನಹಳ್ಳಿ ಜೆ.ಪಿ. ನಗರ II ಫೇಸ್
ಬೆಂಗಳೂರು–೫೬೦ ೦೭೮.

೯. **ಡಾ. ಬಿ. ರಾಜಶೇಖರಪ್ಪ**
(ಕನ್ನಡ ಪ್ರಾಧ್ಯಾಪಕರು ಮತ್ತು ಪ್ರಾಂಶುಪಾಲರು),
೨ನೆಯ ಅಡ್ಡರಸ್ತೆ (ಪಶ್ಚಿಮ),
ಜೆ.ಸಿ.ಆರ್. ಬಡಾವಣೆ
ಚಿತ್ರದುರ್ಗ - ೫೭೭ ೫೦೧

೧೦. ಚಿ.ವಿ. ಶ್ರೀನಾಥಶಾಸ್ತ್ರೀ
ಪ್ರಧಾನ ಕಾರ್ಯದರ್ಶಿ
ಕನ್ನಡ ಗಣಕ ಪರಿಷತ್ತು
೨ನೆಯ ಅಡ್ಡರಸ್ತೆ, ಚಾಮರಾಜಪೇಟೆ
ಬೆಂಗಳೂರು - ೫೬೦ ೦೨೮

೧೧. ಪ್ರೊ. ಜಿ. ಅಶ್ವತ್ಥನಾರಾಯಣ
೯೫, ೩೪ನೆಯ 'ಬಿ' ಅಡ್ಡರಸ್ತೆ
೧೬ನೆಯ ಮುಖ್ಯರಸ್ತೆ
೪ನೆಯ 'ಟಿ' ವಿಭಾಗ
ಜಯನಗರ, ಬೆಂಗಳೂರು - ೫೬೦ ೦೪೧

೧೨. ಪ್ರೊ. ಜಿ. ಅಬ್ದುಲ್ ಬಷೀರ್
ನಂ. ೫, ೮ನೆಯ ಅಡ್ಡರಸ್ತೆ
ಬೈರಸಂದ್ರ
ಜಯನಗರ ೧ನೆಯ ವಿಭಾಗ, ಪೂರ್ವ
ಬೆಂಗಳೂರು-೫೬೦ ೦೧೧

೧೩. ಪ್ರೊ. ನಾ. ಗೀತಾಚಾರ್ಯ
ಕನ್ನಡ ಪ್ರಾಧ್ಯಾಪಕರು
ನಂ. ೨೭, ೧/೫ನೆಯ ಅಡ್ಡರಸ್ತೆ
ಕೆಂಪೇಗೌಡನಗರ
ಬೆಂಗಳೂರು-೫೬೦ ೦೧೯

❑

ಕರ್ನಾಟಕ ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ನಮ್ಮ ಲೇಖಕರು

ಬಿ.ಆರ್. ಸತ್ಯನಾರಾಯಣ

ಡಾ. ಬಿ.ಎಸ್.ಗೀತಾ

ಪ್ರೊ. ಕೆ.ಎಸ್.ಮಧುಸೂದನ

ಎಸ್.ವಿ.ಸೋಮಶೇಖರ್

ಡಾ. ಎಸ್.ಎಸ್.ಅಂಗಡಿ

ದಿ. ಡಾ. ಡಿ.ವಿ.ಗುಂಡಪ್ಪ

ಡಾ. ಕಾ.ವೆಂ.ಶ್ರೀನಿವಾಸಮೂರ್ತಿ

ದಿ. ಎಂ.ಆರ್. ನರಸಿಂಹನ್

ಪ್ರೊ. ಎಲ್.ಎಸ್. ಶೇಷಗಿರಿರಾವ್

ಡಾ. ಬಿ. ರಾಜಶೇಖರಪ್ಪ

ಚಿ.ವಿ. ಶ್ರೀನಾಥಶಾಸ್ತ್ರಿ

ಪ್ರೊ. ಜಿ. ಅಶ್ವತ್ಥನಾರಾಯಣ

ಪ್ರೊ. ಜಿ. ಅಬ್ದುಲ್ ಬಷೀರ್

ಪ್ರೊ. ನಾ. ಗೀತಾಚಾರ್ಯ

ಎಂ.ವಿ.ಸೀ. ಸಂಶೋಧನ ಕೇಂದ್ರ